ಗುರುವಾರ, ಆಗಸ್ಟ್ 24, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 235 | ಪುಟ 14
www.prajavani.net
prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಚಂದ್ರನ ಶಾಶ್ವತ ಕತ್ತಲ ಕುಳಿಗಳತ್ತ ಇಸ್ರೊ...

ಬಾಹ್ಯಾಕಾಶ ವಿಜ್ಞಾನದಲ್ಲಿ ಇಸ್ರೊ ತ್ರಿ'ವಿಕ್ರಮ' • ದೇಶಕ್ಕೆ ಚಂದ್ರನ ಮುಕುಟಮಣಿ • ವಿಜ್ಞಾನಿಗಳ ಶ್ರಮದ ಸಾರ್ಥಕ ಕ್ಷಣ

ಭಾರತ: ಚಂದಿರನ ದಕ್ಷಿಣಾಪಥೇಶ್ವರ

• ಎಸ್. ರವಿಪ್ರಕಾಶ್

ಬೆಂಗಳೂರು: ಭುವಿಯಲ್ಲಿ ಸೂರ್ಯಾಸ್ತ ಮತ್ತು ಚಂದ್ರನಲ್ಲಿ ಸೂರ್ಯೋದಯದ ಪರ್ವ ಕಾಲದಲ್ಲಿ ಚಂದಿರನ ಅಂಗಳದ ಮೇಲೆ ಕಾಲಿಟ್ಟ ಭಾರತ ಬುಧವಾರ ಬಾಹ್ಯಾಕಾಶ ತಂತ್ರಜ್ಞಾನದ ಕ್ಷೇತ್ರದಲ್ಲಿ ಭವ್ಯ ದಾಖಲೆಯನ್ನೇ ಬರೆಯಿತು.

ಚಂದ್ರನ ದಕ್ಷಿಣ ಧ್ರುವದಲ್ಲಿ ಹೆಜ್ಜೆ ಇಡುವ ಆತ್ಯಂತಿಕ ಕ್ಷಣಗಳಲ್ಲಿ ಇಡೀ ಭಾರತವೇ ಉಸಿರು ಬಿಗಿ ಹಿಡಿದು ಕುಳಿತಿತ್ತು. 'ವಿಕ್ರಮ' ತನ್ನ ನಾಲ್ಕು ಪಾದಗಳನ್ನು ಚಂದಿರನ ಅಂಗಳದ ಮೇಲೆ ಊರುತ್ತಿದ್ದಂತೆ ಇಡೀ ದೇಶದಲ್ಲಿ ಸಂಭ್ರಮದ ಕಟ್ಟೆಯೊಡೆದು ಹರ್ಷದ ಪ್ರವಾಹ ದಶ ದಿಕ್ಕುಗಳಿಗೂ ಹರಿಯಿತು. ಭಾರತದ ವಿಜ್ಞಾನಿಗಳ ಉಜ್ವಲ ಯಶಸ್ಸನ್ನು ಕಣ್ತುಂಬಿಕೊಂಡ ದೇಶದ ಕೋಟ್ಯಂತರ ಜನ, ಪಟಾಕಿ ಸಿಡಿಸಿ ಕುಣಿದು ಕುಪ್ಪಳಿಸಿ ಹಬ್ಬದಂತೆ ಸಡಗರಪಟ್ಟರು.

ಚಂದ್ರನ ದಕ್ಷಿಣ ಧ್ರುವದಲ್ಲಿ ಲ್ಯಾಂಡರ್ ಇಳಿಸಿದ ಪ್ರಥಮ ರಾಷ್ಟ್ರ ಭಾರತವೆಂಬ ಸುವರ್ಣಾಕ್ಷರಗಳಲ್ಲಿ ಬರೆದಿಡುವ ಕ್ಷಣಗಳಿಗೆ ವಿಶ್ವವೇ ಸಾಕ್ಷಿ ಆಯಿತು. ಈ ಸಂತಸದಲ್ಲಿ ವಿಶ್ವದ ಇತರ ರಾಷ್ಟ್ರಗಳೂ ಕೂಡಿಕೊಂಡವು. ಚಂದ್ರನ ಮೇಲೆ ಕಾಲಿಟ್ಟ ವಿಶ್ವದ ನಾಲ್ಕನೇ ರಾಷ್ಟ್ರವಾಗಿ 'ಪ್ರತಿಷ್ಠಿತ ದೇಶಗಳ' ಸಾಲಿಗೆ ಭಾರತವು ಸೇರ್ಪಡೆ ಆಯಿತು.

ಲ್ಯಾಂಡರ್ ಚಂದ್ರನ ನೆಲವನ್ನು ಸ್ಪರ್ಶಿಸಿದ್ದು ಪರದೆಯ ಮೇಲೆ ಕಂಡು ಬರುತ್ತಿದ್ದಂತೆ ಬೆಂಗಳೂರಿನಲ್ಲಿರುವ ಇಸ್ರೊ ಕಮಾಂಡಿಂಗ್ ಸೆಂಟರ್‌ನಲ್ಲಿದ್ದ ವಿಜ್ಞಾನಿಗಳು, ತಂತ್ರಜ್ಞರು ಮತ್ತು ಸಿಬ್ಬಂದಿಯ ಹರ್ಷೋದ್ಗಾರಕ್ಕೆ ಎಣೆಯೇ ಇರಲಿಲ್ಲ. ದಶಕದ ಕನಸು ಈಡೇರಿದ ಸಂತೃಪ್ತಿಯ ಭಾವ ಇಡೀ ತಂಡದ ಸದಸ್ಯರ ಮೊಗಗಳಲ್ಲಿ ಮಂದಹಾಸವಾಗಿ ಮಿನುಗುತ್ತಿತ್ತು. ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಅವರು,'ನಾವು ಸಾಧಿಸಿದೆವು, ಭಾರತ ಚಂದ್ರನ ಮೇಲೆ ಇಳಿದಿದೆ' ಎಂದು ಹರ್ಷಭರಿತರಾಗಿ ನುಡಿದರು. ಆಗ ಚಪ್ಪಾಳೆ ಸದ್ದು ಮತ್ತು ನಗುವಿನ ನಿನಾದ ಮುಗಿಲುಮುಟ್ಟಿತು.

ದಕ್ಷಿಣ ಆಫ್ರಿಕಾದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಲ್ಯಾಂಡಿಂಗ್‌ನ ಪ್ರಕ್ರಿಯೆ ಪೂರ್ಣಗೊಳ್ಳುವ ಹಂತದಲ್ಲಿದ್ದಾಗ ಆನ್‌ಲೈನ್ ಮೂಲಕ ವಿಜ್ಞಾನಿಗಳ ಜತೆಗೂಡಿದರು. 'ವಿಕ್ರಮ್' ಹೆಜ್ಜೆ ಇಡುತ್ತಿದ್ದಂತೆ ಮೋದಿ ಮುಷ್ಟಿಗಳನ್ನು ಬಿಗಿಯಾಗಿ ಹಿಡಿದೆತ್ತಿ ಸಂಭ್ರಮಿಸಿದರು. ಇದೇ ವೇಳೆಗೆ ಲ್ಯಾಂಡರ್ ಕೂಡ, 'ಭಾರತ, ನಾನು ನನ್ನ ಗುರಿಯನ್ನು ಮುಟ್ಟಿದ್ದೇನೆ ಮತ್ತು ನೀನೂ ಕೂಡಾ' ಎಂಬ ಸಂದೇಶವನ್ನೂ ಧರೆಗೆ ಕಳುಹಿಸಿತ್ತು.

11ನೇ ಪುಟ ನೋಡಿ

ಬಾಹ್ಯಾಕಾಶ ವಿಜ್ಞಾನದ ಭಾಗ್ಯೋದಯ

ಬಾಹ್ಯಾಕಾಶ ವಿಜ್ಞಾನ ಮತ್ತು ಅಂತರಿಕ್ಷ ಯಾನದಲ್ಲಿ ತನ್ನ ಸಾಧನೆ ಮೆರೆಯುವ ಮೂಲಕ ವಿಶ್ವದ ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದಲ್ಲಿ ಭಾರತವು ದೈತ್ಯ ಶಕ್ತಿಯಾಗಿ ಹೊರ ಹೊಮ್ಮಿದೆ.

ಮಂಗಳಯಾನ–1 ಒಂದೇ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದು, ಚಂದ್ರಯಾನ –1, ಚಂದ್ರಯಾನ– 2 (ಭಾಗಶಃ ಯಶಸ್ಸು) ಮತ್ತು ಚಂದ್ರಯಾನ–3 ಪೂರ್ಣ ಯಶಸ್ಸು, 100 ಉಪಗ್ರಹಗಳನ್ನು ಏಕಕಾಲಕ್ಕೆ ಉಡಾವಣೆ ಮಾಡಿ ಕಕ್ಷೆಗೆ ಸೇರಿಸಿದ್ದು, ಭಾರತದ ಶಕ್ತಿಗೆ ನಿದರ್ಶನ.

ಭವಿಷ್ಯದಲ್ಲಿ ವಾಣಿಜ್ಯ ಉದ್ದೇಶದ ಯಾನಗಳಿಗೆ ಹೆಚ್ಚಿನ ಬೇಡಿಕೆ ಬರಲಿದೆ. 2022 ರಲ್ಲಿ ವಿದೇಶಿ ಉಪಗ್ರಹಗಳನ್ನು ಉಡಾವಣೆ ಮಾಡಿದ್ದರಿಂದ ಇಸ್ರೊ ₹22 ಕೋಟಿ ಆದಾಯ ಗಳಿಸಿತ್ತು. ಇದು ಜಾಗತಿಕ ಬಾಹ್ಯಾಕಾಶ ಆರ್ಥಿಕತೆಯ ಶೇ 2 ರಷ್ಟು ಮಾತ್ರ. ಈ ದಶಕದ ಕೊನೆಗೆ ಶೇ 9 ರಷ್ಟು ಆದಾಯಗಳಿಸಬೇಕು ಎಂಬ ಗುರಿಯನ್ನು ಕೇಂದ್ರ ಸರ್ಕಾರ ನಿಗದಿ ಮಾಡಿದೆ. ಆದರೆ, ಅರ್ಥರ್ ಡಿ ಲಿಟಲ್ ಎಂಬ ಸಂಸ್ಥೆ ಮಾಡಿರುವ ಅಧ್ಯಯನದ ಪ್ರಕಾರ 2040 ರ ವೇಳೆಗೆ ಭಾರತ ಮೂರು ಟ್ರಿಲಿಯನ್ ಡಾಲರ್‌ಗಳಷ್ಟು ಆದಾಯಗಳಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬಹುದು ಎಂದು ಹೇಳಿದೆ.

ಶಂಗಳನ ಅಂಗಳಕ್ಕಿಳಿದ ರೋವರ್

ಬೆಂಗಳೂರು: ಲ್ಯಾಂಡರ್ 'ವಿಕ್ರಮ್' ಚಂದ್ರನ ಮೇಲೆ ಸುರಕ್ಷಿತವಾಗಿ ಇಳಿದ ತಕ್ಷಣವೇ ಅಲ್ಲಿ ಅಪಾರ ಪ್ರಮಾಣದಲ್ಲಿ ದೂಳು ಆವರಿಸಿತ್ತು. ದೂಳಿನ ಕಣಗಳು ಚದುರಿ ಹೋದ ಬಳಿಕ ಲ್ಯಾಂಡರ್‌ನಿಂದ ರೋವರ್ 'ಪ್ರಜ್ಞಾನ್' ಹೊರಬಂದಿದೆ.

ಚಂದ್ರನಲ್ಲಿನ ಒಂದು ದಿನವು ಭೂಮಿ ಮೇಲಿನ 14 ದಿನಗಳಿಗೆ ಸರಿಸಮನಾಗಿದೆ. ಈ ಅವಧಿಯಲ್ಲಿ ರೋವರ್ ಛಾಯಾಚಿತ್ರಗಳು ಮತ್ತು ದತ್ತಾಂಶಗಳನ್ನು ಭೂಮಿಗೆ ರವಾನಿಸುತ್ತದೆ.

ಇಂದಿನ ಚಾರಿತ್ರಿಕ ದಿನವನ್ನು ಎಂದಿಗೂ ಮರೆಯಲಾಗದು. ಭಾರತವು ಚಂದಿರನ ದಕ್ಷಿಣ ಧ್ರುವಕ್ಕೆ ಬಾಹ್ಯಾಕಾಶ ನೌಕೆ ಕಳುಹಿಸಿದ ವಿಶ್ವದ ಮೊದಲ ರಾಷ್ಟ್ರವಾಗಿದೆ. ಬೇರೆ ಯಾವುದೇ ರಾಷ್ಟ್ರಕ್ಕೂ ಇದುವರೆಗೆ ಈ ಸಾಧನೆ ಮಾಡಲಾಗಿಲ್ಲ

ನರೇಂದ್ರ ಮೋದಿ, ಪ್ರಧಾನಿ



ಇದು ಸುವರ್ಣ ಯುಗದ ಆರಂಭ. ನಮ್ಮ ಉತ್ಸಾಹ ಮತ್ತಷ್ಟು ಹೆಚ್ಚಿದೆ. ಚಂದ್ರಯಾನ–3 ಸುಲಭದ ಕಾರ್ಯವಾಗಿರಲಿಲ್ಲ. ನಾವು ನೋವು, ಸಂಕಟಗಳನ್ನು ಅನುಭವಿಸಿದ್ದೇವೆ. ಈಗ ಯಶಸ್ಸಿನ ಪಥದಲ್ಲಿ ಸಾಗಿದ್ದೇವೆ

ಎಸ್. ಸೋಮನಾಥ್, ಇಸ್ರೊ ಅಧ್ಯಕ್ಷ

ಆ 18 ನಿಮಿಷಗಳು

ಬೆಂಗಳೂರು: ಕೊನೆಯ ಆ 18 ನಿಮಿಷಗಳು ಇಸ್ರೊ ವಿಜ್ಞಾನಿಗಳ ಪಾಲಿಗೆ ಮಹಾಭಾರತದ 18 ದಿನಗಳ ಮಹಾಯುದ್ಧದಂತೆ ಭಾಸವಾಗಿತ್ತು. ಚಂದ್ರನ ಕಕ್ಷೆಯಿಂದ 30 ಕಿ.ಮೀ.ಗೆ ಹೋಗಿ ನಿಂತ ವಿಕ್ರಮನ ಪ್ರಯಾಣ ರೋಚಕವಾಗಿತ್ತು. ಎಲ್ಲರ ಎದೆ ಬಡಿತ ಹೆಚ್ಚಿಸಿ, ಉಸಿರು ಬಿಗಿ ಹಿಡಿಯುವಂತೆ ಮಾಡಿತ್ತು. ತಂತ್ರಜ್ಞಾನ, ವಿಜ್ಞಾನಿಗಳ ಪ್ರತಿಭೆಯ ಪಾರಮ್ಯದ ಅನಾವರಣ ಈ ಅಂತಿಮ ಕ್ಷಣ ಆಗಿತ್ತು. ಲ್ಯಾಂಡಿಂಗ್‌ಗಾಗಿ ಇಸ್ರೊ 40 ಗಂಟೆಗಳ ತಯಾರಿ ನಡೆಸಿತ್ತು. 18 ನಿಮಿಷಗಳಲ್ಲಿ ಏನೇನಾಯ್ತು ಎಂಬ ವಿವರ ಇಲ್ಲಿದೆ.

- **ಸಂಜೆ 5.47:** ರಫ್ ಬ್ರೇಕಿಂಗ್ ಹಂತ – ಲ್ಯಾಂಡರ್ ಕಕ್ಷೆ ಬಿಟ್ಟು ಚಂದ್ರನ ಮೇಲ್ಮೈಯಿಂದ 30 ಕಿ.ಮೀ ಎತ್ತರಕ್ಕೆ ಬಂದು ಇಳಿಯಲು ಸಜ್ಜಾಗಿ ನಿಂತಿತ್ತು. ಗಡಿಯಾರದ ಮುಳ್ಳು 5.47ಕ್ಕೆ ಬರುತ್ತಿದ್ದಂತೆ ತನ್ನ ನೆಲೆಯಿಂದ 750 ಕಿ.ಮಿ ದೂರವನ್ನು ಸಮಾನಾಂತರವಾಗಿ ಕ್ರಮಿಸಲು ಆರಂಭಿಸಿತು. ಆಗ ಅದರ ವೇಗ ಸೆಕೆಂಡಿಗೆ 1680 ಮೀಟರ್‌ಗಳಿಂದ 353 ಮೀಟರ್‌ಗಳಿಗೆ ತಗ್ಗಿಸಲಾಯಿತು. ಕೇವಲ 690 ಸೆಕೆಂಡುಗಳಲ್ಲಿ 30 ನೇ ಕಿ.ಮೀನಿಂದ 7.4 ಕಿ.ಮೀಗೆ ತರಲಾಯಿತು. ಶೇ 20 ರಷ್ಟು ಯಾತ್ರೆ ಪೂರ್ಣಗೊಂಡಿತ್ತು.
- ಸಮಾನಾಂತರದಲ್ಲಿ ಸಾಗಿ ಬಂದು ಬಾಗಿ ಕೆಳಗೆ ಇಳಿಯುವ ತಿರುವಿನಲ್ಲಿ ವೇಗ ಇನ್ನಷ್ಟು ತಗ್ಗಿಸಲಾಯಿತು. ವಿಕ್ರಮ್‌ನ ಸೆನ್ಸರ್‌ಗಳು ಎತ್ತರ, ವೇಗದ ಲೆಕ್ಕವನ್ನು ಹಾಕುತ್ತಲೇ ಇದ್ದವು. ಇತ್ತ ಕಮಾಂಡ್ ಸೆಂಟರ್‌ನಲ್ಲಿ ಇಸ್ರೊ ಅತಿರಥ-ಮಹಾರಥ ವಿಜ್ಞಾನಿಗಳು ಕುತೂಹಲದಿಂದ ವೀಕ್ಷಿಸುತ್ತಿದ್ದರು. ಈ ವೇಳೆಗೆ 'ಆಲ್ಟಿಟ್ಯೂಡ್ ಹೋಲ್ಡ್' ಹಂತವನ್ನು ಪ್ರವೇಶಿಸಿತ್ತು. ವೇಗ ಗಂಟೆಗೆ 880 ಕಿ.ಮೀ.ಗೆ ತಗ್ಗಿತ್ತು. (ಆರಂಭದ ವೇಗ ಗಂಟೆಗೆ 6,000 ಕಿ.ಮೀ ಇತ್ತು)

11ನೇ ಪುಟ ನೋಡಿ

ಚಂದ್ರನಲ್ಲಿ ಕಾಲಿಟ್ಟ ದೇಶಗಳು

• ಅಮೆರಿಕ • ಸೋವಿಯತ್ ರಷ್ಯಾ/ರಷ್ಯಾ • ಚೀನಾ • ಭಾರತ

ಮಿಜೋರಾಂ: ಕ್ರೇನ್ ಕುಸಿದು 23 ಸಾವು

ನವದೆಹಲಿ/ಐಜ್ವಾಲ್ (ಮಿಜೋರಾಂ) (ಪಿಟಿಐ): ಮಿಜೋರಾಂ ರಾಜಧಾನಿ ಐಜ್ವಾಲ್ ಸಮೀಪದ ಸೈರಂಗ ಬಳಿ ರೈಲ್ವೆ ಸೇತುವೆ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದ ವೇಳೆ, ಕ್ರೇನ್ ಕುಸಿದು ಕನಿಷ್ಠ 23 ಕಾರ್ಮಿಕರು ಬುಧವಾರ ಮೃತಪಟ್ಟಿದ್ದಾರೆ.

'ಐಜ್ವಾಲ್‌ನಿಂದ 21 ಕಿ.ಮೀ. ದೂರದಲ್ಲಿ ಕುರುಂಗ್ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಿಸುವ ವೇಳೆ ಈ ದುರ್ಘಟನೆ ಸಂಭವಿಸಿದೆ. 35-40 ಮಂದಿ ಕಾರ್ಮಿಕರು ಕಾಮಗಾರಿಯಲ್ಲಿ ತೊಡಗಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಸೇತುವೆ ಕುಸಿದಿಲ್ಲ. ನಿರ್ಮಾಣ ಕಾರ್ಯಕ್ಕಾಗಿ ಬಳಸಿದ್ದ ಸಂಚಾರಿ ಕ್ರೇನ್ (ಗ್ಯಾಂಟ್ರಿ) ಕುಸಿದಿದ್ದೇ ಈ ಅವಘಡಕ್ಕೆ ಕಾರಣ' ಎಂದು ರೈಲ್ವೆ ಅಧಿಕಾರಿಗಳು ಹೇಳಿದ್ದಾರೆ.

ನಿರ್ಮಾಣದ ವೇಳೆ ಸೇತುವೆ ಭಾಗಗಳು ಅಥವಾ ಉಕ್ಕಿನ ತೊಲೆಗಳನ್ನು ಎತ್ತಿಹಿಡಿಯಲು ಗ್ಯಾಂಟ್ರಿಗಳನ್ನು ಬಳಸಲಾಗುತ್ತದೆ.

7ನೇ ಪುಟ ನೋಡಿ

ವಿಮಾನ ಅಪಘಾತ: 'ವ್ಯಾಗ್ನರ್' ನಾಯಕ ಸಾವು?

ಮಾಸ್ಕೊ (ಎಪಿ/ಎಎಫ್‌ಪಿ): ರಷ್ಯಾದ ಟವೆರ್ ಪ್ರದೇಶದಲ್ಲಿ ಬುಧವಾರ ಖಾಸಗಿ ಸಂಸ್ಥೆ ವಿಮಾನವೊಂದು ಅಪಘಾತಕ್ಕೀಡಾಗಿ ಮೂವರು ಸಿಬ್ಬಂದಿ ಸೇರಿ 10 ಮಂದಿ ಮೃತಪಟ್ಟಿದ್ದಾರೆ. ರಷ್ಯಾ ಸೇನೆಯ ವಿರುದ್ಧದ ದಂಗೆಯ ನೇತೃತ್ವ ವಹಿಸಿದ್ದ ಖಾಸಗಿ ಸೇನಾ ಗುಂಪು 'ವ್ಯಾಗ್ನರ್' ಮುಖ್ಯಸ್ಥ ಯೆವ್ಗೆನಿ ಪ್ರಿಗೋಷಿನ್ ಅವರ ಹೆಸರು ಮೃತರ ಪಟ್ಟಿಯಲ್ಲಿದೆ ಎಂದು ದೇಶದ ಸರ್ಕಾರಿ ಸುದ್ದಿ ಸಂಸ್ಥೆಗಳು ವರದಿ ಮಾಡಿವೆ.

ಆದರೆ ಪ್ರಿಗೋಷಿನ್ ಅವರು ಈ ವಿಮಾನದಲ್ಲಿದ್ದರೆ ಎಂಬುದು ತಕ್ಷಣಕ್ಕೆ ಸ್ಪಷ್ಟವಾಗಿಲ್ಲ.'ಮಾಸ್ಕೊದಿಂದ ಸೇಂಟ್ ಪೀಟರ್ಸ್‌ಬರ್ಗ್‌ಗೆ ಪ್ರಯಾಣಿಸುತ್ತಿದ್ದ ಖಾಸಗಿ ಎಂಬ್ರೇಯರ್ ಲೆಗಸಿ ವಿಮಾನವು ಟವೆರ್ ಪ್ರದೇಶದ ಕುಜೆಂಕಿನೋ ಗ್ರಾಮದ ಬಳಿ ಅಪಘಾತಕ್ಕೀಡಾಯಿತು. ವಿಮಾನದಲ್ಲಿದ್ದ ಎಲ್ಲರೂ ಸಾವನ್ನಪ್ಪಿದ್ದಾರೆ. ಎಂಟು ಶವಗಳು ಸಿಕ್ಕಿವೆ' ಎಂದು ತುರ್ತುಸ್ಥಿತಿ ಸಚಿವಾಲಯವು ಹೇಳಿದೆ.

'ವ್ಯಾಗ್ನರ್' ದಂಗೆ ಮತ್ತು ಶಮನದ ನಂತರ ಪ್ರಿಗೋಷಿನ್ ಸಾರ್ವಜನಿಕವಾಗಿ ಕಾಣಿಸಿಕೊಂಡಿರಲಿಲ್ಲ.

ಭಿಕ್ಷುಕರ ಸೆಸ್ ಹಣ ಜಮೆ: ಬಿಬಿಎಂಪಿಗೆ ಅಂತಿಮ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಸಂಗ್ರಹ ಮಾಡಲಾಗಿರುವ ಭಿಕ್ಷುಕರ ಸೆಸ್ (ಉಪ ಕರ) ಮೊತ್ತವನ್ನು ಎರಡು ವಾರಗಳ ಒಳಗಾಗಿ ಕೇಂದ್ರ ಪರಿಹಾರ ಸಮಿತಿಗೆ ಜಮೆ ಮಾಡಬೇಕು' ಎಂದು ಹೈಕೋರ್ಟ್ ಬಿಬಿಎಂಪಿಗೆ ಅಂತಿಮ ಗಡುವು ನೀಡಿದೆ.

ನಗರದ ರಸ್ತೆಗಳಲ್ಲಿ ಮಕ್ಕಳನ್ನು ಆಟಿಕೆ ಸಾಮಾನು ಮಾರಾಟ ಮಾಡಲು ಹಾಗೂ ಭಿಕ್ಷಾಟನೆಗೆ ಬಳಸಿಕೊಳ್ಳುತ್ತಿರುವ ವಿಚಾರವಾಗಿ 'ಲೆಟ್ಸ್ ಕಿಟ್ ಫೌಂಡೇಷನ್' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

2ನೇ ಪುಟ ನೋಡಿ

ಪ್ರಧಾನಿ ಬಳಿಗೆ ಸರ್ವಪಕ್ಷ ನಿಯೋಗ: ಸಿದ್ದರಾಮಯ್ಯ

ಬೆಂಗಳೂರು: 'ಕಾವೇರಿ, ಮೇಕೆದಾಟು, ಮಹದಾಯಿ, ಕೃಷ್ಣಾ ಸಮಸ್ಯೆಗಳ ಕುರಿತು ಪ್ರಧಾನಿ ಬಳಿಗೆ ಸರ್ವಪಕ್ಷಗಳ ನಿಯೋಗ ಕೊಂಡೊಯ್ಯಲು ನಿರ್ಧರಿಸಿದ್ದು, ಅದಕ್ಕೆ ಸಹಕಾರ ನೀಡಲು ಎಲ್ಲ ಪಕ್ಷಗಳ ಮುಖಂಡರು ಒಪ್ಪಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. 5

ಎರಡು ಬಾರಿ ಬೋರ್ಡ್ ಪರೀಕ್ಷೆ

ನವದೆಹಲಿ(ಪಿಟಿಐ): ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅನ್ವಯ ರೂಪಿಸಿರುವ ಹೊಸ ಪಠ್ಯಕ್ರಮ ಚೌಕಟ್ಟಿನ ಪ್ರಕಾರ ವರ್ಷದಲ್ಲಿ ಎರಡು ಬಾರಿ ಬೋರ್ಡ್ ಪರೀಕ್ಷೆಗಳನ್ನು ನಡೆಸಲಾಗುತ್ತದೆ. 7

ಸಕ್ಕರೆ ರಫ್ತು ನಿಷೇಧ ಸಾಧ್ಯತೆ

ಮುಂಬೈ/ನವದೆಹಲಿ (ರಾಯಿಟರ್ಸ್): ಕೇಂದ್ರ ಸರ್ಕಾರವು ಅಕ್ಟೋಬರ್‌ನಿಂದ ಸಕ್ಕರೆ ರಫ್ತಿನ ಮೇಲೆ ನಿಷೇಧ ಹೇರುವ ಸಾಧ್ಯತೆ ಇದೆ. ಮಳೆಯ ಕೊರತೆಯ ಕಾರಣದಿಂದಾಗಿ ಕಬ್ಬು ಬೆಳೆ ಕಡಿಮೆ ಆಗಿರುವ ಕಾರಣ ಈ ತೀರ್ಮಾನ ಕೈಗೊಳ್ಳಬಹುದು ಎಂದು ಸರ್ಕಾರದ ಮೂಲಗಳು ಹೇಳಿವೆ. 10

ಒಳ ಪುಟ
21 ವರ್ಷಗಳ ನಂತರ ಬಿಸಿಯೂಟ! 10

ಚಿನಕುರಳಿ
ಪ್ರಕಾಶ್ ಶೆಟ್ಟಿ



ಸುಧಾ, ಮಯೂರ ಓದಿರಿ

ಅತ್ಯಾಚಾರ, ಕೊಲೆ ಪ್ರಕರಣ: ಅಪರಾಧಿಗೆ ಜೀವಾವಧಿ ಶಿಕ್ಷೆ

ಬೆಂಗಳೂರು: ಕೊತ್ತನೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮೂರು ವರ್ಷದ ಹೆಣ್ಣು ಮಗುವಿನ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿದ್ದ ಅಪರಾಧಿ ನಿಷಾಧ್‌ಗೆ ನಗರದ ತ್ವರಿತ ವಿಶೇಷ ನ್ಯಾಯಾಲಯವು (ಎಫ್‌ಟಿಎಸ್‌ಸಿ -4) ಜೀವಾವಧಿ ಶಿಕ್ಷೆ ವಿಧಿಸಿದೆ.

ಅಪರಾಧಿಯು 2018ರ ಫೆಬ್ರುವರಿ 26ರಂದು ಮನೆಯ ಪಕ್ಕ ಆಟವಾಡುತ್ತಿದ್ದ ಮಗುವನ್ನು ಅಪಹರಿಸಿ ಅತ್ಯಾಚಾರ ಎಸಗಿದ್ದ. ಬಳಿಕ ಮಗುವಿನ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ್ದ. ಕೊತ್ತನೂರು ಪೊಲೀಸರು ಆತನ ವಿರುದ್ಧ ಪೋಕ್ಸೊ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದರು. ಆತನನ್ನು ಬಂಧಿಸಿ ತನಿಖೆ ನಡೆಸಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು.

ಮುರುಘಾ ಮಠ: ಮೇಲ್ಮನವಿ ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ 'ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ'ಕ್ಕೆ (ಎಸ್‌ಜೆಎಂ) ರಾಜ್ಯ ಸರ್ಕಾರ ಆಡಳಿತಾಧಿಕಾರಿ ನೇಮಕ ಮಾಡಿದ ಆದೇಶವನ್ನು ರದ್ದುಪಡಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿದ್ದ ಮೇಲ್ಮನವಿ ವಿಚಾರಣೆ ಮುಕ್ತಾಯಗೊಳಿಸಿರುವ ಹೈಕೋರ್ಟ್ ತೀರ್ಪು ಕಾಯ್ದಿರಿಸಿದೆ.

ಈ ಕುರಿತಂತೆ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಲಾದ ಒಟ್ಟು ಏಳು ಮೇಲ್ಮನವಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ಮುಕ್ತಾಯಗೊಳಿಸಿ ತೀರ್ಪು ಕಾಯ್ದಿರಿಸುವಂತೆ ಆದೇಶಿಸಿತು.

ಪ್ರಕರಣವೇನು?: 'ಪೋಕ್ಸೊ ಪ್ರಕರಣದ ಆರೋಪಿ ಶಿವಮೂರ್ತಿ ಶರಣರು ನ್ಯಾಯಾಂಗ ಬಂಧನದಲ್ಲಿದ್ದಾರೆ. ಹೀಗಾಗಿ, ಹಿಂದಿದ್ದ ಬಿಜೆಪಿ ನೇತೃತ್ವದ ಸರ್ಕಾರವು ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್.ವಸ್ತ್ರದ ಅವರನ್ನು ಮಠದ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿತ್ತು. ಅವರು 2022ರ ಡಿಸೆಂಬರ್ 15ರಂದು ಅಧಿಕಾರ ಸ್ವೀಕರಿಸಿದ್ದರು.

ಸರ್ಕಾರದ ಈ ಕ್ರಮವನ್ನು ಪ್ರಶ್ನಿಸಿ ಮಠದ ತಾತ್ಕಾಲಿಕ ಉಸ್ತುವಾರಿ ಬಸವಪ್ರಭು ಸ್ವಾಮೀಜಿ ಮತ್ತು ಭಕ್ತರು, ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಆಡಳಿತಾಧಿಕಾರಿ ನೇಮಕವನ್ನು ರದ್ದುಪಡಿಸಿತ್ತು.

ಸದ್ಯ ಚಿತ್ರದುರ್ಗ ಜಿಲ್ಲಾ ಪ್ರಧಾನ ನ್ಯಾಯಾಧೀಶರನ್ನು ಮಠದ ತಾತ್ಕಾಲಿಕ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ. 'ಮೇಲ್ಮನವಿ ಮೇಲಿನ ಅಂತಿಮ ತೀರ್ಪು ಬರುವ ತನಕ ಈ ಆದೇಶ ಜಾರಿಯಲ್ಲಿರುತ್ತದೆ' ಎಂದು ವಿಚಾರಣೆ ನಡೆಸುತ್ತಿರುವ ವಿಭಾಗೀಯ ನ್ಯಾಯಪೀಠವು 2023ರ ಜುಲೈ 3ರಂದು ಆದೇಶಿಸಿತ್ತು.

ಭಿಕ್ಷುಕರ ಸೆಸ್ ಹಣ ಜಮೆ: ಬಿಬಿಎಂಪಿಗೆ ಅಂತಿಮ ಗಡುವು

ಒಂದನೇ ಪುಟದಿಂದ

ಅರ್ಜಿದಾರರ ಪರ ವಕೀಲ ಪುತ್ತಿಗೆ ರಮೇಶ್ ವಾದ ಮಂಡಿಸಿ, 'ಸಂಗ್ರಹ ಮಾಡಿರುವ ಭಿಕ್ಷುಕರ ಸೆಸ್ ಹಣವನ್ನು ಮೂರು ವಾರಗಳಲ್ಲಿ ಕೇಂದ್ರ ಪರಿಹಾರ ಸಮಿತಿಗೆ ಜಮೆ ಮಾಡುವಂತೆ 2023ರ ಫೆಬ್ರುವರಿ 15ರಂದು ನೀಡಿದ್ದ ಆದೇಶವನ್ನು ಬಿಬಿಎಂಪಿ ಈವರೆಗೆ ಪಾಲಿಸಿಲ್ಲ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಯಾಗಿ ಬಿಬಿಎಂಪಿ ಪರ ವಕೀಲ ಎನ್.ಕೆ. ರಮೇಶ್, 'ಇತ್ತೀಚೆಗಷ್ಟೇ ನಾನು ಬಿಬಿಎಂಪಿ ಪರ ವಕೀಲನಾಗಿ ನಿಯುಕ್ತಿಗೊಂಡಿರುವ ಕಾರಣ ನ್ಯಾಯಾಲಯದ ಆದೇಶ ಪಾಲನೆ ಕುರಿತಂತೆ ಕೈಗೊಳ್ಳಲಾಗಿರುವ ಕ್ರಮಗಳ ಬಗ್ಗೆ ತಿಳಿಯಲು ಇನ್ನಷ್ಟು ಸಮಯ ನೀಡಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಇದೇ ಕೊನೆಯ ಗಡುವು' ಎಂದು ತಾಕೀತು ಮಾಡಿ ವಿಚಾರಣೆ ಮುಂದೂಡಿತು.

ಸಂಕ್ಷಿಪ್ತ ಸುದ್ದಿ

ಶ್ರೀನಿವಾಸ ಮೂರ್ತಿ ಲೋಕಾಯುಕ್ತ ಪೊಲೀಸ್ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪ ಎದುರಿಸುತ್ತಿರುವ ಬೆಂಗಳೂರು ಪೂರ್ವ ತಾಲ್ಲೂಕಿನ ಭೂಮಾಪನ ಇಲಾಖೆ ಅಧೀಕ್ಷಕ ಕೆ.ಟಿ. ಶ್ರೀನಿವಾಸ ಮೂರ್ತಿ ಅವರನ್ನು ಹೆಚ್ಚಿನ ತನಿಖೆಗಾಗಿ ಐದು ದಿನಗಳ ಕಾಲ ಲೋಕಾಯುಕ್ತ ಪೊಲೀಸರ ವಶಕ್ಕೆ ನೀಡಲಾಗಿದೆ.

ಶ್ರೀನಿವಾಸ ಮೂರ್ತಿ ಅವರಿಗೆ ಸೇರಿದ 14 ಸ್ಥಳಗಳ ಮೇಲೆ ಮಂಗಳವಾರ ದಾಳಿಮಾಡಿದ್ದ ಲೋಕಾಯುಕ್ತ ಪೊಲೀಸರು, ಶೋಧ ನಡೆಸಿದ್ದರು. ಐದು ಮದ್ಯದಂಗಡಿಗಳು ಮತ್ತು ಹಲವು ಸ್ಥಿರಾಸ್ತಿಗಳನ್ನು ಪತ್ತೆ ಮಾಡಿದ್ದರು. ತನಿಖೆಗೆ ಸಹಕರಿಸದ ಆರೋಪದ ಮೇಲೆ ಅಧಿಕಾರಿಯನ್ನು ಮಂಗಳವಾರವೇ ಬಂಧಿಸಲಾಗಿತ್ತು.

ಆರೋಪಿಯು ಸ್ಥಿರಾಸ್ತಿ ಒಡೆತನ ಮತ್ತು ಬ್ಯಾಂಕ್ ವಹಿವಾಟಿಗೆ ಸಂಬಂಧಿಸಿದ ದಾಖಲೆಗಳನ್ನು ತನಿಖಾ ತಂಡಕ್ಕೆ ಒದಗಿಸಿಲ್ಲ. ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಶ್ರೀನಿವಾಸ ಮೂರ್ತಿ ಅವರನ್ನು ಬುಧವಾರ ತನಿಖಾಧಿಕಾರಿಗಳು ಹಾಜರುಪಡಿಸಿದರು. ಹೆಚ್ಚಿನ ತನಿಖೆ ಅಗತ್ಯವಿರುವ ಕಾರಣದಿಂದ ಆರೋಪಿಯನ್ನು ಐದು ದಿನಗಳ ಕಾಲ ತಮ್ಮ ವಶಕ್ಕೆ ನೀಡುವಂತೆ ತನಿಖಾಧಿಕಾರಿ ಮನವಿ ಮಾಡಿದರು. ಅದನ್ನು ಮಾನ್ಯ ಮಾಡಿ ನ್ಯಾಯಾಧೀಶರು ಆದೇಶ ಹೊರಡಿಸಿದರು.

ಬ್ಯಾಂಕಾಕ್‌ನಿಂದ ತಂದಿದ್ದ ಕಾಂಗರೂ ಮರಿ ಸಾವು

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): ಥಾಯ್ಲೆಂಡ್ ರಾಜಧಾನಿ ಬ್ಯಾಂಕಾಕ್‌ನಿಂದ ಸೋಮವಾರ ತಡರಾತ್ರಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ತಮಿಳುನಾಡಿನ ಪ್ರಯಾಣಿಕರೊಬ್ಬರ ಬ್ಯಾಗ್‌ನಿಂದ ವಶಪಡಿಸಿಕೊಳ್ಳಲಾದ ಕಾಂಗರೂ ಮರಿ ಮತ್ತು ಸರೀಸೃಪಗಳು ಸಾವನ್ನಪ್ಪಿವೆ.

ಕಸ್ಟಮ್ಸ್ ಅಧಿಕಾರಿಗಳು ಪ್ರಯಾಣಿಕನ ಎರಡು ಬ್ಯಾಗ್‌ಗಳನ್ನು ಪರಿಶೀಲಿಸಿದಾಗ ಕದ್ದು ತಂದಿದ್ದ 234 ವನ್ಯಜೀವಿಗಳು ಪತ್ತೆಯಾಗಿದ್ದವು. ಅರಣ್ಯ ಇಲಾಖೆ ಸುಪರ್ದಿಯಲ್ಲಿ ಪ್ರಾಣಿಗಳನ್ನು ಆರೈಕೆ ಮಾಡಿ 230 ಪ್ರಾಣಿಗಳನ್ನು ಮಂಗಳವಾರವೇ ಥಾಯ್ಲೆಂಡ್‌ಗೆ ವಾಪಸ್ ಕಳುಹಿಸಲಾಗಿದೆ.

ನಾನಾ ಬಗೆಯ ಹೆಬ್ಬಾವು, ಊಸರವಳ್ಳಿ, ಆಮೆಗಳು, ಕಾಂಗರೂ ಮರಿ ಸೇರಿದಂತೆ ಅಳಿವಿನ ಅಂಚಿನಲ್ಲಿರುವ ಕಾಡುಪ್ರಾಣಿಗಳನ್ನು ಪ್ರಯಾಣಿಕ ಕಳ್ಳಸಾಗಣೆ ಮಾಡುತ್ತಿದ್ದ. ನಿಸ್ತೇಜಗೊಂಡಿದ್ದ ಮರಿ ಕಾಂಗರೂ ಹಾಗೂ ಎರಡು ಸರೀಸೃಪ ಮೃತಪಟ್ಟಿವೆ.

ಶ್ರೀ ವಿನಾಯಕ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

(ರಿ.ನಂ. ಬಿ/ಎಆರ್‌ಬಿಎಲ್/1800/70-71)

ನಂ. 14, 3ನೇ ಮುಖ್ಯ ರಸ್ತೆ, ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು-560 003.

ದೂ. 23441545, 23441546, 23419545, 23241399

50ನೇ ಸರ್ವ ಸದಸ್ಯರ ಸಭೆಯ ತಿಳುವಳಿಕೆ

ದಿನಾಂಕ: 10-09-2023ರ ಭಾನುವಾರ ಬೆಳಿಗ್ಗೆ 10:00 ಘಂಟೆಗೆ

ಮೇಲ್ಕಂಡ ಸೊಸೈಟಿಯ 2022-2023ನೇ ಸಾಲಿನ 50ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ದಿನಾಂಕ: 10-09-2023ರ ಭಾನುವಾರ ಬೆಳಿಗ್ಗೆ 10:00 ಘಂಟೆಗೆ "ಶ್ರೀ ಆಂಜನೇಯ ಸ್ವಾಮಿ ದೇವಾಲಯ ಟ್ರಸ್ಟ್ (ರಿ.) ಕಲ್ಯಾಣ ಮಂಟಪ" ವೆಂಕಟಸ್ವಾಮಿ ರಾಜು ರಸ್ತೆ, ಶ್ರೀ ಆಂಜನೇಯ ಸ್ವಾಮಿ ದೇವಾಲಯ ವೃತ್ತ, ರಾಜಾಮಹಲ್ ಗುಟ್ಟಹಳ್ಳಿ, ಬೆಂಗಳೂರು-560 020 ಇಲ್ಲಿ ಸೊಸೈಟಿಯ ಅಧ್ಯಕ್ಷರಾದ **ಶ್ರೀ ಹೆಚ್.ಸಿ. ಸಿದ್ದಗಂಗಯ್ಯರವರ** ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ. ಅರ್ಹ ಮಾನ್ಯ ಸಾಮಾನ್ಯ ಸದಸ್ಯರಿಗೆ ಸರ್ವ ಸದಸ್ಯರ ಸಭೆಯ ನೋಟಿಸ್‌ನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ನೋಟೀಸ್ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಅಧಿಕೃತ ನೋಟೀಸ್ ಎಂದು ತಿಳಿದು ಅರ್ಹ ಮಾನ್ಯ ಸಾಮಾನ್ಯ ಸದಸ್ಯರು ಕಡ್ಡಾಯವಾಗಿ ಸೊಸೈಟಿಯಿಂದ ನೀಡಿರುವ ಗುರುತಿನ ಚೀಟಿಯೊಂದಿಗೆ ಸಭೆಗೆ ಆಗಮಿಸಬೇಕಾಗಿ ಕೋರಿದೆ. 2022-2023ನೇ ಶೈಕ್ಷಣಿಕ ಸಾಲಿನಲ್ಲಿ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಕನಿಷ್ಠ ಶೇಕಡ 80ಕ್ಕೂ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾಗಿರುವಂತಹ ಅರ್ಹ ಸಾಮಾನ್ಯ ಸದಸ್ಯರುಗಳ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹಕ ಬಹುಮಾನಗಳನ್ನು ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸೊಸೈಟಿಗೆ ಭೇಟಿ ನೀಡಲು ಸೂಚಿಸಿದೆ.

ಸಹಿ/-
ಬಿ.ಎನ್. ಸಾವಿತ್ರಮ್ಮ, ಬಿ.ಕಾಂ, ಡಿ.ಸಿ.ಎಂ.
ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸ್ಥಳ: ಬೆಂಗಳೂರು
ದಿನಾಂಕ: 24-08-2023

ಖಜಾನೆ ಇಲಾಖೆ

5ನೇ & 6ನೇ ಮಹಡಿ, ಕೆ.ಪಿ.ಸಿ.ಎಲ್. ಗ್ರೀನ್ ಕಟ್ಟಡ, ಅರಮನೆ ರಸ್ತೆ, ಬೆಂಗಳೂರು-01. ದೂ.: 080-22867700, ಫ್ಯಾಕ್ಸ್: 080-22860142.

ಸಂಖ್ಯೆ : DOTR/2023-24/SE0003 ದಿನಾಂಕ : 21-08-2023

"ಸ್ವಚ್ಛತಾ ಸಿಬ್ಬಂದಿಗಳ ಸೇವೆ" ಸಂಗ್ರಹಿಸಲು ಆರ್.ಎಫ್.ಪಿ.

ಖಜಾನೆ ಇಲಾಖೆಯು "ಸ್ವಚ್ಛತಾ ಸಿಬ್ಬಂದಿಗಳ ಸೇವೆ" ಸಂಗ್ರಹಿಸಲು ಟೆಂಡರ್‌ನ್ನು ಆಹ್ವಾನಿಸಿದೆ. ಟೆಂಡರ್ ವಿವರಗಳು ಇ-ಪ್ರೋಕ್ಯೂರ್‌ಮೆಂಟ್ ವೇದಿಕೆ www.eproc.karnataka.gov.in ನಲ್ಲಿ ಲಭ್ಯವಿದ್ದು, ಟೆಂಡರ್‌ಗಳನ್ನು ವಿದ್ಯುನ್ಮಾನವಾಗಿ www.eproc.karnataka.gov.in ಇಲ್ಲಿ ಸಲ್ಲಿಸಬಹುದು.

ಸಹಿ/-
ಖಜಾನೆ ಆಯುಕ್ತರು.

ವಾಸಾಇ/ಬೆಂ.ನ./1014/ಮಣಿಪಾಲ್/2023-24

ಸೆಂಟ್ರಲ್ ರೈಲ್ವೆ

ಮಟೀರಿಯಲ್ ಮ್ಯಾನೇಜ್‌ಮೆಂಟ್ ಡಿಪಾರ್ಟ್‌ಮೆಂಟ್

ಡೆ. ಚೀಫ್ ಮಟೀರಿಯಲ್ ಮ್ಯಾನೇಜರ್ ಕಚೇರಿ, ಮಾತುಂಗಾ, ಮುಂಬೈ - 400 019 ಇವರು **ಟೆಂಡರ್ ನೋಟಿಸ್ ನಂ.:** ಸಿಡಬ್ಲುಇ/ಎಂಟಿಎನ್/85235777/2023 **ಐಟಂ ವಿವರ:** ನಂ. ಆರ್‌ಡಿಎಸ್‌ಓ/ಸಿಜಿ/ಡಿಆರ್‌ಜಿ/21009ಗೆ ಮಿಡ್ಲ್ ಬಾಕ್ಸಿಂಗ್ ಐಟಂ ನಂ. 15, ಸೋಲ್ ಬಾರ್ ಲೆಂಗ್ತ್ = 2500 ಎಂಎಂ. (ಲಿಫ್ಟಿಂಗ್ ಪ್ಯಾಡ್‌ಗೆ ಕಟ್‌ಔಟ್ ರಹಿತವಾಗಿ ಐಟಂ ಪೂರೈಸುವುದು). **ಪ್ರಮಾಣ:** 1200 ಸಂಖ್ಯೆ. **ಒಪನಿಂಗ್ ದಿನಾಂಕ:** 22.09.2023. ಟೆಂಡರ್ ಕುರಿತಾದ ಸಂಪೂರ್ಣ ವಿವರಗಳು ರೈಲ್ವೆಯ ಅಧಿಕೃತ **www.ireps.gov.in** ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು, ಈ ಸಂಪೂರ್ಣ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. 431

ಟಿಕೇಟ್‌ಗಳಿಗಾಗಿ ಯುಟಿಎಸ್ ಆ್ಯಪ್ ಡೌನ್‌ಲೋಡ್ ಮಾಡಿರಿ

ಕರ್ನಾಟಕ ಸೌರ ಶಕ್ತಿ ಅಭಿವೃದ್ಧಿ ನಿಗಮ ನಿಯಮಿತ

KSPDCL Promote Solar Power

(CIN: U40107KA2015PLCO79223)

ನಂ.6/13/1, ಕೆಆರ್‌ಇಡಿಎಲ್ ಕಟ್ಟಡ, 5ನೇ ಮಹಡಿ, 10ನೇ ಬ್ಲಾಕ್, ನಾಗರಭಾವಿ, 2ನೇ ಹಂತ, ಬೆಂಗಳೂರು -560 072.

ಆಸಕ್ತಿ ವ್ಯಕ್ತಪಡಿಸುವಿಕೆ ಪ್ರಕಟಣೆ

ಕೆ.ಎಸ್.ಪಿ.ಡಿ.ಎಲ್ ವತಿಯಿಂದ ಪಾವಗಡದ ಇಂಟುರಾಯನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 500ಮೆ.ವ್ಯಾ ಸೋಲಾರ್ ಪಾರ್ಕ್‌ನ್ನು ಸ್ಥಾಪಿಸಲು ರೈತರ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಪಡೆಯುವ ಕುರಿತು.

ಸೋಲಾರ್ ಎನರ್ಜಿ ಕಾರ್ಪೋರೇಷನ್ ಆಫ್ ಇಂಡಿಯಾ, ಭಾರತ ಸರ್ಕಾರ ಮತ್ತು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದ ಕಂಪನಿಯಾದ ಕರ್ನಾಟಕ ಸೌರಶಕ್ತಿ ಅಭಿವೃದ್ಧಿ ನಿಗಮ ನಿಯಮಿತ (KSPDCL) ಸಂಸ್ಥೆಯು ಪಾವಗಡದ ಇಂಟುರಾಯನಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ 500 ಮೆ.ವ್ಯಾ ಸಾಮರ್ಥ್ಯದ ಸೋಲಾರ್ ಪಾರ್ಕ್‌ನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿರುತ್ತದೆ. ಸದರಿ ಪಾರ್ಕ್ ಸ್ಥಾಪನೆಗಾಗಿ ಒಂದೇ ಕಡೆ ಅಂದಾಜು 2000 ಎಕರೆಯಷ್ಟು ಜಮೀನಿನ ಅವಶ್ಯಕತೆ ಇರುತ್ತದೆ. ಈ ಜಮೀನನ್ನು ಸುಮಾರು 28 ವರ್ಷಗಳ ಅವಧಿಗೆ ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಹೊಂದಲು ಸಂಸ್ಥೆಯು ಬಯಸಿದೆ. ಗುತ್ತಿಗೆ ಪಡೆದ ಜಮೀನಿಗೆ ಪ್ರತಿ ಎಕರೆ ವಿಸ್ತೀರ್ಣಕ್ಕೆ ವಾರ್ಷಿಕ ಗುತ್ತಿಗೆ ದರವನ್ನು ಈಗಾಗಲೇ ಸ್ಥಾಪಿಸಿದ 2050 ಮೆ.ವ್ಯಾ ಸಾಮರ್ಥ್ಯದ ಪಾವಗಡ ಸೋಲಾರ್ ಪಾರ್ಕ್ ಮಾದರಿಯಡಿ ನಿಗದಿಪಡಿಸಲಾಗುವುದು. ಈ ಯೋಜನೆಗೆ ಗುತ್ತಿಗೆ ಆಧಾರದ ಮೇಲೆ ಭೂಮಿ ನೀಡಲು ಆಸಕ್ತಿಯುಳ್ಳ ರೈತರು ತಮ್ಮ ಒಪ್ಪಿಗೆಯನ್ನು ಲಿಖಿತವಾಗಿ ಕೆಳಕಂಡ ನಮೂನೆಯಲ್ಲಿ **ದಿನಾಂಕ: 15.09.2023 ರ ಒಳಗೆ** ಸಂಬಂಧಪಟ್ಟ ದಾಖಲಾತಿಗಳೊಂದಿಗೆ ವಿವರಗಳನ್ನು ಕೆ.ಎಸ್.ಪಿ.ಡಿ.ಸಿ.ಎಲ್ ಕಛೇರಿ, ಬೆಂಗಳೂರಿಗೆ ನೀಡಬೇಕೆಂದು ಕೋರಲಾಗಿದೆ. ಒಪ್ಪಿಗೆ ಪತ್ರದ ನಮೂನೆಯು **www.kspdcl.karnataka.gov.in** ಜಾಲತಾಣದಲ್ಲಿ ಲಭ್ಯವಿರುತ್ತದೆ.

ತಾಲ್ಲೂಕು	ಗ್ರಾಮ	ಗ್ರಾಮ ಪಂಚಾಯತಿ	ಸರ್ವೇ ನಂ.	ಹಿಸ್ಸಾ ನಂ.	ಭೂಮಾಲೀಕರ ಹೆಸರು	ಜಮೀನಿನ ವಿಸ್ತೀರ್ಣ

ಯೋಜನೆಗೆ ಅವಶ್ಯಕವಿರುವ ಜಮೀನುಗಳನ್ನು ಗುತ್ತಿಗೆ ಪಡೆಯಲು ಕೆ.ಎಸ್.ಪಿ.ಡಿ.ಸಿ.ಎಲ್ ನ ನಿರ್ಧಾರವು ಅಂತಿಮವಾಗಿರುತ್ತದೆ. ಈ ಪ್ರಕಟಣೆ ಬಗ್ಗೆ ಹೆಚ್ಚಿನ ವಿವರಗಳನ್ನು ಬಯಸಿದಲ್ಲಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 7899915814, ಶ್ರೀ ಪ್ರಕಾಶ್ ಎಮ್, ಉಪ ಪ್ರಧಾನ ವ್ಯವಸ್ಥಾಪಕರು (ಕ್ಷೇತ್ರ), ಕೆ.ಎಸ್.ಪಿ.ಡಿ.ಸಿ.ಎಲ್.

ಸೂಚನೆ: ಕೆಎಸ್‌ಪಿಡಿಸಿಎಲ್ ಬಿಡ್ಡಿಂಗ್ ಪ್ರಕ್ರಿಯೆಯನ್ನು ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿದೆ ಹಾಗೂ ಯಾವುದೇ ಕಾರಣ ನೀಡದೇ ಅಂಥಹ ಆಹ್ವಾನಗಳಿಗೆ ಕಟ್ಟುಪಾಡುಗಳನ್ನು ವಿಧಿಸುವ ಅಥವಾ ಹೊಣೆಗಾರಿಕೆ ಇಲ್ಲದೆ ಹೊಸ ಬಿಡ್‌ಗಳನ್ನು ಆಹ್ವಾನಿಸುವ ಹಕ್ಕನ್ನು ಕಾಯ್ದಿರಿಸಿದೆ.

ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕಸೌಅನಿನಿ

ಕರ್ನಾಟಕ ಸೌರ ಶಕ್ತಿ ಅಭಿವೃದ್ಧಿ ನಿಗಮ ನಿಯಮಿತ

KSPDCL Promote Solar Power

(CIN: U40107KA2015PLCO79223)

ನಂ.6/13/1, ಕೆಆರ್‌ಇಡಿಎಲ್ ಕಟ್ಟಡ, 5ನೇ ಮಹಡಿ, 10ನೇ ಬ್ಲಾಕ್, ನಾಗರಭಾವಿ, 2ನೇ ಹಂತ, ಬೆಂಗಳೂರು -560 072.

ಆಸಕ್ತಿ ವ್ಯಕ್ತಪಡಿಸುವಿಕೆ ಪ್ರಕಟಣೆ

ಕೆ.ಎಸ್.ಪಿ.ಡಿ.ಎಲ್ ವತಿಯಿಂದ ಪಾವಗಡದ ರಾಪ್ಟೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 2500ಮೆ.ವ್ಯಾ ಸೋಲಾರ್ ಪಾರ್ಕ್‌ನ್ನು ಸ್ಥಾಪಿಸಲು ರೈತರ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ಪಡೆಯುವ ಕುರಿತು.

ಸೋಲಾರ್ ಎನರ್ಜಿ ಕಾರ್ಪೋರೇಷನ್ ಆಫ್ ಇಂಡಿಯಾ, ಭಾರತ ಸರ್ಕಾರ ಮತ್ತು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಕರ್ನಾಟಕ ಸರ್ಕಾರದ ಜಂಟಿ ಸಹಭಾಗಿತ್ವದ ಕಂಪನಿಯಾದ ಕರ್ನಾಟಕ ಸೌರಶಕ್ತಿ ಅಭಿವೃದ್ಧಿ ನಿಗಮ ನಿಯಮಿತ (KSPDCL) ಸಂಸ್ಥೆಯು ಪಾವಗಡದ ರಾಪ್ಟೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 2500 ಮೆ.ವ್ಯಾ ಸಾಮರ್ಥ್ಯದ ಸೋಲಾರ್ ಪಾರ್ಕ್‌ನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಿರುತ್ತದೆ. ಸದರಿ ಪಾರ್ಕ್ ಸ್ಥಾಪನೆಗಾಗಿ ಒಂದೇ ಕಡೆ ಅಂದಾಜು 10000 ಎಕರೆಯಷ್ಟು ಜಮೀನಿನ ಅವಶ್ಯಕತೆ ಇರುತ್ತದೆ. ಈ ಜಮೀನನ್ನು ಸುಮಾರು 28 ವರ್ಷಗಳ ಅವಧಿಗೆ ವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಹೊಂದಲು ಸಂಸ್ಥೆಯು ಬಯಸಿದೆ. ಗುತ್ತಿಗೆ ಪಡೆದ ಜಮೀನಿಗೆ ಪ್ರತಿ ಎಕರೆ ವಿಸ್ತೀರ್ಣಕ್ಕೆ ವಾರ್ಷಿಕ ಗುತ್ತಿಗೆ ದರವನ್ನು ಈಗಾಗಲೇ ಸ್ಥಾಪಿಸಿದ 2050 ಮೆ.ವ್ಯಾ ಸಾಮರ್ಥ್ಯದ ಪಾವಗಡ ಸೋಲಾರ್ ಪಾರ್ಕ್ ಮಾದರಿಯಡಿ ನಿಗದಿಪಡಿಸಲಾಗುವುದು. ಈ ಯೋಜನೆಗೆ ಗುತ್ತಿಗೆ ಆಧಾರದ ಮೇಲೆ ಭೂಮಿ ನೀಡಲು ಆಸಕ್ತಿಯುಳ್ಳ ರೈತರು ತಮ್ಮ ಒಪ್ಪಿಗೆಯನ್ನು ಲಿಖಿತವಾಗಿ ಕೆಳಕಂಡ ನಮೂನೆಯಲ್ಲಿ **ದಿನಾಂಕ: 15.09.2023 ರ ಒಳಗೆ** ಸಂಬಂಧಪಟ್ಟ ದಾಖಲಾತಿಗಳೊಂದಿಗೆ ವಿವರಗಳನ್ನು ಕೆ.ಎಸ್.ಪಿ.ಡಿ.ಸಿ.ಎಲ್ ಕಛೇರಿ, ಬೆಂಗಳೂರಿಗೆ ನೀಡಬೇಕೆಂದು ಕೋರಲಾಗಿದೆ. ಒಪ್ಪಿಗೆ ಪತ್ರದ ನಮೂನೆಯು **www.kspdcl.karnataka.gov.in** ಜಾಲತಾಣದಲ್ಲಿ ಲಭ್ಯವಿರುತ್ತದೆ.

ತಾಲ್ಲೂಕು	ಗ್ರಾಮ	ಗ್ರಾಮ ಪಂಚಾಯತಿ	ಸರ್ವೇ ನಂ.	ಹಿಸ್ಸಾ ನಂ.	ಭೂಮಾಲೀಕರ ಹೆಸರು	ಜಮೀನಿನ ವಿಸ್ತೀರ್ಣ

ಯೋಜನೆಗೆ ಅವಶ್ಯಕವಿರುವ ಜಮೀನುಗಳನ್ನು ಗುತ್ತಿಗೆ ಪಡೆಯಲು ಕೆ.ಎಸ್.ಪಿ.ಡಿ.ಸಿ.ಎಲ್ ನ ನಿರ್ಧಾರವು ಅಂತಿಮವಾಗಿರುತ್ತದೆ. ಈ ಪ್ರಕಟಣೆ ಬಗ್ಗೆ ಹೆಚ್ಚಿನ ವಿವರಗಳನ್ನು ಬಯಸಿದಲ್ಲಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 7899915814, ಶ್ರೀ ಪ್ರಕಾಶ್ ಎಮ್, ಉಪ ಪ್ರಧಾನ ವ್ಯವಸ್ಥಾಪಕರು (ಕ್ಷೇತ್ರ), ಕೆ.ಎಸ್.ಪಿ.ಡಿ.ಸಿ.ಎಲ್.

ಸೂಚನೆ: ಕೆಎಸ್‌ಪಿಡಿಸಿಎಲ್ ಬಿಡ್ಡಿಂಗ್ ಪ್ರಕ್ರಿಯೆಯನ್ನು ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿದೆ ಹಾಗೂ ಯಾವುದೇ ಕಾರಣ ನೀಡದೇ ಅಂಥಹ ಆಹ್ವಾನಗಳಿಗೆ ಕಟ್ಟುಪಾಡುಗಳನ್ನು ವಿಧಿಸುವ ಅಥವಾ ಹೊಣೆಗಾರಿಕೆ ಇಲ್ಲದೆ ಹೊಸ ಬಿಡ್‌ಗಳನ್ನು ಆಹ್ವಾನಿಸುವ ಹಕ್ಕನ್ನು ಕಾಯ್ದಿರಿಸಿದೆ.

ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕಸೌಅನಿನಿ

ಸಾರ್ವಜನಿಕ ಪ್ರಕಟಣೆ

ಬ್ಯಾನಿಯನ್ ಟ್ರೀ ಅಡ್ವೈಸರ್ಸ್ ಪ್ರೈ ಲಿ ಇವರಿಂದ ಸಾರ್ವಜನಿಕರಿಗೆ ಸಲಹೆ ಸೂಚನೆ

ಮಾನ್ಯ ಹಿತೈಷಿಗಳೆ,

ಕೆಲವೊಂದು ಅಪರಿಚಿತರು ನಮ್ಮ ಹೆಸರನ್ನು ದುರುಪಯೋಗ ಮಾಡಿಕೊಂಡು, ವ್ಯವಹಾರ ನಡೆಸುತಿದ್ದು, ಮುಗ್ದ ಗ್ರಾಹಕರುಗಳಿಂದ ಮುಂಗಡ ಪಾವತಿಗಳನ್ನು ಪಡೆಯುತ್ತಿರುವುದು ಇತ್ತೀಚಿಗೆ ನಮ್ಮ ಗಮನಕ್ಕೆ ಬಂದಿದೆ. ಬ್ಯಾನಿಯನ್ ಟ್ರೀ ಅಡ್ವೈಸರ್ಸ್ ಪ್ರೈ ಲಿ., (ಬ್ಯಾನಿಯನ್ ಟ್ರೀ ಅಡ್ವೈಸರ್ಸ್), ಸೆಬಿ ರಿಜಿಸ್ಟರ್ಡ್ ಪೋರ್ಟ್‌ಫೋಲಿಯೊ ಮ್ಯಾನೇಜ್‌ಮೆಂಟ್ ಕಂಪನಿಯಾದ ನಾವು, 2004 ರಿಂದ ಕಾರ್ಯಾಚರಣೆ ಮಾಡುತ್ತಿದ್ದೇವೆ. ಗ್ರಾಹಕರಿಗೆ ನಾವು ಒದಗಿಸುವ ಸೇವೆಗಳಿಗೆ ನಾವು ಯಾವುದೇ ಮುಂಗಡ ಪಾವತಿ ಪಡೆಯದಿರುವುದು ನಮ್ಮ ಹೆಮ್ಮೆಯ ವಿಚಾರವಾಗಿದೆ. ಪೋರ್ಟ್‌ಫೋಲಿಯೊ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರಮುಖವಾಗಿ ಗ್ರಾಹಕರು ನಮ್ಮೊಡನೆ ಸಹಿ ಮಾಡಲಿರುವ ಎಲ್ಲಾ ಪ್ರಕ್ರಿಯೆಯನ್ನು ಅಮೂಲಾಗ್ರವಾಗಿ ಪರಿಶೀಲಿಸುವಂತೆ ಅವರಿಗೆ ಅವಕಾಶ ನೀಡುವೆವು ಮತ್ತು ಪರಿಶೀಲಿಸುವಂತೆ ಕೋರುವೆವು. ಒಪ್ಪಂದ ಪತ್ರ ಗ್ರಾಹಕರ ಹೆಸರಿನಲ್ಲೆ ಬ್ಯಾಂಕ್ ಖಾತೆ ಮತ್ತು ಡಿಮ್ಯಾಟ್ ಖಾತೆ ತೆರೆಯುವುದಕ್ಕೆ ಸಹಿಯನ್ನು ಗ್ರಾಹಕರಿಂದ ಪಡೆಯುವೆವು. ನಿಬಂಧನೆಗಳ ಅನ್ವಯ ಅಗತ್ಯವಾದಂತೆ ಯಾವುದೇ ಇತರೆ ದಾಖಲೆಗಳನ್ನು ಒದಗಿಸಲು ಸಹಿ ಪಡೆಯುತ್ತೇವೆ. ಈ ಎಲ್ಲಾ ಪ್ರಕ್ರಿಯೆಗಳು ಮುಗಿದ ಮೇಲೆ ಮಾತ್ರ ಗ್ರಾಹಕರು ಮ್ಯಾನೇಜ್‌ಮೆಂಟ್‌ಗೆ ಹಣಹೂಡಲು ಅವಕಾಶ ನೀಡಲಾಗುವುದು. ಗ್ರಾಹಕರು ಹೂಡಿದ ಹಣ/ ಸೆಕ್ಯೂರಿಟಿಗಳನ್ನು ಗ್ರಾಹಕರ ಸ್ವಂತ ಬ್ಯಾಂಕ್ ಖಾತೆ ಮತ್ತು ಡಿಮ್ಯಾಟ್ ಖಾತೆಯಲ್ಲಿ ಇಟ್ಟಿರಲಾಗುವುದು. ಹಣ ಹೂಡಿಕೆಗಾಗಿ ಗ್ರಾಹಕರು ನೀಡಿದ ಚೆಕ್‌ಗಳನ್ನು ಅವರ ಸ್ವಂತ ಹೆಸರಿನಲ್ಲಿಯೇ ಪಡೆಯಲಾಗುವುದು. ಚೆಕ್‌ಗಳು ಬೇರೆಯಾರ ಹೆಸರಿನಲ್ಲೂ ಇರುವುದಿಲ್ಲ. ಪೋರ್ಟ್‌ಫೋಲಿಯೊ ಮ್ಯಾನೇಜರ್ಸ್‌ನಲ್ಲಿ ಸೆಬಿ ನಿಬಂಧನೆಗಳ ಅನ್ವಯ ಹೂಡಿಕೆಯ ಕನಿಷ್ಠ ಟಿಕೆಟ್ ಗಾತ್ರವು ರೂ. 50 ಲಕ್ಷಗಳು. ನಮ್ಮ ಹೆಸರನ್ನು ಬಳಸಿಕೊಂಡು ಯಾವುದೇ ಅನಪೇಕ್ಷಿತ ಸಂದೇಶಗಳನ್ನು ಕಳಿಸಿದರೆ ಅಥವಾ ಕರೆಗಳನ್ನು ಯಾರಾದರೂ ಮಾಡಿದರೆ ನಮ್ಮ ವೆಬ್‌ಸೈಟ್ (www.banyantreeadvisors.com)ಗೆ ಭೇಟಿ ನೀಡಬೇಕಾಗಿ ಮತ್ತು/ಅಥವಾ complianceofficer@banyantreeadvisors.com ಸಂಪರ್ಕಿಸಬೇಕಾಗಿ ಗ್ರಾಹಕರಿಗೆ ಸಲಹೆ ನೀಡುತ್ತೇವೆ.

ನಮ್ಮದು ಪೋರ್ಟ್‌ಫೋಲಿಯೊ ಮ್ಯಾನೇಜ್‌ಮೆಂಟ್ ಕಂಪನಿ ಈ ನಮ್ಮ ಕಛೇರಿಗಳು ಬೆಂಗಳೂರು ಮತ್ತು ಮುಂಬೈಯಲ್ಲಿರುವುವು. ಮ್ಯೂಚಲ್ ಫಂಡ್‌ಗಳು, ಷೇರುಗಳು, ಅಥವಾ ಯಾವುದೇ ಇತರೆ ಸೆಕ್ಯೂರಿಟಿಗಳ ಖರೀದಿಗೆ ನಾವು ಯಾವುದೇ ವೇದಿಕೆಯನ್ನು ಹೊಂದಿರುವುದಿಲ್ಲ. ಕೆಲವು ಸಂಸ್ಥೆಗಳು ಇದೇ ರೀತಿಯ ಹೆಸರುಗಳಲ್ಲಿ ಹಣಕಾಸಿನ ಸೇವೆಗಳನ್ನು ಒದಗಿಸುತ್ತಿರುವುದು ಗೋಚರವಾಗಿದೆ. ನಾವು ಬ್ಯಾನಿಯನ್ ಟ್ರೀ ಅಡ್ವೈಸರ್ಸ್ ಪ್ರೈ ಲಿ., ಹೆಸರಿನ ಅಡಿಯಲ್ಲಿ ಮಾತ್ರ ಕಾರ್ಯಚಾರಣೆ ಮಾಡುತಿರುವೆವು ಮತ್ತು ಈ ನಮ್ಮ ಸಂಸ್ಥೆ ಯಾವುದೇ ಇತರೆ ಸಂಸ್ಥೆ ಜೊತೆ ಸಂಯೋಜನೆಯಾಗಿರುವುದಿಲ್ಲ ಅಥವಾ ಸಂಬಂಧ ಹೊಂದಿರುವುದಿಲ್ಲ ಎಂಬುದನ್ನು ಮಾನ್ಯ ಗ್ರಾಹಕರು ಗಮನಿಸಬೇಕಾಗಿ ಸಲಹೆ ನೀಡುವೆವು.

ನಮ್ಮ ಮೌಲ್ಯಧಾರಿತ ಗ್ರಾಹಕರು ಇನ್ನು ಮುಂದೆಯು ತಮ್ಮ ಬೆಂಬಲವನ್ನು ಹೀಗೆಯೇ ಮುಂದುವರಿಸಬೇಕಾಗಿ ಕೋರುತ್ತೇವೆ

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್

ನೋಂದಾಯಿತ ಕಚೇರಿ: ನಂ. 24, 2ನೇ ಮುಖ್ಯರಸ್ತೆ, ದೊಡ್ಡನೆಕ್ಕುಂಡಿ ಕೈಗಾರಿಕಾ ಪ್ರದೇಶ, 1ನೇ ಹಂತ, ಮಹದೇವಪುರ ಅಂಚೆ, ಬೆಂಗಳೂರು-560048. ದೂರವಾಣಿ: 080-2852 4133 E-mail: info@gpl.in, Web: www.gpl.in **CIN : L23209KA1977PLC043357**

ವಿಡಿಯೋ ಕಾನ್ಫರೆನ್ಸಿಂಗ್ (ವಿಸಿ)/ಇನ್ನಿತರ ಆಡಿಯೋ ವಿಷ್ಯುಯಲ್ ಮಾಧ್ಯಮಗಳ (ಒಎವಿಎಂ) ಮುಖಾಂತರ ಏರ್ಪಡಿಸಲಾಗುವ 46ನೇ ವಾರ್ಷಿಕ ಮಹಾಸಭೆ (ಎಜಿಎಂ) ಕುರಿತ ಮಾಹಿತಿ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕಂಪನಿಯ 46ನೇ ವಾರ್ಷಿಕ ಮಹಾಸಭೆಯನ್ನು (**"ಎಜಿಎಂ"**) ಶುಕ್ರವಾರ, 15ನೇ ಸೆಪ್ಟೆಂಬರ್, 2023 ರಂದು ಬೆಳಗ್ಗೆ 11.00 ಗಂಟೆಗೆ (ಐಎಸ್‌ಟಿ) ವಿಡಿಯೋ ಕಾನ್ಫರೆನ್ಸ್ (ವಿಸಿ)/ಇತರ ಆಡಿಯೋ ವಿಷುಯಲ್ ಮಾಧ್ಯಮಗಳ (ಒಎವಿಎಂ) ಮುಖಾಂತರ ಕೈಗೊಳ್ಳಲಾಗುತ್ತದೆ ಮತ್ತು ಸಭೆಯ ಸೂಚನೆಯಲ್ಲಿ ಉಲ್ಲೇಖಿಸಲಾಗಿರುವ ವಹಿವಾಟುಗಳನ್ನು ಚರ್ಚಿಸಲಾಗುತ್ತದೆ. ಕಂಪನಿಯ ನೊಂದಾಯಿತ ಕಚೇರಿಯ ವಿಳಾಸದಲ್ಲಿ ಎಂದರೆ ನಂ.24, 2ನೇ ಮುಖ್ಯರಸ್ತೆ, ದೊಡ್ಡನೆಕುಂದಿ ಕೈಗಾರಿಕಾ ಪ್ರದೇಶ, ಹಂತ 1, ಮಹದೇವಪುರ ಅಂಚೆ, ಬೆಂಗಳೂರು-560048 ವಿಳಾಸವನ್ನು ಸಭೆ ಜರುಗುವ ಸ್ಥಳ ಎಂದು ಪರಿಗಣಿಸಲಾಗುತ್ತದೆ.

ಕಂಪನಿಗಳ ಕಾಯಿದೆ, 2013 ರ ಎಲ್ಲಾ ಅನ್ವಯವಾಗುವ ನಿಬಂಧನೆಗಳು ಮತ್ತು ಅದರ ಅಡಿಯಲ್ಲಿ ಮಾಡಲಾದ ನಿಯಮಗಳಿಗೆ ಅನುಸಾರವಾಗಿ, ಏಪ್ರಿಲ್ 8, 2020 ರ ಸುತ್ತೋಲೆ ಸಂಖ್ಯೆ. 14/2020, ಏಪ್ರಿಲ್ 13, 2020 ರ ಸುತ್ತೋಲೆ ನಂ.17/2020, ಸುತ್ತೋಲೆ ಸಂಖ್ಯೆ. 20/2020 ದಿನಾಂಕ ಮೇ 5, 2020, ಜನವರಿ 13, 2021 ರ ಸುತ್ತೋಲೆ ಸಂಖ್ಯೆ. 02/2021 ಮತ್ತು ಮೇ 5, 2022 ರ ಸಾಮಾನ್ಯ ಸುತ್ತೋಲೆ 2/2022 ನಂತರ ಸುತ್ತೋಲೆ ಸಂಖ್ಯೆ. 10/2022 ಮತ್ತು ದಿನಾಂಕದ ಡಿಸೆಂಬರ್ 28, 2022 ರ ಸುತ್ತೋಲೆ ಸಂಖ್ಯೆ. 11/2022 ಮತ್ತು ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (**"SEBI"**) ಅದರ ದಿನಾಂಕ ಮೇ 13, 2022 ರ ಸುತ್ತೋಲೆ SEBI/HO/CFD/CMD2/ CIR/P/2022/62 ಮತ್ತು ದಿನಾಂಕ ಜನವರಿ 5, 2023 ರ ಸುತ್ತೋಲೆ ಸಂಖ್ಯೆ SEBI/HO/CFD/ PoD-2/P/CIR/2023/4 (ಒಟ್ಟಾರೆಯಾಗಿ "**MCA Circulars**" ಎಂದು ಉಲ್ಲೇಖಿಸಲಾಗಿದೆ), ಇವುಗಳ ಅನುಸರಣೆಯ ಮೇರೆಗೆ, ಕಂಪನಿ ಅಥವಾ ದಿ ಡೆಪಾಸಿಟರಿ ಪಾರ್ಟಿಸಿಪಂಟ್‌ರೊಂದಿಗೆ ತಮ್ಮ ಇಮೇಲ್ ವಿಳಾಸಗಳನ್ನು ನೊಂದಾಯಿಸಿಕೊಂಡಿರುವ ಸದಸ್ಯರಿಗೆ ವಿದ್ಯುನ್ಮಾನ ವಿಧಾನದಲ್ಲಿ ಎಜಿಎಂ ಸೂಚನೆಯ ಜೊತೆಗೆ ವಾರ್ಷಿಕ ವರದಿ 2022-23 ಅನ್ನು ಕಳುಹಿಸಲಾಗಿದೆ.

46ನೇ ವಾರ್ಷಿಕ ಎಜಿಎಂ ಪ್ರಕಟಣೆ ಮತ್ತು ವಾರ್ಷಿಕ ವರದಿ ಪ್ರತಿಗಳು ಕಂಪನಿಯ www.gpl.in ವೆಬ್‌ಸೈಟ್‌ನಲ್ಲಿ ಮತ್ತು ಎನ್‌ಎಸ್‌ಡಿಎಲ್ ರವರ www.evotingindia.com ವೆಬ್‌ಸೈಟ್‌ನಲ್ಲಿ ಹಾಗೂ ಕಂಪನಿಯ ಷೇರುಗಳು ಲಿಸ್ಟ್ ಆಗಿರುವ ಸ್ಟಾಕ್ ಎಕ್ಸ್‌ಚೇಂಜ್ www.bseindia.com ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 108 ಅನ್ನು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ರೊಂದಿಗೆ ಓದಿಕೊಂಡಂತೆ ಪ್ರದತ್ತವಾದ, ಕಾಲ ಕಾಲಕ್ಕೆ ತಿದ್ದುಪಡಿಗೆ ಒಳಗಾಗಿರುವ, ಸೆಬಿ (ಲಿಸ್ಟಿಂಗ್ ಆಬ್ಲಿಗೇಷನ್ಸ್ ಅಂಡ್ ಡಿಸ್‌ಕ್ಲೋಸರ್ ರಿಕ್ವೈರ್‌ಮೆಂಟ್ಸ್) ನಿಯಮಾವಳಿಗಳು, 2015 (ಲಿಸ್ಟಿಂಗ್ ರೆಗ್ಯುಲೇಶನ್) ಪ್ರಕಾರ, ಕಂಪನಿಯು ತನ್ನ ಸದಸ್ಯರಿಗೆ ಎಜಿಎಂ ಸಭೆಯಲ್ಲಿ ಹೊರಡಿಸಲು ಪ್ರಸ್ತಾವಿಸಲಾಗಿರುವ ಠರಾವುಗಳಿಗೆ ತಮ್ಮ ಮತಗಳನ್ನು ಚಲಾಯಿಸುವ ಹಕ್ಕನ್ನು ವಿದ್ಯುನ್ಮಾನ ವಿಧಾನದಲ್ಲಿ ಚಲಾಯಿಸುವ ಸೌಲಭ್ಯವನ್ನು ಕಲ್ಪಿಸುತ್ತಿದೆ. ರಿಮೋಟ್ ಇ-ವೋಟಿಂಗ್ ಮುಖಾಂತರ ಮತ ಚಲಾಯಿಸುವ, ಎಜಿಎಂ ಸಭೆಯಲ್ಲಿ ವಿಸಿ/ಒಎವಿಎಂ ಮುಖಾಂತರ ಪಾಲ್ಗೊಳ್ಳುವ, ಮತ್ತು ಎಜಿಎಂ ಸಭೆಯಲ್ಲಿ ಇ-ವೋಟಿಂಗ್ ಮಾಡುವ ಸೌಲಭ್ಯವನ್ನು ಒದಗಿಸಲು ಕಂಪನಿಯು ಸಿಡಿಎಸ್‌ಎಲ್ ಇವರನ್ನು ನಿಯೋಜಿಸಿಕೊಂಡಿರುತ್ತದೆ. ಇದಕ್ಕೆ ಸಂಬಂಧಿತ ವಿವರಗಳು ಕೆಳಗನಂತಿರುತ್ತವೆ:

ಎ)	ರಿಮೋಟ್ ಇ-ವೋಟಿಂಗ್ ಆರಂಭವಾಗುವ ದಿನ, ದಿನಾಂಕ ಮತ್ತು ಸಮಯ	: ಮಂಗಳವಾರ, ಸೆಪ್ಟೆಂಬರ್ 12, 2023 ರಂದು ಬೆಳಗ್ಗೆ 09:00 ಗಂಟೆ (ಐಎಸ್‌ಟಿ)
ಬಿ)	ರಿಮೋಟ್ ಇ-ವೋಟಿಂಗ್ ಮುಕ್ತಾಯವಾಗುವ ದಿನ, ದಿನಾಂಕ ಮತ್ತು ಸಮಯ	: ಗುರುವಾರ, ಸೆಪ್ಟೆಂಬರ್ 14, 2023 ರಂದು ಸಂಜೆ 05:00 ಗಂಟೆ (ಐಎಸ್‌ಟಿ)
ಸಿ)	ಕಟ್-ಆಫ್ ದಿನಾಂಕ	: ಶುಕ್ರವಾರ, ಸೆಪ್ಟೆಂಬರ್ 08, 2023
ಡಿ)	ಯಾವುದೇ ವ್ಯಕ್ತಿಯು, ಎಜಿಎಂ ಸೂಚನೆಯು ರವಾನೆಗೊಂಡ ಬಳಿಕ ಕಂಪನಿಯ ಷೇರುಗಳನ್ನು ಪಡೆದು ಕಂಪನಿಯ ಸದಸ್ಯನಾಗಿದ್ದಲ್ಲಿ, ಕಟ್-ಆಫ್ ದಿನಾಂಕದಂದು ಎಂದರೆ, ಶುಕ್ರವಾರ ಸೆಪ್ಟೆಂಬರ್ 8, 2023 ರಂದು ಷೇರುಗಳನ್ನು ಪಡೆದುಕೊಂಡಿದ್ದಲ್ಲಿ, ಅಂಥವರು ಕಡ್ಡಾಯವಾಗಿ ಎಜಿಎಂ ಸೂಚನೆಯಲ್ಲಿ ಉಲ್ಲೇಖಿಸಲಾಗಿರುವ ಇ-ವೋಟಿಂಗ್ ಸೂಚನೆಗಳನ್ನು ಅನುಸರಿಸುವುದು.	
ಇ)	ವಿಸಿ/ಒಎವಿಎಂ ಮುಖಾಂತರ ಎಜಿಎಂ ಸಭೆಯಲ್ಲಿ ಪಾಲ್ಗೊಳ್ಳುವ ಸದಸ್ಯರು ಮತ್ತು ರಿಮೋಟ್ ಇ-ವೋಟಿಂಗ್ ಮುಖಾಂತರ ಮತ ಚಲಾಯಿಸದಿರುವ ಸದಸ್ಯರು, ಎಜಿಎಂ ಸಭೆಯ ಅವಧಿಯಲ್ಲಿ ಒದಗಿಸಲಾಗುವ ಇ-ವೋಟಿಂಗ್ ವ್ಯವಸ್ಥೆಯ ಮುಖಾಂತರ ತಮ್ಮ ಮತದಾನ ಹಕ್ಕನ್ನು ಚಲಾಯಿಸಬಹುದಾಗಿರುತ್ತದೆ.	
ಎಫ್)	ವಾರ್ಷಿಕ ವರದಿಯನ್ನು ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಕಳುಹಿಸಿದ ನಂತರ ಮತ್ತು ಕಟ್-ಆಫ್ ದಿನಾಂಕದ ಮೊದಲು ಷೇರುಗಳನ್ನು ಪಡೆದುಕೊಂಡಿರುವ ಸದಸ್ಯರು, helpdesk.evoting@cdslindia.com ಅಥವಾ secretarial@gujaratpetrosynthese.com ನಲ್ಲಿ ವಿನಂತಿಯನ್ನು ಕಳುಹಿಸುವ ಮೂಲಕ USER ID ಮತ್ತು ಪಾಸ್‌ವರ್ಡ್ ಅನ್ನು ಪಡೆಯಬಹುದು. ಆದಾಗ್ಯೂ, ರಿಮೋಟ್ ಇ-ವೋಟಿಂಗ್‌ಗಾಗಿ ಸದಸ್ಯರು ಈಗಾಗಲೇ CDSL ನಲ್ಲಿ ನೋಂದಾಯಿಸಿದ್ದರೆ, ನಂತರ ಸದಸ್ಯರು ತಮ್ಮ ಅಸ್ತಿತ್ವದಲ್ಲಿರುವ USER ID ಮತ್ತು ಪಾಸ್‌ವರ್ಡ್ ಅನ್ನು ಬಳಸಬಹುದು ಮತ್ತು ಅವರ ಮತವನ್ನು ಚಲಾಯಿಸಬಹುದು.	
	ಸದಸ್ಯರು ಗಮನಿಸಬೇಕಾದುದು ಏನೆಂದರೆ: 1) ಗುರುವಾರ, ಸೆಪ್ಟೆಂಬರ್ 14, 2023 ರಂದು ಸಂಜೆ 5.00 ಗಂಟೆ ವೋಟಿಂಗ್ ಮಾಡ್ಯೂಲ್‌ನ್ನು ಸಿಡಿಎಸ್‌ಎಲ್ ರವರಿಂದ ಸ್ಥಗಿತಗೊಳಿಸಲಾಗುತ್ತದೆ; ಮತ್ತು 2) ಈಗಾಗಲೇ ರಿಮೋಟ್ ಇ-ವೋಟಿಂಗ್ ಮುಖಾಂತರ ತಮ್ಮ ಮತ ಚಲಾಯಿಸಿರುವ ಸದಸ್ಯರು ಎಜಿಎಂ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿರುತ್ತದೆ, ಆದರೆ ಪುನ: ತಮ್ಮ ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ.	

ಸದಸ್ಯರು ತಮ್ಮ ಮತವನ್ನು ದೂರದಿಂದಲೇ ಚಲಾಯಿಸುವ ಅಥವಾ ಎಜಿಎಂ ಸಭೆಯ ಅವಧಿಯಲ್ಲಿ ಕೂಡ ಎಜಿಎಂ ಸೂಚನೆಯಲ್ಲಿ ಉಲ್ಲೇಖಿಸಲಾಗಿರುವ ವ್ಯವಹಾರ ವಹಿವಾಟುಗಳಿಗೆ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮುಖಾಂತರ ತಮ್ಮ ಮತ ಚಲಾಯಿಸುವ ಅವಕಾಶ ಹೊಂದಿರುತಾರೆ. ಡಿಮೆಟೀರಿಯಲೈಸ್ಟ್ ರೂಪದ ಷೇರುಗಳನ್ನು ಹೊಂದಿರುವ, ಭೌತಿಕ ರೂಪದ ಷೇರುಗಳನ್ನು ಹೊಂದಿರುವ ಮತ್ತು ತಮ್ಮ ಇಮೇಲ್ ವಿಳಾಸಗಳನ್ನು ನೊಂದಾಯಿಸಿಕೊಳ್ಳದಿರುವ ಸದಸ್ಯರು, ದೂರದಿಂದಲೇ ಮತ ಚಲಾಯಿಸುವ ಅಥವಾ ಎಜಿಎಂ ಸಭೆಯ ಅವಧಿಯಲ್ಲಿ ಮತ ಚಲಾಯಿಸುವ ವಿಧಾನವನ್ನು ಎಜಿಎಂ ಸೂಚನಾ ಪತ್ರದಲ್ಲಿ ನೀಡಲಾಗಿದೆ.

ಕಂಪನಿಯು ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆಯನ್ನು ನ್ಯಾಯೋಜಿತ ಮತ್ತು ಪಾರದರ್ಶಕವಾಗಿ ಪರಿಶೀಲಿಸಲು ಪರಿವೀಕ್ಷಕರಾಗಿ ಕಾರ್ಯನಿರ್ವಹಿಸಲು ಕಂಪನಿ ಕಾರ್ಯದರ್ಶಿಗಳಾದ ಶ್ರೀ ಜೆ. ಜೆ. ಗಾಂಧಿ & ಕಂ. (ಜೆ. ಜೆ. ಗಾಂಧಿ & ಕಂ. ಮತ್ತು ಕಂಪನಿಯಲ್ಲಿ ಪಾಲುದಾರ) ಇವರನ್ನು ನೇಮಿಸಿದೆ.

ಪರಿವೀಕ್ಷಕರ ವರದಿಯೊಂದಿಗೆ ಘೋಷಿಸಲಾದ ಫಲಿತಾಂಶಗಳನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ (www.gpl.in) ಮತ್ತು ಸೇವಾ ಪೂರೈಕೆದಾರರ ವೆಬ್‌ಸೈಟ್‌ನಲ್ಲಿ (www.evotingindia.com) ಲಭ್ಯವಾಗುವಂತೆ ಮಾಡಲಾಗುತ್ತದೆ ಮತ್ತು ಅದನ್ನು ಸಭೆಯು ಮುಕ್ತಾಯವಾದ ಎರಡು ಕೆಲಸದ ದಿನಗಳಲ್ಲಿ BSE ಲಿಮಿಟೆಡ್‌ಗೆ ತಿಳಿಸಲಾಗುತ್ತದೆ.

ಇಮೇಲ್ ವಿಳಾಸಗಳನ್ನು ರಜಿಸ್ಟರ್ / ಅಪ್ಡೇಟ್ ಮಾಡಿಕೊಳ್ಳುವ ವಿಧಾನ:

ಭೌತಿಕ ರೂಪದ ಷೇರುಗಳನ್ನು ಹೊಂದಿರುವ ಮತ್ತು ಇನ್ನೂವರೆಗೆ ತಮ್ಮ ಇಮೇಲ್ ವಿಳಾಸಗಳನ್ನು ನೊಂದಣಿ / ಅಪ್ಡೇಟ್ ಮಾಡಿಕೊಳ್ಳದಿರುವ ಸದಸ್ಯರು, investor@bigshareonline.com ವಿಳಾಸಕ್ಕೆ ಇಮೇಲ್ ಮನವಿ ಬರೆದು, ಸದಸ್ಯರು ಹೆಸರು, ವಿಳಾಸ ನಮೂದಿಸಿ ಸಹಿ ಹಾಕಿದ ಪತ್ರ ಲಗತ್ತಿಸಿ, ಸ್ವಯಂ ದೃಢೀಕೃತ ತಮ್ಮ ಪ್ಯಾನ್ ಕಾರ್ಡ್ ಪ್ರತಿ ಹಾಗೂ ಸದಸ್ಯರ ವಿಳಾಸ ಪುರಾವೆಗಾಗಿ ಇನ್ನಿತರ ಸ್ವಯಂ ದೃಢೀಕೃತ ದಾಖಲಾತಿಗಳ (ಉದಾ: ಡ್ರೈವಿಂಗ್ ಲೈಸನ್ಸ್, ಇಲೆಕ್ಷನ್ ಐಡೆಂಟಿಟಿ ಕಾರ್ಡ್, ಪಾಸ್‌ಪೋರ್ಟ್) ಸಮೇತ ಮನವಿ ಸಲ್ಲಿಸುವ ಮೂಲಕ, ತಮ್ಮ ಇಮೇಲ್ ವಿಳಾಸಗಳು ಮತ್ತು ಮೊಬೈಲ್ ಸಂಖ್ಯೆಗಳನ್ನು ಕಂಪನಿಯ ರಜಿಸ್ಟ್ರಾರ್ ಅಂಡ್ ಷೇರ್ ಟ್ರಾನ್ಸ್‌ಫರ್ ಏಜೆಂಟ್ ("ಆರ್‌ಟಿಎ"), ಬಿಗ್‌ಶೇರ್ ಸರ್ವಿಸಸ್ ಪ್ರೈ. ಲಿ. ಎಸ್ 6-2, 6ನೇ ಮಹಡಿ ಪಿನಾಕಲ್ ಬ್ಯುಸಿನೆಸ್ ಪಾರ್ಕ್, ಅಹುರಾ ಸೆಂಟರ್ ಪಕ್ಕದಲ್ಲಿ, ಮಹಾಕಾಳಿ ಕೇವ್ ರಸ್ತೆ, ಅಂಧೇರಿ (ಪೂರ್ವ), ಮುಂಬೈ - 400093, ದೂರವಾಣಿ ಸಂಖ್ಯೆ : 022 6263 8236, ಇವರೊಂದಿಗೆ ನೊಂದಾಯಿಸಿಕೊಳ್ಳಬೇಕು.

ಸಿಡಿಎಸ್‌ಎಲ್ ಇ-ವೋಟಿಂಗ್ ಸಿಸ್ಟಮ್ ಮುಖಾಂತರ www.evotingindia.com ವೆಬ್‌ಸೈಟ್‌ನಲ್ಲಿ ವಿಸಿ/ಒಎವಿಎಂ ಮೂಲಕ ಎಜಿಎಂನಲ್ಲಿ ಪಾಲ್ಗೊಳ್ಳುವ ಸೌಲಭ್ಯವಿರುತ್ತದೆ.

ಎಜಿಎಂ ನಲ್ಲಿ ಪಾಲ್ಗೊಳ್ಳುವ ವಿಧಾನ

ಕಂಪನಿಯು ಭೌತಿಕ ಷೇರುದಾರರಿಗೆ ತಿಳಿಸಿತು ಮತ್ತು ಕಂಪನಿಯೊಂದಿಗೆ ತಮ್ಮ ಇ-ಮೇಲ್ ವಿಳಾಸಗಳನ್ನು ನವೀಕರಿಸದ ಸದಸ್ಯರು ಸರಿಯಾಗಿ ಭರ್ತಿ ಮಾಡಿದ ಮತ್ತು ಸಹಿ ಮಾಡಿದ ಫಾರ್ಮ್ ISR-1 (PAN, KYC ವಿವರಗಳನ್ನು ನೋಂದಾಯಿಸಲು ಫಾರ್ಮ್ ಅನ್ನು ಕಳುಹಿಸುವ ಮೂಲಕ ತಮ್ಮ ಇಮೇಲ್ ವಿಳಾಸಗಳನ್ನು ನವೀಕರಿಸಲು ವಿನಂತಿಸಲಾಗಿದೆ ಅಥವಾ ಅದರ ಬದಲಾವಣೆಗಳು / ನವೀಕರಣಗಳು), ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್‌ಗೆ - ಬಿಗ್‌ಶೇರ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಎಸ್ 6-2, 6ನೇ ಮಹಡಿ ಪಿನಾಕಲ್ ಬ್ಯುಸಿನೆಸ್ ಪಾರ್ಕ್, ಅಹುರಾ ಸೆಂಟರ್ ಪಕ್ಕದಲ್ಲಿ, ಮಹಾಕಾಳಿ ಕೇವ್ ರಸ್ತೆ, ಅಂಧೇರಿ (ಪೂರ್ವ), ಮುಂಬೈ - 400093 ಅಥವಾ ತಮ್ಮ ನೋಂದಾಯಿತ ಇಮೇಲ್ ಐಡಿಯಿಂದ investor@bigshareonline.com ಗೆ ಇಮೇಲ್ ಮೂಲಕ, ನವೆಂಬರ್ 3, 2021 ರ SEBI ಸುತ್ತೋಲೆ ಸಂಖ್ಯೆ SEBI/MIRSD/MIRSD_RTAMB/P/CIR/2021/655 ಮತ್ತು ಸುತ್ತೋಲೆ ಸಂಖ್ಯೆ SEBI/HO/MIRSD/MIRSD_RTAMB/P/CIR/2021/687 ದಿನಾಂಕ ಡಿಸೆಂಬರ್ 14, 2021 ರ ಅನುಸಾರವಾಗಿ ಕಳುಹಿಸತಕ್ಕದ್ದು.

ಡಿಮ್ಯಾಟ್‌ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರುಗಳು ತಮ್ಮ ಇ-ಮೇಲ್ ಐ.ಡಿ ಮತ್ತು ಮೊಬೈಲ್ ನಂಬರ್‌ಅನ್ನು ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ ಮೂಲಕ ಡಿಪಾಸಿಟರಿಸ್‌ನೊಂದಿಗೆ ನೊಂದಾಯಿಸಿಕೊಳ್ಳಬೇಕು.

ಸದಸ್ಯರು ತಮ್ಮ ಯಾವುದೇ ಸ್ಪಷ್ಟೀಕರಣ ಅಥವಾ ನೆರವಿಗಾಗಿ, ಆರ್‌ಟಿಎ ಬಿಗ್‌ಶೇರ್ ಸರ್ವಿಸಸ್ ಪ್ರೈ. ಲಿ.. ಇವರನ್ನು ಇಮೇಲ್ ಐಡಿ: investor@bigshareonline.comನಲ್ಲಿ ಅಥವಾ secretarial@gujaratpetrosynthese.com ವಿಳಾಸದಲ್ಲಿ ಸಂಪರ್ಕಿಸಬಹುದು ಮತ್ತು helpdesk.evoting@cdslindia.com ನಲ್ಲಿ CDSL ಗೆ ಬರೆಯಿರಿ.

ಗುಜರಾತ್ ಪೆಟ್ರೋಸಿಂಥಿಸ್ ಲಿಮಿಟೆಡ್‌ನ ಪರವಾಗಿ
ಸಹಿ/- ಊರ್ಮಿ. ಎನ್. ಪ್ರಸಾದ್
ಜಂಟಿ ವ್ಯವಸ್ಥಾಪಕ ನಿರ್ದೇಶಕಿ ಡಿ.ಐ.ಎನ್ : 00319482

ದಿನಾಂಕ : 24ನೇ ಆಗಸ್ಟ್, 2023
ಸ್ಥಳ : ಮುಂಬೈ

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

Our client intends to purchase Property Bearing BDA Site No.1BC-315,BBMP Katha No.1BC-315,measuring E to W 9.15 Mtrs and N to S 12.20 Mtrs, in all measuring 111.63 sq.Mtrs situated at East of NGEF Extension, Bangalore and bounded on the **East by**:Site No.1BC-317 **West by** :Site No. 1BC-313, **North by**:Site No.2C-316 **South By** :Site No.1BC Road from its Owner **Mr.K.G.Ravi Shankar Son of Late K Gunduramaia** **Any** Person having any right over the said property may lodge their objections/claim with documentary evidence within 7 days from the date of this publication to the undersigned

Prasanth Vijayalakshmi & Associates, Advocates
No.162,1st floor ,2nd Main
Next to Kanthi Sweets ,
Kasturinagar
Bangalore-560043
Ph-9819605440 / 981924440

BUSINESS

Business Offers

Finance

NRI'S INVESTMENT
And Finance Available On Low Interest Against Properties,Land& Building,Sites,Flats,Converted&,Agriculture Lands
Call:7204995189

ಕ್ಲಾಸಿಫೈಡ್ಸ್

CONNECT

Grand Flea Market Presents

ಇಂಡಿಯನ್ ಹಾಟ್ ಫೆಸ್ಟಿವಲ್

Indian Haat Festival ™

A Shopping Fest

Arts, Crafts, Handlooms and Lifestyle Exhibition

Varamahalakshmi Shopping Carnival

18th to 27th August 2023

Timings: 11.00 AM - 7.00 PM

10 Days Exhibition | Live Performance | Entry Free

100+ Shopping Stalls | 75 Craftsman & More

HANDLOOMS | HOME DECOR | HANDICRAFTS | CLOTHING | JEWELLERY

Free Entry!

The Shadow Show
Live Performance
27th August 2023
5.30 PM to 6.30 PM

Venue: Karnataka Chitrakala Parishath Kumara Krupa Road, Near Shivananda Circle Bengaluru - 560001.

Organized By
Grand Flea Market

For Details Contact
9036658774 / 6364685716

Karnataka Chitrakala Parishath
Kumara Krupa Road, Near Shivananda Circle,
Bengaluru - 560 001.

/GrandFleaMarket /GrandFleaMarket.events

JOB OPPORTUNITIES

Situation Required

A Bangalore Based Pvt Ltd. Company — **WE ARE HIRING**

Engaged in Manufacturing of Seating Solutions for Two-Wheelers, Tractors, Buses, Railways & Sheet Metal Fabrication

REQUIRES CANDIDATES FOR THE BELOW MENTIONED POSITIONS:

DESIGN & DEVELOPMENT
Engineers in the Field for D & D Having Knowledge in Seating Field with 8-10 Years of Experience.

PRODUCTION MANAGER
DME With 7-8 Years of Experience in Automobile Seats

SHOP FLOOR MANAGER
ME 5-7 Years Experience in Sheet Metal Fabrication with Design Experience (Engineering Fabrication)

G.M | A.M ACCOUNTS
Candidates with 15-20 Years Experience Capable of Handling Accounts Individually For 3-4 Companies Upto Finalization.

G.M MARKETING
Eligible Candidate Having Knowledge in the Field of Seating Systems, Capable of Getting Orders from OE'S with 10 Years of Experience.

Interested Candidates Can Mail Their Resumes/CV to Below Ids: Pavan.gaur076@gmail.com | MD@fpseatingsystems.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

PERSONAL

Change of Name

CHANGE OF NAME
I, **PADMALATHA KARUNAKARAN,** W/o late **C K KARUNAKARAN,** R/at 3303, Oakwood Apartments, Jakkasandra, Koramangala, Bangalore-560034, had changed my name to **PADMA KARUNAKARAN** as per affidavit dated: 22.8.2023 before Notary B.M. Chandrashekar, Bangalore.

I, GIREESH Gopal Residing at No.1511/2,5th Cross, Judicial Layout, Bengaluru-560065 have changed my name to GIRISH GOHPAL S/o.P.N.Gopalan vide affidavit dated 22.08.2023 Sworn before notary: Aruna.V, Bangalore

CHANGE OF NAME
I, **MAHABOOB BASHA ANWAR** Residing at No. 440, 6th Cross, 2nd Main, Vinobhanagar, K.G. Halli have changed my name to **MAHBOOB PASHA** vide affidavit dated 23.8.2023 before Notary L. Gopalakrishna, Bengaluru. Henceforth I shall be known as **MAHBOOB PASHA** only.

BIRJU PRASAD, JC682131M, NB RIS/ASH, Vill - Lodipur Lanjo, Saidabad, Kako (Pali) , Jehanabad, Bihar changed Son's name ANAND RAJ to SUNNY KUMAR, 23/08/2023, Notary K.V. Mani, Bangalore

CHANGE OF NAME
I, **KANCHAN CHHABRIA** D/o **ARJAN CHHABRIA** W/o **NARAIN TALREJA** at 40/1G, St. Michaels School Road, Shantinagar, Bengaluru-27 have changed my name to **SUMAN NARAIN TALREJA** vide affidavit dated 16.8.2023 before Notary S.I. Balaguru, Bengaluru. Henceforth I shall be known as **SUMAN NARAIN TALREJA** only.

CHANGE OF NAME
I, ROMOLA NEITA REBECCA JOSEPH alias ROMOLA JOSEPH W/o ITTOOP CHUNGATH JOSEPH (Aadhaar No.928835686876) Residing at #14, Eagles Street, Langford Town Bangalore North, Museum Road, Bangalore 560025 above names pertaining to one & same person only vide Affidavit dated 22.07.2023, sworn before Notary A.R. MUNEER AHMED, Bangalore. and hereafter, I shall be called and known as **ROMOLA NEITA REBECCA JOSEPH**

EDUCATIONAL

Correspondence Courses

STUDY AT Home SSLC DIRECT 2nd PUC Regular Class Science Commerce Arts. BA,B.Com,BBA, B.Sc,BCA,BSW, B.LISc,B.Ed, M.Ed, M.LISc,MA M.Com,M.Sc, MBA, MSW, MCA,PG-Diploma Courses, Contact: Manasa Correspondence College. Malleshwaram Circle Bangalore. 9663555154/ 9880498484.

ನ್ಯಾಯಮೂರ್ತಿ ಬಿ.ಎ. ಪಾಟೀಲ ಸಲಹೆ

‘ಭೂಮಿ ಉಳಿಸಲು ಕಾಯ್ದೆ ಬಳಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಭೂಮಿ ಉಳಿಸಲು ವಿಶೇಷ ಕಾಯ್ದೆ ಇದ್ದು ಇದನ್ನು ಎಲ್ಲ ಇಲಾಖೆ ಅಧಿಕಾರಿಗಳು ಬಳಸಿಕೊಳ್ಳಬೇಕು ಎಂದು ಕರ್ನಾಟಕ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ಬಿ.ಎ. ಪಾಟೀಲ ಹೇಳಿದರು.

‘ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ ಮತ್ತು ಸಂಬಂಧಿಸಿದ ಕಾನೂನು’ ಬಗ್ಗೆ ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯ ಮತ್ತು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಅಧಿಕಾರಿಗಳಿಗೆ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಭೂ ಕಬಳಿಕೆ ನಿಷೇಧ ಅಧಿನಿಯಮ ಮತ್ತು ತಿದ್ದುಪಡಿ ಕಾಯ್ದೆ ಬಗ್ಗೆ ಉಪನ್ಯಾಸ ನೀಡಿದ ಅವರು, ಭೂ ಕಬಳಿಕೆ ನಿಷೇಧ ಅಧಿನಿಯಮದಲ್ಲಿ ಸರ್ಕಾರಿ ಭೂಮಿ ಉಳಿಸಲು ವಿಶೇಷ ಕಾಯ್ದೆ ರಚಿಸಲಾಗಿದ್ದು, ಅದನ್ನು ಬಿಡಿಎ ಅಧಿಕಾರಿಗಳು ಉಪಯೋಗಿಸಬೇಕು. ವ್ಯಾಜ್ಯಗಳನ್ನು ಈ ಕಾಯ್ದೆಯಡಿ ನ್ಯಾಯಾಲಯಕ್ಕೆ ತರಬೇಕು ಎಂದು ಸಲಹೆ ನೀಡಿದರು.

ಸರ್ಕಾರಿ ಜಮೀನಿಗೆ ಸಂಬಂಧಿಸಿದ ಒತ್ತುವರಿ ಬಗ್ಗೆ ಈ ಕಾನೂನನ್ನು ಬಳಸಿಕೊಳ್ಳಬೇಕು ಎಂದು ಬಿಡಿಎ ಅಧಿಕಾರಿಗಳಿಗೆ ಆಯುಕ್ತ ಕುಮಾರ್‌ನಾಯಕ್ ಸೂಚಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಸ್ತಿಗಳ ಒತ್ತುವರಿ ಮತ್ತು ಒತ್ತುವರಿ ತೆರವುಗೊಳಿಸಲು ಇರುವ ಕಾನೂನು ಪ್ರಕ್ರಿಯೆಗಳ ಬಗ್ಗೆ ಬಿಡಿಎ ಕಾನೂನು ಅಧಿಕಾರಿ ಎಸ್.ಎನ್. ನಾಯಕ್ ಮಾಹಿತಿ ನೀಡಿದರು. ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ನ್ಯಾಯಿಕ ಸದಸ್ಯ ಪಾಟೀಲ ನಾಗಲಿಂಗನಗೌಡ, ಕಂದಾಯ ಸದಸ್ಯ ಕೆ.ಎಚ್. ಅಶ್ವತ್ಥ ನಾರಾಯಣ ಗೌಡ, ಪೊಲೀಸ್ ಅಧೀಕ್ಷಕ ಕೆ. ನಂಜುಂಡೇಗೌಡ, ಬಿಡಿಎ ಎಸ್ಟೇಟ್ ಅಧಿಕಾರಿ ಯಶೋದಾ ಆರ್. ಅಭಿಪ್ರಾಯವನ್ನು ಸಭೆಯಲ್ಲಿ ಮಂಡಿಸಿದರು.

ಮೋಜಣಿ ಮತ್ತು ನಿಯಮಗಳ ಬಗ್ಗೆ ಭೂಮಾಪನ ಕಂದಾಯ ವ್ಯವಸ್ಥೆ, ಭೂದಾಖಲೆಗಳ ಇಲಾಖೆ ಹೆಚ್ಚುವರಿ ನಿರ್ದೇಶಕ ಕೆ. ಜಯಪ್ರಕಾಶ್ ಉಪನ್ಯಾಸ ನೀಡಿದರು. ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಕಂದಾಯ ಸದಸ್ಯಎಸ್. ಪಾಲಯ್ಯ ಅಧ್ಯಕ್ಷತೆ ವಹಿಸಿದ್ದರು.

ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶ ಎಚ್.ಕೆ. ನವೀನ್ ಅವರು ಎಲ್ಲ ಉಪನ್ಯಾಸಗಳ ನಿರ್ವಹಣೆ ಮಾಡಿದರು.

‘ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ ಮತ್ತು ಸಂಬಂಧಿಸಿದ ಕಾನೂನು’ ಕಾರ್ಯಾಗಾರವನ್ನು ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ಬಿ.ಎ. ಪಾಟೀಲ ಉದ್ಘಾಟಿಸಿದರು

ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರದ 4ನೇ ಹಂತದ ಮನೆಯೊಂದರಲ್ಲಿ ನೀರಿನ ಟ್ಯಾಂಕ್ ಸ್ವಚ್ಛ ಮಾಡುವಾಗ ಮೋಟಾರ್‌ನ ಸ್ವಿಚ್ ಆಫ್ ಮಾಡದ ಕಾರಣ ವಿದ್ಯುತ್ ಸ್ಪರ್ಶಿಸಿ ಕಾರ್ಮಿಕ ಆದಿನಾರಾಯಣ (44) ಮೃತಪಟ್ಟಿದ್ದಾರೆ.

ಗುತ್ತಿಗೆದಾರ ಚಂದ್ರು ಹಾಗೂ ಮನೆ ಮಾಲೀಕ ಸಂತೋಷ್ ಅವರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಕಾಣೆಯಾಗಿದ್ದಾನೆ

5ಅಡಿ, ಸಾಧಾರಣ ಮೈಕಟ್ಟು ಗೋಧಿ ಮೈಬಣ್ಣ, ಕೋಲು ಮುಖ, ಕಪ್ಪು ಕೂದಲು ಕನ್ನಡ ಮಾತನಾಡುತ್ತಾನೆ. ಕೆಂಪು ಬಣ್ಣದ ಟೀ ಶರ್ಟ್, ಸಿಮೆಂಟ್ ಕಲರ್ ಪ್ಯಾಂಟ್ ಧರಿಸಿರುತ್ತಾನೆ. ಎಡಗೈ ಮೇಲೆ ಕಪ್ಪು ಚುಕ್ಕೆ ಇದೆ.

ಚಲುವರಾಜು (14 ವರ್ಷ)

ಬೆಂಗಳೂರಿನ ಬಿ. ನಾರಾಯಣಪುರದಿಂದ ಕಾಣೆಯಾಗಿದ್ದಾನೆ. ಇತನ ಬಗ್ಗೆ ಮಾಹಿತಿ ಸಿಕ್ಕರೆ ಮಹದೇವಪುರ ಪೊಲೀಸ್ ಠಾಣೆಗೆ ತಿಳಿಸಿ ಅಥವಾ ಕೆಳಗಿನ ಮೊಬೈಲ್‌ಗೆ ಕರೆ ಮಾಡಿ:

080–22942546/9480801230

9964055320, 7760629892

ಬೈಕ್ ಟ್ಯಾಕ್ಸಿಗಳ ವಿರುದ್ಧ ಕ್ರಮಕ್ಕೆ ತಂಡ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೊಮ್ಯಾಟೊ ಮತ್ತು ಸ್ವಿಗ್ಗಿ ಆ್ಯಪ್ ಮೂಲಕ ಆಹಾರ ತಲುಪಿಸಲು ಅನಧಿಕೃತವಾಗಿ ಚಲಾಯಿಸುವ ಬೈಕ್ ಟ್ಯಾಕ್ಸಿ ವಾಹನಗಳ ವಿರುದ್ಧ ಕ್ರಮ ಕೈಗೊಳ್ಳಲು ಪ್ರವರ್ತನ ತಂಡ ರಚಿಸಿ ವಿಶೇಷ ಪ್ರವರ್ತನಾ ಕಾರ್ಯ ಹಮ್ಮಿಕೊಳ್ಳಲಾಗಿದೆ.

ಪ್ರಾದೇಶಿಕ ಸಾರಿಗೆ ಕಚೇರಿಗಳಲ್ಲಿಯೂ ಲಭ್ಯ ಇರುವ ವಾಹನ ನಿರೀಕ್ಷಕರನ್ನು ಬಳಸಿಕೊಂಡು ಕಾರ್ಯಾಚರಣೆ ನಡೆಸಬೇಕು. ಅನಧಿಕೃತ ವಾಹನಗಳ ಮೇಲೆ ಕಾನೂನು ಕ್ರಮವನ್ನು ನಿರಂತರವಾಗಿ ಕೈಗೊಳ್ಳಬೇಕು. ಅದರ ವರದಿಯನ್ನು ಜಂಟಿ ಸಾರಿಗೆ ಆಯುಕ್ತರಿಗೆ ಕಳುಹಿಸಬೇಕು ಎಂದು ಸಾರಿಗೆ ಇಲಾಖೆ ತಿಳಿಸಿದೆ.

To locate your nearest store and know more on 6366920017. Buy online at tanishq.co.in or Download our App *For terms and conditions, visit our website.

Showrooms at **Bangalore:** Dickenson Road, Koramangala, Kamanahalli, E-City, Marathahalli, HSR Layout, Phoenix Mall, Nexus Shantiniketan Mall, Bannerghata, Jaynagar, Banashankari, Vijayanagar, Kanakapura Road, Basaveshwaranagar, New BEL Road, **New Stores at Whitefield**. Tel: 080 22633335; KR Puram, Subhash Nagar Batarahalli. Tel: 9611730802; RR Nagar-BEML Layout, Jawaharlal Nehru Road. Tel: 080 47574666; **Relocated to New Premises at Malleswaram-Sampige Road**. Tel: 9164326100; Yelahanka, Opp. to The Galleria Mall. Tel: 080 43364336; **Mysore:** No. 2927, Bangalore -Nilgiri Road, Near Suburban Bus Stand. Tel: 821 428 0074; **Tumkur:** ADR Complex, Ground Floor, General Kariyappa Road, K R Extension. Tel: 816 4041666

ವಿರೋಧದ ನಡುವೆ ಕಾರ್ಯಸಾಧ್ಯತಾ ಅಧ್ಯಯನದ ಪ್ರಕ್ರಿಯೆ ಆರಂಭಿಸಿದ ತಮಿಳುನಾಡು

ಅಂತರರಾಜ್ಯ ಮೆಟ್ರೊ ಯೋಜನೆಗೆ ಮರುಜೀವ

• ಆದಿತ್ಯ ಕೆ.ಎ.

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದ ಬೊಮ್ಮಸಂದ್ರದಿಂದ ತಮಿಳುನಾಡು ರಾಜ್ಯದ ಹೊಸೂರಿಗೆ ಸಂಪರ್ಕಿಸುವ ಅಂತರರಾಜ್ಯ ಮೆಟ್ರೊ ಯೋಜನೆಯು ಮರುಜೀವ ಪಡೆದುಕೊಂಡಿದೆ. ಕೆಲವು ವರ್ಷಗಳಿಂದ ಚರ್ಚೆಯಲ್ಲಿದ್ದ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ತಮಿಳುನಾಡು ಸರ್ಕಾರವು ಮುಂದಾಗಿದೆ.

ಈ ಯೋಜನೆಗೆ ಈಗಿನ ಸರ್ಕಾರ 'ಉತ್ಸುಕವಾಗಿಲ್ಲ' ಎಂದು ಹೇಳಿದ್ದರೂ, ತಮಿಳುನಾಡು ಸರ್ಕಾರ ಮಾತ್ರ ಕಾರ್ಯಸಾಧ್ಯತಾ ಅಧ್ಯಯನ ವರದಿ ತಯಾರಿಸುವ ಪ್ರಕ್ರಿಯೆ ಆರಂಭಿಸಿದೆ.

'ಕೇಂದ್ರ ಸರ್ಕಾರದ ತಾತ್ವಿಕ ಒಪ್ಪಿಗೆ ಪಡೆದುಕೊಂಡಿರುವ ತಮಿಳುನಾಡು ಸರ್ಕಾರವು ಅಧ್ಯಯನ ವರದಿ ತಯಾರಿಸಲು ಟೆಂಡರ್ ಕರೆದಿದ್ದು ಕೆಲವು ಟೆಂಡರ್‌ದಾರರು ಮುಂದೆ ಬಂದಿದ್ದಾರೆ. ಟೆಂಡರ್‌ಗೆ ಅರ್ಜಿ ಸಲ್ಲಿಸಲು ಆಗಸ್ಟ್ 31ರವರೆಗೆ ಚೆನ್ನೈ ಮೆಟ್ರೊ ನಿಗಮವು ಅವಕಾಶ ಕಲ್ಪಿಸಿದೆ' ಎಂದು ಮೂಲಗಳು ಹೇಳಿವೆ.

ಈ ಯೋಜನೆಗೆ ಕನ್ನಡ ಸಂಘಟನೆಗಳು ವಿರೋಧ ವ್ಯಕ್ತಪಡಿಸಿವೆ. 'ಬೇಕಿದ್ದರೆ ತಮಿಳುನಾಡು ರಾಜ್ಯದ ಒಳಗೆ ಮೆಟ್ರೊ ಮಾರ್ಗ ವಿಸ್ತರಣೆ ಮಾಡಿಕೊಳ್ಳಲಿ. ನಮ್ಮ ತಕರಾರು ಇಲ್ಲ. ಕರ್ನಾಟಕದ ಒಳಗೆ ಮಾರ್ಗವನ್ನು ವಿಸ್ತರಿಸಿದರೆ ಕನ್ನಡಿಗರಿಗೆ ಉದ್ಯೋಗ ಸೇರಿದಂತೆ ನಾನಾ ಆಪತ್ತುಗಳು ಎದುರಾಗಲಿವೆ' ಎಂದು ಕನ್ನಡ ಸಂಘಟನೆಗಳು ಹೇಳಿವೆ.

ಈ ನಡುವೆ 'ತಮಿಳುನಾಡು ಮೆಟ್ರೊವನ್ನು ಬೊಮ್ಮಸಂದ್ರದ ಹಳದಿ ಮಾರ್ಗಕ್ಕೆ ಸಂಪರ್ಕಿಸುವ ಯಾವುದೇ ಪ್ರಸ್ತಾವ ನಮ್ಮ ಮುಂದೆ ಬಂದಿಲ್ಲ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಏನಿದು ಯೋಜನೆ: 'ನಮ್ಮ ಮೆಟ್ರೊ'ದ 2ನೇ ಹಂತದ ಕಾಮಗಾರಿ ಆರ್.ವಿ.ರಸ್ತೆಯಿಂದ ಬೊಮ್ಮಸಂದ್ರ (ರೀಚ್ 5) ಮಾರ್ಗವು ಬಹುತೇಕ ಪೂರ್ಣಗೊಂಡಿದ್ದು, ಈ ವರ್ಷಾಂತ್ಯಕ್ಕೆ ಉದ್ಘಾಟನೆಗೊಳ್ಳಲಿದೆ. ಹೀಗಾಗಿ, ಈ ಮಾರ್ಗ ವಿಸ್ತರಣೆಯ ಚರ್ಚೆಯು ಆರಂಭವಾಗಿದೆ.

ಈ ಮಾರ್ಗ ವಿಸ್ತರಣೆಗೆ ತಮಿಳುನಾಡು ಸರ್ಕಾರವು ರಾಜ್ಯಕ್ಕೆ ಮನವಿ ಮಾಡಿತ್ತು. ಕರ್ನಾಟಕದ ಹಿಂದಿನ ಸರ್ಕಾರವು ಈ ಮಾರ್ಗದ ಅಧ್ಯಯನಕ್ಕೆ ಒಪ್ಪಿಗೆ ಸೂಚಿಸಿತ್ತು. ಹೀಗಾಗಿ ಕಾರ್ಯಸಾಧ್ಯತಾ ಅಧ್ಯಯನ ವರದಿ ಪ್ರಕ್ರಿಯೆ ಆರಂಭವಾಗಿದೆ. ಒಂದು ವೇಳೆ ಬೊಮ್ಮಸಂದ್ರ –ಹೊಸೂರು ನಡುವೆ ಮೆಟ್ರೊ ಯೋಜನೆ ಕಾರ್ಯಸಾಧುಗೊಂಡರೆ ದಕ್ಷಿಣ ಭಾರತದ ಮೊದಲ ಅಂತರ ರಾಜ್ಯ ಮೆಟ್ರೊ ಯೋಜನೆಯಾಗಲಿದೆ.

'ಎರಡು ರಾಜ್ಯಗಳಿಗೂ ಅನುಕೂಲ'

'ಯೋಜನೆಯನ್ನು ಕೆಲವರು ರಾಜಕೀಯ ಕಾರಣಕ್ಕೆ ವಿರೋಧಿಸುತ್ತಿದ್ದಾರೆ. ಬೊಮ್ಮಸಂದ್ರ–ಹೊಸೂರು ನಡುವೆ ಮೆಟ್ರೊ ಸಂಚಾರ ಆರಂಭವಾದರೆ ಎರಡು ರಾಜ್ಯದ ಉದ್ಯೋಗಸ್ಥರು, ವ್ಯಾಪಾರಿಗಳು, ಕೃಷಿಕರು ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲ ಆಗಲಿದೆ. ನಾಲ್ಕು ವರ್ಷಗಳ ಹಿಂದೆ ಈ ಮಾರ್ಗಕ್ಕೆ ಪ್ರಸ್ತಾಪ ಸಲ್ಲಿಸಲಾಗಿತ್ತು. ಕೋವಿಡ್ ಕಾರಣಕ್ಕೆ ವಿಳಂಬವಾಗಿತ್ತು' ಎಂದು ತಮಿಳುನಾಡಿನ ಕೃಷ್ಣಗಿರಿ ಸಂಸದ ಎ.ಚೆಲ್ಲಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಬೊಮ್ಮಸಂದ್ರದಿಂದ ಹೊಸೂರಿಗೆ 20.5 ಕಿ.ಮೀ. ಮೆಟ್ರೊ ರೈಲು ಮಾರ್ಗ ನಿರ್ಮಾಣ ಆಗಬೇಕಿದೆ. ಈ ಪೈಕಿ ಕರ್ನಾಟಕದ ವ್ಯಾಪ್ತಿಯಲ್ಲೇ 11.5 ಕಿ.ಮೀ ವ್ಯಾಪ್ತಿಯಿದೆ. ಉಳಿದ, 8.5 ಕಿ.ಮೀ ಮಾತ್ರ ತಮಿಳುನಾಡಿನಲ್ಲಿದೆ. ಈ ಯೋಜನೆ ಸಾಕಾರಗೊಂಡರೆ ಕರ್ನಾಟಕಕ್ಕೂ ಅನುಕೂಲವಿದೆ. ಹೊಸೂರು ಕೈಗಾರಿಕ ಪ್ರದೇಶದಲ್ಲಿ ಕರ್ನಾಟಕದ ಕಾರ್ಮಿಕರೂ ಕೆಲಸ ಮಾಡುತ್ತಿದ್ದಾರೆ. ಅವರ ಸಂಚಾರಕ್ಕೂ ಅನುಕೂಲವಾಗಲಿದೆ' ಎಂದು ಹೇಳಿದರು.

'ಕನ್ನಡಿಗರ ನೇತೃತ್ವದಲ್ಲಿ ಸಮಿತಿ ರಚಿಸಿ'

ತಮಿಳುನಾಡು ಸರ್ಕಾರವು ಅವರ ಪ್ರದೇಶದಲ್ಲಿ ಯಾವ ಯೋಜನೆ ಬೇಕಾದರೂ ಆರಂಭಿಸಲಿ. ಆದರೆ, ಕರ್ನಾಟಕದ ಭೂಭಾಗದಲ್ಲಿ ಮೆಟ್ರೊ ಮಾರ್ಗ ವಿಸ್ತರಣೆ ಮಾಡುವುದಿದ್ದರೆ ಅದಕ್ಕೆ ನಮ್ಮ ವಿರೋಧವಿದೆ. ರಾಜ್ಯ ಸರ್ಕಾರದ ಜತೆಗೆ ನಡೆದಿರುವ ಮಾತುಕತೆ ವಿವರವು ಬಹಿರಂಗಗೊಂಡಿಲ್ಲ. ಸರ್ಕಾರ ತಕ್ಷಣವೇ ಕನ್ನಡಿಗರ ನೇತೃತ್ವದಲ್ಲಿ ಸಮಿತಿ ರಚಿಸಿ, ಈ ಯೋಜನೆಯ ಲಾಭ–ನಷ್ಟದ ಅಧ್ಯಯನ ನಡೆಸಬೇಕು. ಈ ಹಿಂದೆ 'ಬೆಂಗಳೂರು ಅಭಿವೃದ್ಧಿ ಸಮಿತಿ' ರಚಿಸಲಾಗಿತ್ತು. ಆದರೆ, ಆ ಸಮಿತಿಯಲ್ಲಿ ಕನ್ನಡೇತರರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಆ ರೀತಿ ಆಗಬಾರದು. ಕರ್ನಾಟಕ ಹಿತದೃಷ್ಟಿಯೇ ಮುಖ್ಯ ಆಗಬೇಕಿದೆ.

ಅರುಣ್ ಜಾವಗಲ್, ಹೋರಾಟಗಾರ

> **ಕಾರ್ಯಸಾಧ್ಯತಾ ಅಧ್ಯಯನ ಪ್ರಕ್ರಿಯೆ ಆರಂಭಿಸಿದ ತಕ್ಷಣವೇ ಅಂತಿಮ ಒಪ್ಪಿಗೆ ಸಿಕ್ಕಿದೆ ಎಂಬರ್ಥವಲ್ಲ. ಈ ಯೋಜನೆಯಿಂದ ರಾಜ್ಯಕ್ಕೆ ಎಷ್ಟು ಲಾಭವಿದೆ ಎಂಬುದನ್ನು ನೋಡಿಯೇ ತೀರ್ಮಾನ ತೆಗೆದುಕೊಳ್ಳಬೇಕಿದೆ**
> **ಪಿ.ಸಿ.ಮೋಹನ್**, ಸಂಸದ

ಚಂದ್ರಯಾನ ಸಂಭ್ರಮ

ಚಂದ್ರನ ಮೇಲ್ಮೈನಲ್ಲಿ ವಿಕ್ರಮ್ ಲ್ಯಾಂಡರ್ ಇಳಿದ ಬಳಿಕ ಇಸ್ರೊ ಕೇಂದ್ರ ಕಚೇರಿಯ ನಿಯಂತ್ರಣಾ ಕೊಠಡಿಯ ವಿಜ್ಞಾನಿಗಳು ಹರ್ಷ ವ್ಯಕ್ತಪಡಿಸಿದ್ದು ಹೀಗೆ –ಪಿಟಿಐ ಚಿತ್ರ



ಚಂದ್ರಯಾನ–3 ಯಶಸ್ವಿಯಾಗಿರುವ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಿ ಕರ್ನಾಟಕ ಪೋಸ್ಟಲ್ ಸರ್ಕಲ್ ವತಿಯಿಂದ 'ಚಂದ್ರಯಾನ 3' ಅಂಚೆ ಲಕೋಟೆಯನ್ನು ಬುಧವಾರ ಬಿಡುಗಡೆ ಮಾಡಲಾಗಿದೆ

'ಅಪ್ಪನ ಕನಸು ನನಸಾಗಿಸಿದ ಇಸ್ರೊ!'

ಅಹಮದಾಬಾದ್ (ಪಿಟಿಐ): 'ಚಂದ್ರಯಾನ 3 ಯೋಜನೆಯು ನವ ಭಾರತದ ದ್ಯೋತಕ ಹಾಗೂ ಭಾರತೀಯರ ಹೆಮ್ಮೆಯ ಸಂಕೇತವೂ ಹೌದು. ಭಾರತದ ಬಾಹ್ಯಾಕಾಶ ವಿಜ್ಞಾನಕ್ಕೆ ನನ್ನಪ್ಪನ (ವಿಕ್ರಮ್ ಸಾರಾಭಾಯಿ) ಕೊಡುಗೆ ದೊಡ್ಡದು. ಅವರ ಗೌರವಾರ್ಥವಾಗಿ ಲ್ಯಾಂಡರ್‌ಗೆ 'ವಿಕ್ರಮ್' ಎಂದು ಹೆಸರಿಟ್ಟಿರುವುದು ಖುಷಿಯ ವಿಚಾರ' ಎಂದು ವಿಕ್ರಮ್ ಸಾರಾಭಾಯಿ ಅವರ ಪುತ್ರ ಕಾರ್ತಿಕೇಯ ಮತ್ತು ಪುತ್ರಿ ಮಲ್ಲಿಕಾ ಅವರು ಹೇಳಿದ್ದಾರೆ.

'ಇಂದು ನಮ್ಮೆಲ್ಲರ ಪಾಲಿಗೆ ಸುದಿನ. ಭಾರತಕ್ಕಷ್ಟೇ ಅಲ್ಲ, ವಿಶ್ವಕ್ಕೂ ಚಾರಿತ್ರಿಕ ದಿನವಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಇತರೇ ದೇಶಗಳ ನಡುವಿನ ಸ್ಪರ್ಧೆಗೆ ಬಳಸಬಾರದು; ನಾವು ಶ್ರೇಷ್ಠವೆಂದು ತೋರ್ಪಡಿಸಲೂ ಬಳಸಬಾರದೆಂದು ಕನಸು ಕಂಡಿದ್ದರು. ಇಸ್ರೊ ವಿಜ್ಞಾನಿಗಳು ಕಠಿಣ ಶ್ರಮವಹಿಸಿ ಅಪ್ಪನ ಕನಸನ್ನು ಇಂದು ಈಡೇರಿಸಿದ್ದಾರೆ' ಎಂದಿದ್ದಾರೆ.

ವಿದ್ಯಾರ್ಥಿನಿ ಆರೋಗ್ಯದಲ್ಲಿ ಚೇತರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌.ಜಿ. ಪಾಳ್ಯದಲ್ಲಿ ತುಂಡಾಗಿ ಬಿದ್ದ ವಿದ್ಯುತ್ ಕಂಬದ ತಂತಿಗಳು ತಗುಲಿ ಗಾಯಗೊಂಡಿದ್ದ ಕ್ರೈಸ್ಟ್ ವಿಶ್ವವಿದ್ಯಾಲಯದ ಪದವಿ ವಿದ್ಯಾರ್ಥಿನಿ ಪ್ರಿಯಾ ಅವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿಸಲಾಗಿದೆ.

'ವಿದ್ಯುತ್ ಪ್ರವಹಿಸಿ ವಿದ್ಯಾರ್ಥಿನಿಗೆ ಶೇ 40ರಷ್ಟು ಪ್ರಮಾಣದ ಸುಟ್ಟ ಗಾಯವಾಗಿತ್ತು. ವಿದ್ಯಾರ್ಥಿನಿ ಚೇತರಿಸಿಕೊಳ್ಳುತ್ತಿದ್ದಾರೆ' ಎಂದು ವೈದ್ಯರು ತಿಳಿಸಿದ್ದಾರೆ. ದೆಹಲಿ ಮೂಲದ ಪ್ರಿಯಾ ನಗರದಲ್ಲಿ ಪದವಿ ವ್ಯಾಸಂಗ ಮಾಡುತ್ತಿದ್ದರು. ಪೇಯಿಂಗ್ ಗೆಸ್ಟ್‌ನಲ್ಲಿ ವಾಸ್ತವ್ಯ ಮಾಡಿದ್ದಾರೆ. ಅವರ ಪೋಷಕರು ಆಸ್ಪತ್ರೆಗೆ ಬಂದಿದ್ದಾರೆ ಎಂದು ಮೂಲಗಳು ಹೇಳಿವೆ.

11 ಬೈಕ್‌ಗಳ ಜಪ್ತಿ: ಮೂರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಸೈಯದ್

ನಿರಂಜನ್

ಮುಬಾರಕ್

ಬೆಂಗಳೂರು: ಆರ್‌.ಟಿ.ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಸುಲ್ತಾನ್ ಪಾಳ್ಯದಲ್ಲಿ ಮನೆಯ ಎದುರು ನಿಲುಗಡೆ ಮಾಡಿದ್ದ ಬೈಕ್ ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಸೈಯದ್ ಆಲಿ, ನಿರಂಜನ್, ಮುಬಾರಕ್ ಎಂಬುವರನ್ನು ಬಂಧಿಸಲಾಗಿದೆ.

ಬಂಧಿತರಿಂದ ₹ 16.3 ಲಕ್ಷದ 72.2 ಗ್ರಾಂ ಚಿನ್ನಾಭರಣ, ವಿವಿಧ ಕಂಪನಿಯ 11 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳು ಆರ್‌.ಟಿ. ನಗರ, ಜೆ.ಸಿ.ನಗರ, ಉಪ್ಪಾರಪೇಟೆ, ಕೆ.ಜಿ. ಹಳ್ಳಿ, ಪುಲಕೇಶಿನಗರ, ಬಾಗಲೂರು, ಬಾಣಸವಾಡಿ, ಜೀವನ್‌ಬಿಮಾ ನಗರ, ಹಲಸೂರು, ಹೈಗ್ರೌಂಡ್ಸ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆಯ ಎದುರು ನಿಲುಗಡೆ ಮಾಡಿದ್ದ ಬೈಕ್‌ಗಳನ್ನು ಕಳವು ಮಾಡುತ್ತಿದ್ದರು. ಕೊಡಿಗೇಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸರ ಕಳವು ನಡೆಸಿದ್ದರು. ಒಟ್ಟು 12 ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.

ಇನ್ನು ವಿದ್ಯಾರಣ್ಯಪುರ ಪೊಲೀಸರು ಬೈಕ್ ಕಳವು ಮಾಡುತ್ತಿದ್ದ ಆರೋಪಿಯನ್ನು ಬಂಧಿಸಿದ್ದಾರೆ. ಬಂಧಿತರಿಂದ ₹ 9 ಲಕ್ಷದ 11 ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

ಏಳು ಮಂದಿ ಆರೋಪಿಗಳ ಬಂಧನ • ನಾಲ್ಕು ಲಕ್ಷ ಮೌಲ್ಯದ ಸೀರೆ ವಶ

ಗ್ರಾಹಕರ ಸೋಗಿನಲ್ಲಿ ಸೀರೆ ಕಳವು

ಪ್ರಜಾವಾಣಿ ವಾರ್ತೆ

ಪ್ರಸಾದ್

ವೆಂಕಟೇಶ್

ಸುನಿತಾ

ರತ್ನಲು

ಶಿವಕುಮಾರ್

ಭರತ್

ಅಪರಾಧ ಸುದ್ದಿ

ಬೆಂಗಳೂರು: ಮದುವೆಗೆ ಸೀರೆ ಖರೀದಿಸುವ ಸೋಗಿನಲ್ಲಿ ಬಂದು ಲಕ್ಷಾಂತರ ರೂಪಾಯಿ ಬೆಲೆಯ ಸೀರೆಗಳನ್ನು ಕದ್ದು ಪರಾರಿಯಾಗುತ್ತಿದ್ದ ಆಂಧ್ರಪ್ರದೇಶ ಮೂವರು ಮಹಿಳೆಯರೂ ಸೇರಿ ಆರು ಮಂದಿಯನ್ನು ಹೈಗ್ರೌಂಡ್ಸ್ ಪೊಲೀಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಾಧುಪಾಟಿ ರಾಣಿ (33), ಈಟಾ ಸುನಿತಾ (45), ಗುಂಜಿ ಶಿವರಾಮ್ ಪ್ರಸಾದ್ (34), ಕನುಮುರಿ ವೆಂಕಟೇಶ್ವರ ರಾವ್(42), ತಣ್ಣೀರು ಶಿವಕುಮಾರ್(33), ತೊತ್ತಕ್ಕ ಭರತ್(30) ಬಂಧಿತರು.

ಬಂಧಿತರಿಂದ ನಾಲ್ಕು ಲಕ್ಷ ಮೌಲ್ಯದ 22 ಸೀರೆ ಜಪ್ತಿ ಮಾಡಿಕೊಳ್ಳಲಾಗಿದೆ. ಸ್ಯಾಂಕಿ ರಸ್ತೆಯ ಪೆನ್‌ರಿವ್ ಎಂಟರ್ ಪ್ರೈಸಸ್‌ನಲ್ಲಿ ಸೀರೆ ಹಾಗೂ ರವಿಕೆ ಪೀಸ್‌ಗಳನ್ನು ಕಳವು ಮಾಡಿದ್ದರು. ಮಾಲೀಕರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಆಂಧ್ರಪ್ರದೇಶದಿಂದ ಕಾರುಗಳಲ್ಲಿ ಬೆಂಗಳೂರಿಗೆ ಬರುತ್ತಿದ್ದ ಆರೋಪಿಗಳು, ಸೀರೆ ಅಂಗಡಿಗಳಿಗೆ ಮದುವೆಗೆ ಬಟ್ಟೆ ಖರೀದಿಸುವ ಸೋಗಿನಲ್ಲಿ ಹೋಗುತ್ತಿದ್ದರು. ಅಲ್ಲಿ ಅಂಗಡಿ ಸಿಬ್ಬಂದಿ ಸೀರೆ ತೋರಿಸುವಾಗ ಜತೆಗಿದ್ದ ಪುರುಷರು, ಸಿಬ್ಬಂದಿ ಗಮನ ಬೇರೆಡೆಗೆ ಸೆಳೆಯುತ್ತಿದ್ದರು. ಮಹಿಳೆಯರು ಸೀರೆಗಳನ್ನು ತಮ್ಮ ಬಟ್ಟೆಯ ಒಳ ಭಾಗದಲ್ಲಿ ಇರಿಸಿಕೊಳ್ಳುತ್ತಿದ್ದರು. ನಂತರ ಕಡಿಮೆ ಬೆಲೆಯ ಕೆಲವು ಸೀರೆಗಳನ್ನು ಖರೀದಿಸಿ ಅಲ್ಲಿಂದ ತೆರಳುತ್ತಿದ್ದರು.

ಸಿಸಿ ಟಿವಿ ಕ್ಯಾಮೆರಾದಲ್ಲಿ ಸೆರೆ: ಪೆನ್‌ರಿವ್ ಎಂಟರ್ ಪ್ರೈಸಸ್‌ನಲ್ಲಿ ಅಳವಡಿಸಿದ್ದ ಸಿಸಿ ಟಿವಿ ಕ್ಯಾಮೆರಾದಲ್ಲಿ ಕಳ್ಳರ ಕೈಚಳಕ ಸೆರೆಯಾಗಿತ್ತು. ಅದನ್ನು ಆಧರಿಸಿ ಆಂಧ್ರಪ್ರದೇಶಕ್ಕೆ ತೆರಳಿ ಬಂಧಿಸಲಾಗಿದೆ. ಬೆಂಗಳೂರು ಅಲ್ಲದೇ ಆಂಧ್ರಪ್ರದೇಶದ ಹಲವು ನಗರಗಳಲ್ಲೂ ಇದೇ ರೀತಿಯ ಕೃತ್ಯ ಎಸಗಿರುವುದು ವಿಚಾರಣೆ ವೇಳೆ ಗೊತ್ತಾಗಿದೆ ಎಂದು ಮೂಲಗಳು ತಿಳಿಸಿವೆ.

ಕಳವು ಮಾಡಿದ ಸೀರೆಗಳನ್ನು ಆಂಧ್ರಪ್ರದೇಶ, ಬೆಂಗಳೂರು ಸೇರಿದಂತೆ ಹಲವು ಅಂಗಡಿಗಳಿಗೆ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದರು. ಬಂದ ಹಣದಲ್ಲಿ ಎಲ್ಲರೂ ಹಂಚಿಕೊಳ್ಳುತ್ತಿದ್ದರು.

ಇದೇ ವೇಳೆ ಅಶೋಕನಗರ ಠಾಣೆ ಪೊಲೀಸರು ಸೀರೆ ಕಳವು ಪ್ರಕರಣದಲ್ಲಿ ಮಹಿಳೆಯೊಬ್ಬಳನ್ನು ಬಂಧಿಸಿದ್ದಾರೆ.

ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಸೀರೆ ಕಳವು ಪ್ರಕರಣದಲ್ಲಿ ರತ್ನಲು ತಲೆಮರೆಸಿಕೊಂಡಿದ್ದರು. ಇದೀಗ ಆಕೆಯನ್ನು ಬಂಧಿಸಲಾಗಿದೆ.

'ಪ್ರತ್ಯೇಕವಾಗಿ ಅಲ್ಲದೇ ಆಂಧ್ರಪ್ರದೇಶ ಆರೋಪಿಗಳ ಜೊತೆಗೂ ಸೀರೆ ಕಳವು ಮಾಡುತ್ತಿದ್ದಳು' ಎಂದು ಪೊಲೀಸರು ಹೇಳಿದರು.

ಪೊಲೀಸರ ಹೆಸರಿನಲ್ಲಿ ನಕಲಿ ಖಾತೆ ಸೃಷ್ಟಿ: ವ್ಯಕ್ತಿ ಬಂಧನ

ಬೆಂಗಳೂರು: ನಗರ ಪೊಲೀಸರ ಹೆಸರಿನಲ್ಲಿ ನಕಲಿ 'ಎಕ್ಸ್ ಟ್ವಿಟರ್' ಖಾತೆ ಸೃಷ್ಟಿಸಿ, ಅದರಲ್ಲಿ ಐಪಿಎಲ್ ಪಂದ್ಯಗಳ ಸ್ಕೋರ್ ಹಾಗೂ ಮತ್ತಿತರ ಮಾಹಿತಿ ಟ್ವೀಟ್ ಮಾಡಿ ಪೊಲೀಸರಂತೆ ಬಿಂಬಿಸುತ್ತಿದ್ದ ತಮಿಳುನಾಡಿನ ವ್ಯಕ್ತಿಯನ್ನು ನಗರ ಅಪರಾಧ ವಿಭಾಗದ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡು ರಾಜ್ಯದ ಚೆಟಪೇಟ್‌ನ ಮಗೇಶ್ ಕುಮಾರ್ ಬಂಧಿತ ಆರೋಪಿ. 'ಪ್ರಕರಣ ದಾಖಲಾದ ಮೇಲೆ ವಿಶೇಷ ತಂಡ ರಚಿಸಲಾಗಿತ್ತು. ವಿಶೇಷ ತಂತ್ರಜ್ಞಾನದ ನೆರವಿನಿಂದ ಆರೋಪಿಯನ್ನು ಪತ್ತೆ ಹಚ್ಚಿ ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'https://twitter.com/BlrCityPolice ನಗರ ಪೊಲೀಸರ ಅಸಲಿ ಖಾತೆಯಾಗಿದೆ. ಆದರೆ, ಆರೋಪಿಯು https://twitter.com/BlrCityPolicee ಅನ್ನು ತೆರೆದು ದುರುಪಯೋಗ ಪಡಿಸಿಕೊಳ್ಳುತ್ತಿದ್ದ. ಪೊಲೀಸರಿಗೆ ಕೆಟ್ಟ ಹೆಸರು ತರಲು ಪ್ರಯತ್ನಿಸುತ್ತಿದ್ದ' ಎಂದು ಹೇಳಿದರು.

ಕಮಲ್ ನಾಥ್ ಅಳಿಯನಿಗೆ ನೆರವಾಗಿದ್ದ ಮಾಲ್ಟಾ ಪ್ರಜೆ ಬಂಧನ

ನವದೆಹಲಿ (ಪಿಟಿಐ): ಬ್ಯಾಂಕ್‌ಗೆ ₹354 ಕೋಟಿ ವಂಚಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಕಾಂಗ್ರೆಸ್ ಹಿರಿಯ ನಾಯಕ ಮತ್ತು ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಕಮಲ್ ನಾಥ್ ಅವರ ಸೋದರಳಿಯ ರತುಲ್ ಪುರಿ ಅವರಿಗೆ ನೆರವಾಗಿದ್ದ ಮಾಲ್ಟಾ ವ್ಯಕ್ತಿಯನ್ನು ಬಂಧಿಸಿರುವುದಾಗಿ ಜಾರಿ ನಿರ್ದೇಶನಾಲಯ (ಇ.ಡಿ) ಬುಧವಾರ ಹೇಳಿದೆ.

ಬ್ಯಾಂಕ್ ಆಫ್ ಸಿಂಗಪುರದ ಮಾಜಿ ರಿಲೇಷನ್‌ಶಿಪ್ ವ್ಯವಸ್ಥಾಪಕ ನಿತಿನ್ ಭಟ್ನಾಗರ್ ಬಂಧಿತ ಆರೋಪಿ. ಅವರನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಬಂಧಿಸಿ, ಸ್ಥಳೀಯ ನ್ಯಾಯಾಲಯದ ಎದುರು ಹಾಜರುಪಡಿಸಲಾಯಿತು. ನ್ಯಾಯಾಲಯವು ಆರೋಪಿಯನ್ನು ಆ. 31ರವರೆಗೆ ಇ.ಡಿ ಕಸ್ಟಡಿಗೆ ನೀಡಿದೆ.

ಉದ್ಯಮಿ ಹತ್ಯೆಗೆ ಸಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿಯನ್ನು ಅಪಹರಿಸಿ ಕೊಲೆ ಮಾಡಲು ಸಂಚು ರೂಪಿಸಿದ್ದ ಆರೋಪದ ಮೇರೆಗೆ ರೌಡಿಶೀಟರ್‌ಗಳಾದ 'ಸೈಕಲ್' ರವಿ, 'ಬೇಕರಿ' ರಘು ಹಾಗೂ ಅವರ ಸಹಚರರ ವಿರುದ್ಧ ಸುಬ್ರಮಣ್ಯಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ರಿಯಲ್ ಎಸ್ಟೇಟ್ ಉದ್ಯಮಿ ಗಜೇಂದ್ರ ಅವರು ನೀಡಿದ ದೂರು ಮೇರೆಗೆ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ಆಗಸ್ಟ್ 20ರಂದು ರಾತ್ರಿ 10 ಗಂಟೆಯ ಸುಮಾರಿಗೆ ರಾಮಚಂದ್ರಪುರ ಪಾರ್ಕ್ ಬಳಿ ತೆರಳುತ್ತಿದ್ದೆ. ಆಗ ಕೆಲವರು ಬಂದು ನನ್ನನ್ನು ಕೊಲೆ ಮಾಡಲು ಪ್ರಯತ್ನಿಸಿದರು. ತಪ್ಪಿಸಿಕೊಂಡು ಬಂದೆ. ರಸ್ತೆಯ ಬದಿಯಲ್ಲಿ ನಿಂತಿದ್ದ ಕಾರಿನಲ್ಲಿ ರವಿ ಹಾಗೂ ರಘು ಇದ್ದರು. ಅವರೇ ಕೊಲೆಗೆ ಸೂಪಾರಿ ನೀಡಿದ್ದಾರೆ' ಎಂದು ಗಜೇಂದ್ರ ದೂರು ನೀಡಿದ್ದರು.

ಮಲಮಗಳ ಮೇಲೆ ಅತ್ಯಾಚಾರ: ಶಿಕ್ಷೆ ಕಡಿತಗೊಳಿಸಿದ ಹೈಕೋರ್ಟ್

ಬೆಂಗಳೂರು: 'ಸಂವಿಧಾನದ 20ನೇ ಕಲಂ ಪ್ರಕಾರ ಕಾನೂನಿನಲ್ಲಿ ನಿಗದಿಪಡಿಸಿದ್ದಕ್ಕಿಂತ ಹೆಚ್ಚಿನ ಶಿಕ್ಷೆ ವಿಧಿಸಲು ಅವಕಾಶವಿಲ್ಲ' ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಮಲಮಗಳ ಮೇಲೆ ಅತ್ಯಾಚಾರ ಎಸಗಿದ್ದ ತಂದೆಗೆ ವಿಚಾರಣಾ ನ್ಯಾಯಾಲಯ ನೀಡಿದ್ದ 20 ವರ್ಷಗಳ ಜೈಲು ಶಿಕ್ಷೆಯನ್ನು10 ವರ್ಷಕ್ಕೆ ಇಳಿಸಿದೆ.

ಈ ಸಂಬಂಧ ನಗರದ ಅಬ್ದುಲ್ ಖಾದರ್ ಅಲಿಯಾಸ್ ರಫೀಕ್ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದ್ದು, ಈ ಕುರಿತಂತೆ ಆದೇಶಿಸಿದೆ.

'ಘಟನೆ ನಡೆದಿರುವುದು 2015ರಲ್ಲಿ. ಆಗ ಚಾಲ್ತಿಯಲ್ಲಿದ್ದ ಐಪಿಸಿ ಕಲಂ 376(2) ಪ್ರಕಾರ ಶಿಕ್ಷೆ ವಿಧಿಸಬೇಕು. ಆದರೆ, ವಿಚಾರಣಾ ನ್ಯಾಯಾಲಯ 2018ರ ಏಪ್ರಿಲ್‌ನಿಂದ ಜಾರಿಯಲ್ಲಿರುವ ಐಪಿಸಿ ಕಲಂ 376(3) ಪ್ರಕಾರ 20 ವರ್ಷ ಶಿಕ್ಷೆ ನೀಡಿರುವುದು ಸರಿಯಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪುನೀತ್ ಕೆರೆಹಳ್ಳಿ ಅರ್ಜಿ: ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೂಂಡಾ ಕಾಯ್ದೆಯಡಿ ಸಿಸಿಬಿ ಪೊಲೀಸರು ನನ್ನನ್ನು ಬಂಧಿಸಿರುವುದು ಅಕ್ರಮ' ಎಂದು ಆರೋಪಿಸಿ 'ರಾಷ್ಟ್ರ ರಕ್ಷಣಾ ಪಡೆ'ಯ ಪುನೀತ್ ಕೆರೆಹಳ್ಳಿ ಸಲ್ಲಿಸಿರುವ ಹೇಬಿಯಸ್ ಕಾರ್ಪಸ್ ಅರ್ಜಿಗೆ ಸಂಬಂಧಿಸಿದಂತೆ ನಗರ ಪೊಲೀಸ್ ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಪುನೀತ್ ಕುಮಾರ್ ಅಲಿಯಾಸ್ ಪುನೀತ್ ಕೆರೆಹಳ್ಳಿ ಸಲ್ಲಿಸಿರುವ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಪುನೀತ್ ಕೆರೆಹಳ್ಳಿ ಪರ ವಾದ ಮಂಡಿಸಿದ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ಅರ್ಜಿದಾರರು ಸಮಾಜ ಸೇವೆಯಲ್ಲಿ ತೊಡಗಿದ್ದು, ರಾಷ್ಟ್ರ ರಕ್ಷಣಾ ಪಡೆ ಹೆಸರಿನ ಸಂಘಟನೆಯನ್ನು ಕಟ್ಟಿದ್ದಾರೆ. ದೇಶಕ್ಕಾಗಿ ಹೋರಾಡುವ ಸಮಾನ ಮನಸ್ಕರನ್ನು ಒಗ್ಗೂಡಿಸುವ ಕೆಲಸ ಮಾಡುತ್ತಿದ್ದಾರೆ. ಆದರೆ, ಅವರ ವಿರುದ್ಧ ದುರುದ್ದೇಶ ಪೂರ್ವಕವಾಗಿ ಹಲವು ಕ್ರಿಮಿನಲ್ ಪ್ರಕರಣಗಳನ್ನು ಹೂಡಲಾಗಿದೆ. ರಾಜಕೀಯ ದ್ವೇಷದ ಕಾರಣಕ್ಕೆ ಅವರನ್ನು ಆಗಸ್ಟ್ 11ರಂದು ಅಕ್ರಮವಾಗಿ ಬಂಧಿಸಲಾಗಿದೆ' ಎಂದು ಹೇಳಿದರು.

ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೇರಿದಂತೆ ಒಟ್ಟು ಆರು ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಆರೋಪವೇನು?: ರಾಷ್ಟ್ರ ರಕ್ಷಣಾ ಪಡೆ ಹೆಸರಿನ ಎಂಬ ಅನಧಿಕೃತ ಸಂಘಟನೆ ಮೂಲಕ ಗೋ ರಕ್ಷಣೆ ಹೆಸರಿನಲ್ಲಿ ವ್ಯಾಪಾರಿಗಳನ್ನು ಬೆದರಿಸಿ ಸಮಾಜದ ಶಾಂತಿ ಕದಡುವ ಕಾರ್ಯದಲ್ಲಿ ಪುನೀತ್ ತೊಡಗಿಸಿಕೊಂಡಿದ್ದಾರೆ' ಎಂದು ಆರೋಪಿಸಲಾಗಿದೆ.

ಪುನೀತ್ ವಿರುದ್ಧ ರಾಜ್ಯದ ವಿವಿಧೆಡೆಯ ಒಂಬತ್ತು ಪೊಲೀಸ್ ಠಾಣೆಗಳಲ್ಲಿ ಕೊಲೆ, ಹಲ್ಲೆ, ಜೀವ ಬೆದರಿಕೆ, ಕರ್ತವ್ಯನಿರತ ಪೊಲೀಸರ ಮೇಲೆ ಹಲ್ಲೆ, ಜಾತಿ ನಿಂದನೆ, ದೊಂಬಿ ಸೇರಿದಂತೆ 10 ಪ್ರಕರಣಗಳನ್ನು ದಾಖಲಾಗಿದೆ.

ಸುದ್ದಿ 2 ನಿಮಿಷ

ಸಾರಿಗೆ ನಿಗಮದ ಕ್ರಮ ಎತ್ತಿಹಿಡಿದ ಹೈಕೋರ್ಟ್

ಬೆಂಗಳೂರು: 'ರಾಜ್ಯ ರಸ್ತೆ ಸಾರಿಗೆ ನಿಗಮಗಳು ನಿವೃತ್ತ ಸಿವಿಲ್, ಜಿಲ್ಲಾ ನ್ಯಾಯಾಧೀಶರು ಅಥವಾ ಮಾಜಿ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳನ್ನು ವಿಚಾರಣಾ ಅಧಿಕಾರಿಗಳನ್ನಾಗಿ ನೇಮಕ ಮಾಡಿಕೊಳ್ಳಬಹುದು' ಎಂದು ಹೈಕೋರ್ಟ್ ಆದೇಶಿಸಿದೆ.

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮದ (ಎನ್‌ಇಕೆಆರ್‌ಟಿಸಿ) ಸಿಬ್ಬಂದಿ, ಶಿಸ್ತು (ಡಿಸಿಪ್ಲಿನರಿ) ಕ್ರಮದ ವಿಚಾರಣೆಗೆ ನಿವೃತ್ತ ಸಿವಿಲ್ ಮತ್ತು ಜಿಲ್ಲಾ ನ್ಯಾಯಾಧೀಶರನ್ನು ಹಾಗೂ ಮಾಜಿ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳ ನೇಮಕ ಮಾಡಿದ್ದನ್ನು ಮತ್ತು ತದನಂತರ ಅವರು ಕೈಗೊಂಡ ಕ್ರಮವನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ; ಈ ನಿಟ್ಟಿನಲ್ಲಿ ಎನ್‌ಇಕೆಆರ್‌ಟಿಸಿ ಕೈಗೊಂಡಿದ್ದ ಕ್ರಮವನ್ನು ಎತ್ತಿಹಿಡಿದಿದೆ.

'ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಸಿಬ್ಬಂದಿ (ನಡವಳಿಕೆ ಮತ್ತು ಶಿಸ್ತು) ನಿಯಮಾವಳಿ 1971ರ ನಿಯಮ 23(2)ರಲ್ಲಿ ಪ್ರಾಧಿಕಾರ (ಅಥಾರಿಟಿ) ಎನ್ನುವ ಪದವನ್ನು ಬಳಕೆ ಮಾಡಲಾಗಿದೆ. ಆದರೆ ಇದೇ ಕಾರಣಕ್ಕೆ ಆರ್‌ಟಿಸಿಯ ಅಧಿಕಾರಿಯನ್ನು ಬಿಟ್ಟು ಬೇರೆಯವರನ್ನು ನೇಮಕ ಮಾಡಬಾರದೆಂದೇನೂ ಇಲ್ಲ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ಬಿಬಿಎಂಪಿ ಸಂಘ ಚುನಾವಣೆ ಕಣಕ್ಕೆ ಆರೋಗ್ಯಾಧಿಕಾರಿ

ಬೆಂಗಳೂರು: ಬಿಬಿಎಂಪಿ ಅಧಿಕಾರಿ ಹಾಗೂ ನೌಕರರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕಾರಿ ಸಮಿತಿ ಚುನಾವಣೆಗೆ ಪ್ರಥಮ ಬಾರಿಗೆ ಆರೋಗ್ಯಾಧಿಕಾರಿ ಅವರು ಕಣಕ್ಕಿಳಿದಿದ್ದಾರೆ.

'ಆರೋಗ್ಯ ವೈದ್ಯಾಧಿಕಾರಿ ಡಾ. ಶೋಭಾ ಅವರು ಬುಧವಾರ ನಾಮಪತ್ರ ಸಲ್ಲಿಸಿದರು. ಈವರೆಗೆ ಇಂತಹ ಹುದ್ದೆಯ ಯಾವ ಅಧಿಕಾರಿಯೂ ಸಂಘದ ಚುನಾವಣೆಗೆ ಸ್ಪರ್ಧಿಸಿರಲಿಲ್ಲ. ಈ ಬಾರಿ ಶೋಭಾ ನಾಮಪತ್ರ ಸಲ್ಲಿಸಿದ್ದು, ಸಿಬ್ಬಂದಿಗೆ ಹೆಚ್ಚಿನ ಬಲ ಬಂದಂತಾಗಿದೆ' ಎಂದು ಅವರ ಬೆಂಬಲಿಗರು ತಿಳಿಸಿದರು.

ನಾಲ್ವರು ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು ನಾಮಪತ್ರ ಸಲ್ಲಿಸಿದ್ದು ಕೂಡ ಇದೇ ಪ್ರಥಮವಾಗಿದ್ದು, ಈ ಹಿಂದೆ ಒಬ್ಬರು ಮಾತ್ರ ಕಣದಲ್ಲಿದ್ದರು.

ಮೂರು ದಿನದಲ್ಲಿ 33 ಮಂದಿ ನಾಮಪತ್ರ ಸಲ್ಲಿಸಿದ್ದಾರೆ. ಆಗಸ್ಟ್ 24ರ ಗುರುವಾರ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದೆ. ಸಂಘದ ಚುನಾವಣೆ ಸೆ.3ರಂದು ನಡೆಯಲಿದೆ.

ಪ್ರಜಾವಾಣಿ @75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

'ಸಮಾಜದ ಆರೋಗ್ಯ ವೃದ್ಧಿಸಿದ ನಿಮ್ಹಾನ್ಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಾಜದ ಆರೋಗ್ಯ ವೃದ್ಧಿಗೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಮಹತ್ವದ ಕೊಡುಗೆ ನೀಡುತ್ತಿದ್ದು, ಈ ಸಂಸ್ಥೆ ರಾಜ್ಯದಲ್ಲಿರುವುದು ಹೆಮ್ಮೆಯ ಸಂಗತಿ' ಎಂದು ಮೈಸೂರು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಸ್ಥೆಯು ನಗರದಲ್ಲಿ ಬುಧವಾರ ಹಮ್ಮಿಕೊಂಡ 'ಪ್ಲಾಟಿನಮ್ ಜುಬಲಿ ಇಯರ್' ವಿಶೇಷ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, 'ಹಲವರ ಪರಿಶ್ರಮದಿಂದ ಸಂಸ್ಥೆ ಹೆಮ್ಮರವಾಗಿ ಬೆಳೆದಿದೆ. ದೂರದೃಷ್ಟಿ, ಜ್ಞಾನ ಹಾಗೂ ಬದ್ಧತೆ ನಮ್ಮ ಸಂಸ್ಥೆಯ ಮಂತ್ರವಾಗಿವೆ. 7 ದಶಕದಲ್ಲಿ ಹಲವು ಮೈಲಿಗಲ್ಲುಗಳನ್ನು ಸ್ಥಾಪಿಸಲಾಗಿದೆ. 1974ರಲ್ಲಿ ಮೈಸೂರು ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಮಾನಸಿಕ ಆಸ್ಪತ್ರೆಯನ್ನು, ಕೇಂದ್ರ ಸರ್ಕಾರದಿಂದ ಸ್ಥಾಪಿತವಾದ ಅಖಿಲ ಭಾರತ ಮಾನಸಿಕ ಆರೋಗ್ಯ ಸಂಸ್ಥೆಯಲ್ಲಿ ವಿಲೀನಗೊಳಿಸಿ, ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯನ್ನಾಗಿ ರಚಿಸಲಾಯಿತು. ಇದನ್ನು ಸ್ವಾಯತ್ತ ವಿಶ್ವವಿದ್ಯಾಲಯವಾಗಿಯೂ ಘೋಷಿಸಲಾಯಿತು' ಎಂದರು.

ಸಂಸ್ಥೆಯ ಮಾಜಿ ನಿರ್ದೇಶಕ ಡಾ.ಜಿ.ಎನ್. ನಾರಾಯಣ ರೆಡ್ಡಿ ಅವರು ಸಂಸ್ಥೆಯ ಇತಿಹಾಸ ಹಾಗೂ ಹಿಂದಿನ ನಿರ್ದೇಶಕರ ಕೊಡುಗೆಗಳನ್ನು ವಿವರಿಸಿದರು.



ಕಾರ್ಯಕ್ರಮದಲ್ಲಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ ಡಾ. ಪ್ರತಿಮಾ ಮೂರ್ತಿ ಅವರು ನಿಮ್ಹಾನ್ಸ್ ಸಂಸ್ಥೆ ಸಾಗಿ ಬಂದ ಹಾದಿಯನ್ನು ವಿವರಿಸಿದರು. ಡಾ.ಜಿ.ಎನ್ ನಾರಾಯಣ್ ರೆಡ್ಡಿ ಇದ್ದಾರೆ – ಪ್ರಜಾವಾಣಿ ಚಿತ್ರ

ವಿಮಾ ವ್ಯಾಪ್ತಿಗೆ ವಕೀಲರ ಪೋಷಕರು: ಪಿಐಎಲ್ ಹಿಂಪಡೆಯಲು ಅನುಮತಿ

ಬೆಂಗಳೂರು: 'ಕೇಂದ್ರ ಸರ್ಕಾರ ರಚಿಸಲು ಉದ್ದೇಶಿಸಿರುವ ವಿಮಾ ಯೋಜನೆ ವ್ಯಾಪ್ತಿಗೆ ವೃತ್ತಿನಿರತ ವಕೀಲರ ಪೋಷಕರನ್ನೂ ಒಳಪಡಿಸಲು ನಿರ್ದೇಶಿಸಬೇಕು' ಎಂದು ಕೋರಲಾದ ಅರ್ಜಿಯನ್ನು ಅರ್ಜಿದಾರರು ಹಿಂಪಡೆದಿದ್ದಾರೆ.

'ಈ ಸಂಬಂಧ ಭಾರತೀಯ ವಕೀಲರ ಪರಿಷತ್ತು (ಬಿಸಿಐ) ಮತ್ತು ಕರ್ನಾಟಕ ವಕೀಲರ ಪರಿಷತ್ತಿಗೆ (ಕೆಬಿಸಿ) ನಿರ್ದೇಶನ ನೀಡಬೇಕು' ಎಂದು ಕೋರಿ ವಕೀಲ ಎಲ್. ರಮೇಶ್ ನಾಯಕ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

'ಅರ್ಜಿದಾರರು ಸೂಕ್ತವಾದ ರೀತಿಯಲ್ಲಿ ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿಲ್ಲ. ಹಾಗಾಗಿ, ಸಮರ್ಪಕ ಹಾಗೂ ಸಮಗ್ರವಾದ ಅರ್ಜಿ ಸಲ್ಲಿಸಿ' ಎಂದು ಅರ್ಜಿದಾರರಿಗೆ ನಿರ್ದೇಶಿಸಿತು. ಇದಕ್ಕೆ, ಅರ್ಜಿಯನ್ನು ಹಿಂಪಡೆಯಲು ಅರ್ಜಿದಾರರು ಅನುಮತಿ ನೀಡುವಂತೆ ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಅರ್ಜಿ ಹಿಂಪಡೆಯಲು ಅನುಮತಿ ನೀಡಿತು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರವರ ಕಛೇರಿ, ಅನೆಕ್ಸ್ ಕಟ್ಟಡ-1, ಬಿಬಿಎಂಪಿ ಕೇಂದ್ರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು – 560002.

ಸಂಖ್ಯೆ: ಬೃಬೆಂಮಪಾ/ಮುಖ್ಯಆಯುಕ್ತರು/ಪಿಎಸ್ಆರ್(ಜಿ)/1259/2023-24 **ನಮೂನೆ-1** ದಿನಾಂಕ: 21-08-2023

ಅಧಿಸೂಚನೆ {ಸೆಕ್ಷನ್ 14ಬಿ (4) (i) ಅನುಸಾರ}

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯ್ದೆ 1961 ರ ಸೆಕ್ಷನ್ 14-ಬಿ (4) ರನ್ವಯ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ ಸ್ಥಳೀಯ ಪ್ರಾಧಿಕಾರದಿಂದ 24.00 ಮೀಟರ್‌ಗಳ ಅಗಲಕ್ಕೆ ಅನುಮೋದಿತ ಮಹಾಯೋಜನೆಯ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಹೊರಮಾವುಯಿಂದ ಕಲ್ಕೆರೆ ರಸ್ತೆ – ಹೊವರ್ತುಲ ರಸ್ತೆ (ಬಾಣಸವಾಡಿ ಸೇತುವೆ) ಯಿಂದ ಡಾ॥ ರಾಜ್‌ಕುಮಾರ್ ವೃತ್ತದವರೆಗೆ (ಫೇಸ್-1) ಅಗಲೀಕರಣಕ್ಕಾಗಿ ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ. ಸಾರ್ವಜನಿಕ ಉದ್ದೇಶಕ್ಕಾಗಿ ಅಗತ್ಯವಿರುವ ಜಮೀನಿನ ಮಾಲೀಕರು ಮತ್ತು ಆಸಕ್ತ ವ್ಯಕ್ತಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಗೆ ತಿಳಿಸಿರುವ ವಿಳಾಸದಲ್ಲಿ ಸೂಚಿಸಲಾದಂತೆ ಈ ಪ್ರಕಟಣೆ ಪ್ರಕಟವಾಗುವ ದಿನಾಂಕದಿಂದ ಮೂವತ್ತು ದಿನಗಳೊಳಗೆ ಸಂಬಂಧಪಟ್ಟ ದಸ್ತಾವೇಜುಗಳೊಂದಿಗೆ ಎಂದರೆ (i) ಮಾರಾಟ / ಭಾಗ / ಸ್ವಾಮ್ಯದ ಇತರೆ ಪತ್ರಗಳು (ii) ತಹಲ್ ದಿನಾಂಕದವರೆಗಿನ ಆರ್‌ಟಿಸಿಗಳು (iii) ಮ್ಯುಟೇಷನ್ ಪ್ರತಿ (iv) ತೆರಿಗೆ ಪಾವತಿ ರಶೀದಿಗಳು (v) ಕೃಷಿಯೇತರ ಉದ್ದೇಶಕ್ಕೆ ಪರಿವರ್ತನೆ ಆದೇಶ (vi) ಕಂದಾಯ ನಕ್ಷೆ (vii) ಆಕಾರ ಬಂದ್ ಇತ್ಯಾದಿಯ ಪ್ರತಿಗಳೊಂದಿಗೆ ಖುದ್ದಾಗಿ ಹಾಜರಾಗಿ ಅವರ ಕ್ಲೇಮುಗಳನ್ನು ಸಲ್ಲಿಸಬಹುದು ಮತ್ತು ಅಂತಹ ಜಮೀನಿನಲ್ಲಿ ತಮ್ಮ ಸಂಬಂಧಪಟ್ಟ ಹಿತಾಸಕ್ತಿ ಹೇಳಿಕೆ ಸಲ್ಲಿಸಬಹುದು.

ಜಮೀನಿನ ಮಾಲೀಕರು ಆಸಕ್ತ ವ್ಯಕಿಗಳು ಹಾಜರಾಗಿ ತಮ್ಮ ಕ್ಲೇಮುಗಳನ್ನು ಸಲ್ಲಿಸಬೇಕಾದ ಸ್ಥಳ	ವಿಭಾಗೀಯ / ಉಪ ವಿಭಾಗೀಯ / ಶಾಖಾ ಕಛೇರಿಗಳ ಹೆಸರು ಮತ್ತು ವಿಳಾಸ	ದಿನಾಂಕ ಮತ್ತು ಸಮಯ
ಉಪ ಆಯುಕ್ತರು (ಭೂಸ್ವಾಧೀನ ಮತ್ತು ಟಿಡಿಆರ್) ಕೊಠಡಿ ಸಂಖ್ಯೆ: 208, 2ನೇ ಮಹಡಿ, ಅನೆಕ್ಸ್ ಕಟ್ಟಡ-3, ಎನ್.ಆರ್. ಚೌಕ, ಬೆಂಗಳೂರು – 560002	ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ಕೆ.ಆರ್. ಪುರಂ ವಿಭಾಗ, ಬಿಬಿಎಂಪಿ	ಅಧಿಸೂಚನೆ ದಿನಾಂಕದಿಂದ 30 ದಿನಗಳು ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 5.00 ಗಂಟೆ

ಯಾರ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದೆಯೊ ಅಂತಹ ಜಮೀನಿನ ಮಾಲೀಕರು / ಷೆಡ್ಯೂಲ್ ಸ್ವತ್ತುಗಳಲ್ಲಿ ಆಸಕ್ತಿ ಹೊಂದಿರುವ ವ್ಯಕ್ತಿಗಳು ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರಿಗೆ ಅಭಿವೃದ್ಧಿ ಹಕ್ಕುಗಳ ಮಂಜೂರು ಒಪ್ಪಿಗೆ ನೀಡತಕ್ಕದ್ದು.

ಜಮೀನಿನ ಮಾಲೀಕರಿಗೆ ವಿತ್ತೀಯ ಪರಿಹಾರದ ಬದಲಾಗಿ ವಶಕ್ಕೊಪ್ಪಿಸಿದ ಜಮೀನು ಪ್ರದೇಶದ ಎರಡರಷ್ಟು ಪ್ರದೇಶವನ್ನು ಡಿಆರ್ ಆಗಿ (ಕಾಲ್ಪನಿಕ ಜಮೀನು) ಮತ್ತು ಕಟ್ಟಡ ನಿರ್ಮಿಸಲಾಗುತ್ತಿರುವ ಜಮೀನಿನ ಮಾರುಕಟ್ಟೆ ಮೌಲ್ಯದಿಂದ ವಿಭಜಿಸಲಾದಂತೆ ವಶಕ್ಕೊಪ್ಪಿಸಿದ ಕಟ್ಟಡ ಪ್ರದೇಶ ಮೌಲ್ಯದಿಂದ ಅಂದಾಜಿಸಿದಂತೆ ವಶಕ್ಕೊಪ್ಪಿಸಿದ ಕಟ್ಟಡ ಪ್ರದೇಶದ ಎರಡರಷ್ಟು ಪಡೆಯುವರು – ಕಾಲ್ಪನಿಕ ಜಮೀನನ್ನು ಮೂಲ ಪ್ಲಾಟು ಮತ್ತು ಸ್ವೀಕರಿಸಲಾಗುವ ಪ್ಲಾಟಿನಲ್ಲಿ ಮಾರುಕಟ್ಟೆ ಮೌಲ್ಯದೊಂದಿಗೆ ಅಪವರ್ತನ ಮಾಡುವ ಮೂಲಕ ಉಪಯೋಗಿಸಬಹುದಾಗಿದೆ – ಕಾಲ್ಪನಿಕ ಜಮೀನು 2016 ರ ಅಭಿವೃದ್ಧಿ ಹಕ್ಕುಗಳ ಪ್ರಯೋಜನದಲ್ಲಿ ನಿಗದಿಪಡಿಸಿದ ನಿಯಮ ಮತ್ತು ಷರತ್ತುಗಳ ಅನುಸಾರ ಎಫ್ಎಆರ್ ಗೆ ಅರ್ಹದಾಗಿರುತ್ತದೆ ಮತ್ತು ಹೆಚ್ಚುವರಿ ನಿರ್ಮಿತ ಪ್ರದೇಶವಾಗಿ ಉಪಯೋಗಿಸಬಹುದಾಗಿದೆ.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಾಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿ, ಉಪ ಆಯುಕ್ತರ ಕಛೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಷೆಡ್ಯೂಲ್

24.00 ಮೀಟರ್‌ಗಳ ಅಗಲಕ್ಕೆ ಅನುಮೋದಿತ ಮಹಾಯೋಜನೆಯ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಹೊರಮಾವುಯಿಂದ ಕಲ್ಕೆರೆ ರಸ್ತೆ – ಹೊವರ್ತುಲ ರಸ್ತೆ (ಬಾಣಸವಾಡಿ ಸೇತುವೆ) ಯಿಂದ ಡಾ॥ ರಾಜ್‌ಕುಮಾರ್ ವೃತ್ತದವರೆಗೆ (ಫೇಸ್-1) ಅಗಲೀಕರಣಕ್ಕಾಗಿಅಗತ್ಯವಾದ ಜಮೀನಿನ ಸ್ವಾಧೀನ

Sl. No.	Sy.No/ Khatha No.	Type of Land		Nature of Land			Dimension of the Land/ Plot & Extent in Sq.m		Boundaries of the Land / Plot				Building Details			Present Activity on Land/ Building (Specify Specific activity such as Shop, Office, Factory, Apartment, Individual House etc.,	Market (guidelines) value of the land Per Sq.m (in Rs.)			Name and address of the owner of the Plot / Land for which DRC is to be issued / already issued.
		Vacant	Built up	Agriculture	Converted undeveloped	Approved Layout / Developed Land Building Site	Dimension	Extent	North	South	East	West	Extent in Sq.m	Type of Construction & No. of Floors	Floor Area Ratio		Agriculture / B-Khatha	Converted Undeveloped	A Khatha, Developed Site	
ಜಿಲ್ಲೆಯ ಹೆಸರು : ಬೆಂಗಳೂರು ನಗರ		ತಾಲ್ಲೂಕಿನ ಹೆಸರು : ಬೆಂಗಳೂರು ಪೂರ್ವ							ಗ್ರಾಮದ ಹೆಸರು : ಹೊರಮಾವು ಗ್ರಾಮ											
1	Sy. No. 75	-		-				1516.84 Sqm	Remaining portion of Sy. No: 75	Remaining portion of Sy. No: 75	Sy. No: 77 & 74/2	Sy. No: 28/1	-	-	-	-	10823/-	18940/-	40000/-	Commissioner, BBMP Vide: LF/DRC No. 98/002944 LF/DRC No. 98/002945 LF/DRC No. 98/002946
2	Sy. No. 74/2	-		-				578.54 Sqm	Sy. No: 77	Remaining portion of Sy. No: 74/2	Sy.No: 74/1 & 74/3	Sy. No: 75	-	-	-	-	10823/-	18940/-	40000/-	Commissioner, BBMP Vide: LF/DRC No. 15/00722 LF/DRC No. 15/00723
3	Sy. No. 77	-		-				1588.33 Sqm	Remaining portion of Sy. No: 77	Sy.No:74/2 & Remaining portion of Sy. No: 77	Sy. No: 78	Sy. No: 75	-	-	-	-	10823/-	18940/-	40000/-	Commissioner, BBMP Vide: LF/DRC No. 87/002651 LF/DRC No. 79/002468 LF/DRC No. 97/002908 LF/DRC No. 97/002909
4	Sy. No. 74/1	-		-				685.59 Sqm	Sy. No: 78	Remaining portion of Sy. No: 74/1	Sy. No: 79/1	Sy. No: 77	-	-	-	-	10823/-	18940/-	40000/-	Commissioner, BBMP Vide: LF/DRC No. 97/002901 LF/DRC No. 97/002903
5	Sy. No. 49/1	-		-				1623.49 Sqm	Remaining portion of Sy. No: 79/1	Remaining portion of Sy. No: 79/1	Sy. No: 80	Sy. No: 78 & 74/1	-	-	-	-	10823/-	18940/-	40000/-	Commissioner, BBMP Vide: BDA/TDR/DRC/022/ 18-19
6	Sy. No. 78/1	-		-				851.84 Sqm	Remaining portion of Sy. No: 78	Remaining portion of Sy. No: 74/1	Sy. No: 79/1	Sy. No: 77	-	-	-	-	10823/-	18940/-	40000/-	I F A S D A Sunshine Home and School
7	Sy. No. 80/1.2	-		-				534.66 Sqm	Sy. No: 507	Remaining portion of Sy. No: 80	Sy. No: 506	Sy. No: 79/1	-	-	-	-	10823/-	18940/-	40000/-	1. D. Muniraju 2. D. Pillappa 3. B.S. Sridhar S/o. Lt. B.N. Srinivasa 4. D. Kempanna 5. Devaraju S/o. Doddamuddappa 6. M. Sonnappa S/o. Madappa
ಜಿಲ್ಲೆಯ ಹೆಸರು : ಬೆಂಗಳೂರು ನಗರ		ತಾಲ್ಲೂಕಿನ ಹೆಸರು : ಬೆಂಗಳೂರು ಪೂರ್ವ							ಗ್ರಾಮದ ಹೆಸರು : ಕಲ್ಕೆರೆ ಗ್ರಾಮ											
8	Sy. No. 507	-		-				1424.00 Sqm	Remaining portion of Sy. No: 507	Sy. No: 80 & 506	Sy. No: 509/2	Sy. No: 79/1	-	-	-	-	7264/-	12712/-	30000/-	M/s. India Financial Association of 7th Day Adventist.
9	Sy. No. 506	-		-				706.99 Sqm	Remaining portion of Sy. No: 506	Remaining portion of Sy. No: 506	Remaining portion of Sy. No: 506	Sy. No: 80	-	-	-	-	7264/-	12712/-	30000/-	Commissioner, BBMP Vide: BDA/TDR/DRC/041/ 19-20
10	Sy. No. 509/2	-		-				130.29 Sqm	Remaining portion of Sy. No: 509/2	Remaining portion of Sy. No: 509/2	Sy. No: 509/1	Sy. No: 507	-	-	-	-	7264/-	12712/-	30000/-	M. Muniraju S/o. Doddamadappa
11	Sy. No. 509/1	-		-				463.19 Sqm	Remaining portion of Sy. No: 509/1	Sy. No: 506	Sy. No: 510/1	Sy. No: 509/2	-	-	-	-	7264/-	12712/-	30000/-	1. M. Shanmugam S/o. Munishami 2. Gundappa S/o. Lt. Munihanumaiah 3. Seenappa S/o. Lt. Munihanumaiah
12	Sy. No. 510/1	-		-				400.09 Sqm	Remaining portion of Sy. No: 510/1	Remaining portion of Sy. No: 510/1	Sy. No: 510/2	Sy. No: 509/1	-	-	-	-	7264/-	12712/-	30000/-	1. Gundappa S/o. Lt. Munihanumaiah 2. Seenappa S/o. Lt. Munihanumaiah
13	Sy. No. 510/2	-		-				683.50 Sqm	Remaining portion of Sy. No: 510/2	Remaining portion of Sy. No: 510/2	Sy. No: 502	Sy. No: 510/1	-	-	-	-	7264/-	12712/-	30000/-	M. Muniraju S/o. Doddamadappa
14	Sy. No. 502/2	-		-				1446.74 Sqm	Remaining portion of Sy. No: 502/2	Remaining portion of Sy. No: 502/2	Sy. No: 501	Sy. No: 510/2	-	-	-	-	7264/-	12712/-	30000/-	Commissioner, BBMP Vide: LF/DRC No. 86/002627
15	Sy. No. 501	-		-				571.33 Sqm	Remaining portion of Sy. No: 501	Remaining portion of Sy. No: 501	Sy. No: 500	Sy. No: 502/1	-	-	-	-	7264/-	12712/-	30000/-	Commissioner, BBMP Vide: BDA/TDR/DRC/026/ 18-19
16	Sy. No. 500	-		-				557.79 Sqm	Remaining portion of Sy. No: 500	Remaining portion of Sy. No: 500	Sy. No: 498	Sy. No: 501	-	-	-	-	7264/-	12712/-	30000/-	Commissioner, BBMP Vide: BDA/TDR/DRC/023/ 18-19
17	Sy. No. 498	-		-				1120.11 Sqm	Remaining portion of Sy. No: 498	Remaining portion of Sy. No: 498	Sy. No: 497/1	Sy. No: 500	-	-	-	-	7264/-	12712/-	30000/-	Commissioner, BBMP Vide: BDA/TDR/DRC/024/ 18-19 & BBMP L.F/DRC 100/002988 L.F/DRC 111/003271
18	Sy. No. 497/2	-		-				268.47 Sqm	Remaining portion of Sy. No: 497/2	Remaining portion of Sy. No: 497/2	Sy. No: 497/3	Sy. No: 497/1	-	-	-	-	7264/-	12712/-	30000/-	Muddappa S/o. lt. Nadubeedi Kempalakkaiah
19	Sy. No. 497/3	-		-				248.77 Sqm	Remaining portion of Sy. No: 497/3	Remaining portion of Sy. No: 497/3	Sy. No: 496	Sy. No: 497/2	-	-	-	-	7264/-	12712/-	30000/-	Lakkappa S/o. Lt. Nadubeedi Kempalakkaiah
20	Sy. No. 497/1	-		-				518.69 Sqm	Remaining portion of Sy. No: 497/1	Remaining portion of Sy. No: 497/1	Sy. No: 497/2	Sy. No: 498	-	-	-	-	7264/-	12712/-	30000/-	Pillamadappa S/o. Nadubeedi Hanumaiah
21	Sy. No. 496	-		-				539.28 Sqm	Remaining portion of Sy. No: 496	Remaining portion of Sy. No: 496	Sy. No: 495	Sy. No: 497/3	-	-	-	-	7264/-	12712/-	30000/-	Anjinappa S/o. Chikka Venkatappa
22	Sy. No. 495	-		-				470.19 Sqm	Remaining portion of Sy. No: 495	Remaining portion of Sy. No: 495	Sy. No: 489	Sy. No: 496	-	-	-	-	7264/-	12712/-	30000/-	Anjinappa S/o. Chikka Venkatappa
23	Sy. No. 489	-		-				512.49 Sqm	Remaining portion of Sy. No: 489	Remaining portion of Sy. No: 489	Sy. No: 486 & 487	Sy. No: 495	-	-	-	-	7264/-	12712/-	30000/-	Commissioner, BBMP Vide: LF/DRC No.111/003271
24	Sy. No. 487	-		-				32.81 Sqm	Sy. No: 486	Remaining portion of Sy. No: 487	Sy. No: 484	Sy. No: 489	-	-	-	-	7264/-	12712/-	30000/-	K.C. Pillamadappa S/o. Lt. Chikkamadappa alias Kachchappa
25	Sy. No. 486	-		-				448.59 Sqm	Remaining portion of Sy. No: 486	Remaining portion of Sy. No: 486	Sy. No: 485	Sy. No: 489	-	-	-	-	7264/-	12712/-	30000/-	Commissioner, BBMP Vide: LF/DRC No.120/003477
26	Sy. No. 485	-		-				326.06 Sqm	Remaining portion of Sy. No: 485	Remaining portion of Sy. No: 485	Sy. No: 471	Sy. No: 486	-	-	-	-	7264/-	12712/-	30000/-	Commissioner, BBMP Vide: LF/DRC No. 97/002922 LF/DRC No. 88/002700 LF/DRC No. 97/002919
27	Sy. No. 471	-		-				1485.78 Sqm	Remaining portion of Sy. No: 471	Remaining portion of Sy. No: 471	Road	Sy. No: 485	-	-	-	-	7264/-	12712/-	30000/-	Gundu Thopu
28	Sy. No. 463	-		-				368.04 Sqm	Remaining portion of Sy.No: 463 & Sy.No: 464	Remaining portion of Sy. No: 463	Sy. No: 334 & 462	Ooni	-	-	-	-	7264/-	12712/-	30000/-	1. Aneppa S/o. Chikkaaneppa 2. Krishnappa S/o. Aneppa 3. Sakamma S/o Muddanna 4. R. Munipapanna S/o Revanna 5. M. Rajanna S/o. Muniyappa
29	Sy. No. 464	-		-				155.38 Sqm	Remaining portion of Sy. No: 464	Sy. No: 463	Sy. No: 334	Ooni	-	-	-	-	7264/-	12712/-	30000/-	1. K. Ramaprasad S/o. Lt. M. Krishnappa 2. M. Ramakrishna S/o. Munihanumaiah
30	Sy. No. 462/4,7	-		-				159.40 Sqm	Remaining portion of Sy. No: 462	Remaining portion of Sy. No: 462	Sy. No: 341	Sy. No: 463	-	-	-	-	7264/-	12712/-	30000/-	Commissioner, BBMP Vide: LF/DRC No. 45/001610
31	Ooni	-		-				274.59 Sqm	Ooni	Ooni	Sy. No: 463	Sy. No: 471	-	-	-	-	7264/-	12712/-	30000/-	Government

• The Market value of Land shall be subject to land conversion and development status to be decided at Form-III stage based on production of documents from the Land Owners.

ಸಹಿ/-

ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ಹಣವಿದ್ದರೂ ಪಾವತಿಗಿಲ್ಲ ಅವಕಾಶ; ಕೇಂದ್ರ ಸರ್ಕಾರದ ಅನುದಾನದಲ್ಲೂ ಉಳಿಕೆ

ಗುತ್ತಿಗೆದಾರರಿಗೆ ₹6 ಸಾವಿರ ಕೋಟಿ ಬಾಕಿ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾಮಗಾರಿಗಳು ಮುಗಿದು, ಬಿಲ್ ಪ್ರಕ್ರಿಯೆಗಳೂ ಪೂರ್ಣಗೊಂಡು ಪಾವತಿಗೆ ಬಾಕಿ ಉಳಿರುವ ಮೊತ್ತ ₹6 ಸಾವಿರ ಕೋಟಿ ಮೀರಿದೆ.

ಗುತ್ತಿಗೆದಾರರಿಗೆ ಬಾಕಿ ಇರುವ ಈ ಬೃಹತ್ ಮೊತ್ತದಲ್ಲಿ ಅರ್ಧದಷ್ಟನ್ನು ಕೂಡಲೇ ಪಾವತಿಸುವ ಶಕ್ತಿ ಬಿಬಿಎಂಪಿಗೆ ಇದೆ. ಆದರೆ, ತನಿಖೆಗಳ ಆದೇಶ ಅದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ.

ಬಿಬಿಎಂಪಿ ಅನುದಾನದಲ್ಲಿ ಪೂರ್ಣಗೊಂಡಿರುವ ಕಾಮಗಾರಿಗಳಿಗೆ 2021ರಿಂದ ಪಾವತಿ ಬಾಕಿ ಇದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನದ ಕಾಮಗಾರಿಗಳಿಗೆ 2023ರಿಂದ ಪಾವತಿ ಮಾಡಬೇಕಿದೆ. ಇವೆಲ್ಲ ಕಾಮಗಾರಿಗಳಿಗೆ ಬಿಲ್‌ನ ಅಂತಿಮ ಹಂತವಾದ ಸಿಬಿಆರ್ (ಸೆಂಟ್ರಲ್ ಬಿಲ್ ರಿಜಿಸ್ಟ್ರರ್) ಸಂಖ್ಯೆ, ದಿನಾಂಕ ನ ಮೂ ದಾ ಗಿ ದ್ದ ರೂ ಪಾವತಿ ಬಾಕಿ ಇದೆ.

‘ಬಿಬಿಎಂಪಿಯಲ್ಲಿ ಸುಮಾರು ₹3 ಸಾವಿರ ಕೋಟಿಗೂ ಹೆಚ್ಚು ಹಣ ಇದೆ. ₹6 ಸಾವಿರ ಕೋಟಿ ಬಾಕಿಯಲ್ಲಿ ಬಹುತೇಕ ಅರ್ಧದಷ್ಟನ್ನು ಕೂಡಲೇ ಬಿಡುಗಡೆ ಮಾಡಬಹುದು. ಪಾಲಿಕೆ ನಿರ್ವಹಣೆಗೆ ಇದರಿಂದ ಯಾವುದೇ ತೊಂದರೆ ಆಗುವುದಿಲ್ಲ. ಏಕೆಂದರೆ, ಆರ್ಥಿಕ ವರ್ಷದಲ್ಲಿ ಇನ್ನೂ ಏಳು ತಿಂಗಳು ಬಾಕಿ ಉಳಿದಿರುವುದರಿಂದ ಆದಾಯ ಸಂಗ್ರಹವಾಗುತ್ತದೆ’ ಎಂದು ಬಿಬಿಎಂಪಿಯ ಅಧಿಕಾರಿಗಳು ಹೇಳುತ್ತಾರೆ.

‘ಬಿಬಿಎಂಪಿ ಮುಖ್ಯ ಆಯುಕ್ತರು ಸೇರಿದಂತೆ ಎಲ್ಲರಿಗೂ ಗುತ್ತಿಗೆದಾರರ ಸಂಕಷ್ಟದ ಅರಿವಿದೆ. ಆದರೆ, ಕೆಲವು ಕಾಮಗಾರಿಗಳು ವಾಸ್ತವದಲ್ಲಿ ಆಗಿಲ್ಲ. ಹೀಗಾಗಿ ಎಲ್ಲರ ಮೇಲೆ ಅನುಮಾನ ಬಂದಿದೆ. ಆದ್ದರಿಂದ ತನಿಖೆ ನಡೆದ ಮೇಲೆಯೇ ಎಲ್ಲರಿಗೂ ಹಣ’ ಎಂದು ಅಧಿಕಾರಿಗಳು ಅಭಿಪ್ರಾಯಪಟ್ಟರು.

‘ಕೇಂದ್ರ, ರಾಜ್ಯ ಸರ್ಕಾರಗಳು ಅನುದಾನವನ್ನು ಶೀಘ್ರ ಬಿಡುಗಡೆ ಮಾಡಬೇಕು. ಬಿಬಿಎಂಪಿಯಲ್ಲಿರುವ ಹಣವನ್ನೂ ಬಿಡುಗಡೆ ಮಾಡಿದರೆ ಗುತ್ತಿಗೆದಾರರ ಸಮಸ್ಯೆ ತೀರುತ್ತದೆ’ ಎಂದು ಬಿಜೆಪಿ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಅಧ್ಯಕ್ಷ ಎನ್.ಆರ್. ರಮೇಶ್ ಹೇಳಿದರು.

‘ಕಾಮಗಾರಿಗಳ ನೈಜತೆ ಬಗ್ಗೆ ವರದಿ ನೀಡಲು ಸರ್ಕಾರ ನಾಲ್ಕು ಎಸ್‌ಐಟಿಗಳನ್ನು ರಚನೆ ಮಾಡಿದೆ. ಇವುಗಳು ವರದಿ ನೀಡಿದ ಮೇಲೆ ಹಣ ಬಿಡುಗಡೆ ಮಾಡುವುದಾಗಿ ಹೇಳಲಾಗಿದೆ. ಆದರೆ, 2019ರಲ್ಲಿ ಮಾಡಿರುವ ಕಾಮಗಾರಿಗಳ ನೈಜತೆಯನ್ನು ಈಗ ಹೇಗೆ ಪರಿಶೀಲಿಸಲಾಗುತ್ತದೆ. ಕಾಮಗಾರಿ ಮುಗಿದ ಮೇಲೆ ಒಂದು ವರ್ಷ ಮಾತ್ರ ದೋಷ ಹೊಣೆಗಾರಿಗೆ ಅವಧಿ (ಡಿಎಲ್‌ಪಿ) ಇರುತ್ತದೆ. ನಂತರ ಗುತ್ತಿಗೆದಾರರಿಗೆ ಅದರ ಹೊಣೆ ಇರುವುದಿಲ್ಲ. ಆದರೂ ಹೇಗೆ ತಪಾಸಣೆ ಮಾಡುತ್ತಾರೆ’ ಎಂದು ಗುತ್ತಿಗೆದಾರರು ಪ್ರಶ್ನಿಸುತ್ತಿದ್ದಾರೆ.

ಕೆಆರ್‌ಐಡಿಎಲ್ ಬಿಲ್ ಬಾಕಿ: ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದಿಂದ ಕೈಗೊಳ್ಳಲಾಗಿರುವ ಕಾಮಗಾರಿಗಳ ಬಗ್ಗೆ ತಕರಾರಿದ್ದು, ಸಿಬಿಆರ್ ಆಗಿದ್ದರೂ 2018ರಿಂದ ಕೆಲವು ಬಿಲ್ ಪಾವತಿಯಾಗಿಲ್ಲ. ಇಂತಹ ಸಮಸ್ಯೆಗಳ ಬಿಲ್ ಮೊತ್ತ ₹65.56 ಕೋಟಿಯಷ್ಟಿದೆ.

ಬಾಕಿ ಬಿಲ್ ಅಂಕಿ–ಅಂಶ

₹6,077 ಕೋಟಿ ಒಟ್ಟು ಕಾಮಗಾರಿಗಳ ಮೊತ್ತ	8364 ಬಾಕಿ ಇರುವ ಒಟ್ಟು ಬಿಲ್‌ಗಳು
₹3,256 ಕೋಟಿ ಬಿಬಿಎಂಪಿ ಅನುದಾನದ ಕಾಮಗಾರಿಗಳು	7068 ಬಾಕಿ ಇರುವ ಒಟ್ಟು ಬಿಲ್‌ಗಳು. 228– 2021ರ ಹಿಂದಿನದು
₹2,753 ಕೋಟಿ ರಾಜ್ಯ ಸರ್ಕಾರ ಅನುದಾನದ ಕಾಮಗಾರಿಗಳು	1114 ಬಾಕಿ ಇರುವ ಒಟ್ಟು ಬಿಲ್‌ಗಳು. 98– 2023ರ ಹಿಂದಿನದು
₹67.48 ಕೋಟಿ ಕೇಂದ್ರ ಸರ್ಕಾರ ಅನುದಾನದ ಕಾಮಗಾರಿಗಳು	182 ಬಾಕಿ ಇರುವ ಒಟ್ಟು ಬಿಲ್‌ಗಳು. 100– 2023ರ ಹಿಂದಿನದು

ಪ್ರಜಾವಾಣಿ ವಿಶೇಷ

ಕೆಲಸ ಮಾಡಿರುವವರಿಗೆ ಹಣ ಪಾವತಿಸಿ: ಮಂಜುನಾಥ ಮನವಿ

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾಮಗಾರಿಯ ನೈಜತೆಯನ್ನು ಪ್ರಶ್ನಿಸಿ, ತನಿಖೆ ಮಾಡಲಾಗುತ್ತಿದೆ. ಕಾಮಗಾರಿ ಮಾಡದವರಿಗೆ ಹಣ ನೀಡಿ ಎಂದು ನಾವು ಕೇಳುತ್ತಿಲ್ಲ. ಕಾಮಗಾರಿಯನ್ನು ಮುಗಿಸಿದವರಿಗೆ ಬಿಲ್ ಪಾವತಿಸಿ. ಮುಖ್ಯ ಎಂಜಿನಿಯರ್ ನೇತೃತ್ವದಲ್ಲಿಯೇ ಪರಿಶೀಲನೆ ಮಾಡಿ ವರದಿ ನೀಡಲಾಗಿದೆ. ಅದರಂತೆ ಹಣ ಪಾವತಿಸಬೇಕು. ಗುತ್ತಿಗೆದಾರರು ತೀರಾ ಸಂಕಷ್ಟದಲ್ಲಿದ್ದಾರೆ. ಪ್ರತಿ ನಿತ್ಯ ಅವರ ಹೊರೆ ಹೆಚ್ಚಾಗುತ್ತಿದೆ. ಸಾಲದ ಬಡ್ಡಿ, ಬಡ್ಡಿ ಮೇಲಿನ ಬಡ್ಡಿ ದಿನದಿನಕ್ಕೆ ಅಧಿಕವಾಗುತ್ತಿದೆ. ಶೀಘ್ರ ಹಣ ಪಾವತಿಸಿ’ ಎಂದು ಬಿಬಿಎಂಪಿ ಕಾರ್ಯನಿರತ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್ ಮನವಿ ಮಾಡಿದರು.

‘ಮತ್ತೆ ಮನವಿ’

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಮುಗಿದಿರುವ ಕಾಮಗಾರಿಗಳಿಗೆ ಹಣ ಪಾವತಿ ಮಾಡಲು ಸಾಕಷ್ಟು ಮನವಿ ಮಾಡಿಕೊಳ್ಳಲಾಗುತ್ತಿದೆ. ಸಾಲ ಮಾಡಿ, ಕಷ್ಟಪಟ್ಟು ಕಾಮಗಾರಿಗಳನ್ನು ಮುಗಿಸಿದ್ದೇವೆ. ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಗುತ್ತಿಗೆದಾರರಿಗೆ ಸಾಧ್ಯವಾಗುತ್ತಿಲ್ಲ. ಹಿಂದಿನ ಸಾಲಕ್ಕೆ ಬಡ್ಡಿ ಕಟ್ಟಲೂ ಹಣ ಇಲ್ಲದಂತಾಗಿದೆ. ಅದಕ್ಕೆ ಮತ್ತೆ ಬಡ್ಡಿ ಹೆಚ್ಚಾಗುತ್ತಿದೆ. ಹೀಗಾಗಿ, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರನ್ನು ಮತ್ತೊಮ್ಮೆ ಭೇಟಿ ಮಾಡಿ ಹಣ ಪಾವತಿಸಲು ಮವಿ ಮಾಡಿಕೊಳ್ಳಲಾಗುತ್ತದೆ’ ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘದ ಕಾರ್ಯಾಧ್ಯಕ್ಷ ರವೀಂದ್ರ ತಿಳಿಸಿದರು.

ನೆರವು ಕೋರಿದವರಿಗೆ ಸಚಿವ ಜಮೀರ್ ಸಹಾಯ ಹಸ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಕಾರ್ತದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಕರಾಟೆ ಚಾಂಪಿಯನ್‌ಶಿಪ್ ಸ್ಪರ್ಧೆಗೆ ಆಯ್ಕೆಯಾದ ಬಡ ವಿದ್ಯಾರ್ಥಿಗೆ ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರು ಸ್ವಂತ ವೆಚ್ಚದಲ್ಲಿ ವಿಮಾನದ ಟಿಕೆಟ್ ಮಾಡಿಸಿ ಕೊಟ್ಟಿದ್ದಾರೆ.

ತಿಂಗಳಲ್ಲಿ ಒಂದು ದಿನ ಎಲ್ಲ ಸಚಿವರು ಕೆಪಿಸಿಸಿ ಕಚೇರಿಗೆ ಭೇಟಿ ನೀಡಬೇಕೆಂಬ ಸೂಚನೆಯಂತೆ, ವಸತಿ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಅವರು ಪಕ್ಷದ ಕಚೇರಿಗೆ ಬುಧವಾರ ಭೇಟಿ ನೀಡಿ ಸಾರ್ವಜನಿಕರು ಮತ್ತು ಪಕ್ಷದ ಕಾರ್ಯಕರ್ತರ ಅಹವಾಲು ಆಲಿಸಿದರು.

ಈ ಸಂದರ್ಭದಲ್ಲಿ, ಇಂಡೊನೇಷ್ಯಾದ ಜಕಾರ್ತದಲ್ಲಿ ಸೆ.19ರಿಂದ 24ವರೆಗೆ ನಡೆಯಲಿರುವ ಕರಾಟೆ ಸ್ಪರ್ಧೆಗೆ ಆಯ್ಕೆಯಾಗಿರುವ ಹೆಬ್ಬಾಳದ ಕ್ರೆಸೆಂಟ್ ಇಂಗ್ಲಿಷ್ ಶಾಲೆಯ ಎಂಟನೇ ತರಗತಿ ವಿದ್ಯಾರ್ಥಿ ಮೊಹಮ್ಮದ್ ತಾಹೀರ್ ಆಮೀರ್‌ನ ತಂದೆ ಸಚಿವರನ್ನು ಭೇಟಿಯಾದರು. ತಾವು ಆಟೋ-ಚಾಲಕರಾಗಿದ್ದು, ಆರ್ಥಿಕ ಸಂಕಷ್ಟದಿಂದಾಗಿ ಜಕಾರ್ತಕ್ಕೆ ತೆರಳಲು ಸಾಧ್ಯವಾಗುತ್ತಿಲ್ಲ, ನೆರವು ನೀಡಿ ಎಂದು ಕೋರಿದರು. ಪ್ರಯಾಣಕ್ಕೆ ₹ 60 ಸಾವಿರ ಮೊತ್ತದ ವಿಮಾನ ಟಿಕೆಟ್‌ನ್ನು ಸ್ಥಳದಲ್ಲೇ ಸಚಿವರು ಮಾಡಿಸಿಕೊಟ್ಟರು.

ಆರೋಗ್ಯ, ಶಿಕ್ಷಣ ನೆರವು ಕೋರಿ ಬಂದವರಿಗೂ ಸಚಿವರು ತಮ್ಮ ವೈಯಕ್ತಿಕ ವೆಚ್ಚದಲ್ಲಿ ಆರ್ಥಿಕ ನೆರವು ನೀಡಿದರು. ವಸತಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ವಕ್ಫ್ ಇಲಾಖೆಗಳಿಗೆ ಸಂಬಂಧಿಸಿದಂತೆ ಸಲ್ಲಿಕೆಯಾದ ಅರ್ಜಿಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಕಳುಹಿಸಿ ಸೂಕ್ತ ದಾಖಲೆಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಚಿವ ಜಮೀರ್ ಮಾತನಾಡಿ, ‘ತಿಂಗಳಲ್ಲಿ ಒಮ್ಮೆ ಕೆಪಿಸಿಸಿ ಕಚೇರಿಗೆ ಭೇಟಿ ನೀಡಿ ಅಹವಾಲು ಸ್ವೀಕರಿಸುವಂತೆ ಪಕ್ಷದ ಮುಖಂಡರು ಸೂಚಿಸಿದ್ದಾರೆ. ಅದರಂತೆ ಭೇಟಿ ನೀಡಿ ಸಾರ್ವಜನಿಕರಿಂದ ಮನವಿಗಳನ್ನು ಸ್ವೀಕರಿಸಿದ್ದು, ಪರಿಶೀಲಿಸಿ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದರು.

ಲಕ್ಷ್ಮೀ ಬಾರಮ್ಮಾ... ನಗರದ ಮಾಗಡಿ ಮುಖ್ಯರಸ್ತೆಯ ಜೈ ಮುನಿರಾವ್ ವೃತ್ತದ ಮಳಿಗೆಯೊಂದರಲ್ಲಿ ಬುಧವಾರ ಮಹಾಲಕ್ಷ್ಮಿ ಮೂರ್ತಿಗಳ ಖರೀದಿಯಲ್ಲಿ ತೊಡಗಿರುವ ಮಹಿಳೆಯರು -ಪ್ರಜಾವಾಣಿ ಚಿತ್ರ/ ರಂಜು ಪಿ.

ವರಮಹಾಲಕ್ಷ್ಮಿ ಹಬ್ಬದ ಖರೀದಿಗೆ ಗ್ರಾಹಕರ ದಂಡು, ಕೆ.ಆರ್. ಮಾರ್ಕೆಟ್ ಸುತ್ತಮುತ್ತ ದಟ್ಟಣೆ

ಗಗನಕ್ಕೇರಿದ ಹೂವು–ಹಣ್ಣು, ತರಕಾರಿ ದರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರಮಹಾಲಕ್ಷ್ಮಿ ಹಬ್ಬವನ್ನು ಶುಕ್ರವಾರ ಸಂಭ್ರಮ–ಸಡಗರದಿಂದ ಆಚರಿಸಲು ನಗರದ ಜನತೆ ಸಿದ್ಧವಾಗಿದ್ದು, ಬುಧವಾರ ಬೆಳಿಗ್ಗೆಯಿಂದಲೇ ಹೂವು ಮತ್ತು ಹಣ್ಣಿನ ಖರೀದಿಗೆ ಜನ ಮುಗಿಬಿದ್ದಿದ್ದರು. ಬೆಲೆ ಏರಿಕೆ ಬಿಸಿಯ ನಡುವೆಯೂ ಖರೀದಿಯ ಉತ್ಸಾಹವು ಹೆಚ್ಚಿತ್ತು.

ಕೆ.ಆರ್.ಮಾರುಕಟ್ಟೆ, ಮಲ್ಲೇಶ್ವರ, ಯಶವಂತಪುರ, ಜಯನಗರ, ಶಿವಾಜಿನಗರದ ಮಾರುಕಟ್ಟೆ ಪ್ರದೇಶಗಳಲ್ಲಿನ ರಸ್ತೆ ಇಕ್ಕೆಲಗಳಲ್ಲಿ ನಡೆದಾಡಲು ಕಷ್ಟವಾಗುವಷ್ಟು ಗ್ರಾಹಕರು ಜಮಾಯಿಸಿದ್ದರು. ಇದರಿಂದ, ಸಂಚಾರ ದಟ್ಟಣೆಯುಂಟಾಗಿ ವಾಹನ ಸವಾರರು ಪರದಾಡಬೇಕಾಯಿತು.

ವರಮಹಾಲಕ್ಷ್ಮಿ ಹಬ್ಬದಂದು ಮನೆಗಳಲ್ಲಿ ಲಕ್ಷ್ಮೀ ಮೂರ್ತಿಗಳನ್ನು ಕೂರಿಸಿ, ಪೂಜಿಸುವುದು ವಾಡಿಕೆ. ಈ ವೇಳೆ ಅಲಂಕಾರಕ್ಕಾಗಿ ತರಹೇವಾರಿ ಹೂಗಳು ಮತ್ತು ಹಣ್ಣನ್ನು ಬಳಸುತ್ತಾರೆ. ಹಾಗಾಗಿ, ಪ್ರತಿವರ್ಷದಂತೆ ಈ ಬಾರಿಯೂ ಹೂವು ಮತ್ತು ಹಣ್ಣಿನ ದರಗಳಲ್ಲಿ ಏರಿಕೆಯಾಗಿದೆ.

ಹೂಗಳ ದರ ಗಗನಮುಖಿ: ‘ರಾಜ್ಯದಲ್ಲಿ ಮಳೆ ಕೊರತೆಯಿಂದ ಮಾರುಕಟ್ಟೆಗೆ ಹೂವುಗಳ ಆವಕ ಕಡಿಮೆಯಾಗಿದ್ದು, ದರ ದುಬಾರಿಯಾಗಿದೆ. ಈ ಹಬ್ಬದಲ್ಲೇ ಹೂವಿನ ಬೆಳೆಗಾರರು ಮತ್ತು ವರ್ತಕರು ಸ್ವಲ್ಪ ಲಾಭ ಕಾಣುತ್ತಾರೆ’ ಎಂದು ಕೆ.ಆರ್.ಮಾರುಕಟ್ಟೆಯ ಹೂವಿನ ವರ್ತಕರಾದ ಗಂಗಾ ಮತ್ತು ಸುರೇಶ್ ಮಾಹಿತಿ ನೀಡಿದರು.

‘ಈ ಬಾರಿಯ ವರಮಹಾಲಕ್ಷ್ಮಿ ಹಬ್ಬದ ಸಂದರ್ಭದಲ್ಲಿ ಮಲ್ಲಿಗೆ ಕೆ.ಜಿ.ಗೆ ₹1 ಸಾವಿರ ಮತ್ತು ಕನಕಾಂಬರದ ಗರಿಷ್ಠ ದರ ಪ್ರತಿ ಕೆ.ಜಿ.ಗೆ ₹2 ಸಾವಿರ ಇದೆ. ಸೇವಂತಿಗೆ ₹ 200, ಗುಲಾಬಿ ₹ 250, ಸುಗಂಧರಾಜ ₹300ರಂತೆ ಮಾರಾಟವಾಗುತ್ತಿವೆ’ ಎಂದು ತಿಳಿಸಿದರು.

ಹಬ್ಬದಲ್ಲಿ ಲಕ್ಷ್ಮಿ ಪೂಜೆಯ ವೇಳೆ ವಿವಿಧ ಬಗೆಯ ಹಣ್ಣುಗಳನ್ನು ಜೋಡಿಸುವುದರಿಂದ ಹಣ್ಣುಗಳ ದರ ಸ್ವಲ್ಪ ಏರಿಕೆಯಾಗಿದೆ. ತರಕಾರಿಗಳಲ್ಲಿ ಕೆಲವು ತರಕಾರಿಗಳ ಬೆಲೆಯಲ್ಲಿ ಏರಿಳಿತವಾಗಿದೆ. ಉಳಿದ ತರಕಾರಿ ದರಗಳು ಸ್ಥಿರವಾಗಿವೆ. ಸೊಪ್ಪಿನ ಬೆಲೆಯೂ ಕಡಿಮೆಯಾಗಿದೆ.

‘ಬೆಂಗಳೂರು, ತುಮಕೂರು, ಕುಣಿಗಲ್, ಶಿವಮೊಗ್ಗ, ಮೈಸೂರು ಮುಂತಾದ ಕಡೆಗಳಿಂದ ನಗರದ ಮಾರುಕಟ್ಟೆಗಳಿಗೆ ಹೂವು ಪೂರೈಕೆಯಾಗುತ್ತದೆ. ಮಳೆ ಕೊರತೆ ಕಾರಣ ಹೂವುಗಳು ಆವಕ ಕಡಿಮೆಯಾಗಿದೆ. ಇದರಿಂದ ತಾಜಾ ಹೂವಿನ ಪೂರೈಕೆಗೂ ತೊಂದರೆಯಾಗಿದೆ. ಹಬ್ಬಗಳು ಆರಂಭವಾಗಿರುವುದರಿಂದ ಹೂವಿಗೆ ಬೇಡಿಕೆ ಹೆಚ್ಚು. ಈ ಕಾರಣಕ್ಕೆ ದರದಲ್ಲಿ ಭಾರಿ ಏರಿಕೆಯಾಗಿದೆ’ ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವ್ಯಾಪಾರಿಗಳು ತಿಳಿಸಿದರು.

ನಗರದ ಕೆ.ಆರ್. ಮಾರುಕಟ್ಟೆಯಲ್ಲಿ ವರಮಹಾಲಕ್ಷ್ಮಿ ಹಬ್ಬಕ್ಕಾಗಿ ಜನರು ಹಣ್ಣು–ಹೂವು, ಬಾಳೆ ಕಂದು ಮತ್ತು ಇತರ ವಸ್ತುಗಳನ್ನು ಗುರುವಾರ ಖರೀದಿಸಿದರು. ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್.ಜಿ.

ತರಕಾರಿ ದರಗಳು ಪ್ರತಿ ಕೆಜಿಗೆ (₹ಗಳಲ್ಲಿ)

ತರಕಾರಿ	ಕಳೆದ ವಾರ	ಈ ವಾರ
ಬಟಾಣಿ	120	160
ಕ್ಯಾರೆಟ್	50	40
ಕ್ಯಾಪ್ಸಿಕಮ್	40	60
ಈರುಳ್ಳಿ	25	35
ಬೀನ್ಸ್	50	60
ಟೊಮೆಟೊ	80	30
ಆಲೂಗಡ್ಡೆ	25	30
ಹಿರೇಕಾಯಿ	50	60
ಚವಳಿಕಾಯಿ	40	60
ಕಾಪ್ಸಿಕಮ್	50	60
ಕ್ಯಾರೆಟ್	60	40
ಮೆಣಸಿನಕಾಯಿ	120	100
ಬೆಳ್ಳುಳ್ಳಿ	200	160
ಬೀನ್ಸ್	80	60

ಹೂವುಗಳ ದರ ಪ್ರತಿ ಕೆಜಿಗೆ (₹ಗಳಲ್ಲಿ)

	ಕಳೆದ ವಾರ	ಈ ವಾರ
ಮಲ್ಲಿಗೆ	500	1000
ಗುಲಾಬಿ	150	250
ಸೇವಂತಿಗೆ	150	200
ಕನಕಾಂಬರ	1200	2000
ಸುಗಂಧರಾಜ	100	300

ಹಣ್ಣುಗಳ ದರ ಪ್ರತಿ ಕೆ.ಜಿಗೆ (₹ಗಳಲ್ಲಿ)

ಸೇಬು	150	220
ದಾಳಿಂಬೆ	50	100
ಏಲಕ್ಕಿ ಬಾಳೆ	80	100
ಸೀತಾಫಲ	80	120
ಸಪೋಟ	80	120

ಬಾಳೆಕಂಬ ಜೋಡಿಗೆ	50
ಮಾವಿನ ತೋರಣ	20
100 ವೀಳ್ಯದೆಲೆಗೆ	150
5 ತೆಂಗಿನಕಾಯಿಗೆ	100

ಕನ್ನಡದ ವೈಶಿಷ್ಟ್ಯ ಕಾಪಾಡುವ ನಿಘಂಟು

ಭಾಷಾ ಸಮ್ಮಾನ ಪುರಸ್ಕಾರ ಕಾರ್ಯಕ್ರಮದಲ್ಲಿ ನಾಗೇಶ ಹೆಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡದ ವೈಶಿಷ್ಟ್ಯವನ್ನು ಕಾಪಾಡುವ ಕೆಲಸ ನಿಘಂಟುಗಳ ಮೂಲಕ ಆಗುತ್ತಿದೆ’ ಎಂದು ಅಂಕಣಕಾರ ನಾಗೇಶ ಹೆಗಡೆ ಹೇಳಿದರು.

ಪಂಜು ಗಂಗೊಳ್ಳಿ ಅವರಿಗೆ ಜಿ. ವೆಂಕಟಸುಬ್ಬಯ್ಯ ಭಾಷಾ ಸಮ್ಮಾನ ಪುರಸ್ಕಾರ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಜಿ. ವೆಂಕಟಸುಬ್ಬಯ್ಯ ಅವರ ಕೆಲಸ ಗ್ಲೋಬಲ್ ಆಗಿತ್ತು. ಆಸ್ಟ್ರೇಲಿಯಾ, ಅಮೆರಿಕ ಸಹಿತ ವಿವಿಧ ದೇಶಗಳಲ್ಲಿ ವಾಸ ಇದ್ದ ಕನ್ನಡಿಗರು ಕೂಡ ಕರೆ ಮಾಡಿ ಶಬ್ದಗಳ ಬಗ್ಗೆ ಜಿ.ವಿ. ಅವರನ್ನು ವಿಚಾರಿಸುತ್ತಿದ್ದರು. ಪಂಜು ಗಂಗೊಳ್ಳಿ ಅವರ ಕಾರ್ಯವನ್ನು ಅದರ ಸ್ವರೂಪದ ಮೂಲಕ ನೋಡುವುದಾದರೆ ಸ್ಥಳೀಯವಾದುದು. ಕುಂದಾಪುರ ಕನ್ನಡದ ವೈಶಿಷ್ಟವನ್ನು ಪಂಜು ಕಟ್ಟಿಕೊಟ್ಟಿದ್ದಾರೆ ಎಂದರು.

ಸಾಹಿತಿ ಅ.ರಾ. ಮಿತ್ರ ಮಾತನಾಡಿ, ‘ಆಧುನಿಕ ಶಿಕ್ಷಣ ಮತ್ತು ಇಂಗ್ಲಿಷ್‌ನ ಅತಿ ಬಳಕೆಯಿಂದ ಕನ್ನಡದ ಆಪ್ತ ಪದಗಳ, ಆಪ್ತ ವಾಕ್ಯಗಳ ಬಳಕೆ ಕಡಿಮೆಯಾಗುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಶಸ್ತಿ ಸ್ವೀಕರಿಸಿದ ಪಂಜು ಗಂಗೊಳ್ಳಿ, ‘ಕುಂದ ಕನ್ನಡದ ನಿಘಂಟು ರಚನೆ 20 ವರ್ಷಗಳ ಸುದೀರ್ಘವಾದ ಕೆಲಸ. ಭಾಷೆ ಆಪ್ತವಾಗಿರುವುದರಿಂದ ಸುಲಲಿತವಾಗಿ ನಡೆಯಿತು. ಹಲವರು ಸಹಕಾರ ನೀಡಿದರು’ ಎಂದು ನೆನಪಿಸಿಕೊಂಡರು.

ಜಿ.ವಿ. ಅರುಣ, ಕಥೆಕೂಟದ ಗಿರೀಶ್ ರಾವ್ ಹತ್ವಾರ್ ಮಾತನಾಡಿದರು.

ನಗರದಲ್ಲಿ ಬುಧವಾರ ‘ಕಥೆಕೂಟ’ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಂಜು ಗಂಗೊಳ್ಳಿ ಅವರಿಗೆ ‘ಜಿ. ವೆಂಕಟಸುಬ್ಬಯ್ಯ ಭಾಷಾ ಸಮ್ಮಾನ ಪುರಸ್ಕಾರ–2023’ ನೀಡಿ ಗೌರವಿಸಲಾಯಿತು. ಸಾಹಿತಿ ಅ.ರಾ. ಮಿತ್ರಾ, ಜಿ. ವೆಂಕಟಸುಬ್ಬಯ್ಯ ಅವರ ಮಗ ಜಿ.ವಿ ಅರುಣ, ಕಥೆಕೂಟದ ಸಂಸ್ಥಾಪಕರಲ್ಲಿ ಒಬ್ಬರಾದ ಗಿರೀಶ್ ರಾವ್ ಹತ್ವಾರ್, ಪ್ರೊ. ಮಾರುತಿ ಎನ್.ಎನ್., ನಾಗೇಶ್ ಹೆಗಡೆ, ಸಾವಣ್ಣ ಪ್ರಕಾಶನದ ಜಮೀಲ್ ಸಾವಣ್ಣ ಇದ್ದರು ಪ್ರಜಾವಾಣಿ ಚಿತ್ರ

ಚೆಕ್ ನಗದೀಕರಣಕ್ಕೆ ಇನ್ನೂ 15 ದಿನ ಬೇಕು!

ಪ್ರಜಾವಾಣಿ ವಾರ್ತೆ

ಮಲ ಸುರಿದುಕೊಂಡ ಪ್ರಕರಣ

ಕನಕಪುರ (ರಾಮನಗರ): ಬಾಕಿ ವೇತನಕ್ಕಾಗಿ ಮೈಮೇಲೆ ಮಲ ಸುರಿದುಕೊಂಡು ಪ್ರತಿಭಟಿಸಿದ ತಾಲ್ಲೂಕಿನ ಕಲ್ಲಹಳ್ಳಿ ಗ್ರಾಮ ಪಂಚಾಯಿತಿಯ ಇಬ್ಬರು ಪೌರ ಕಾರ್ಮಿಕರು ಬ್ಯಾಂಕ್ ಚೆಕ್ ನಗದೀಕರಣಕ್ಕೆ ಇನ್ನೂ ಹದಿನೈದು ದಿನ ಕಾಯಬೇಕಿದೆ.

ಪ್ರತಿಭಟನೆ ನಡೆಸಿದ ಕಾರ್ಮಿಕರಾದ ಎನ್. ಸುರೇಶ್ ಮತ್ತು ವಿ. ರಂಗಯ್ಯ ಅವರಿಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಎ. ಶ್ರೀನಿವಾಸ್ ಅವರು ಎಸ್‌ಬಿಐ ಬ್ಯಾಂಕಿನ ₹1,10,400 ಮೊತ್ತದ ಚೆಕ್ ಮತ್ತು ತಲಾ ₹50 ಸಾವಿರ ನಗದು ಕೊಟ್ಟಿದ್ದರು. ಆದರೆ, ಆ ಚೆಕ್ ನಗದೀಕರಣ ಮಾಡಲು ಖಾತೆಯಲ್ಲಿ ಹಣವಿಲ್ಲ. ಒಂದು ವೇಳೆ, ನಗದೀಕರಣಕ್ಕೆ ಮುಂದಾದರೆ ಚೆಕ್ ಬೌನ್ಸ್ ಆಗಲಿದೆ ಎಂದು ತಿಳಿದು ಬಂದಿದೆ.

‘ಚೆಕ್ ಕೊಟ್ಟಿರುವ ಪಿಡಿಒ ಹದಿನೈದು ದಿನದ ಬಳಿಕ ನಾವು ಹೇಳಿದಾಗ ಬ್ಯಾಂಕ್‌ನಲ್ಲಿ ನಗದೀಕರಣ ಮಾಡಿಕೊಳ್ಳಿ ಎಂದಿದ್ದಾರೆ. ಅದರಂತೆ 15 ದಿನ ಕಾಯುತ್ತೇವೆ. ಹಣ ನಮ್ಮ ಕೈ ಸೇರುವವರೆಗೆ ನಾವು ಕೆಲಸಕ್ಕೆ ಹೋಗುವುದಿಲ್ಲ’ ಎಂದು ಪೌರ ಕಾರ್ಮಿಕ ಸುರೇಶ್ ತಿಳಿಸಿದರು.

ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿ ಕ್ರಿಯಿಸಿದ ಪಿಡಿಒ ಶ್ರೀನಿವಾಸ್, ‘ಬಾಕಿ ವೇತನ ಪಾವತಿಗೆ ಕಾರ್ಮಿಕರಿಗೆ ಕೊಟ್ಟಿರುವ ಚೆಕ್‌ನಿಂದ ಮೂರ್‍ನಾಲ್ಕು ದಿನದಲ್ಲಿ ಹಣ ಡ್ರಾ ಮಾಡಬಹುದು’ ಎಂದು ಹೇಳಿ ಕರೆ ಸ್ಥಗಿತಗೊಳಿಸಿದರು.

ಪಂಚಾಯಿತಿಯಲ್ಲಿ 5 ವರ್ಷದಿಂದ ಸ್ವಚ್ಛತೆ ಕೆಲಸ ಮಾಡುತ್ತಿದ್ದ ಇಬ್ಬರು ಪೌರ ಕಾರ್ಮಿಕರ 14 ತಿಂಗಳ ವೇತನ ಬಾಕಿ ಉಳಿಸಿಕೊಳ್ಳಲಾಗಿತ್ತು. ವೇತನಕ್ಕಾಗಿ ಮನವಿ ಮಾಡಿ ಹೈರಾಣಾಗಿದ್ದ ಕಾರ್ಮಿಕರು ಮಂಗಳವಾರ ಪಂಚಾಯಿತಿ ಎದುರು ಮಲ ಸುರಿದುಕೊಂಡು ಪ್ರತಿಭಟನೆ ನಡೆಸಿದ್ದರು. ತಕ್ಷಣ ಪಂಚಾಯಿತಿಯವರು ನಗದು ರೂಪದಲ್ಲಿ ಭಾಗಶಃ ವೇತನ ಪಾವತಿಸಿ, ಉಳಿದ ಮೊತ್ತಕ್ಕೆ ಚೆಕ್ ನೀಡಿದ್ದರು.

ಇಂದು ಕಾಂಗ್ರೆಸ್ ಸೇರುವೆ: ಆಯನೂರು



ಶಿವಮೊಗ್ಗ: ‘ಕಾಂಗ್ರೆಸ್ ಪಕ್ಷಕ್ಕೆ ಗುರುವಾರ ಸೇರ್ಪಡೆಯಾಗುತ್ತೇನೆ’ ಎಂದು ಜೆಡಿಎಸ್ ಮುಖಂಡ, ವಿಧಾನ ಪರಿಷತ್ ಮಾಜಿ ಸದಸ್ಯ ಆಯನೂರು ಮಂಜುನಾಥ್ ತಿಳಿಸಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿ ಚರ್ಚಿಸಿದ್ದೇನೆ. ನಾನು ಪಕ್ಷ ಸೇರುವುದಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಸಹಮತ ವ್ಯಕ್ತಪಡಿಸಿದ್ದಾರೆ. ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಗುರುವಾರ ಕಾರ್ಯಕ್ರಮ ನಿಗದಿಯಾಗಿದೆ’ ಎಂದರು.

‘ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ತೊರೆದು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯಲು ನಿರ್ಧರಿಸಿದ್ದೆ. ಆದರೆ ಜೆಡಿಎಸ್‌ನಿಂದ ಅವಕಾಶ ಸಿಕ್ಕಿದ್ದರಿಂದ ಸ್ಪರ್ಧೆ ಮಾಡಿದ್ದೆ’ ಎಂದು ತಿಳಿಸಿದರು.

‘ಯಾವುದೇ ಷರತ್ತು ಇಲ್ಲದೆ ಕಾಂಗ್ರೆಸ್‌ಗೆ ಸೇರುತ್ತಿದ್ದೇವೆ. ಪಕ್ಷ ಅವಕಾಶ ನೀಡಿದರೆ ವಿಧಾನ ಪರಿಷತ್‌ನ ಪದವೀಧರರ ಕ್ಷೇತ್ರದಿಂದ ಅಥವಾ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತೇನೆ. ಮಹಾನಗರ ಪಾಲಿಕೆ ಸದಸ್ಯ ಎಚ್.ಸಿ.ಯೋಗೀಶ್ ಸೇರಿದಂತೆ ಕೆಲವರು ನಾನು ಪಕ್ಷ ಸೇರುತ್ತಿರುವುದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಅದು ಸಹಜ. ಶೇ 99ರಷ್ಟು ಮುಖಂಡರು ಹಾಗೂ ಕಾರ್ಯಕರ್ತರು ನನ್ನನ್ನು ಸ್ವಾಗತಿಸಿದ್ದಾರೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಕಾಂಗ್ರೆಸ್, ಬಿಜೆಪಿಯಿಂದ ಆಹ್ವಾನ ಜೆಡಿಎಸ್ ಶಾಸಕ ಸಮೃದ್ಧಿ

ಪ್ರಜಾವಾಣಿ ವಾರ್ತೆ

ಕೋಲಾರ: ‘ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಪಕ್ಷಗಳಿಂದಲೂ ನನಗೆ ಆಹ್ವಾನ ಬಂದಿರುವುದು ನಿಜ. ಆದರೆ, ಜೆಡಿಎಸ್ ತೊರೆಯುವ ಬಗ್ಗೆ ತೀರ್ಮಾನ ಕೈಗೊಂಡಿಲ್ಲ’ ಎಂದು ಮುಳಬಾಗಿಲು ಜೆಡಿಎಸ್ ಶಾಸಕ ಸಮೃದ್ಧಿ ವಿ.ಮಂಜುನಾಥ್ ಹೇಳಿದ್ದಾರೆ.

ನಗರ ಹೊರವಲಯದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸ್ ಪಕ್ಷದ ಕೆಲವರು ನನಗೆ ಕರೆ ಮಾಡಿ ಮಾತನಾಡಿದ್ದಾರೆ. ಸಂಸದರಾಗುವಂತೆ ಬಿಜೆಪಿಯಿಂದಲೂ ಕರೆ ಬಂದಿದೆ. ಹಾಗಂತ ಜೆಡಿಎಸ್ ತೊರೆಯುವುದಾಗಿ ನಾನು ಎಲ್ಲಿಯೂ ಹೇಳಿಲ್ಲ’ ಎಂದರು.

‘ನಾನು ಮತ್ತು ಬಂಗಾರಪೇಟೆ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಸ್.ಎನ್. ನಾರಾಯಣಸ್ವಾಮಿ ಸಂಬಂಧದಲ್ಲಿ ಅಣ್ಣ-ತಮ್ಮಂದಿರು. ಈ ಪ್ರೀತಿಯಿಂದಲೇ ಅವರು ನನ್ನನ್ನು ಕಾಂಗ್ರೆಸ್ ಪಕ್ಷಕ್ಕೆ ಬರುವಂತೆ ಆಹ್ವಾನಿಸಿದ್ದಾರೆ. ಅವರ ಸಂಬಂಧಕ್ಕೆ ನಾನು ತಲೆ ಬಾಗುತ್ತೇನೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡ ಆಹ್ವಾನಿಸಿದ್ದಾರೆ. ದೂರವಾಣಿ ಮೂಲಕ ಮಾತನಾಡಿದ್ದಾರೆ’ ಎಂದರು.

‘ಮುಂದಿನ ದಿನಗಳಲ್ಲಿ ಪಕ್ಷ ಬಿಡುವ ತೀರ್ಮಾನ ಮಾಡಿದ್ದೇ ಆದಲ್ಲಿ ನಾಯಕರು ಹಾಗೂ ಕ್ಷೇತ್ರದ ಕಾರ್ಯಕರ್ತರೊಂದಿಗೆ ಚರ್ಚಿಸಿ ಬಹಿರಂಗವಾಗಿ ಹೇಳುತ್ತೇನೆ. ಯಾರ ಹಂಗಿನಲ್ಲೂ ನಾನಿಲ್ಲ. ಯಾರ ಬಳಿಯೂ ನಾನು ಕೈ ಚಾಚಿ ಬದುಕಿಲ್ಲ’ ಎಂದು ಮಂಜುನಾಥ್ ಸ್ಪಷ್ಟಪಡಿಸಿದರು.

‘ಬಿಜೆಪಿಯವರು ನನ್ನನ್ನು ಸಂಸದರಾಗುವಂತೆ ಆಹ್ವಾನ ನೀಡಿದ್ದಾರೆ. ಆದರೆ, ಶಾಸಕ ಸ್ಥಾನದ ಬಗ್ಗೆ ನನಗೆ ತೃಪ್ತಿ ಇದೆ. ಇಡೀ ಕೋಲಾರ ಜಿಲ್ಲೆಯಲ್ಲಿ ನನ್ನ ಕ್ಷೇತ್ರದ ಜನರು 95 ಸಾವಿರ ಮತ ನೀಡಿ ಗೆಲ್ಲಿಸಿದ್ದಾರೆ. ಅವರಿಗೆ ನ್ಯಾಯ ಕೊಡುವ ಕೆಲಸ ಮಾಡಬೇಕಾಗಿದೆ’ ಎಂದು ಹೇಳಿದರು.

‘ಶಾಸಕನಾಗಿ ಕ್ಷೇತ್ರದ ಕೆಲಸ ಕಾರ್ಯಗಳಿಗೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಲು ಹೋಗಬೇಕಾಗಿತ್ತು. ಆದರೆ, ವಿವಿಧ ಅರ್ಥ ಕಲ್ಪಿಸುತ್ತಾರೆ ಎಂಬ ಕಾರಣಕ್ಕೆ ನಾನು ಭೇಟಿ ಮಾಡಿಲ್ಲ’ ಎಂದು ತಿಳಿಸಿದರು.

‘ಸದ್ಯದಲ್ಲಿಯೇ ಜೆಡಿಎಸ್‌ನ 19 ಶಾಸಕರು, ಸೋಲು ಕಂಡವರು, ವಿಧಾನ ಪರಿಷತ್ ಸದಸ್ಯರು ಪ್ರವಾಸ ಕೈಗೊಂಡು ಒಂದೆಡೆ ಸೇರಿ ಮುಂಬರುವ ಲೋಕಸಭಾ ಚುನಾವಣೆ ಎದುರಿಸುವ ಬಗ್ಗೆ ಯೋಜನೆ ರೂಪಿಸಲಿದ್ದೇವೆ’ ಎಂದು ನುಡಿದರು.

‘ರಾಜಕಾರಣ ನಿಂತ ನೀರಲ್ಲ; ಏನಾದರೂ ಆಗಬಹುದು’

‘ನಾನು ಕಾಂಗ್ರೆಸ್ ಪಕ್ಷ ಸೇರಿ ಸಂಸದನಾಗಲು ಹೊರಟಿದ್ದೇನೆ ಎಂಬ ಮಾತು ಹರಿದಾಡುತ್ತಿದೆ. ನನ್ನ ಹಣೆಬರಹದಲ್ಲಿ ಸಂಸದನಾಗುವಂತೆ ಬರೆದಿದ್ದರೆ ಯಾವ ದೇವರಿಂದಲೂ ಅದನ್ನು ತಪ್ಪಿಸಲು ಆಗಲ್ಲ. ರಾಜಕಾರಣ ನಿಂತ ನೀರಲ್ಲ; ಸದಾ ಹರಿಯುವ ನೀರು. ನಾನು ಜೆಡಿಎಸ್‌ಗೆ ಬದ್ಧವಾಗಿದ್ದೇನೆ, ದೇವೇಗೌಡರ ಕುಟುಂಬಕ್ಕೆ ಬಹಳ ಹತ್ತಿರವಾದ ವ್ಯಕ್ತಿ’ ಎಂದು ಸಮೃದ್ಧಿ ಮಂಜುನಾಥ್ ಹೇಳಿದರು.

‘ರಾಜಕಾರಣ ಎಂಬುದು ಐಪಿಎಲ್ ಪಂದ್ಯವಿದ್ದಂತೆ. ಟಿ-ಷರ್ಟ್ ಹಾಕಿಕೊಂಡು ಕ್ರೀಡಾಂಗಣಕ್ಕೆ ಇಳಿದಾಗಲೇ ಇವರು ಇಂಥ ತಂಡದವರು ಎಂಬುದು ಗೊತ್ತಾಗುತ್ತದೆ. ಯಾರು ಯಾವ ತಂಡದಲ್ಲಿರುತ್ತಾರೆ ಎಂಬುದು ಲೋಕಸಭೆ ಚುನಾವಣೆ ಮುಗಿದ ಮೇಲೆ ಗೊತ್ತಾಗಲಿದೆ’ ಎಂದರು.

‘ಬಿಜೆಪಿಯಲ್ಲಿ ಆಂತರಿಕ ಪ್ರಜಾಪ್ರಭುತ್ವವಿಲ್ಲ’

ಬೆಂಗಳೂರು: ‘ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸ್ವತಂತ್ರವಾಗಿ ಕೆಲಸ ಮಾಡಲು ಗಾಂಧಿ ಕುಟುಂಬ ಅವಕಾಶ ನೀಡುತ್ತಿಲ್ಲ’ ಎಂಬ ರಾಜ್ಯಸಭೆಯ ಬಿಜೆಪಿ ಸದಸ್ಯ ಲಹರ್ ಸಿಂಗ್ ಸಿರೋಯ ಹೇಳಿಕೆಗೆ ಖಾರವಾಗಿ ಪ್ರತಿಕ್ರಿಯಿಸಿರುವ ವಿಧಾನ ಪರಿಷತ್‌ನ ಕಾಂಗ್ರೆಸ್ ಮಾಜಿ ಸದಸ್ಯರಾದ ಮೋಹನ್ ಕುಮಾರ್ ಕೊಂಡಜ್ಜಿ ಮತ್ತು ಪಿ.ಆರ್. ರಮೇಶ್, ‘ಇದು ಅವರು ಕಂಡುಹಿಡಿದ ಕಥೆ’ ಎಂದು ಟೀಕಿಸಿದ್ದಾರೆ.

‘ಎಸ್. ನಿಜಲಿಂಗಪ್ಪ ಅವರು ಗಾಂಧಿ ಕುಟುಂಬದ ಒತ್ತಡಕ್ಕೆ ಮಣಿಯದೆ ಕೆಲಸ ಮಾಡಿದ್ದರು. ಎಚ್.ಡಿ. ದೇವೇಗೌಡರು ಪ್ರಧಾನಿಯಾಗಿದ್ದ ಅವಧಿಯಲ್ಲಿ ಗಾಂಧಿ ಕುಟುಂಬವು ಅವರನ್ನು ಹತ್ತಿಕ್ಕಲು ಪ್ರಯತ್ನಿಸಿತ್ತು’ ಎಂಬ ಲಹರ್ ಸಿಂಗ್ ಹೇಳಿಕೆ ವಾಸ್ತವಕ್ಕೆ ದೂರವಾದುದು. ಲಹರ್ ಸಿಂಗ್ ಅವರು ಮೊದಲು ತಮ್ಮ ಪಕ್ಷದಲ್ಲಿ ಸ್ವತಂತ್ರವಾಗಿ ಕೆಲಸ ಮಾಡುವ ವಾತಾವರಣ ಇದೆಯೇ ಎಂದು ಸ್ಪಷ್ಟಪಡಿಸಲಿ. ಬಿಜೆಪಿಯಲ್ಲಿ ಆಂತರಿಕ ಪ್ರಜಾಪ್ರಭುತ್ವವೇ ಇಲ್ಲ’ ಎಂದು ದೂರಿದ್ದಾರೆ.

‘ಕಾಂಗ್ರೆಸ್ ಪಕ್ಷದ ಬೆಂಬಲದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಚ್.ಡಿ. ದೇವೇಗೌಡರು ಪ್ರಧಾನಿಯಾಗಿ ಆಯ್ಕೆಯಾಗಿದ್ದರು. ಆಂತರಿಕ ಭಿನ್ನಾಭಿಪ್ರಾಯದಿಂದಾಗಿ ಅಂದಿನ ಕೇಂದ್ರದ ಸಮ್ಮಿಶ್ರ ಸರ್ಕಾರ ಪತನಗೊಂಡಿತ್ತು. ಆದರೆ, ಈಗಿನ ಬಿಜೆಪಿಯಲ್ಲಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರದ್ದೇ ಸರ್ವಾಧಿಕಾರ. ಎಲ್.ಕೆ. ಅಡ್ವಾಣಿ ಮೂಲೆಗುಂಪು ಆಗಿರುವುದೇ ಅದಕ್ಕೆ ನಿದರ್ಶನ’ ಎಂದೂ ಹೇಳಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ನಿಯೋಗ

ಸಾಹಿತಿಗಳಿಗೆ ಬೆದರಿಕೆ: ಉನ್ನತ ತನಿಖೆಯ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಗತಿಪರ ವಿಚಾರಧಾರೆ ಹೊಂದಿರುವ ರಾಜ್ಯದ ಹಲವು ಸಾಹಿತಿಗಳಿಗೆ ಬೆದರಿಕೆ ಕರೆ ಮತ್ತು ಪತ್ರಗಳು ಬರುತ್ತಿರುವ ಕುರಿತು ಉನ್ನತ ಮಟ್ಟದ ತನಿಖೆಗೆ ಆದೇಶಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಬೆದರಿಕೆ ಎದುರಿಸುತ್ತಿರುವ ಸಾಹಿತಿಗಳ ಜತೆ ಬುಧವಾರ ಸಭೆ ನಡೆಸಿದ ಅವರು, ‘ಬೆದರಿಕೆಯ ಮೂಲವನ್ನು ಪತ್ತೆಹಚ್ಚಲು ಅತ್ಯುತ್ತಮ ಪೊಲೀಸ್ ಅಧಿಕಾರಿಗಳನ್ನು ಒಳಗೊಂಡ ತಂಡ ರಚಿಸಲಾಗುವುದು. ಸಾಹಿತಿಗಳು ಮತ್ತು ಹೋರಾಟಗಾರರ ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಸಾಹಿತಿ ಕೆ. ಮರುಳಸಿದ್ದಪ್ಪ ಮಾತನಾಡಿ, ‘ಒಂದು ವರ್ಷಕ್ಕೂ ಹೆಚ್ಚು ಅವಧಿಯಿಂದ ನಿರಂತರವಾಗಿ ಬೆದರಿಕೆ ಪತ್ರಗಳು ಬರುತ್ತಿವೆ. ಸಾಹಿತಿಗಳು ಮತ್ತು ಹೋರಾಟಗಾರರು ಭಯ, ಆತಂಕ ಮತ್ತು ಮುಜುಗರದಿಂದ ಜೀವನ ನಡೆಸುವಂತಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲು ದುಷ್ಟ ಶಕ್ತಿಗಳು ಪ್ರಯತ್ನಿಸುತ್ತಿವೆ. ಉನ್ನತ ಮಟ್ಟದ ತನಿಖೆ ನಡೆಸಿ ಬೆದರಿಕೆ ಹಾಕುತ್ತಿರುವವರನ್ನು ಪತ್ತೆಹಚ್ಚಿ, ಕಾನೂನು ಕ್ರಮಕ್ಕೆ ಒಳಪಡಿಸಬೇಕು’ ಎಂದು ಮನವಿ ಮಾಡಿದರು.

ಡಾ. ವಸುಂಧರಾ ಭೂಪತಿ ಮಾತನಾಡಿ, ‘ಈವರೆಗೆ ಸುಮಾರು 15 ಬೆದರಿಕೆ ಪತ್ರಗಳು ಬಂದಿವೆ. ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕವೂ ಮೂರು ಪತ್ರಗಳು ಬಂದಿವೆ. ಎಲ್ಲ ಪತ್ರಗಳಲ್ಲೂ ಒಂದೇ ರೀತಿಯ ಒಕ್ಕಣೆಗಳಿವೆ’ ಎಂದರು.

ಎಸ್.ಜಿ. ಸಿದ್ದರಾಮಯ್ಯ, ಜಾಣಗೆರೆ ವೆಂಕಟರಾಮಯ್ಯ, ಬಂಜಗೆರೆ ಜಯಪ್ರಕಾಶ್, ವಿಜಯಮ್ಮ, ದಿನೇಶ್ ಅಮೀನ್ ಮಟ್ಟು, ರುದ್ರಪ್ಪ ಹನಗವಾಡಿ, ಎಲ್.ಎನ್. ಮುಕುಂದರಾಜ್ ನಿಯೋಗದಲ್ಲಿದ್ದರು.

‘ಪೋಷಕರೇ ಮೇಲ್ಮನವಿ ಸಲ್ಲಿಸಬೇಕು’

‘ಧರ್ಮಸ್ಥಳದಲ್ಲಿ ನಡೆದಿದ್ದ ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಮರು ತನಿಖೆ ನಡೆಯಬೇಕಾದರೆ ಮೃತ ಯುವತಿಯ ಪೋಷಕರೇ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಆ ಪ್ರಕರಣದ ಮರು ತನಿಖೆಗೆ ಆದೇಶಿಸುವಂತೆ ಸಾಹಿತಿಗಳು ಒತ್ತಾಯಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ಪ್ರಕರಣದ ಕುರಿತು ಅಡ್ವೊಕೇಟ್ ಜನರಲ್ ಜತೆ ಚರ್ಚಿಸಿದ್ದೇನೆ. ಮರು ತನಿಖೆಗೆ ಆಗ್ರಹಿಸಿ ಕೇಂದ್ರ ಸರ್ಕಾರಕ್ಕೆ ನಾವು ಪತ್ರ ಬರೆಯಬಹುದು. ಮೃತಳ ಪೋಷಕರೇ ಮೇಲ್ಮನವಿ ಸಲ್ಲಿಸಬೇಕು’ ಎಂದರು.

ನಗರದಲ್ಲಿ ಇಂದು

‘ಯು ಜಿನೀಯಸ್’ ರಾಷ್ಟ್ರ ಮಟ್ಟದ ರಸಪ್ರಶ್ನೆ ಕಾರ್ಯಕ್ರಮ: ಆಯೋಜನೆ: ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜು ಆವರಣ, ಅಂಬೇಡ್ಕರ್ ವೀದಿ, ಬೆಳಿಗ್ಗೆ 9ರಿಂದ

‘ಪರ್ಯಾಯ ಕೃಷಿ ಧೋರಣೆಗಳು’ ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ಪಿ. ಸಾಯಿನಾಥ್, ಅಧ್ಯಕ್ಷತೆ: ಜಿ.ಸಿ. ಬಯ್ಯಾರೆಡ್ಡಿ, ಅತಿಥಿ: ಡಿ. ರವೀಂದ್ರನ್, ಉಪಸ್ಥಿತಿ: ಎನ್. ವೆಂಕಟಾಚಲಯ್ಯ, ಟಿ. ಯಶವಂತ, ಎಚ್. ಆರ್. ನವೀನ್ ಕುಮಾರ್, ಶಾಂತಾರಾಮ ನಾಯಕ, ಆಯೋಜನೆ: ಕರ್ನಾಟಕ ಪ್ರಾಂತ ರೈತ ಸಂಘ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 10.30

‘ರಕ್ತ–ಧ್ವಜ’ ನಾಟಕ ಪ್ರದರ್ಶನ: ನಿರ್ದೇಶನ: ದಾಕ್ಷಾಯಿಣಿ ಭಟ್ ಎ., ಆಯೋಜನೆ: ದೃಶ್ಯ, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7

ವಚನ ಶ್ರಾವಣ–2023: ವಚನ ಗಾಯನ: ಪ್ರಕಾಶ ಮಯೂರಮಠ, ವಚನ ಚಿಂತನ: ಎಸ್. ಪಿನಾಕಪಾಣಿ, ಅಧ್ಯಕ್ಷತೆ: ಬಿ.ಎ. ದೇವರಸೇಗೌಡ, ಆಯೋಜನೆ: ವಚನ ಜ್ಯೋತಿಬಗಳ, ಸ್ಥಳ: ಮಯೂರನಾಥ ಸಭಾಂಗಣ, ಜ್ಞಾನವಿಕಾಸ ಆರ್.ಪಿ.ಎ. ಶಾಲೆ, ರಾಜಾಜಿನಗರ, ಬೆಳಿಗ್ಗೆ 11

‘ಮಕ್ಕಳ ಸಾಹಿತ್ಯ’ ಕುರಿತು ಉಪನ್ಯಾಸ: ಸಂದೇಶ ಕುಂಬಾರ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

‘ನೂತನ ಪ್ರಸಂಗ’ ಯಕ್ಷಗಾನ ಪ್ರದರ್ಶನ: ಆಯೋಜನೆ: ಮಹಾಗಣಪತಿ ಪ್ರವಾಸಿ ಯಕ್ಷಗಾನ ಮಂಡಳಿ, ಸ್ಥಳ: ಹುಳಿಮಾವು ಗೇಟ್ ಚೌಡೇಶ್ವರಿ ದೇವಸ್ಥಾನ, ಸಂಜೆ 6.30

ಹರಿನಾಮ ಸಂಕೀರ್ತನೆ: ಗಾಯನ: ಅನುಷಾ ಸಾವಿತ್ರಿ, ಅನ್ವಿತಾ ಸಾವಿತ್ರಿ, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಸರ್ವೋತ್ತಮ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, 1ನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ನಾಟ್ಯಾರಾಧಾನ ನೃತ್ಯ ಶಾಲೆಯ ವಿದ್ಯಾರ್ಥಿಗಳು, ನಿರ್ದೇಶನ: ವೀಣಾ ಶ್ರೀಧರ್ ಮೊರಬ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ: nagaradalli_indu@prajavani.co.in

ಜಲ ವಿವಾದ: ಸುಪ್ರೀಂ ಕೋರ್ಟ್‌ನಲ್ಲಿ ವಸ್ತುಸ್ಥಿತಿ ಮನವರಿಕೆ ಮಾಡಲು ಬಿಜೆಪಿ, ಜೆಡಿಎಸ್ ಆಗ್ರಹ

ಪ್ರಧಾನಿ ಬಳಿಗೆ ಸರ್ವಪಕ್ಷ ನಿಯೋಗ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾವೇರಿ, ಮೇಕೆದಾಟು, ಮಹದಾಯಿ, ಕೃಷ್ಣಾ ಸಮಸ್ಯೆಗಳ ಕುರಿತು ಪ್ರಧಾನಿ ಬಳಿಗೆ ಸರ್ವಪಕ್ಷಗಳ ನಿಯೋಗ ಕೊಂಡೊಯ್ಯಲು ನಿರ್ಧರಿಸಿದ್ದು, ಅದಕ್ಕೆ ಸಹಕಾರ ನೀಡಲು ಎಲ್ಲ ಪಕ್ಷಗಳ ಮುಖಂಡರು ಒಪ್ಪಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ವಿವಿಧ ಜಲ ವಿವಾದಗಳ ಕುರಿತಂತೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬುಧವಾರ ನಡೆದ ಸರ್ವಪಕ್ಷಗಳ ಸಭೆಯ ಬಳಿಕ ಸುದ್ದಿ ಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಐದಾರು ವರ್ಷಗಳಿಗೊಮ್ಮೆ ಮಳೆ ಕೊರತೆಯಿಂದ ತಮಿಳುನಾಡಿಗೆ ಕಾವೇರಿ ನೀರು ಬಿಡಲು ಸಂಕಷ್ಟ ಎದುರಾಗುತ್ತದೆ. ಸಾಮಾನ್ಯ ಜಲವರ್ಷ-ದಲ್ಲಿ ನೀರು ಹಂಚಿಕೆಯ ತೀರ್ಮಾನ ಆಗಿದೆಯೇ ಹೊರತು, ಸಂಕಷ್ಟ ಸೂತ್ರ ನಿರ್ದಿಷ್ಟಪಡಿಸಿಲ್ಲ. ಈ ಬಗ್ಗೆ ಸುಪ್ರೀಂ ಕೋರ್ಟಿನಲ್ಲಿ ಸಮರ್ಥವಾಗಿ ವಾದ ಮಂಡಿಸುವಂತೆ ರಾಜ್ಯದ ವಕೀಲರಿಗೆ ಸಲಹೆ ನೀಡಲಾಗಿದೆ' ಎಂದರು.

'ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಲ್ಲಿ ಸಂಕಷ್ಟ ಹಂಚಿಕೆ ಸೂತ್ರದ ಕುರಿತು ತೀರ್ಮಾನ ಆಗಲೇಬೇಕು. 67 ಟಿಎಂಸಿ ಅಡಿ ನೀರು ಸಂಗ್ರಹಿಸುವ ಸಾಮರ್ಥ್ಯದ ಮೇಕೆದಾಟು ಸಮತೋಲನಾ ಜಲಾಶಯ ನಿರ್ಮಿಸಿದರೆ, ಇಂತಹ ಸಂಕಷ್ಟದ ಸಮಯದಲ್ಲಿ ತಮಿಳುನಾಡಿಗೆ ನೀರು ಬಿಡಲು ಅನುಕೂಲವಾಗುತ್ತದೆ. ಈ ಯೋಜನೆಗೆ ತಮಿಳುನಾಡು ವಿನಾಕಾರಣ ವಿರೋಧಿಸುತ್ತಿದೆ' ಎಂದು ಮುಖ್ಯಮಂತ್ರಿ ಹೇಳಿದರು.

ಸರ್ವಪಕ್ಷಗಳ ಸಭೆಯಲ್ಲಿ ಜಗದೀಶ ಶೆಟ್ಟರ್, ವೀರಪ್ಪ ಮೊಯಿಲಿ, ಸದಾನಂದ ಗೌಡ, ಬಸವರಾಜ ಬೊಮ್ಮಾಯಿ, ಎಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ, ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ ಇದ್ದಾರೆ ಪ್ರಜಾವಾಣಿ ಚಿತ್ರ

> **ರಾಜ್ಯದ ನೆಲ, ಜಲ, ಗಡಿ, ಭಾಷೆಗಳ ಬಗ್ಗೆ ಮೊದಲಿನಿಂದಲೂ ರಾಜಕೀಯ ಮಾಡುವ ಪ್ರಯತ್ನವನ್ನು ಯಾರೂ ಮಾಡಿಲ್ಲ, ಮಾಡಲೂಬಾರದು. ರಾಜ್ಯದ ಹಿತ ಕಾಪಾಡುವುದು ಎಲ್ಲರ ಜವಾಬ್ದಾರಿ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

'ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ಕೊಟ್ಟ ಬಳಿಕ 2018ರಲ್ಲಿ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ಕಾವೇರಿ ನೀರು ನಿಯಂತ್ರಣ ಸಮಿತಿ ಸ್ಥಾಪನೆಯಾಗಿದೆ. ಪ್ರಾಧಿಕಾರ 22 ಸಭೆ ಹಾಗೂ ನಿಯಂತ್ರಣ ಸಮಿತಿ 84 ಸಭೆಗಳನ್ನು ನಡೆಸಿವೆ. ಈ ಸಮಿತಿಗಳು

> **ನೀರಾವರಿ ವಿಷಯದಲ್ಲಿ ರಾಜ್ಯದ ಹಿತ ಕಾಪಾಡುವುದಕ್ಕೆ ಬದ್ಧ. ಈ ವಿಷಯದಲ್ಲಿ ಯಾವುದೇ ರಾಜಿ ಇಲ್ಲ. ಕಾನೂನು ಹೋರಾಟ ಮುಂದುವರೆಯಲಿದ್ದು, ಎಲ್ಲ ಪಕ್ಷಗಳ ಮುಖಂಡರು ಸಹಕರಿಸಬೇಕು**
> **ಶಿವಕುಮಾರ್,** ಜಲಸಂಪನ್ಮೂಲ ಸಚಿವ

ರಚನೆಯಾದ ಬಳಿಕ, ರಾಜ್ಯದಲ್ಲಿ ಸಂಕಷ್ಟದ ದಿನಗಳು ಎದುರಾಗಿವೆ. ಆಗ ಪ್ರಾಧಿಕಾರ ಮತ್ತು ಸಮಿತಿಯಲ್ಲಿ ಚರ್ಚಿಸಿ, ಅದರ ತೀರ್ಮಾನದಂತೆ ನಡೆದುಕೊಂಡ ಅನೇಕ ನಿದರ್ಶನಗಳಿವೆ' ಎಂದರು.

'ಇಲ್ಲಿಯವರೆಗೆ 86.38 ಟಿಎಂಸಿ ಅಡಿ ನೀರು ಬಿಡಬೇಕಾಗಿತ್ತು. ಇದೇ 20ರವರೆಗೆ 24 ಟಿಎಂಸಿ ಅಡಿಯಷ್ಟು ನೀರು ಬಿಟ್ಟಿದ್ದೇವೆ. ನೀರು ಬಿಡಲು ಯಾಕೆ ಸಾಧ್ಯ ಇಲ್ಲವೆಂಬ ವಾಸ್ತವವನ್ನು ಪ್ರಾಧಿಕಾರದ ಮುಂದೆ ಬಿಡಿಸಿಡುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಮಳೆ ಕೊರತೆಯಿಂದಾಗಿ ಬೆಳೆಗಳಿಗೆ ನೀರು ಬಿಟ್ಟಿಲ್ಲ. ಕುಡಿಯಲು ನೀರು ಬೇಕಾಗುತ್ತದೆ ಎಂದು ವಿವರಿಸಲಾಗಿದೆ' ಎಂದರು.

'15 ಸಾವಿರ ಕ್ಯುಸೆಕ್ ನೀರು ಕೊಡಲಾಗದು ಎಂದು ನಮ್ಮ ಅಧಿಕಾರಿಗಳು ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ವಾದ ಮಂಡಿಸುತ್ತಿದ್ದಾಗ ತಮಿಳುನಾಡಿನ ಅಧಿಕಾರಿಗಳು ಸಭಾತ್ಯಾಗ ಮಾಡಿದರು. ನಮ್ಮ ಅಧಿಕಾರಿಗಳು ವಾದ ಮಾಡಿದ್ದರಿಂದ 10 ಸಾವಿರ ಕ್ಯುಸೆಕ್‌ಗೆ ಇಳಿಸಲು ಸೂಚಿಸಿತು. ಅದನ್ನೂ ಮರು ಪರಿಶೀಲಿಸುವಂತೆ ಅರ್ಜಿ ಸಲ್ಲಿಸಿದ್ದೇವು. ನಂತರ ಸುಪ್ರೀಂ ಕೋರ್ಟಿನಲ್ಲಿ ಮನವಿ ಸಲ್ಲಿಸಿದ್ದು ಸುಪ್ರೀಂ ಕೋರ್ಟ್ ರಚಿಸಿರುವ ಪೀಠವು ಇದೇ 25ರಂದು ಪ್ರಕರಣ ವಿಚಾರಣೆ ನಡೆಸಲಿದೆ.' ಎಂದರು.

ಸಭೆಯಲ್ಲಿ ಮಾತನಾಡಿದ ಬಿ.ಎಸ್. ಯಡಿಯೂರಪ್ಪ, ಡಿ.ವಿ. ಸದಾನಂದ ಗೌಡ, ವೀರಪ್ಪ ಮೊಯಿಲಿ, ಜಗದೀಶ ಶೆಟ್ಟರ್, ಸಂಸದರಾದ ಸುಮಲತಾ, ತೇಜಸ್ವಿಸೂರ್ಯ, ಜಗ್ಗೇಶ, ಎಲ್. ಹನುಮಂತಯ್ಯ, ಮುನಿಸ್ವಾಮಿ, ಜಿ.ಎಂ. ಸಿದ್ದೇಶ್ವರ, ಜಿ.ಸಿ. ಚಂದ್ರಶೇಖರ್, ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮೊದಲಾದವರು ರಾಜ್ಯದ ಕಾನೂನು ಹೋರಾಟಕ್ಕೆ ಬೆಂಬಲ ಸೂಚಿಸಿದರು.

'ವಸ್ತುಸ್ಥಿತಿ ಮನವರಿಕೆ ಮಾಡಲಿ'

'ಕಾವೇರಿ ನೀರು ಹಂಚಿಕೆ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಮಧ್ಯಂತರ ಅರ್ಜಿ ಸಲ್ಲಿಸಿ, ವಸ್ತುಸ್ಥಿತಿ ಮನವರಿಕೆ ಮಾಡಿಕೊಡುವಂತೆ ಸರ್ಕಾರಕ್ಕೆ ಸಲಹೆ ನೀಡಿದ್ದೇವೆ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

'ರಾಜ್ಯದ ರೈತರಿಗೆ ನೀರು ಕೊಡದೆ ತಮಿಳುನಾಡಿಗೆ ನೀರು ಬಿಟ್ಟಿರುವುದು ಸರಿಯಲ್ಲ. ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದಲ್ಲಿ ವಾದ ಮಾಡುವುದರಲ್ಲಿ ಮತ್ತು ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸದೆ ಎಡವಿರುವುದಾಗಿ ಹೇಳಿದ್ದೇವೆ. ಮಹದಾಯಿ ವಿಚಾರದಲ್ಲಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿ ನಂತರ ಕೇಂದ್ರಕ್ಕೆ ಸರ್ವಪಕ್ಷ ನಿಯೋಗ ತೆಗೆದುಕೊಂಡು ಹೋಗುವ ಬಗ್ಗೆ ಆಲೋಚಿಸುವಂತೆ ಸಲಹೆ ನೀಡಿದ್ದೇವೆ' ಎಂದೂ ತಿಳಿಸಿದರು.

ನೀರು ಹರಿಸಿದ್ದೇಕೆ– ಎಚ್‌ಡಿಕೆ

'ಸುಪ್ರೀಂ ಕೋರ್ಟ್‌ಗೆ ತಮಿಳುನಾಡು ಅರ್ಜಿ ಸಲ್ಲಿಸಿದ ತಕ್ಷಣ ರಾಜ್ಯ ಸರ್ಕಾರ ನೀರು ಹರಿಸುವ ನಿರ್ಧಾರ ಕೈಗೊಳ್ಳುವ ಬದಲು, ತಕರಾರು ಅರ್ಜಿ ಸಲ್ಲಿಸಬೇಕಿತ್ತು. ಈ ವಿಷಯದಲ್ಲಿ ಸರ್ಕಾರದಿಂದ ಲೋಪವಾಗಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

'ನೆಲ, ಜಲ, ಭಾಷೆ ವಿಚಾರದಲ್ಲಿ ವಿರೋಧ ಪಕ್ಷಗಳು ಪ್ರಶ್ನೆ ಮಾಡಿದರೆ, ಅದನ್ನು ರಾಜಕೀಯ ಎಂದು ಭಾವಿಸುವುದು ತಪ್ಪು. ಸರ್ಕಾರ ಹೊಣೆಗಾರಿಕೆಯಿಂದ ವರ್ತಿಸಬೇಕು. ತಮಿಳುನಾಡಿಗೆ ನೀರು ಹರಿಸುವ ಮೊದಲೇ ಸರ್ವಪಕ್ಷ ಸಭೆ ಕರೆದಿದ್ದರೆ ಅದಕ್ಕೊಂದು ಅರ್ಥ ಇರುತ್ತಿತ್ತು. ಅಲ್ಲದೆ, ಸರ್ವಪಕ್ಷಗಳ ಸಭೆಯಲ್ಲಿ ಏನೇ ವಾದ ಮಾಡಿದರೂ, ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ಪರಿಣಾಮಕಾರಿ ವಾದ ಮಂಡಿಸಬೇಕು' ಎಂದರು.

ಉಪವಾಸ ಸತ್ಯಾಗ್ರಹ, 'ಆತಂಕದ ನಡಿಗೆ'

ಪ್ರಜಾವಾಣಿ ವಾರ್ತೆ

ಮಂಡ್ಯ: ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಬುಧವಾರ ಭಾರತೀಯ ಕಿಸಾನ್ ಸಂಘದ ಸದಸ್ಯರು ಉಪವಾಸ ಸತ್ಯಾಗ್ರಹ ಕೈಗೊಂಡರೆ, ಮಂಡ್ಯ ಯೂತ್ ಗ್ರೂಪ್ ಸದಸ್ಯರು 'ಆತಂಕದ ನಡಿಗೆ' ಹೆಸರಿನಲ್ಲಿ ಪ್ರತಿಭಟನಾ ಜಾಥಾ ನಡೆಸಿದರು.

ಕಿಸಾನ್ ಸಂಘದ ಸದಸ್ಯರು ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಎದುರು ಬೆಳಿಗ್ಗೆಯಿಂದ ಸಂಜೆಯವರೆಗೂ ಉಪವಾಸ ನಡೆಸಿದರು. 'ತಮಿಳುನಾಡಿಗೆ ನೀರು ಹರಿದು ಹೋಗುತ್ತಿರುವುದರಿಂದ ಕುಡಿಯುವ ನೀರಿನ ಕೊರತೆಯಾಗ-ಬಹುದು' ಎಂಬ ಆತಂಕದೊಂದಿಗೆ ಮಂಡ್ಯ ಯೂತ್ ಗ್ರೂಪ್ ಸದಸ್ಯರು ಆತಂಕದ ನಡಿಗೆ –ಪ್ರತಿಭಟನಾ ಜಾಥಾ ನಡೆಸಿದರು.

ನಿರಾಳ ಕ್ಲಿನಿಕ್ ಮುಂಭಾಗದಿಂದ ಆರಂಭವಾದ ನಡಿಗೆ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ, ನಂದಾ ಸರ್ಕಲ್, ವಿವಿ ರಸ್ತೆ ಮೂಲಕ ಸಾಗಿ ಹೊಸಹಳ್ಳಿ ವೃತ್ತದಲ್ಲಿ ಕೊನೆಗೊಂಡಿತು. ಖಾಲಿ ಕೊಡಗಳನ್ನು ಹೊತ್ತು ಸಾಗಿದ ಪ್ರತಿಭಟನಕಾರರು ನೀರಿನ ಕೊರತೆ ಸಾಧ್ಯತೆಯನ್ನು ಪ್ರದರ್ಶಿಸಿದರು. ಸಾರ್ವಜನಿಕರಿಗೆ ನೀರು ವಿತರಿಸಿ ಹಿತ–ಮಿತವಾಗಿ ಬಳಸುವಂತೆ ಜಾಗೃತಿ ಮೂಡಿಸಿದರು.

'ತಮಿಳುನಾಡಿಗೆ ನೀರು ಹರಿಸುತ್ತಿರುವುದನ್ನು ತಕ್ಷಣವೇ ಸ್ಥಗಿತಗೊಳಿಸಬೇಕು' ಎಂದು ಒತ್ತಾಯಿಸಿ ಮದ್ದೂರಿನಲ್ಲಿ ರೈತ ಮುಖಂಡರು ಶಾಸಕ ಕೆ.ಎಂ. ಉದಯ್ ಅವರಿಗೆ ಮನವಿ ಸಲ್ಲಿಸಿದರು.

ಪಿಯು ಉಪನ್ಯಾಸಕರಿಗೆ ಬಡ್ತಿ: ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ಬಡ್ತಿ ನೀಡಿ, ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಭರವಸೆ ನೀಡಿದರು.

ನಗರದಲ್ಲಿ ಬುಧವಾರ ನಡೆದ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಪದವಿಪೂರ್ವ ಕಾಲೇಜು ಉಪನ್ಯಾಸಕರ ಸಂಘದ ಪದಾಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಉಪನ್ಯಾಸಕರ ವರ್ಗಾವಣೆಗೆ ಪ್ರಸ್ತುತ ಕೌನ್ಸೆಲಿಂಗ್ ಪ್ರಕ್ರಿಯೆ ನಡೆಯುತ್ತಿದೆ. ಆ. 24ಕ್ಕೆ ಪೂರ್ಣಗೊಳ್ಳಲಿದೆ. ನಂತರ ಬಡ್ತಿ ನೀಡುವ ಪ್ರಕ್ರಿಯೆ ಆರಂಭಿಸುವ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.

'ಪದವಿಪೂರ್ವ ಕಾಲೇಜುಗಳಲ್ಲಿ ಕಳೆದ ಡಿಸೆಂಬರ್ ಅಂತ್ಯಕ್ಕೆ 192 ಪ್ರಾಂಶುಪಾಲರ ಹುದ್ದೆಗಳು ಖಾಲಿಯಾಗಿವೆ. ಈಗ ಈ ಸಂಖ್ಯೆ ಇನ್ನಷ್ಟು ಹೆಚ್ಚಾಗಿದೆ. ಸೇವಾ ಹಿರಿತನದ ಆಧಾರದಲ್ಲಿ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡಬೇಕು. ಪ್ರೌಢಶಾಲೆಗ-ಳಿಂದ ಬಡ್ತಿ ಪಡೆದ ಉಪನ್ಯಾಸಕರ ವೇತನ ಶ್ರೇಣಿಯಲ್ಲಿನ ವ್ಯತ್ಯಾಸ ಸರಿಪಡಿಸಬೇಕು. ಬಡ್ತಿ ಪಡೆದವರಿಗೆ ಅವರ ಸಮಕಾಲೀನ ಪ್ರೌಢಶಾಲಾ ಶಿಕ್ಷಕರಿಗಿಂತ ಕಡಿಮೆ ವೇತನ ಸಿಗುತ್ತಿದೆ. ತಾರತಮ್ಯ ಸರಿಪಡಿಸಲು 6ನೇ ವೇತನ ಆಯೋಗವೂ ಸೂಚಿಸಿದೆ. ಆದರೆ, ಇದುವರೆಗೂ ಸರ್ಕಾರ ಸೂಕ್ತ ಕ್ರಮ ತೆಗೆದುಕೊಂಡಿಲ್ಲ. 2008ರ ನಂತರ ನೇಮಕವಾದ ಉಪನ್ಯಾಸಕರಿಗೆ ವಿಶೇಷ ಭತ್ಯೆ ಸೌಲಭ್ಯ ಕಲ್ಪಿಸಿಲ್ಲ' ಎಂದು ಸಂಘದ ಅಧ್ಯಕ್ಷ ಎ.ಎಚ್.ನಿಂಗೇಗೌಡ ಸಚಿವರ ಗಮನ ಸೆಳೆದರು.

ವೇತನ ತಾರತಮ್ಯ ಸರಿಪಡಿಸುವ ಕುರಿತು ಆರ್ಥಿಕ ಇಲಾಖೆ ಅಧಿಕಾರಿಗಳ ಜತೆ ಚರ್ಚಿಸಲಾಗುವುದು. 7ನೇ ವೇತನ ಆಯೋಗದ ವರದಿ ಬಂದ ನಂತರ ಸೌಲಭ್ಯ ಕಲ್ಪಿಸಲಾಗುವುದು ಎಂದು ಮಧು ಬಂಗಾರಪ್ಪ ಭರವಸೆ ನೀಡಿದರು.

ಅನುದಾನಿತ ಹಾಗೂ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿ.ಇಡಿ ಪದವಿ ಪಡೆಯದ ಒಂದು ಸಾವಿರ ಉಪನ್ಯಾಸಕರಿಗೆ ವೇತನ ಸಹಿತ ರಜೆ ನೀಡಿ, ಬಿ.ಇಡಿ ಪೂರ್ಣಗೊಳಿಸಲು ಅವಕಾಶ ಮಾಡಿಕೊಡುವ ಕುರಿತು ಪರಿ-ಶೀಲಿಸಲಾಗುವುದು ಎಂದರು.

ಶಾಲಾ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಆಯುಕ್ತೆ ಬಿ.ಬಿ.ಕಾವೇರಿ, ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕಿ ಸಿಂಧು ರೂಪೇಶ್, ಪ್ರಾಂಶುಪಾಲರ ಸಂಘದ ಅಧ್ಯಕ್ಷ ಶ್ರೀಕಂಠೇಗೌಡ, ಉಪನ್ಯಾಸಕರ ಸಂಘದ ಪದಾಧಿಕಾರಿಗಳಾದ ಎಸ್. ಆರ್.ವೆಂಕಟೇಶ್, ಶಿವರಾಜ್ ಮಾಲಿ ಪಾಟೀಲ, ಎಂ.ಜಯಣ್ಣ ಉಪಸ್ಥಿತರಿದ್ದರು.

ಹಳೇ ನಂಬರ್ ಪ್ಲೇಟ್ ಬದಲಿಸಲು ನ.17ರವರೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಹನಗಳ ಹಳೇ ನಂಬರ್‌ಪ್ಲೇಟ್ ಬದಲಾಯಿಸಿ ಅತಿಸುರಕ್ಷಿತ ನೋಂದಣಿ ಫಲಕ (ಎಚ್‌ಎಸ್‌ಆರ್‌ಪಿ) ಅಳವಡಿಸುವುದ-ನ್ನು ಸಾರಿಗೆ ಇಲಾಖೆ ಕಡ್ಡಾಯಗೊಳಿಸಿದೆ.

2019ರ ಏ.1ರ ನಂತರ ನೋಂದಣಿಯಾಗಿರುವ ವಾಹನಗಳಲ್ಲಿ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಇದ್ದು, ಅದಕ್ಕಿಂತ ಹಿಂದಿನ ವಾಹನಗಳಿಗೆ ಹೊಸ ನಂಬರ್ ಪ್ಲೇಟ್ ಅಳವಡಿಸಲು ನವೆಂಬರ್ 17ರವರೆಗೆ ಅವಕಾಶ ನೀಡಲಾಗಿದೆ.

ಅಪರಾಧ ಕಡಿಮೆ ಮಾಡಲು, ವಾಹನಗಳನ್ನು ಸುಲಭದಲ್ಲಿ ಪತ್ತೆ ಹಚ್ಚಲು, ನಕಲಿ ನಂಬರ್‌ಗಳನ್ನು ತಡೆಗಟ್ಟಲು ಎಚ್‌ಎಸ್‌ಆರ್‌ಪಿ ಅಳವಡಿಸುವುದು ಅಗತ್ಯ ಎಂದು ಕೇಂದ್ರ ಹೆದ್ದಾರಿ ಮತ್ತು ರಸ್ತೆ ಸಾರಿಗೆ ಸಚಿವಾಲಯವು 2001ರಲ್ಲಿಯೇ ತಿಳಿಸಿತ್ತು. ಆದರೆ, ಜಾರಿ-ಯಾಗಿರಲಿಲ್ಲ. 2018ರ ಡಿ.4ರಂದು ಸಿಎಂವಿಆರ್ ಕಾಯ್ದೆಗೆ ತಿದ್ದುಪಡಿ ಮಾಡಿ ಇನ್ನು ಮುಂದೆ ತಯಾರಿಸುವ ಎಲ್ಲ ವಾಹನಗಳಿಗೆ ಅತಿಸುರಕ್ಷಿತ ನೋಂದಣಿ ಫಲಕ ಕಡ್ಡಾಯ ಗೊಳಿಸಲಾಯಿತು. ಇದು 2019ರ ಏ.1ರಿಂದ ಜಾರಿಗೆ ಬಂತು. ಅದಕ್ಕಿಂತ ಹಿಂದೆ ನೋಂದಣಿಯಾದ ವಾಹನಗಳಲ್ಲಿ ಹಳೇ ನಂಬರ್ ಪ್ಲೇಟ್‌ಗಳೇ ಇವೆ. ಕರ್ನಾಟಕದಲ್ಲಿಯೂ ಸುಮಾರು 2 ಕೋಟಿ ವಾಹನಗಳು ಹಳೇ ನಂಬರ್ ಪ್ಲೇಟ್ ಹೊಂದಿವೆ ಎಂದು ಅಂದಾಜು ಮಾಡಲಾಗಿದೆ. ಇದರಲ್ಲಿ 1.40 ಕೋಟಿ ದ್ವಿಚಕ್ರ ವಾಹನಗಳು, 40 ಲಕ್ಷ ಲಘು ವಾಹನಗಳು ಹಾಗೂ ಸುಮಾರು 20 ಲಕ್ಷ ಸಾರಿಗೆ ವಾಹನಗಳಾಗಿವೆ. ಈ ವಾಹನಗಳು ಅತಿಸುರಕ್ಷಿತ ನೋಂದಣಿ ಫಲಕ ಅಳವಡಿಸಿಕೊಳ್ಳಬೇಕು ಎಂದು ಸರ್ಕಾರ ಈಗ ಕಡ್ಡಾಯ ಮಾಡಿದೆ.

ಬದಲಾವಣೆ ಹೇಗೆ?: ವಾಹನ ಮಾಲೀಕರು ಶೋರೂಂ ಅಥವಾ ಡೀಲರ್‌ಗಳಲ್ಲಿ ನಂಬರ್ ಪ್ಲೇಟ್ ಬದಲಾವಣೆಗೆ ಕೋರಿಕೆ ಸಲ್ಲಿಸಬೇಕು. ನಾಲ್ಕು ಚಕ್ರದ ವಾಹನಗಳಿಗೆ ₹ 400–₹ 500 ವರೆಗೆ ಹಾಗೂ ದ್ವಿಚಕ್ರ ವಾಹನಗಳಿಗೆ ₹ 250–₹ 300ವರೆಗೆ ಶುಲ್ಕವಿದ್ದು, ಅದನ್ನು ಪಾವತಿ ಮಾಡಬೇಕು. ಒಇಎಂನಿಂದ (ಒರಿಜಿನಲ್ ಇಕ್ಯುಪ್‌ಮೆಂಟ್ ಮ್ಯಾನುಫ್ಯಾಕ್ಚರರ್) ಅಧಿಕೃತ ಪೋರ್ಟಲ್‌ನಲ್ಲಿ ನಮೂದಿಸಿದ ಮೇಲೆ ಎಚ್‌ಎಸ್‌ಆರ್‌ಪಿ ಅಳವಡಿಸಲಾಗುತ್ತದೆ. ಎಚ್‌ಎಸ್‌ಆರ್‌ಪಿ ಅಳವಡಿಸಿದ ಬಳಿಕ ವಾಹನದ ಮೇಲೆ ಲೇಸರ್ ಕೋಡ್ ಅನ್ನು ವಾಹನ್ (ವಿಎಎಚ್‌ಎಎನ್) ಪೋರ್ಟಲ್‌ನಲ್ಲಿ ನವೀಕರಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು.

ನೋಂದಣಿ ಪ್ರಮಾಣ ಪತ್ರ (ಆರ್‌ಸಿ), ಕಾರ್ಯಕ್ಷಮತೆ ಪ್ರಮಾಣ ಪತ್ರ (ಎಫ್‌ಸಿ) (ಸಾರಿಗೆ ವಾಹನಗಳಿಗೆ ಮಾತ್ರ) ಇಲ್ಲದ ವಾಹನಗಳಿಗೆ ಹಾಗೂ ತೆರಿಗೆ ಬಾಕಿ ಉಳಿಸಿಕೊಂಡಿರುವ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಅಳವಡಿಸಲು ಅವಕಾಶ ನೀಡುವುದಿಲ್ಲ ಎಂದು ಸಾರಿಗೆ ಇಲಾಖೆ ತಿಳಿಸಿದೆ.

ಮುಖ್ಯಾಂಶಗಳು

- ನಾಲ್ಕು ಚಕ್ರದ ವಾಹನಗಳಿಗೆ ₹ 400–₹ 500 ವರೆಗೆ ಶುಲ್ಕ
- ದ್ವಿಚಕ್ರ ವಾಹನಗಳಿಗೆ ₹ 250–₹ 300ವರೆಗೆ ಶುಲ್ಕ
- 10 ನಂಬರಿನ ವಿಶಿಷ್ಟ ಗುರುತಿನ ಸಂಖ್ಯೆ ಇರಲಿದೆ

'ಕೊನೇ ಕ್ಷಣದವರೆಗೆ ಕಾಯಬೇಡಿ'

ಎಚ್‌ಎಸ್‌ಆರ್‌ಪಿ ಮಾದರಿಯ ಹೊಸ ನೋಂದಣಿ ಫಲಕ ಅಳವಡಿಸಿಕೊಳ್ಳಲು ನ.17ರವರೆಗೆ ಅವಕಾಶ ಇದ್ದರೂ ಕೊನೇ ಕ್ಷಣದವರೆಗೆ ಕಾಯಬಾರದು. ಇದರಿಂದ ಕೊನೇ ಕ್ಷಣದಲ್ಲಿ ಉಂಟಾಗುವ ಒತ್ತಡವನ್ನು ತಪ್ಪಿಸಬಹುದು ಎಂದು ಸಾರಿಗೆ ಇಲಾಖೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

ಎಚ್‌ಎಸ್‌ಆರ್‌ಪಿ ಮಾದರಿಯ ನೋಂದಣಿ ಫಲಕಗಳನ್ನು ಬದಲಿಸುವುದು, ವಿರೂಪಗೊಳಿಸುವುದು ಸುಲಭವಲ್ಲ. ಹಾಲೋಗ್ರಾಮ್ ಸೇರಿದಂತೆ ಹಲವು ವೈಶಿಷ್ಟಗಳನ್ನು ಒಳಗೊಂಡಿದೆ. ಒಂದು ಬದಿಯಲ್ಲಿ ನೀಲಿ ಚಕ್ರವನ್ನು ಹೋಲುವ ಹಾಲೋಗ್ರಾಮ್ ಇರುತ್ತದೆ. ಇದರ ಕೆಳಗೆ 10 ನಂಬರಿನ ವಿಶಿಷ್ಟ ಗುರುತಿನ ಸಂಖ್ಯೆ ಇರುತ್ತದೆ. ಅಂಕಿಗಳ ಮೇಲೆ ಆಂಗ್ಲಭಾಷೆಯಲ್ಲಿ 'ಇಂಡಿಯಾ' ಹಲವೆಡೆ ನಮೂದಾಗಿರುತ್ತದೆ ಎಂದು ಅವರು ವಿವರಿಸಿದ್ದಾರೆ.

ಸ್ಪರ್ಧಾ ವಾಣಿ

ಜಪಾನ್‌ನ ಹಿರೋಶಿಮಾದಲ್ಲಿರುವ ನ್ಯೂಕ್ಲಿಯಾರ್ ಮೆಮೊರಿಯಲ್(ಐಸ್ಟಾಕ್ ಚಿತ್ರ)

ಏಳೂವರೆ ದಶಕಗಳ ಹಿಂದೆ ನಡೆದ ಹಿರೋಶಿಮಾ ಮತ್ತು ನಾಗಾಸಾಕಿ ಮೇಲಿನ ಅಣುಬಾಂಬ್ ದಾಳಿ ಕುರಿತ ವಿವರ ಇಲ್ಲಿದೆ. ಇದು ಯುಪಿಎಸ್‌ಸಿ -ಕೆಪಿಎಸ್‌ಸಿ ಪರೀಕ್ಷೆಗಳ ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಾದ ಮಾಹಿತಿಯಾಗಿದೆ.

ಏಳೂವರೆ ದಶಕಗಳ ಹಿಂದಿನ ದುರಂತ ಘಟನೆ

ಹಿರೋಶಿಮಾ–ನಾಗಾಸಾಕಿ ಅಣುಬಾಂಬ್ ದಾಳಿ

ಯು.ಟಿ. ಆಯಿಶ ಫರ್ಝಾನ

ಆಗಸ್ಟ್ 6 ಮತ್ತು 9, 1945ರಂದು ಜಪಾನ್ ದೇಶದ ಹಿರೋಶಿಮಾ ಮತ್ತು ನಾಗಾಸಾಕಿ ನಗರಗಳ ಮೇಲೆ ಅಮೆರಿಕ ಅಣು ಬಾಂಬ್ ದಾಳಿಗಳನ್ನು ನಡೆಸಿತು. ಇದು ಜಗತ್ತಿನಲ್ಲಿ ನಡೆದ ಬಹಳದೊಡ್ಡ ಮಾನವಪ್ರೇರಿತ ದುರಂತ. ಲಕ್ಷಾಂತರ ಜನರ ಜೀವನಾಶದೊಂದಿಗೆ ದ್ವಿತೀಯ ಜಾಗತಿಕ ಯುದ್ಧಕ್ಕೆ ಅಂತ್ಯ ಹಾಡಲಾಯಿತು.

ಮೊದಲನೆಯ ಮಹಾಯುದ್ಧದ ಅಂತ್ಯದಲ್ಲೇ ಎರಡನೇ ಮಹಾಯುದ್ಧದ ಆರಂಭದ ಲಕ್ಷಣಗಳು ಗೋಚರಿಸಿದ್ದವು. ಆ ಸಂದರ್ಭದಲ್ಲಿ ಜಾಗತಿಕ ನಾಯಕರು ಒಂದಿಷ್ಟು ಮುತುವರ್ಜಿವಹಿಸಿ, ಶಾಂತಿ ಸಂಧಾನಗಳನ್ನು ಕೈಗೊಂಡಿದ್ದರೆ ಮತ್ತೊಂದು ಯುದ್ಧವನ್ನು ತಪ್ಪಿಸಬಹುದಾಗಿತ್ತು. ಆದರೆ ಮಿತಿಮೀರಿದ ಸಾಮ್ರಾಜ್ಯ ವಿಸ್ತರಣೆ, ಅತಿಯಾದ ರಾಷ್ಟ್ರೀಯತೆಯ ವ್ಯಾಮೋಹ ಮತ್ತು ಕೈಗಾರಿಕೆಗಳ ಮೇಲಿನ ಹಿಡಿತ ಸ್ಥಾಪನೆಯ ಹಂಬಲ, ವೈಜ್ಞಾನಿಕ ಸಂಶೋಧನೆಗಳ ಮೇಲೆ ಹಕ್ಕು ಸಾಧಿಸುವುದು ಸೇರಿದಂತೆ ಇತರೆ ಕಾರಣಗಳಿಂದಾಗಿ ಎರಡನೇ ಮಹಾಯುದ್ಧ ಆಸ್ಫೋಟವಾಯಿತು.

ಅಣುಬಾಂಬ್ ದಾಳಿಗೆ ಕಾರಣವೇನು ?

- ದ್ವಿತೀಯ ಜಾಗತಿಕ ಸಮರವು ಶತ್ರು ಪಡೆಗಳು ಮತ್ತು ಮಿತ್ರ ಪಡೆಗಳು ಎಂಬ ಜಗತ್ತಿನ ಎರಡು ಪ್ರಮುಖ ಮೈತ್ರಿಕೂಟಗಳ ನಡುವೆ ನಡೆದಿತ್ತು. ಶತ್ರು ಕೂಟ (ಅಕ್ಸಿಸ್ ಮೈತ್ರಿ) ಎಂದು ಕರೆಯುತ್ತಿದ್ದ ಗುಂಪಿನಲ್ಲಿ ಮೂರು ಪ್ರಮುಖ ಪಾಲುದಾರರಾಗಿ ಜರ್ಮನಿ, ಇಟಲಿ ಮತ್ತು ಜಪಾನ್ ದೇಶಗಳಿದ್ದವು. ಈ ದೇಶಗಳ ನೇತೃತ್ವವನ್ನು ಜರ್ಮನ್ ಸರ್ವಾಧಿಕಾರಿ ಅಡಾಲ್ಫ್ ಹಿಟ್ಲರ್, ಇಟಲಿಯನ್ ಸರ್ವಾಧಿಕಾರಿ ಬೆನಿಟೊ ಮುಸೋಲಿನಿ ಮತ್ತು ಜಪಾನಿನ ಚಕ್ರವರ್ತಿ ಹಿರೋಹಿಟೊ ವಹಿಸಿದ್ದರು.
- ಮಿತ್ರ ಕೂಟವನ್ನು ಗ್ರೇಟ್ ಬ್ರಿಟನ್, ಅಮೆರಿಕ(ಯುನೈಟೆಡ್ ಸ್ಟೇಟ್ಸ್) ಮತ್ತು ಸೋವಿಯತ್ ಯೂನಿಯನ್ ಪ್ರಧಾನವಾಗಿ ಪ್ರತಿನಿಧಿಸುತ್ತಿದ್ದವು.
- ಈ ದೇಶಗಳ ನೇತೃತ್ವವನ್ನು ಬ್ರಿಟಿಷ್ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್, ಅಮೆರಿಕ ಅಧ್ಯಕ್ಷ ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ ಮತ್ತು ಸೋವಿಯತ್ ಒಕ್ಕೂಟದ ಜೋಸೆಫ್ ಸ್ಟಾಲಿನ್ ನೇತೃತ್ವ ವಹಿಸಿದ್ದರು.
- ಈ ಹೋರಾಟದಲ್ಲಿ ಶತ್ರುಕೂಟದ ಪತನವು 1943ರಲ್ಲಿ ಪ್ರಾರಂಭವಾಯಿತು. ಇದರ ಪಾಲುದಾರ ದೇಶವಾದ ಇಟಲಿ ಮೊದಲು ಸೋಲೊಪ್ಪಿಕೊಂಡಿತು. ಜುಲೈ 1943ರ ಕೊನೆಯಲ್ಲಿ ಇಟಲಿಯ ಫ್ಯಾಸಿಸ್ಟ್ ಪಕ್ಷದ ನಾಯಕ ಮತ್ತು ಸರ್ವಾಧಿಕಾರಿಯಾಗಿದ್ದ ಬೆನಿಟೊ ಮುಸೊಲಿನಿಯನ್ನು ಪದಚ್ಯುತಗೊಳಿಸಿ ಬಂಧಿಸಲಾಯಿತು. ಸೆಪ್ಟೆಂಬರ್ 8, 1943ರಂದು ಇಟಲಿ ಮಿತ್ರರಾಷ್ಟ್ರಗಳಿಗೆ ಶರಣಾಯಿತು.
- ಏಪ್ರಿಲ್ 30, 1945ರಂದು ಹಿಟ್ಲರ್‌ನ ಆತ್ಮಹತ್ಯೆಯ ಬಳಿಕ ನಾಜಿ ಜರ್ಮನಿಯು ಮೇ 8-9 ರಂದು ಮಿತ್ರರಾಷ್ಟ್ರಗಳಿಗೆ ಬೇಷರತ್ತಾಗಿ ಶರಣಾಯಿತು.
- 1944 ಮತ್ತು 1945ರ ಅವಧಿಯಲ್ಲಿ ಅತಿ ದೊಡ್ಡ ಹೊಡೆತ ಬಿದ್ದಿದ್ದು ಜಪಾನ್ ಮೇಲೆ. ಅದು ವಶಪಡಿಸಿಕೊಂಡಿದ್ದ ಏಷ್ಯಾದ ಸೌತ್ ಸೆಂಟ್ರಲ್ ರಾಷ್ಟ್ರಗಳಾದ ಚೀನಾ, ಬರ್ಮಾದಲ್ಲಿ ಸೋಲು ಅನುಭವಿಸಿತು. ತನ್ನ ಜತೆಗಾರ ರಾಷ್ಟ್ರಗಳ ಸೋಲಿನ ನಂತರ, ಜಪಾನ್ ಏಕಾಂಗಿಯಾಗಿ ಈ ಯುದ್ಧದಲ್ಲಿ ಹೋರಾಡಬೇಕಾಯಿತು.
- ಚೀನಾದ ವಿರುದ್ಧ ಹನ್ನೆರಡು ವರ್ಷಗಳ ಕಾಲ ಜಪಾನ್ ಮಿಲಿಟರಿ ಆಕ್ರಮಣ ಮಾಡಿದ್ದು ಮತ್ತು ಅಮೆರಿಕದೊಂದಿಗೆ ಮೂರೂವರೆ ವರ್ಷ ಯುದ್ಧ ನಡೆಸಿದ್ದು(ಈ ಯುದ್ಧವು ಪರ್ಲ್ ಹಾರ್ಬರ್ ಮೇಲೆ ಅನಿರೀಕ್ಷಿತ ದಾಳಿಯಿಂದ ಪ್ರಾರಂಭವಾಯಿತು), ಇದರಿಂದ ಉಂಟಾದ ದ್ವೇಷದಿಂದಾಗಿ ಜಪಾನ್ ಸಂಪೂರ್ಣ ಶರಣಾಗಬೇಕೆನ್ನುವುದು ಅಮೆರಿಕದ ನಾಯಕರ ಆಗ್ರಹವಾಗಿತ್ತು.
- ಅಷ್ಟರಲ್ಲಾಗಲೇ ಅಣುವಿಜ್ಞಾನಿ ರಾಬರ್ಟ್ ಓಪನ್ ಹೈಮರ್ ತಯಾರಿಸಿದ್ದ ಬಾಂಬ್‌ಗಳು ಜೊತೆಗಿದ್ದವು. ಆ ಧೈರ್ಯದ ಮೇರೆಗೆ ಜಪಾನ್ ತಕ್ಷಣವೇ ಶರಣಾಗದಿದ್ದರೆ ಸಂಪೂರ್ಣ ವಿನಾಶವನ್ನು ಎದುರಿಸಬೇಕಾದೀತೆಂಬ ಎಚ್ಚರಿಕೆಗಳನ್ನು ಮಿತ್ರಕೂಟ ರಾಷ್ಟ್ರಗಳು ನೀಡಿದವು. ಆದರೆ ಪರಮಾಣು ಬಾಂಬ್‌ಗಳ ಬಗ್ಗೆ ಯಾವುದೇ ಸ್ಪಷ್ಟವಾದ ವಿವರಣೆಯನ್ನು ನೀಡಿರಲಿಲ್ಲ.
- ಇದನ್ನು 'ಪಾಟ್ಸ್‌ಡ್ಯಾಮ್ ಘೋಷಣೆ' ಎನ್ನಲಾಗಿದ್ದು ಜಪಾನ್ ಈ ಘೋಷಣೆಯನ್ನು ಸಾರ್ವಜನಿಕವಾಗಿ ತಿರಸ್ಕರಿಸಿತು. ಜುಲೈ 25, 1945ರಂದು ಅಧ್ಯಕ್ಷ ಹ್ಯಾರಿ ಎಸ್. ಟ್ರೂಮನ್ (ಫ್ರಾಂಕ್ಲಿನ್ ಡಿ. ರೂಸ್‌ವೆಲ್ಟ್ ಅವರ ಮರಣದೊಂದಿಗೆ ಏಪ್ರಿಲ್ 12, 1945 ರಂದು ಟ್ರೂಮನ್ ಯುನೈಟೆಡ್ ಸ್ಟೇಟ್ಸ್‌ನ ಅಧ್ಯಕ್ಷರಾದರು) ಜಪಾನ್‌ನ ಮೇಲೆ ಆದಷ್ಟು ಬೇಗ ಪರಮಾಣು ದಾಳಿಯನ್ನು ಪ್ರಾರಂಭಿಸಲು ಆದೇಶ ನೀಡಿದರು.

ಆಗಸ್ಟ್ 6, 1945ರಂದು ಏನಾಯಿತು ?

- ಆಗಸ್ಟ್ 6, 1945ರಂದು ಹಿರೋಶಿಮಾದಲ್ಲಿ ಬೆಳಿಗ್ಗೆ ಸುಮಾರು 8.15ರ ಹೊತ್ತಿಗೆ ನಾಗರಿಕರು ತಮ್ಮ ನಿತ್ಯದ ದಿನಚರಿಯಲ್ಲಿ ತೊಡಗಿದ್ದ ಸಮಯ. ತಮ್ಮ ಮೇಲೆ ಮನುಕುಲ ಕಂಡಿರದ ಭೀಕರ ದುರಂತವೊಂದು ಬಂದೆರಗಲಿದೆ ಎಂಬ ಕಿಂಚಿತ್ ಸುಳಿವು ಆ ಜನರಿಗೆ ಇರಲಿಲ್ಲ.
- ಎನೋಲಾ ಗೇ ಎಂಬ B-29 ಬಾಂಬರ್ ವಿಮಾನವು ಟಿನಿಯನ್ ದ್ವೀಪದಿಂದ ಹೊರಟು ಉತ್ತರಕ್ಕೆ ವಾಯವ್ಯದಿಂದ ಜಪಾನ್ ಕಡೆಗೆ ಸಾಗಿತು. ಬಾಂಬರ್‌ನ ಪ್ರಾಥಮಿಕ ಗುರಿ ಪ್ರಮುಖ ಸೇನಾ ಕೇಂದ್ರವಾದ ಹಿರೋಶಿಮಾ ನಗರವಾಗಿತ್ತು.
- ಸುಮಾರು 8.15ರ ವೇಳೆಗೆ ಎನೋಲಾ ಗೇ ತನ್ನ 9,700-ಪೌಂಡ್ ಯುರೇನಿಯಂ ಗನ್ ಮಾದರಿಯ ಬಾಂಬ್ 'ಲಿಟಲ್ ಬಾಯ್' ಅನ್ನು ನಿರ್ದಯವಾಗಿ ಹಿರೋಶಿಮಾದ ಮೇಲೆ ಹಾಕಿತು. ಸ್ಫೋಟದ ತೀವ್ರತೆಯನ್ನು ಸುಮಾರು 15 ಕಿಲೋಟನ್‌ಗಳು (15,000 ಟನ್ ಟಿಎನ್‌ಟಿಗೆ ಸಮಾನ) ಎಂದು ಅಂದಾಜಿಸಲಾಗಿತ್ತು.
- ಅಂದಾಜಿನ ಪ್ರಕಾರ ಆರಂಭಿಕ ಸ್ಫೋಟ, ಶಾಖ ಮತ್ತು ವಿಕಿರಣ ಪರಿಣಾಮಗಳ ಪರಿಣಾಮವಾಗಿ ಸುಮಾರು 70 ಸಾವಿರ ಜನ ಮರಣ ಹೊಂದಿದರು. 1945ರ ಅಂತ್ಯದ ವೇಳೆಗೆ ವಿಕಿರಣಗಳು ಮತ್ತು ಇತರ ದೀರ್ಘಕಾಲದ ಪರಿಣಾಮಗಳಿಂದಾಗಿ, ಹಿರೋಶಿಮಾ ಸಾವಿನ ಸಂಖ್ಯೆ 1 ಲಕ್ಷಕ್ಕಿಂತ ಹೆಚ್ಚಿತ್ತು. ಐದು ವರ್ಷಗಳ ಸಾವಿನ ಒಟ್ಟು ಮೊತ್ತ 2 ಲಕ್ಷ ಮೀರಿರಬಹುದು ಎಂದು ಅಂದಾಜಿಸಲಾಗಿದೆ. ಕ್ಯಾನ್ಸರ್ ಮತ್ತು ಇತರ ವಿಕಿರಣಶೀಲ ರೋಗಗಳ ದೀರ್ಘಾವಧಿಯ ಪರಿಣಾಮಗಳು ಕೂಡಾ ಇದುವರೆಗೂ ಮುಂದುವರಿಯುತ್ತಿದೆ.

ನಾಗಾಸಾಕಿ ಮೇಲಿನ ದಾಳಿಗೂ ಮುನ್ನ ಎಚ್ಚರಿಕೆ

- ಹಿರೋಶಿಮಾ ಮೇಲಿನ ಮಾರಣಾಂತಿಕ ಮತ್ತು ವಿನಾಶಕಾರಿ ದಾಳಿಯ ನಂತರ, ಪಾಟ್ಸ್‌ಡ್ಯಾಮ್ ಘೋಷಣೆಯ ಬೇಡಿಕೆಯಂತೆ ಜಪಾನ್ ಇನ್ನೂ ಕೂಡಾ ಬೇಷರತ್ತಾಗಿ ಶರಣಾಗಲು ನಿರಾಕರಿಸಿದರೆ, ಇದೇ ರೀತಿಯ ಮಾರಕ ಬಾಂಬ್‌ಗಳೊಂದಿಗೆ ಮತ್ತಷ್ಟು ದಾಳಿ ಮಾಡಲಾಗುತ್ತದೆ ಎಂದು ಅಮೆರಿಕದ ಟ್ರೂಮನ್ ಎಚ್ಚರಿಸಿದ್ದರು.
- ಎರಡು ದಿನಗಳ ನಂತರ ಆಗಸ್ಟ್ 8ರಂದು ಸೋವಿಯತ್ ಒಕ್ಕೂಟವು ಜಪಾನ್ ಮೇಲೆ ಯುದ್ಧವನ್ನು ಘೋಷಿಸಿತು. ಅಲ್ಲದೇ ಮಂಚೂರಿಯಾದಲ್ಲಿ ಜಪಾನಿನ ಪಡೆಗಳ ಮೇಲೆ ದಾಳಿ ಮಾಡಿತು.
- ಜಪಾನ್‌ನಲ್ಲಿ ಉಳಿದಿರುವ ನಾಗರಿಕರಿಗೆ ಊರುಬಿಟ್ಟು ತೆರಳಬೇಕೆಂದು ಅಮೆರಿಕದ ಸೈನಿಕರು ಕರಪತ್ರಗಳನ್ನು ಹಂಚತೊಡಗಿದರು. ಯಾವುದೇ ಎಚ್ಚರಿಕೆಯ ಮಾತುಗಳಿಗೆ ಜಪಾನ್ ಮಣಿಯಲಿಲ್ಲ. ಅಮೆರಿಕ ಮತ್ತೆ ಬಾಂಬ್ ಹಾಕಲು ಸನ್ನದ್ಧವಾಗುತ್ತದೆ.ಈ ಬಾರಿ ಕೊಕುರಾ ನಗರದ ಮೇಲೆ ಬಾಂಬ್ ಹಾಕುವುದೆಂದು ತೀರ್ಮಾನವಾಗುತ್ತದೆ.ಆದರೆ ಆಗಸ್ಟ್ 9 ರಂದು ಕೊಕುರಾದ ವಾತಾವರಣದಲ್ಲಿ ಮೋಡ ತುಂಬಿರುತ್ತದೆ.
- ಹಾರಾಡುತ್ತಾ ಹಾರಾಡುತ್ತಾ ಇಂಧನ ಖಾಲಿಯಾಗುತ್ತದೆ. ವಿಮಾನದಲ್ಲಿದ್ದ ಬಾಂಬ್ ಅನ್ನು ಮತ್ತೆ ತಿರುಗಿ ತೆಗೆದುಕೊಂಡು ಹೋಗುವುದು ಬೇಡವೆಂಬ ಅತಿ ಕ್ರೂರ ನಿರ್ಧಾರದೊಂದಿಗೆ ಫ್ಯಾಟ್ ಮಾನ್ ಬಾಂಬ್ ಅನ್ನು ನಾಗಾಸಾಕಿ ನಗರದ ಮೇಲೆಯೇ ಹಾಕಲಾಯಿತು.ಅಲ್ಲಿಯೂ ಅಪಾರ ಪ್ರಮಾಣದ ಸಾವುನೋವುಗಳು ಸಂಭವಿಸಿದವು.
- 1945 ಆಗಸ್ಟ್ 15ರಂದು ಜಪಾನ್ ತನ್ನ ಸೋಲು ಒಪ್ಪಿಕೊಂಡಿತು. ಅಲ್ಲಿಗೆ ಏಷ್ಯಾದಲ್ಲೂ ಯುದ್ಧ ಮುಕ್ತಾಯವಾಯಿತು. ಅಂತಿಮವಾಗಿ, 2 ಸೆಪ್ಟೆಂಬರ್ 1945ರಂದು ಎರಡನೇ ಮಹಾಯುದ್ಧ ಅಧಿಕೃತವಾಗಿ ಅಂತ್ಯವಾಯಿತು. ❖

EXAM DH ಪ್ರಜಾವಾಣಿ MASTERMIND™
ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ
ಮತ್ತಷ್ಟು 'ಪ್ರಚಲಿತ'ಕ್ಕಾಗಿ..
ಹಿರೋಶಿಮಾ ಮತ್ತು ನಾಗಾಸಾಕಿ ಅಣುಬಾಂಬ್ ದಾಳಿ ಕುರಿತ ಮತ್ತಷ್ಟು ಮಾಹಿತಿ ಹಾಗೂ ನಾಗರಿಕ ಸೇವಾ ಪರೀಕ್ಷೆಗೆ ಅಗತ್ಯವಾದ ಇಂಥ ಪ್ರಚಲಿತ ವಿದ್ಯಮಾನಗಳ ಲೇಖನ ಮತ್ತು ವಿಡಿಯೊಗಳಿಗಾಗಿ ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಎಕ್ಸಾಮ್ ಮಾಸ್ಟರ್ ಮೈಂಡ್ ಇ-ಪೇಪರ್‌ಗೆ ಚಂದಾದಾರರಾಗಿ. ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ.
www.exammastermind.com

ಪ್ರಚಲಿತ ವಿದ್ಯಮಾನಗಳು

ಯುಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ- 2, ಕೆಪಿಎಸ್‌ಸಿ -ಪ್ರಿಲಿಮ್ಸ್ ಮತ್ತು ಸಾಮಾನ್ಯ ಅಧ್ಯಯನ ಪತ್ರಿಕೆ-2 ಮತ್ತು ಇತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯವಿರುವ ರಾಷ್ಟ್ರೀಯ ಪ್ರಚಲಿತ ವಿದ್ಯಮಾನಗಳ ಕುರಿತ ಎರಡು ಪ್ರಮುಖ ಮಾಹಿತಿಗಳನ್ನು ಗುರುಶಂಕರ್ ಇಲ್ಲಿ ಹಂಚಿಕೊಂಡಿದ್ದಾರೆ.

1. ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮ

- 2014ರಿಂದ ಕೇಂದ್ರ ಪಶುಸಂಗೋಪನೆ ಮತ್ತು ಹೈನುಗಾರಿಕೆ ಇಲಾಖೆ ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮವನ್ನು ರಾಷ್ಟ್ರಾದ್ಯಂತ ಹಮ್ಮಿಕೊಂಡಿದೆ. ಇತ್ತೀಚೆಗೆ ಈ ಕಾರ್ಯಕ್ರಮದ ಪ್ರಗತಿಗೆ ಸಂಬಂಧಿಸಿದ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಲಾಯಿತು.
- ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮದ ಅನ್ವಯ ಹಾಲಿನ ಗುಣಮಟ್ಟವನ್ನು ಹಾಗೂ ಹಾಲಿನ ಉತ್ಪನ್ನಗಳ ಗುಣಮಟ್ಟವನ್ನು ಹೆಚ್ಚಿಸಲಾಗುತ್ತದೆ ಹಾಗೂ ಹೈನುಗಾರಿಕೆ ಚಟುವಟಿಕೆಗಳು ಸಂಘಟಿತ ವಲಯದಲ್ಲಿ ಕಾರ್ಯನಿರ್ವಹಿಸುವಂತೆ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತದೆ.

ಯೋಜನೆಯ ಪ್ರಮುಖಾಂಶಗಳು

- ಯೋಜನೆಯಲ್ಲಿ ಎರಡು ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, A- ಘಟಕ ಮತ್ತು B- ಘಟಕ ಎಂದು ವರ್ಗೀಕರಿಸಬಹುದು.

ಘಟಕ-A :

- ಈ ಘಟಕದ ಅಡಿಯಲ್ಲಿ ಗುಣಮಟ್ಟದ ಹಾಲನ್ನು ಉತ್ಪಾದಿಸಲು ಬೇಕಾದ ಅವಶ್ಯಕ ಮೂಲಭೂತ ಸವಲತ್ತುಗಳನ್ನು ಕಲ್ಪಿಸಲಾಗುತ್ತದೆ. ರಾಜ್ಯ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಒಕ್ಕೂಟಗಳು, ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಲು ಉತ್ಪಾದಕರ ಒಕ್ಕೂಟಗಳು, ಸ್ವಸಹಾಯ ಗುಂಪುಗಳ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಹಾಲು ಉತ್ಪಾದನಾ ಘಟಕಗಳು, ಹಾಲು ಉತ್ಪಾದಕ ಕಂಪನಿಗಳು, ರೈತ ಉತ್ಪಾದಕ ಸಂಘಟನೆಗಳು ಹೈನುಗಾರಿಕೆಯಲ್ಲಿ ತೊಡಗಿಕೊಂಡಿರುವ ಖಾಸಗಿ ವಲಯದ ಸಂಸ್ಥೆಗಳಿಗೆ ಬೇಕಾದ ಶೀತಲೀಕರಣ ಸೌಲಭ್ಯಗಳನ್ನು ಮೊದಲನೇ ಘಟಕದ ಅಡಿಯಲ್ಲಿ ಕಲ್ಪಿಸಲಾಗುತ್ತದೆ.

ಘಟಕ-B :

- ಈ ಘಟಕಕ್ಕೆ ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಘಟನೆಯ ವತಿಯಿಂದ ಹಣಕಾಸಿನ ಸಹಕಾರ ಹರಿದುಬರುತ್ತಿದೆ. ಸಹಕಾರಿ ಸಂಘಗಳ ಮೂಲಕ ಹೈನುಗಾರಿಕೆಯನ್ನು ಮತ್ತಷ್ಟು ಉತ್ತೇಜಿಸಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಪ್ರಸ್ತುತ ಪ್ರಾಥಮಿಕ ಹಂತದಲ್ಲಿ ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಹೈನುಗಾರಿಕೆಗೆ ಸಂಬಂಧಪಟ್ಟ ಮೂಲ ಸವಲತ್ತುಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಗ್ರಾಮಮಟ್ಟದಿಂದ ಮಾರುಕಟ್ಟೆವರೆಗಿನ ಹಾಲಿನ ಪೂರೈಕೆ ಮಾಡುವಂತಹ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತಿದೆ.

ವಿಶೇಷ ಸೂಚನೆ : ಈ ಯೋಜನೆಯು ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆಯಾಗಿದೆ.

ಯೋಜನೆಯ ಉದ್ದೇಶಗಳು

- ಹಾಲಿನ ಗುಣಮಟ್ಟವನ್ನು ಹೆಚ್ಚಿಸಲು ಬೇಕಾದ ಅವಶ್ಯಕ ಮೂಲ ಸವಲತ್ತುಗಳನ್ನು ಕಲ್ಪಿಸುವುದು ಮತ್ತು ಪ್ರಸ್ತುತ ಲಭ್ಯವಿರುವ ಮೂಲಭೂತ ಸವಲತ್ತುಗಳನ್ನು ಸಬಲೀಕರಣಗೊಳಿಸುವುದು ಹಾಗೂ ಗ್ರಾಹಕರಿಗೆ ಗುಣಮಟ್ಟದ ಹಾಲು ಪೂರೈಕೆಯಾಗುವಂತೆ ನೋಡಿಕೊಳ್ಳುವುದು.
- ಹೈನುಗಾರಿಕೆ ಉದ್ದಿಮೆಯಲ್ಲಿ ತೊಡಗಿಕೊಂಡಿರುವ ರೈತ ಸಮುದಾಯಕ್ಕೆ ಬೇಕಾದ ತರಬೇತಿಯನ್ನು ಕಲ್ಪಿಸುವುದು.
- ಗುಣಮಟ್ಟದ ಹಾಲು ಉತ್ಪಾದನೆ ಸಂಬಂಧಿತ ಅರಿವನ್ನು ಮೂಡಿಸುವುದು.
- ಗುಣಮಟ್ಟದ ಹಾಲು ಮತ್ತು ಗುಣಮಟ್ಟದ ಹಾಲು ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಸಂಶೋಧನಾ ಚಟುವಟಿಕೆಗಳನ್ನು ಕೈಗೊಳ್ಳುವುದು.

2. ರಾಷ್ಟ್ರೀಯ ಅಂಧತ್ವ ಮತ್ತು ದೃಷ್ಟಿಮಾಂದ್ಯತೆ ನಿಯಂತ್ರಣ ಕಾರ್ಯಕ್ರಮ

- ಇತ್ತೀಚೆಗೆ ಕೇಂದ್ರ ಸರ್ಕಾರದ ಆರೋಗ್ಯ ಸಚಿವಾಲಯ ರಾಷ್ಟ್ರೀಯ ಅಂಧತ್ವ ಮತ್ತು ದೃಷ್ಟಿಮಾಂದ್ಯತಾ ನಿಯಂತ್ರಣ ಕಾರ್ಯಕ್ರಮಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಸತ್ತಿನಲ್ಲಿ ಮಂಡಿಸಿದೆ. ಪ್ರಸ್ತುತ ಕಾರ್ಯಕ್ರಮದ ಸ್ಥಿತಿಗತಿ, ಮುಂದಿನ ದಿನಗಳಲ್ಲಿ ಸಚಿವಾಲಯದ ವತಿಯಿಂದ ತೆಗೆದುಕೊಳ್ಳುವ ಕ್ರಮಗಳು ಹಾಗೂ ಇತರೆ ಅಂಶಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಸಂಸತ್ತಿಗೆ ಒದಗಿಸಿತು.
- ಈ ಕಾರ್ಯಕ್ರಮವನ್ನು ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಯಾಗಿ 1976 ರಲ್ಲಿ ಹಮ್ಮಿಕೊಂಡಿದ್ದು ಅಂಧತ್ವದ ಹರಡುವಿಕೆಯನ್ನು ಶೇ 1.4 ರಿಂದ ಶೇ 0.3ಕ್ಕೆ ತಗ್ಗಿಸುವ ಗುರಿಯೊಂದಿಗೆ ಕಾರ್ಯಕ್ರಮವನ್ನು ಜಾರಿಗೆ ತರಲಾಯಿತು.

ಉದ್ದೇಶಗಳು

- ದೃಷ್ಟಿಮಾಂದ್ಯತೆ ಮತ್ತು ಅಂಧತ್ವವನ್ನು ಪ್ರಾಥಮಿಕ ಹಂತದಲ್ಲಿಯೇ ಪತ್ತೆ ಹಚ್ಚಿ ಸೂಕ್ತ ವೈದ್ಯಕೀಯ ಸವಲತ್ತುಗಳನ್ನು ಕಲ್ಪಿಸುವುದು.
- ದೃಷ್ಟಿ ಮಾಂದ್ಯತೆಯನ್ನು ಎರಡನೇ ಮತ್ತು ಮೂರನೇ ಹಂತದ ಸಮಸ್ಯೆಗಳೆಂದು ವರ್ಗೀಕರಿಸಿ ಈ ಹಂತದಲ್ಲಿಯೂ ಕೂಡ ವೈದ್ಯಕೀಯ ಸವಲತ್ತುಗಳನ್ನು ಕಲ್ಪಿಸುವ ಮೂಲಕ ರಾಷ್ಟ್ರದಾದ್ಯಂತ ದೃಷ್ಟಿಮಾಂದ್ಯತೆ ಸಮಸ್ಯೆಯನ್ನು ಬಗೆಹರಿಸುವುದು.
- ರಾಷ್ಟ್ರದಾದ್ಯಂತ ಆರೋಗ್ಯಕರ ಕಣ್ಣು ಮತ್ತು ದೃಷ್ಟಿ ಸಂಬಂಧಿತ ಸೇವೆಗಳನ್ನು ಕಲ್ಪಿಸಲು ಸಮಗ್ರ ಯೋಜನೆಗಳನ್ನು ಹಮ್ಮಿಕೊಳ್ಳುವುದು.
- ದೃಷ್ಟಿ ಹೀನತೆಯನ್ನು ತಗ್ಗಿಸುವ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಸಂಸ್ಥೆಗಳನ್ನು ಮತ್ತಷ್ಟು ಬಲ ವರ್ಧಿಸುವುದು ಹಾಗೂ ಉನ್ನತ ಮಟ್ಟಕ್ಕೆ ಕೊಂಡೊಯ್ಯುವುದು.
- ಭಾರತದ ಪ್ರತಿ ಜಿಲ್ಲೆಗಳಲ್ಲಿ ದೃಷ್ಟಿ ಆರೈಕೆ ಕೇಂದ್ರಗಳನ್ನು ಸ್ಥಾಪಿಸುವ ಮೂಲಕ ಅಂಧತ್ವವನ್ನು ತಗ್ಗಿಸುವುದು. ಪ್ರಸ್ತುತ ಈಗಾಗಲೇ ಅಸ್ತಿತ್ವದಲ್ಲಿರುವ ಕಣ್ಣಿನ ಆಸ್ಪತ್ರೆಗಳಿಗೆ ಬೇಕಾಗುವ ಹೆಚ್ಚುವರಿ ಮಾನವ ಸಂಪನ್ಮೂಲಗಳನ್ನು ಮತ್ತು ಮೂಲ ಸವಲತ್ತುಗಳನ್ನು ಕಲ್ಪಿಸುವುದು.
- ಕಣ್ಣಿನ ಆರೋಗ್ಯಕ್ಕೆ ಸಂಬಂಧಿಸಿದಂತೆ ಸಮುದಾಯದ ಮಟ್ಟದಲ್ಲಿ ಅರಿವನ್ನು ಹೆಚ್ಚಿಸುವುದು ಮತ್ತು ದೃಷ್ಟಿ ಮಾಂದ್ಯತೆ ತಡೆಗಟ್ಟುವ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸುವುದು. ❖

ಮಾದರಿ ಪ್ರಶ್ನೋತ್ತರಗಳು

ಐಎಎಸ್, ಕೆಎಎಸ್, ಕೆಪಿಎಸ್‌ಸಿ ಸೇರಿದಂತೆ ವಿವಿಧ ಹುದ್ದೆಗಳಿಗಾಗಿ ನಡೆಯುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ 'ಸಾಮಾನ್ಯ ಜ್ಞಾನ' ವಿಷಯಕ್ಕೆ ಸಂಬಂಧಿಸಿದ ಮಾದರಿ ಪ್ರಶ್ನೋತ್ತರಗಳನ್ನು ಇಲ್ಲಿ ನೀಡಲಾಗಿದೆ.

1. ಲೋಕಸಭೆಯಲ್ಲಿ ಅತಿ ಸುದೀರ್ಘವಾದ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆ ಯಾವ ಪ್ರಧಾನಮಂತ್ರಿಯ ಕಾಲದಲ್ಲಾಯಿತು ?

ಎ. ಅಟಲ್ ಬಿಹಾರಿ ವಾಜಪೇಯಿ
ಬಿ. ನರೇಂದ್ರ ಮೋ ದಿ
ಸಿ. ಮೊರಾರ್ಜಿ ದೇಸಾಯಿ
ಡಿ. ಲಾಲ್ ಬಹದ್ದೂರ್ ಶಾಸ್ತ್ರಿ

ಉತ್ತರ: ಡಿ.

2.ಸಿಂಧೂ ನದಿಯು ಲಡಾಖ್ ಕೇಂದ್ರಾಡಳಿತ ಪ್ರದೇಶವನ್ನು ಪ್ರವೇಶಿಸುವಾಗ ಕೆಳಗಿನ ಯಾವ ಉಪನದಿಗಳು ಸಿಂಧೂ ನದಿಯನ್ನು ಸೇರುತ್ತವೆ?

1) ಝುಸ್ಕಾರ್ (zaskar). 2) ನುಬ್ರಾ (nubra).
3) ಶ್ಯೋಕ್ (shyok) 4) ರಾವಿ (ravi).

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ) 1, 2, 3 ಮತ್ತು 4 ಬಿ) 1, 2 ಮತ್ತು 3
ಸಿ) 1 ಮತ್ತು 3 ಡಿ) 3 ಮತ್ತು 4.

ಉತ್ತರ : ಬಿ

3. ಮೌಂಟ್ ಎವರೆಸ್ಟ್ ಪರ್ವತವನ್ನು ನೇಪಾಳದಲ್ಲಿ ಏನೆಂದು ಕರೆಯುತ್ತಾರೆ ?

ಎ) ಸಾಗರಮಾತಾ ಬಿ) ಚೋಮೊಲುಂಗ್ಮ (Chomulungma)
ಸಿ) ಅಕ್ಸಾಯ್ ಚಿನ್ ಡಿ) ನುಬ್ರಾ ಪರ್ವತ.

ಉತ್ತರ : ಎ

4.ಸಾರಾಮತಿ ಶಿಖರವು ಯಾವ ಪರ್ವತಗಳಲ್ಲಿ ಕಂಡುಬರುತ್ತದೆ?

ಎ) ಮಿಜೋ ಬೆಟ್ಟಗಳು. ಬಿ) ನಾಗ ಬೆಟ್ಟಗಳು.
ಸಿ) ಮಣಿಪುರ ಬೆಟ್ಟಗಳು. ಡಿ) ಕಾರಕೋರಂ ಪರ್ವತಶ್ರೇಣಿ.

ಉತ್ತರ : ಬಿ.

5.ಮಹಿಳಾ ಮೀಸಲಾತಿ ಮಸೂದೆಯ ಐತಿಹಾಸಿಕ ಹೆಜ್ಜೆಗಳಿಗೆ ಸಂಬಂಧಿಸಿದ ಸೂಕ್ತ ಅಂಶಗಳನ್ನು ಗುರುತಿಸಿ?

1) ಮಹಿಳೆಯರಿಗೆ ಶಾಸಕಾಂಗಗಳಲ್ಲಿ ಮೀಸಲಾತಿ ಕಲ್ಪಿಸುವ ಮಸೂದೆಯನ್ನು ಮೊಟ್ಟಮೊದಲ ಬಾರಿಗೆ 1996 ರಲ್ಲಿ ಮಂಡಿಸಲಾಯಿತು.
2) 2008 ರಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಿ 2010 ರಲ್ಲಿ ಅಂಗೀಕರಿಸಲಾಗಿದೆ.

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1 ಮಾತ್ರ ಬಿ. 2 ಮಾತ್ರ
ಸಿ. 1 ಮತ್ತು 2
ಡಿ. ಮೇಲಿನ ಎರಡು ಹೇಳಿಕೆಗಳು ತಪ್ಪಾಗಿವೆ.

ಉತ್ತರ : ಸಿ

6. ಸ್ಥಳೀಯ ಸಂಸ್ಥೆಗಳಲ್ಲಿ ಕೆಳಗಿನ ಯಾವ ರಾಜ್ಯಗಳು ಶೇ 50 ರಷ್ಟು ಮಹಿಳಾ ಮೀಸಲಾತಿಯನ್ನು ಕಲ್ಪಿಸಿವೆ?

1. ಕೇರಳ 2. ಮಹಾರಾಷ್ಟ್ರ
3. ಬಿಹಾರ್ 4. ಆಂಧ್ರಪ್ರದೇಶ
5. ಜಾರ್ಖಂಡ್ 6. ಮಧ್ಯಪ್ರದೇಶ

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1, 2, 3, 4 ಮತ್ತು 5 ಬಿ. 2 ಮತ್ತು 3
ಸಿ. 1 ಮತ್ತು 3 ಡಿ. 3 ಮತ್ತು 5

ಉತ್ತರ : ಎ

7. ರಾಷ್ಟ್ರೀಯ ಹಸಿರು ನ್ಯಾಯಾಧಿಕರಣವನ್ನು ಕೆಳಗಿನ ಯಾವ ಸ್ವರೂಪದ ಸಂಸ್ಥೆಯೆಂದು ಪರಿಗಣಿಸಬಹುದು?

ಎ. ಸಂವಿಧಾನಾತ್ಮಕ ಸಂಸ್ಥೆ
ಬಿ. ಶಾಸನೀಯ ಸಂಸ್ಥೆ
ಸಿ. ಕಾರ್ಯಾಂಗದ ಆದೇಶದ ಮೇಲೆ ಸ್ಥಾಪನೆಯಾಗಿರುವ ಸಂಸ್ಥೆ
ಡಿ. ಸಾರ್ವಜನಿಕ ವಲಯದ ಕಂಪನಿಯ ಸ್ಥಾನಮಾನ

ಉತ್ತರ : ಬಿ

8. ಕೆಳಗಿನ ಯಾವ ಬುಡಕಟ್ಟುಗಳು ಗ್ರೇಟ್ ನಿಕೋಬಾರ್ ದ್ವೀಪದಲ್ಲಿ ವಾಸಿಸುತ್ತಿವೆ?

1. ನಿಕೋಬಾರಿ
2. ಶಾಂಪೆನ್
3. ಅಪಟಾಮಿ
4. ಕುಕಿ

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1 ಮತ್ತು 2 ಬಿ. 1 ಮತ್ತು 3
ಸಿ. 1 ಮತ್ತು 4 ಡಿ. 2 ಮತ್ತು 4

ಉತ್ತರ : ಎ

9.ರಾಷ್ಟ್ರೀಯ ಹೈನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮಕ್ಕೆ ಕೆಳಗಿನ ಯಾವ ಅಂತರರಾಷ್ಟ್ರೀಯ ಸಂಸ್ಥೆಗಳು ಹಣಕಾಸಿನ ನೆರವನ್ನು ಕಲ್ಪಿಸುತ್ತಿವೆ?

ಎ. ಅಂತರರಾಷ್ಟ್ರೀಯ ಹಣಕಾಸು ನಿಧಿ.
ಬಿ. ವಿಶ್ವಬ್ಯಾಂಕ್.
ಸಿ. ಅಂತರರಾಷ್ಟ್ರೀಯ ಕೃಷಿ ಸಂಘಟನೆ.
ಡಿ. ಜಪಾನ್ ಅಂತರರಾಷ್ಟ್ರೀಯ ಸಹಕಾರ ಸಂಸ್ಥೆ.

ಉತ್ತರ : ಡಿ

10. ಕೆಳಗಿನ ಯಾವ ಸಂಸ್ಥೆಗಳು ಮತ್ತು ವ್ಯಕ್ತಿಗಳು ಕೇಂದ್ರ ಸರ್ಕಾರದ ದೀಕ್ಷಾ ಪೋರ್ಟಲ್ ಬಳಕೆಗೆ ಅರ್ಹರಾಗಿರುತ್ತಾರೆ?

1. ಶಿಕ್ಷಕರು
2. ಸರ್ಕಾರಿ ಸಂಸ್ಥೆಗಳು
3. ಖಾಸಗಿ ಸಂಸ್ಥೆಗಳು
4. ಸರ್ಕಾರೇತರ ಸಂಸ್ಥೆಗಳು

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ

ಎ. 1, 2 ಮತ್ತು 3 ಬಿ. 1 ಮತ್ತು 3
ಸಿ. 2 ಮತ್ತು 4 ಡಿ. 3 ಮಾತ್ರ

ಉತ್ತರ: ಎ

ಮತ್ತಷ್ಟು ಪ್ರಶ್ನೋತ್ತರಗಳಿಗಾಗಿ ಕೋಡ್ ಸ್ಕ್ಯಾನ್ ಮಾಡಿ

'ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ನೇಮಕಾತಿ'

ಸ್ಪೆಷಲ್ ಆಫೀಸರ್ಸ್ ಆಯ್ಕೆಗೆ ಆನ್‌ಲೈನ್ ಪರೀಕ್ಷೆಗಳು

ಆರ್.ಕೆ.ಬಾಲಚಂದ್ರ

ಕಳೆದ ಸಂಚಿಕೆಯಲ್ಲಿ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ 1,402 ಸ್ಪೆಷಲ್ ಆಫೀಸರ್ಸ್ ನೇಮಕಾತಿ ಕುರಿತು ಅರ್ಜಿ ಸಲ್ಲಿಕೆ ವಿವರ ಪ್ರಕಟಿಸಲಾಗಿತ್ತು. ಈ ಸಂಚಿಕೆಯಲ್ಲಿ ಹುದ್ದೆಗಳ ಆಯ್ಕೆಗಾಗಿ ನಡೆಸುವ ಪರೀಕ್ಷೆಗಳ ವಿವರ ಮತ್ತು ಪರೀಕ್ಷೆಗೆ ನಿಗದಿಪಡಿಸಿರುವ ವಿಷಯಗಳು, ಅಂಕಗಳು ಮತ್ತು ಅವಧಿ ಕುರಿತ ಮಾಹಿತಿ ನೀಡಲಾಗಿದೆ.

ಬ್ಯಾಂಕ್ ಸಿಬ್ಬಂದಿ ನೇಮಕಾತಿ ಸಂಸ್ಥೆ (ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಪರ್ಸೋನಲ್ ಸೆಲೆಕ್ಷನ್- ಐಬಿಪಿಎಸ್) ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಖಾಲಿಯಿರುವ ಸ್ಪೆಷಲ್ ಆಫೀಸರ್ಸ್‌ಗ ನೇಮಕಾತಿಗಾಗಿ ಮೂರು ಹಂತಗಳಲ್ಲಿ ಪರೀಕ್ಷೆಗಳನ್ನು ನಡೆಸುತ್ತದೆ. ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ಸಂದರ್ಶನ. ಇವೇ ಆ ಮೂರು ಹಂತಗಳು. ಇವುಗಳಲ್ಲಿ ಮೊದಲ ಎರಡು ಪರೀಕ್ಷೆಗಳನ್ನು ಆನ್‌ಲೈನ್ ಮೂಲಕ (ಕಂಪ್ಯೂಟರ್ ಆಧಾರಿತ ಪರೀಕ್ಷೆ -ಸಿಬಿಟಿ) ನಡೆಸಲಾಗುತ್ತದೆ.

ಪೂರ್ವಭಾವಿ ಪರೀಕ್ಷೆ

ಇದು ಒಂದು ಗಂಟೆ ಅವಧಿಯ ಪರೀಕ್ಷೆ. ಮೂರು ಪತ್ರಿಕೆಗಳಿರುತ್ತವೆ. 125 ಅಂಕಗಳಿಗೆ 150 ಪ್ರಶ್ನೆಗಳನ್ನು ಕೇಳಲಾಗುತ್ತದೆ. ಪ್ರತಿ ಪತ್ರಿಕೆಗೂ 40 ನಿಮಿಷಗಳಂತೆ ಒಟ್ಟಾರೆ 120 ನಿಮಿಷಗಳು. ಇಂಗ್ಲಿಷ್ ಭಾಷಾ ಪತ್ರಿಕೆಗೆ 50 ಪ್ರಶ್ನೆಗಳು (25 ಅಂಕ), ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್‌ಗೆ 50 ಪ್ರಶ್ನೆಗಳು(50 ಅಂಕ) ಹಾಗೂ ರೀಸನಿಂಗ್ ಎಬಿಲಿಟಿಯ 50 ಪ್ರಶ್ನೆ(50 ಅಂಕ) ಗಳಿರಲಿವೆ (ಇದು ರಾಜ್‌ಭಾಷಾ ಅಧಿಕಾರಿ ಹಾಗೂ ಲಾ ಆಫೀಸರ್ ಹುದ್ದೆಗಳಿಗೆ ಹೊರತಾಗಿ. ಇವೆರಡೂ ಹುದ್ದೆಗಳಿಗೆ ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್ ಪರೀಕ್ಷೆ ಬದಲಾಗಿ ಬ್ಯಾಂಕಿಂಗ್ ಕ್ಷೇತ್ರಕ್ಕೆ ಸಂಬಂಧಿಸಿದ ಸಾಮಾನ್ಯ ಅರಿವು ಪರೀಕ್ಷಿಸುವ ವಿಷಯ ಕುರಿತು 50 ಅಂಕಗಳ 50 ಪ್ರಶ್ನೆಗಳಿರಲಿವೆ)

ಪ್ರತಿ ಪರೀಕ್ಷೆಯಲ್ಲೂ ಕನಿಷ್ಠ ಅಂಕ ಗಳಿಸಬೇಕೆಂಬ ನಿಯಮವಿದೆ. ಆದರೆ ಒಟ್ಟಾರೆ ಹೆಚ್ಚು ಅಂಕಗಳಿಸುವುದು ಮುಖ್ಯ. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಮುಂದಿನ ಹಂತದ ಅಂದರೆ ಮುಖ್ಯ ಪರೀಕ್ಷೆಗೆ ಅರ್ಹತೆ ಪಡೆಯುತ್ತಾರೆ. ಮುಖ್ಯ ಪರೀಕ್ಷೆಯು ಬೆಂಗಳೂರು ಹಾಗೂ ಹುಬ್ಬಳ್ಳಿ-ಧಾರವಾಡಗಳಲ್ಲಿ ಮಾತ್ರ ನಡೆಯಲಿದೆ.

ಮುಖ್ಯ ಪರೀಕ್ಷೆ

ಮುಖ್ಯ ಪರೀಕ್ಷೆಯು ವೃತ್ತಿಪರ ಜ್ಞಾನಕ್ಕೆ ಸಂಬಂಧಿಸಿದ್ದು. ಇದು 45 ನಿಮಿಷಗಳ ಅವಧಿಯ ಪರೀಕ್ಷೆಯಾಗಿದ್ದು, 60 ಪ್ರಶ್ನೆಗಳನ್ನು 60 ಅಂಕಗಳಿಗೆ ಕೇಳಲಾಗುತ್ತದೆ(ರಾಜ ಭಾಷಾ ಅಧಿಕಾರಿಗಳ ಹುದ್ದೆಗಳಿಗೆ ಡಿಸ್ಕ್ರಿಪ್ಟಿವ್ ಟೆಸ್ಟ್ ಎರಡು ಹಂತಗಳಲ್ಲಿ ನಡೆಯಲಿದೆ). ಇದರಲ್ಲಿ ವೃತ್ತಿಪರ ಜ್ಞಾನಕ್ಕೆ ಸಂಬಂಧಿಸಿದ ಆಬ್ಜೆಕ್ಟಿವ್ ಮಾದರಿಯ 45 ಪ್ರಶ್ನೆಗಳು, ವೃತ್ತಿಪರ ಜ್ಞಾನಕ್ಕೆ ಸಂಬಂದಿಸಿದಂತೆ ಇನ್ನೊಂದು ಡಿಸ್ಕ್ರಿಪ್ಟಿವ್ ಪತ್ರಿಕೆಯಲ್ಲಿ ಎರಡು ಪ್ರಶ್ನೆಗಳಿರಲಿವೆ. ಎರಡೂ ಪರೀಕ್ಷೆಗಳಿಗೆ 30 ನಿಮಿಷಗಳಂತೆ ಒಟ್ಟಾರೆ ಒಂದು ಗಂಟೆಯ ಅವಧಿ ನೀಡಲಾಗಿದೆ.

ಗಮನಿಸಿ: ಮುಖ್ಯ ಪರೀಕ್ಷೆಯಲ್ಲಿ ಬದಲಾವಣೆ ಮಾಡಿದ್ದು ಈ ಸಲ ವೃತ್ತಿಪರ ಜ್ಞಾನದ ಪರೀಕ್ಷೆ ಬರೆಯಬೇಕು. (ಸ್ಪೆಷಲ್ ಆಫೀಸರ್ ಹುದ್ದೆಗಳಾಗಿರುವುದರಿಂದ)

ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಪರೀಕ್ಷೆ ಬರೆಯಲು ಅವಕಾಶವಿದೆ. ಕನ್ನಡದಲ್ಲಿ ಪರೀಕ್ಷೆ ಬರೆಯಲು ಅವಕಾಶವಿಲ್ಲ. ಋಣಾತ್ಮಕ ಮೌಲ್ಯಮಾಪನವಿದೆ. ಈ ನಿಯಮದನ್ವಯ ತಪ್ಪು ಉತ್ತರ ಗುರುತಿಸಿದಲ್ಲಿ, ಪ್ರಿಲಿಮ್ಸ್ ಮತ್ತು ಮುಖ್ಯ ಪರೀಕ್ಷೆಗಳಲ್ಲಿ ಆಯಾ ವಿಷಯದ ಪ್ರತಿ ಪ್ರಶ್ನೆಗೆ ನಿಗದಿ ಪಡಿಸಿದ ಅಂಕದ 0.25 ಅಂಕವನ್ನು ಗಳಿಸಿದ ಅಂಕದಿಂದ ಕಳೆಯಲಾಗುತ್ತದೆ.

ಅಂತಿಮ ಹಂತಕ್ಕೆ ಆಯ್ಕೆ

ಮುಖ್ಯ ಪರೀಕ್ಷೆಗಳಲ್ಲಿ ಕನಿಷ್ಠ ಅರ್ಹತಾ ಅಂಕಗಳನ್ನು ಬ್ಯಾಂಕ್ ನಿರ್ಧರಿಸುತ್ತದೆ. ಬ್ಯಾಂಕ್ ನಿಗದಿಪಡಿಸಿದಷ್ಟು ಅಂಕ ಪಡೆದವರು ಮಾತ್ರ ಮೂರನೇ ಹಂತಕ್ಕೆ ಅರ್ಹರಾಗುತ್ತಾರೆ. ಮೂರನೇ ಹಂತ ಅಂದರೆ ಸಂದರ್ಶನ (100 ಅಂಕಗಳು) ಬ್ಯಾಂಕ್‌ಗಳು ನಡೆಸಲಿವೆ.

ಆಯ್ಕೆ ಪಟ್ಟಿ

ಅಂತಿಮ ಸುತ್ತಿಗೆ ಆಯ್ಕೆಯಾದ ಅಭ್ಯರ್ಥಿಗಳು ಹಂತ-II ಪ್ರತ್ಯೇಕವಾಗಿ ಅರ್ಹತೆ ಪಡೆದಿರಬೇಕು. ಮುಖ್ಯ ಪರೀಕ್ಷೆಯಲ್ಲಿ ಪಡೆದ ಅಂಕಗಳು, ವಸ್ತುನಿಷ್ಠ ಪರೀಕ್ಷೆ ಮತ್ತು ವಿವರಣಾತ್ಮಕ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಹಾಗೂ ಹಂತ-3 ರಲ್ಲಿ ಪಡೆದ ಅಂಕಗಳಿಗೆ ಸೇರಿಸಲಾಗುತ್ತದೆ. ಅರ್ಹತೆ ಪಟ್ಟಿಗೆ ಪ್ರಾಥಮಿಕ ಪರೀಕ್ಷೆಯಲ್ಲಿ (ಹಂತ-1) ಪಡೆದ ಅಂಕಗಳನ್ನು ಪರಿಗಣಿಸುವುದಿಲ್ಲ.

ಹಂತ-2 ರಲ್ಲಿ ಅಭ್ಯರ್ಥಿಗಳು ಪಡೆದಿರುವ ಅಂಕಗಳಲ್ಲಿ ಶೇ 80 ಅಂಕಗಳು ಮತ್ತು ಹಂತ-3 ರಲ್ಲಿ ಪಡೆದ ಅಂಕಗಳಲ್ಲಿ ಶೇ 20ರಷ್ಟು ಅಂಕಗಳನ್ನು ತೆಗೆದುಕೊಂಡು ಸೇರಿಸಿ ನಂತರ ಅಂತಿಮ ಅರ್ಹತಾ ಪಟ್ಟಿಯನ್ನು ತಯಾರಿಸಲಾಗುತ್ತದೆ. ಹಂತ- 2 ಮತ್ತು ಹಂತ-3 ರಲ್ಲಿ ಉನ್ನತ ಶ್ರೇಣಿಯನ್ನು ಪಡೆದ ಪ್ರತಿ ವರ್ಗದ ಮಾತ್ರ ಆಯ್ಕೆ ಮಾಡಲಾಗುವುದು.

ಸ್ಪೆಷಲ್ ಆಫೀಸರ್ ಹುದ್ದೆಗಳ ಕುರಿತ ಇನ್ನಷ್ಟು ಮಾಹಿತಿಗಾಗಿ https://ibpsonline.ibps.in/crpsp13jun23/ ಹಾಗೂ www.ibps.in ಜಾಲತಾಣಗಳಿಗೆ ಭೇಟಿ ನೀಡಿ.

(ಲೇಖಕರು ಬ್ಯಾಂಕಿಂಗ್ ಮತ್ತು ವ್ಯಕ್ತಿತ್ವ ವಿಕಸನ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಮಡಿಕೇರಿ)

'ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು' ಸಿದ್ಧ

2 ಬಾರಿ ಬೋರ್ಡ್ ಪರೀಕ್ಷೆ

ನವದೆಹಲಿ(ಪಿಟಿಐ): ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಅನ್ವಯ ರೂಪಿಸಿರುವ ಹೊಸ ಪಠ್ಯಕ್ರಮ ಚೌಕಟ್ಟಿನ ಪ್ರಕಾರ ವರ್ಷದಲ್ಲಿ ಎರಡು ಬಾರಿ ಬೋರ್ಡ್ ಪರೀಕ್ಷೆಗಳನ್ನು ನಡೆಸಲಾಗುತ್ತದೆ.

ಈ ಪರೀಕ್ಷೆಗಳ ಪೈಕಿ, ತಾನು ಪಡೆದ ಅಧಿಕ ಅಂಕಗಳನ್ನು ಉಳಿಸಿಕೊಳ್ಳುವ ಅವಕಾಶವನ್ನು ವಿದ್ಯಾರ್ಥಿಗಳಿಗೆ ನೀಡಲಾಗುತ್ತದೆ. 11 ಮತ್ತು 12ನೇ ತರಗತಿ ವಿದ್ಯಾರ್ಥಿಗಳು ಎರಡು ಭಾಷೆಗಳನ್ನು ಕಲಿಯಬೇಕಿದ್ದು, ಆ ಪೈಕಿ ಒಂದು ಭಾರತೀಯ ಭಾಷೆಯಾಗಿರಬೇಕು ಎಂಬ ಅಂಶವನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್‌ಸಿಎಫ್) ಹೊಂದಿದೆ ಎಂದು ಶಿಕ್ಷಣ ಸಚಿವಾಲಯ ಅಧಿಕಾರಿಗಳು ಹೇಳಿದ್ದಾರೆ.

'ಎನ್‌ಇಪಿ ಅನ್ವಯ ರೂಪಿಸಿರುವ ಈ ಪಠ್ಯಕ್ರಮದ ಆಧಾರದ ಮೇಲೆಯೇ ಮುಂದಿನ ಶೈಕ್ಷಣಿಕ ವರ್ಷದ ಪಠ್ಯ ಪುಸ್ತಕಗಳನ್ನು ಸಿದ್ಧಪಡಿಸಲಾಗುವುದು' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ವಿದ್ಯಾರ್ಥಿಗಳು ಎಷ್ಟು ತಿಂಗಳು ತರಬೇತಿ ಪಡೆದಿದ್ದಾರೆ ಮತ್ತು ಕಲಿತಿರುವುದನ್ನು ನೆನಪಿನಲ್ಲಿಟ್ಟುಕೊಳ್ಳುತ್ತಾರೆ ಎಂಬುದರ ಬದಲಾಗಿ ಅವರು, ವಿಷಯಗಳನ್ನು ಎಷ್ಟು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ ಹಾಗೂ ತಮ್ಮ ಸಾಮರ್ಥ್ಯಗಳಿಗೆ ತಕ್ಕಂತೆ ಎಷ್ಟು ಸಾಧನೆ ಮಾಡಿದ್ದಾರೆ ಎಂಬುದರ ಮೌಲ್ಯಮಾಪನಕ್ಕೆ ಈ ಬೋರ್ಡ್ ಪರೀಕ್ಷೆಗಳು ನೆರವಾಗಲಿವೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ವಿದ್ಯಾರ್ಥಿಗಳು ತಮ್ಮ ಸಾಧನೆಯನ್ನು ಉತ್ತಮಪಡಿಸಿಕೊಳ್ಳಲು ಅನುವಾಗುವಂತೆ ವರ್ಷದಲ್ಲಿ ಎರಡು ಬಾರಿ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ತಾವು ಉತ್ತಮವಾಗಿ ಓದಿಕೊಂಡಿರುವ ವಿಷಯದ ಪರೀಕ್ಷೆ ತೆಗೆದುಕೊಳ್ಳಲು ವಿದ್ಯಾರ್ಥಿಗಳಿಗೆ ಸಾಧ್ಯವಾಗಲಿದೆ' ಎಂದು ಹೇಳಿದ್ದಾರೆ.

'11 ಮತ್ತು 12ನೇ ತರಗತಿಯಲ್ಲಿ ವಿಷಯಗಳ ಆಯ್ಕೆ ಕುರಿತು ಯಾವುದೇ ನಿರ್ಬಂಧ ವಿಧಿಸುವುದಿಲ್ಲ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಇರುತ್ತದೆ' ಎಂದು ಹೇಳಿದ್ದಾರೆ.

'ಬರುವ ದಿನಗಳಲ್ಲಿ, ಪರೀಕ್ಷಾ ಮಂಡಳಿಗಳು ಅಗತ್ಯಕ್ಕೆ ತಕ್ಕಂತೆ ಪರೀಕ್ಷೆಗಳನ್ನು ನಡೆಸಬಲ್ಲ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಬೋರ್ಡ್ ಪರೀಕ್ಷೆ ನಡೆಸುವುದಕ್ಕೂ ಮುನ್ನ, ಪ್ರಶ್ನೆಪತ್ರಿಕೆ ರೂಪಿಸುವವರು ಹಾಗೂ ಮೌಲ್ಯಮಾಪಕರು ವಿಶ್ವವಿದ್ಯಾಲಯ ಪ್ರಮಾಣಿತ ಕೋರ್ಸ್‌ಗಳನ್ನು ಪೂರ್ಣಗೊಳಿಸಬೇಕು' ಎಂದು ಎನ್‌ಸಿಎಫ್‌ನಲ್ಲಿ ವಿವರಿಸಲಾಗಿದೆ.

ನರೇಗಾದ ₹6,366 ಕೋಟಿ ಬಾಕಿ: ಮಲ್ಲಿಕಾರ್ಜುನ ಖರ್ಗೆ ಟೀಕೆ



ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ನರೇಗಾ ಯೋಜನೆಗೆ ಮೂರನೇ ಒಂದು ಭಾಗದಷ್ಟು ಅನುದಾನವನ್ನು ಕಡಿತಗೊಳಿಸಿದೆ. ಈ ನಡುವೆಯೇ 18 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಒಟ್ಟು ₹ 6,366 ಕೋಟಿ ಅನುದಾನವನ್ನು ಬಾಕಿ ಉಳಿಸಿಕೊಂಡಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ದೂರಿದ್ದಾರೆ.

2005ರ ಆಗಸ್ಟ್ 23ರಂದು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಜಾರಿಗೊಳಿಸಿತು. ಆ ಮೂಲಕ ದೇಶದ ಕೋಟ್ಯಂತರ ಜನರಿಗೆ ಉದ್ಯೋಗದ ಭರವಸೆ ನೀಡಿತು ಎಂದು ಯೋಜನೆ ಆರಂಭಿಸಿದ ದಿನವನ್ನು 'ಎಕ್ಸ್'ನಲ್ಲಿ (ಟ್ವಿಟರ್) ನೆನಪಿಸಿಕೊಂಡಿದ್ದಾರೆ.

ಪ್ರಸ್ತುತ ಯೋಜನೆಯಡಿ 14.42 ಕೋಟಿ ಜನರು ನೋಂದಾಯಿಸಿಕೊಂಡಿದ್ದಾರೆ. ಇವರಲ್ಲಿ ಅರ್ಧದಷ್ಟು ಮಹಿಳೆಯರಿದ್ದಾರೆ. ಆದರೆ, ಪ್ರಸಕ್ತ ಸಾಲಿನ ಕೇಂದ್ರದ ಬಜೆಟ್‌ನಲ್ಲಿ ಶೇ 33ರಷ್ಟು ಅನುದಾನವನ್ನು ಕಡಿತಗೊಳಿಸಿ ಯೋಜನೆಯ ಕುಂಠಿತಕ್ಕೆ ಸರ್ಕಾರ ಒತ್ತು ನೀಡಿದೆ ಎಂದು ಟೀಕಿಸಿದ್ದಾರೆ.

ಕೋವಿಡ್ ಕಾಲಘಟ್ಟದಲ್ಲಿ ಕೋಟ್ಯಂತರ ಜನರು ಸಂಕಷ್ಟಕ್ಕೆ ಸಿಲುಕಿದ್ದರು. ಅವರ ಆರ್ಥಿಕ ಭದ್ರತೆಗೆ ಯೋಜನೆಯು ಜೀವರಕ್ಷಕವಾಯಿತು. ಪ್ರಧಾನಿಯಾಗಿದ್ದ ಡಾ.ಮನಮೋಹನ್ ಸಿಂಗ್ ಅವರ ನೇತೃತ್ವದಡಿ ಅನುಷ್ಠಾನವಾದ ಈ ಯೋಜನೆಯು ಕೋಟ್ಯಂತರ ಜನರ ಜೀವನೋಪಾಯಕ್ಕೆ ದಾರಿಯಾಗಿದೆ ಎಂದಿದ್ದಾರೆ.

ಕೋಚಿಂಗ್ ಕೇಂದ್ರಗಳ ಜೊತೆ ಶಾಲೆ ಕಾಲೇಜು ಜೋಡಣೆ: ಅರ್ಜಿ ವಜಾ

ನವದೆಹಲಿ (ಪಿಟಿಐ): ಕೋಚಿಂಗ್ ಕೇಂದ್ರಗಳನ್ನು ಶಾಲೆಗಳು ಮತ್ತು ಕಾಲೇಜುಗಳೊಂದಿಗೆ ಜೋಡಿಸುವಂತೆ ಕೋರಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ಬುಧವಾರ ತಿರಸ್ಕರಿಸಿದ ದೆಹಲಿ ಹೈಕೋರ್ಟ್, ಇದೊಂದು ತಪ್ಪು ಗ್ರಹಿಕೆಯಿಂದ ಕೂಡಿರುವ ಪಿಐಎಲ್ ಎಂದು ಹೇಳಿದೆ.

ಈ ಕುರಿತು ನೀತಿ ರೂಪಿಸುವಂತೆ ನ್ಯಾಯಾಲಯವು ಸರ್ಕಾರಕ್ಕೆ ನಿರ್ದೇಶಿಸಲು ಸಾಧ್ಯವಿಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ, ನ್ಯಾಯಮೂರ್ತಿ ಸಂಜೀವ್ ನರುಲಾ ಅವರ ಪೀಠ ತಿಳಿಸಿದೆ.

'ಕೋಚಿಂಗ್ ಕೇಂದ್ರಗಳನ್ನು ಶಾಲೆ ಮತ್ತು ಕಾಲೇಜುಗಳ ಜತೆ ಸಂಪರ್ಕಿಸುವಂತೆ ಮತ್ತು ಪಾಲುದಾರರನ್ನಾಗಿ ಮಾಡುವಂತೆ ನೀತಿ ರೂಪಿಸಲು ನ್ಯಾಯಾಲಯವು ಸರ್ಕಾರಕ್ಕೆ ನಿರ್ದೇಶನ ನೀಡಲು ಆಗದು. ಇದು ತಪ್ಪು ಗ್ರಹಿಕೆಯಿಂದ ಕೂಡಿದ ಅರ್ಜಿಯಾಗಿದ್ದು, ವಜಾಗೊಳಿಸಲಾಗಿದೆ' ಎಂದು ಪೀಠ ಹೇಳಿದೆ. 'ಪ್ರತಿ ವಿದ್ಯಾರ್ಥಿಯೂ ಕೋಚಿಂಗ್ ಕೇಂದ್ರಕ್ಕೆ ಹಾಜರಾಗುವುದು ಕಡ್ಡಾಯವಲ್ಲ. ಅದು ಐಚ್ಛಿಕ' ಎಂದು ಇದೇ ವೇಳೆ ತಿಳಿಸಿದೆ.

ದೆಹಲಿ ಸರ್ಕಾರದ ಪರವಾಗಿ ಹಾಜರಾಗಿದ್ದ ವಕೀಲ ಸಂತೋಷ್ ಕುಮಾರ್ ತ್ರಿಪಾಠಿ ಅವರು, ಅರ್ಜಿದಾರರ ಮನವಿಯಂತೆ ಕೋಚಿಂಗ್ ಕೇಂದ್ರಗಳನ್ನು ಶಾಲೆ, ಕಾಲೇಜುಗಳ ಜತೆ ಸಂಪರ್ಕಿಸುವಂತೆ ಮಾಡಿದರೆ, ಅದು ಹೊಸ ಬಗೆಯ ಶೋಷಣೆಗೆ ದಾರಿ ಮಾಡಿಕೊಡುತ್ತದೆ ಎಂದು ವಾದಿಸಿದರು. ಅರ್ಜಿದಾರ ಗಿರೀಶ್ ಕುಮಾರಿ ಗುಪ್ತಾ ಅವರು, 'ಕೋಚಿಂಗ್ ಕೇಂದ್ರಗಳು ಸಮಾನಾಂತರ ಶಿಕ್ಷಣ ವ್ಯವಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿವೆ. ಆದರೆ ಅವುಗಳು ಕಾನೂನುಬದ್ಧವಾಗಿಲ್ಲ. ಇದರಿಂದ ಅಂತಿಮವಾಗಿ ವಿದ್ಯಾರ್ಥಿಗಳ ಏಳಿಗೆಗೆ ಹಾನಿಯಾಗುತ್ತದೆ' ಎಂದು ಅರ್ಜಿಯಲ್ಲಿ ಪ್ರತಿಪಾದಿಸಿದ್ದಾರೆ.

'ಕೋಚಿಂಗ್ ಕೇಂದ್ರಗಳನ್ನು ಶಾಲೆ, ಕಾಲೇಜುಗಳ ಜತೆ ಜೋಡಿಸಿದರೆ, ಅವುಗಳನ್ನು ಕಾನೂನುಬದ್ಧಗೊಳಿಸಲು ಸರ್ಕಾರಕ್ಕೆ ಸಾಧ್ಯವಾಗುತ್ತದೆ. ಕೋಚಿಂಗ್ ಕೇಂದ್ರಗಳು ನೋಂದಣಿ ಮಾಡಿಸಬೇಕಾಗುತ್ತದೆ. ಇದರಿಂದ ಸರ್ಕಾರಕ್ಕೆ ಆದಾಯವೂ ಬರುತ್ತದೆ' ಎಂದು ಅರ್ಜಿಯಲ್ಲಿ ಕೋರಲಾಗಿದೆ.

ನಮ್ಮ ಅಪೇಕ್ಷೆಯ ದೇಶಕ್ಕಾಗಿ ಮತದಾನ ಅಗತ್ಯ: ಸಚಿನ್

ಸಚಿನ್ ತೆಂಡೂಲ್ಕರ್

ನವದೆಹಲಿ (ಪಿಟಿಐ): ಚುನಾವಣಾ ಪ್ರಕ್ರಿಯೆಯಲ್ಲಿ ಮತದಾರರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಕ್ರಿಕೆಟರ್ ಸಚಿನ್ ತೆಂಡೂಲ್ಕರ್ ಅವರನ್ನು 'ರಾಷ್ಟ್ರೀಯ ಐಕಾನ್' ಆಗಿ ಚುನಾವಣಾ ಆಯೋಗವು ಬುಧವಾರ ನೇಮಕ ಮಾಡಿದೆ.

ಇದರ ಅಂಗವಾಗಿ ಇಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿನ್, 'ನಾವು ಬಯಸಿದಂಥ ದೇಶ ಪಡೆಯಲು, ಪ್ರತಿಯೊಂದು ಮತವೂ ಮುಖ್ಯವಾಗುತ್ತದೆ' ಎಂದಿದ್ದಾರೆ.

'ದೇಶದಲ್ಲಿ ಒಳ್ಳೆಯ ವಿಚಾರಗಳು ನಡೆಯಬೇಕೆಂದು ನಾವೆಲ್ಲ ಬಯಸುತ್ತೇವೆ. ಆದರೆ ಅದು ನಮ್ಮ ಹಕ್ಕು ಚಲಾಯಿಸುವ ಶ್ರಮವನ್ನು ಬಯಸುತ್ತದೆ ಎಂದು ಹೇಳಿದ್ದಾರೆ.

'ಭಾರತವು ವಿಶ್ವದಲ್ಲೇ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ. ಮತದಾನ ಮಾಡುವುದು ನಮ್ಮೆಲ್ಲರ ಪ್ರಮುಖ ಜವಾಬ್ದಾರಿ' ಎಂದಿದ್ದಾರೆ.

ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಉಪಸ್ಥಿತರಿದ್ದರು.

ಅತ್ಯಾಚಾರ: ಆರೋಪಿ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಬಾಲಕಿ ಮೇಲೆ ಅತ್ಯಾಚಾರ ನಡೆಸಿ, ಆಕೆ ಗರ್ಭ ಧರಿಸಲು ಕಾರಣವಾದ ಪ್ರಕರಣದಲ್ಲಿ ಅಮಾನತುಗೊಂಡ ದೆಹಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಪ್ರೇಮೋದಯ್ ಖಾಖಾ ಅವರ ನ್ಯಾಯಾಂಗ ಬಂಧನ ಅವಧಿಯನ್ನು ಇಲ್ಲಿನ ಕೋರ್ಟ್ ಮತ್ತೆ 14 ದಿನ ವಿಸ್ತರಿಸಿದೆ.

ಆರೋಪಿ ಪತ್ನಿ ಸೀಮಾ ರಾಣಿ ಅವರ ನ್ಯಾಯಾಂಗ ಬಂಧನದ ಅವಧಿಯನ್ನೂ 14 ದಿನ ವಿಸ್ತರಿಸಿ ಕೋರ್ಟ್ ಆದೇಶಿಸಿದೆ. ಬುಧವಾರ ಹೆಚ್ಚುವರಿ ಸೆಷನ್ಸ್ ಕೋರ್ಟ್ ಎದುರು ಹಾಜರುಪಡಿಸಲಾಗಿತ್ತು.

ಮಿಜೋರಾಂ: ಕ್ರೇನ್ ಕುಸಿದು 23 ಸಾವು

ಒಂದನೇ ಪುಟದಿಂದ...

'ದುರ್ಘಟನೆ ಕುರಿತು ತನಿಖೆಗಾಗಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿದೆ. ಈ ಗ್ಯಾಂಟ್ರಿಯನ್ನು ಎಸ್‌ಟಿಯುಪಿ ಕನ್ಸಲ್ಟಂಟ್ ಕಂಪನಿ ವಿನ್ಯಾಸಗೊಳಿಸಿದ್ದು, ಐಐಟಿ–ಗುವಾಹಟಿ ತಜ್ಞರು ಪರಿಶೀಲನೆ ನಡೆಸಿದ್ದರು' ಎಂದು ರೈಲ್ವೆ ವಕ್ತಾರರೊಬ್ಬರು ತಿಳಿಸಿದ್ದಾರೆ. ಮಿಜೋರಾಂನಲ್ಲಿ ಕೈಗೆತ್ತಿಕೊಂಡಿರುವ ಭೈರವಿ–ಸೈರಂಗ ರೈಲು ಮಾರ್ಗವು 130 ಸೇತುವೆಗಳು, 23 ಸುರಂಗಗಳು ಹಾಗೂ ನಾಲ್ಕು ನಿಲ್ದಾಣಗಳನ್ನು ಒಳಗೊಂಡಿದೆ.

ಶೋಕ–ಪರಿಹಾರ ಘೋಷಣೆ: 'ಮಿಜೋರಾಂನಲ್ಲಿ ಸಂಭವಿಸಿದ ಅವಘಡದಲ್ಲಿ 23 ಮಂದಿ ಕಾರ್ಮಿಕರು ಮೃತಪಟ್ಟಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಶೋಕ ವ್ಯಕ್ತಪಡಿಸಿದ್ದಾರೆ. ಮೃತರ ಕುಟುಂಬಗಳಿಗೆ ತಲಾ ₹ 2 ಲಕ್ಷ, ಗಾಯಗೊಂಡವರಿಗೆ ತಲಾ ₹ 50 ಸಾವಿರ ಪರಿಹಾರ ಘೋಷಿಸಿದ್ದಾರೆ' ಎಂದು ಪ್ರಧಾನ ಮಂತ್ರಿ ಕಚೇರಿ (ಪಿಎಂಒ) ತಿಳಿಸಿದೆ. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಮೃತರ ಕುಟುಂಬಕ್ಕೆ ತಲಾ ₹10 ಲಕ್ಷ, ಗಾಯಗೊಂಡವರಿಗೆ ₹2 ಲಕ್ಷ ಪರಿಹಾರ ಘೋಷಿಸಿದ್ದಾರೆ.

'ಈ ಅವಘಡದಲ್ಲಿ ಮೃತರ ಕುಟುಂಬಕ್ಕೆ ₹ 10 ಲಕ್ಷ, ಗಂಭೀರವಾಗಿ ಗಾಯಗೊಂಡವರಿಗೆ ₹ 2 ಲಕ್ಷ ಹಾಗೂ ಸಣ್ಣ–ಪುಟ್ಟ ಗಾಯಗಳಾದವರಿಗೆ ₹ 50 ಸಾವಿರ ಪರಿಹಾರ ನೀಡಲಾಗುವುದು' ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಘೋಷಿಸಿದ್ದಾರೆ. ಮಿಜೋರಾಂ ಮುಖ್ಯಮಂತ್ರಿ ಝೋರಂಥಾಂಗ್ ಅವರು ಕೂಡ ಘಟನೆ ಕುರಿತು ಆಘಾತ ವ್ಯಕ್ತಪಡಿಸಿದ್ದಾರೆ. ಅವಘಡದಿಂದಾಗಿ ಅವಶೇಷಗಳಗಡಿ ಸಿಲುಕಿದ್ದವರ ರಕ್ಷಣಾ ಕಾರ್ಯದಲ್ಲಿ ನೆರವಾದವರಿಗೆ ಅವರು ಕೃತಜ್ಞತೆ ಸಲ್ಲಿಸಿದ್ದಾರೆ. ಘಟನೆ ಕುರಿತು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆಘಾತ ವ್ಯಕ್ತಪಡಿಸಿದ್ದು, 'ಮೃತರಲ್ಲಿ ಕೆಲವರು ರಾಜ್ಯದ ಮಾಲ್ಡಾ ಜಿಲ್ಲೆಯವರಿದ್ದಾರೆ' ಎಂದು ಹೇಳಿದ್ದಾರೆ.

ಮಿಜೋರಾಂ ರಾಜಧಾನಿ ಐಜ್ವಾಲ್ ಸಮೀಪದ ಸೈರಂಗ ಬಳಿ ರೈಲ್ವೆ ಸೇತುವೆ ನಿರ್ಮಾಣ ಕಾಮಗಾರಿ ನಡೆಯುತ್ತಿದ್ದ ವೇಳೆ ಬುಧವಾರ ಕ್ರೇನ್ ಕುಸಿದಿದೆ –ಪಿಟಿಐ ಚಿತ್ರ

ದೆಹಲಿ: ತಪ್ಪಿದ ಅವಘಡ

ನವದೆಹಲಿ(ಪಿಟಿಐ): ಏರ್ ಟ್ರಾಫಿಕ್ ಕಂಟ್ರೋಲರ್ (ಎಟಿಸಿ) ಅಜಾಗರೂಕತೆಯಿಂದ ಅನುಮತಿ ನೀಡಿದ ಪರಿಣಾಮ ಸಂಭವಿಸಲಿದ್ದ, ವಿಸ್ತಾರ ಸಂಸ್ಥೆಯ ಎರಡು ವಿಮಾನಗಳನ್ನು ಒಳಗೊಂಡ ಅವಘಡವೊಂದನ್ನು ಬುಧವಾರ ತಪ್ಪಿಸಲಾಗಿದೆ.

ಈ ಘಟನೆ ಕುರಿತು ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು ತನಿಖೆ ನಡೆಸಲಿದ್ದು, ಕರ್ತವ್ಯದಲ್ಲಿದ್ದ ಏರ್ ಟ್ರಾಫಿಕ್ ಕಂಟ್ರೋಲರ್ ಅವರ ಕೆಲಸದ ಪಾಳಿಯನ್ನು ಬದಲಾಯಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಹಮದಾಬಾದ್‌ನಿಂದ ಬಂದಿದ್ದ ವಿಮಾನವು (ವಿಟಿ1725) '29ಎಲ್' ರನ್‌ವೇನಲ್ಲಿ ಇಳಿದಿತ್ತು. ಈ ವಿಮಾನ ರನ್‌ವೇ '29ಆರ್' ಮೂಲಕ ಹಾಯ್ದು ಹೋಗಲು ಎಟಿಸಿ ಅನುಮತಿ ನೀಡಿದ್ದರು. ಇನ್ನೊಂದೆಡೆ, '29ಆರ್' ರನ್‌ವೇ ಮೂಲಕವೇ ಟೇಕಾಫ್ ಆಗಲು ದೆಹಲಿ–ಬಾಗ್‌ಡೋಗ್ರ ವಿಮಾನಕ್ಕೆ(ವಿಟಿ1725) ಅನುಮತಿ ನೀಡಿದ್ದರು. ಎರಡೂ ವಿಮಾನಗಳು ಹೊರಟಿದ್ದರೆ ರಭಸದಿಂದ ಡಿಕ್ಕಿಯಾಗುವ ಸಾಧ್ಯತೆ ಇತ್ತು. ಈ ಬಗ್ಗೆ ಅಹಮದಾಬಾದ್‌ನಿಂದ ಬಂದಿಳಿದಿದ್ದ ವಿಮಾನದ ಮಹಿಳಾ ಪೈಲೆಟ್ ಮಾಹಿತಿ ನೀಡಿದ ಕೂಡಲೇ ಎಚ್ಚೆತ್ತುಕೊಂಡ ಎಟಿಸಿ, ಟೇಕಾಫ್ ಆಗದಂತೆ ಬಾಗ್‌ಡೋಗ್ರಕ್ಕೆ ಹೊರಟಿದ್ದ ವಿಮಾನಕ್ಕೆ ಸೂಚನೆ ನೀಡಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಬಗ್ಗೆ ವಿಸ್ತಾರ ವಿಮಾನ ಸಂಸ್ಥೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ತೆಲಂಗಾಣ: ಸೆಷನ್ಸ್ ನ್ಯಾಯಾಧೀಶ ಅಮಾನತು

ಹೈದರಾಬಾದ್(ಪಿಟಿಐ): ಚುನಾವಣೆ ವೇಳೆ ಸಲ್ಲಿಸಿದ ಪ್ರಮಾಣಪತ್ರ ಕುರಿತ ಪ್ರಕರಣಕ್ಕೆ ಸಂಬಂಧಿಸಿ ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ರಾಜೀವ್‌ಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಲು ನಿರ್ದೇಶನ ನೀಡಿದ್ದ ವಿಶೇಷ ಸೆಷನ್ಸ್ ನ್ಯಾಯಾಧೀಶರೊಬ್ಬರನ್ನು ತೆಲಂಗಾಣ ಹೈಕೋರ್ಟ್ ಅಮಾನತುಗೊಳಿಸಿದೆ.

ಜನಪ್ರತಿನಿಧಿಗಳ ವಿಶೇಷ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಕೆ.ಜಯಕುಮಾರ್ ಅಮಾನತುಗೊಂಡವರು.

'ರಾಘವೇಂದ್ರ ರಾಜು ಎಂಬುವವರು ಖಾಸಗಿ ದೂರು ನೀಡಿದ್ದರು. ಈ ಸಂಬಂಧ ಪ್ರಾಥಮಿಕ ವಿಚಾರಣೆ ನಡೆಸದೆ ಹಾಗೂ ದೂರುದಾರರ ಹೇಳಿಕೆಯನ್ನು ದಾಖಲಿಸದೇ ಸಿಇಸಿ ವಿರುದ್ಧ ಎಫ್‌ಐಆರ್ ದಾಖಲಿಸಲು ಸೂಚಿಸಲಾಗಿದೆ. ಈ ವಿಷಯದಲ್ಲಿ ನ್ಯಾಯಾಧೀಶ ಜಯಕುಮಾರ್ ಅವರು 'ಅನಗತ್ಯ ಅವಸರ'ದಲ್ಲಿ ಕ್ರಮ ಕೈಗೊಂಡಿದ್ದಾರೆ' ಎಂದು ಹೈಕೋರ್ಟ್ ಹೇಳಿದೆ.

'ಕರ್ತವ್ಯ ನಿರ್ವಹಣೆ ವಿಚಾರದಲ್ಲಿ ನ್ಯಾಯಾಧೀಶರಿಂದ ಗಂಭೀರ ಲೋಪವಾಗಿದೆ' ಎಂದು ಹೈಕೋರ್ಟ್ ತನ್ನ ಆದೇಶದಲ್ಲಿ ಹೇಳಿದೆ ಎಂದು ಮೂಲಗಳು ತಿಳಿಸಿವೆ.

ತೆಲಂಗಾಣ ಅಬಕಾರಿ ಸಚಿವ ವಿ.ಶ್ರೀನಿವಾಸ ಗೌಡ ಅವರು ಚುನಾವಣೆ ವೇಳೆ ಸಲ್ಲಿಸಿದ್ದ ಪ್ರಮಾಣ ಪತ್ರವನ್ನು ತಿರುಚಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿ, ಸಚಿವ ಶ್ರೀನಿವಾಸ ಗೌಡ, ಸಿಇಸಿ ರಾಜೀವ್‌ಕುಮಾರ್ ಹಾಗೂ ಇತರರ ವಿರುದ್ಧ ಆಗಸ್ಟ್ 11ರಂದು ಎಫ್‌ಐಆರ್ ದಾಖಲಿಸಲಾಗಿತ್ತು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ–590018, ಕರ್ನಾಟಕ, ಭಾರತ

ಕ್ರಮ ಸಂಖ್ಯೆ: ವಿ.ತಾ.ವಿ./ಬೆ/ಸ್ಥಾ.ಅ./2023–24/ಐ.ಎಫ್.ಟಿ.ನಂ.24/2632 ದಿನಾಂಕ: 22 AUG 2023

ಮರು ಟೆಂಡರ ಪ್ರಕಟಣೆ–ದ್ವಿಲಕೋಟಿ ಪದ್ಧತಿ (ಇ–ಪ್ರೊಕ್ಯೂರಮೆಂಟ್ ಮೂಲಕ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯುಮೆಂಟ್ಸ ಕೆ.ಡಬ್ಲ್ಯೂ.ರ ಪ್ರಕಾರ ಇ–ಪ್ರೊಕ್ಯೂರಮೆಂಟ್ ಮೂಲಕ ಟೆಂಡರನ್ನು ಆಮಂತ್ರಿಸಲಾಗಿದೆ. ಕಾಮಗಾರಿ ಹೆಸರು:–ವಿತಾವಿ, "ಜ್ಞಾನ ಸಂಗಮ", ಆವರಣ, ಬೆಳಗಾವಿಯ ಸಿ1 ಮತ್ತು ಸಿ–2 ವರ್ಗಗಳ ವಸತಿ ಗೃಹಗಳಿಗೆ ದುರಸ್ತಿ ಮತ್ತು ನಿರ್ವಹಣೆ ಮಾಡುವ ಕಾಮಗಾರಿ ಮೊತ್ತ ರೂ.1,90,05,574/–.ಈ ಕಾಮಗಾಗೆ ಇದೇ ತರನಾದ 50% ರಷ್ಟು ಕಾಮಗಾರಿಯನ್ನು ನಿರ್ವಹಿಸಿದ ಕುರಿತು ಪ್ರಮಾಣ ಪತ್ರವನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವುದು. ಇತರೆ ಮಾಹಿತಿಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ:26.08.2023 ರಿಂದ ಪಡೆದುಕೊಳ್ಳಬಹುದು.

ಸಹಿ/–ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ,ಬೆಳಗಾವಿ

DIPR/BGM/RO-NO-307/KSMCA/2023-24

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929

ಸಂಖ್ಯೆ:ರಾಗಾವಿ/ಪ್ರೊಕ್/ಗಾರ್ಡನ್/ಎಎಂಸಿ/37/2023–24 ದಿನಾಂಕ: 23.08.2023

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ) (2ನೇ ಕರೆ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣದಲ್ಲಿ ಉದ್ಯಾನವನವನ್ನು ವಾರ್ಷಿಕ ನಿರ್ವಹಣೆ ಮಾಡಲು ಟೆಂಡರ್–ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿರುವ ಉಲ್ಲೇಖದ ಷರತ್ತುಗಳಲ್ಲಿ ಪಡೆದುಕೊಳ್ಳಬಹುದಾಗಿದೆ.

ಟೆಂಡರ್ ಸಂ: ರಾಗಾಆವಿವಿಕ/2023–24/ಎಸ್ಇ0003

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	23/08/2023 ಮಧ್ಯಾಹ್ನ 1:30 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	08/092023 ಸಂಜೆ 5:00 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	11/09/2023 ಬೆಳಿಗ್ಗೆ 11:00 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು https://kppp.karnataka.gov.in ನಿಂದ ಪಡೆದುಕೊಳ್ಳಬಹುದು.

ಸಹಿ/–
ಕುಲಸಚಿವರು

ವಾ.ಸಾ.ಸಂ.ಇ/1029/2023–24

ಕರ್ನಾಟಕ ಸರ್ಕಾರ
ಶಿಶು ಅಭಿವೃದ್ಧಿ ಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಚಿತ್ರದುರ್ಗ.
ಜಿಲ್ಲಾ ಬಾಲಭವನ ಆವರಣ, ಜಿಲ್ಲಾ ಕ್ರೀಡಾಂಗಣ (ಸ್ಟೇಡಿಯಂ) ಹತ್ತಿರ, ಚಿತ್ರದುರ್ಗ:– 577501 ದೂರವಾಣಿ ಸಂಖ್ಯೆ 08194–295810

ಸಂ.ಶಿ.ಯೋ.ಚಿ/ಆ.ಸಾ.ಸಾ/ಇ–ಟೆಂಡರ್/ಪ್ರಕಟಣೆ/2023–24 ದಿನಾಂಕ: 21.08.2023

ಸಂಕ್ಷಿಪ್ತ ಇ–ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಮೂಲಕ)

2023–24 ನೇ ಸಾಲಿಗೆ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯ 253 ಅಂಗನವಾಡಿ ಕೇಂದ್ರಗಳಿಗೆ ಪೂರಕ ಪೌಷ್ಠಿಕ ಆಹಾರ ಸಾಗಾಣಿಕೆ ಮಾಡಲು ಟೆಂಡರ್‌ದಾರರನ್ನು ಗುರುತಿಸುವ ಸಲುವಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ಈ ಕೆಳಕಂಡ ದಿನಾಂಕಕ್ಕೆ ವಿಸ್ತರಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ ರೂ. 12.00ಲಕ್ಷಗಳು. ಪ್ರಕಟಣೆ ಸಂ:DWCD/2023-24/SE0091 ದಿನಾಂಕ: 21/08/2023 ಕೊನೆಯ ದಿನಾಂಕ:30/08/2023 ವಿವರಗಳಿಗಾಗಿ ವೆಬ್‌ಸೈಟ್: https://kppp.karnataka.gov.in ಪರಾಮರ್ಶಿಸಿ, ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಚಿತ್ರದುರ್ಗ.

DIPR/CTA/MCA/163/2023-24

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ:ಕವಿನಿಆ–8–ಉ.ನಿ.(ಪ್ರಸರಣ)/2019–20/ಪಿ1/526 ದಿನಾಂಕ: 23–08–2023

ಸಾರ್ವಜನಿಕ ವಿಚಾರಣೆ ಬಗ್ಗೆ ಸೂಚನೆ

ವಿಷಯ: "ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಪ್ರಸರಣಾ ಮತ್ತು/ಅಥವಾ ವಿತರಣಾ ಪರವಾನಿಗೆದಾರರು ಇತರೆ ವ್ಯವಹಾರದಿಂದ ಪಡೆದ ಆದಾಯದ ಹಂಚಿಕೆ) (ಒಂದನೇ ತಿದ್ದುಪಡಿ) ವಿನಿಯಮಗಳು, 2022 ಬಗ್ಗೆ.

ಮೇಲ್ಕಂಡ ವಿಷಯದಲ್ಲಿ ಪ್ರಸ್ತಾಪಿಸಿರುವ ವಿನಿಯಮದ ಕರಡು ಪ್ರತಿಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 28–10–2022 ರಂದು ಪ್ರಕಟಗೊಳಿಸಲಾಗಿದ್ದು, ಸದರಿ ಪ್ರತಿಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ವೆಬ್‌ಸೈಟ್: https://kerc.karnataka.gov.in ನಲ್ಲಿ ಲಭ್ಯವಿರಿಸಲಾಗಿದೆ.

ಆಯೋಗವು ದಿನಾಂಕ: **07–09–2023** ರಂದು ಗುರುವಾರ ಬೆಳಿಗ್ಗೆ **11.00 ಘಂಟೆಗೆ ಆಯೋಗದ ನ್ಯಾಯಾಂಗ ಸಭಾಂಗಣದಲ್ಲಿ ಸಾರ್ವಜನಿಕ ವಿಚಾರಣೆಯನ್ನು ಏರ್ಪಡಿಸಿದ್ದು,** ಆಸಕ್ತರು ಈ ವಿಚಾರಣೆಯಲ್ಲಿ ಭಾಗವಹಿಸಿ ಆಯೋಗದ ಮುಂದೆ ಖುದ್ದಾಗಿ ಹಾಜರಾಗಬಹುದು ಮತ್ತು ಮೌಖಿಕ ಸಲ್ಲಿಕೆಗಳನ್ನು ಮಾಡಬಹುದು.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ವಾಸಾಸಂಇ/ವಾ.ಪ್ರ/1032/2023–24

ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
3ನೇ ಮಹಡಿ, ಟಿ.ಟಿ.ಎಂ.ಸಿ 'ಬಿ' ಬ್ಲಾಕ್, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560027.
ದೂರವಾಣಿ: 080–22223753/58 ಇ–ಮೇಲ್: dduttl.1980@gmail.com

ಸಂಖ್ಯೆ:ಡಿಡಿಯುಟಿಟಿಎಲ್/ತಾಂ.ವಿ/ಟೆಂಡರ್/2023–24/308 ದಿನಾಂಕ: 22–08–2023

ಪಾವತಿ ಮತ್ತು ನಿಲುಗಡೆ ಇ–ಹರಾಜು ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಮಾತ್ರ)

ಡಿ. ದೇವರಾಜ ಅರಸ್ ಟ್ರಕ್ ಟರ್ಮಿನಲ್ಸ್ ಲಿಮಿಟೆಡ್, ಬೆಂಗಳೂರು – 27 ಈ ಸಂಸ್ಥೆಯ ವತಿಯಿಂದ **ಒಂದು ವರ್ಷದ ಅವಧಿಗೆ, ಕೈಗಾರಿಕ ಉಪನಗರ 2ನೇ ಹಂತ, ಯಶವಂತಪುರ, ಬೆಂಗಳೂರು – 560022 ರಲ್ಲಿರುವ ಐದು (05) ಸ್ಥಿರ ನಿಲುಗಡೆ ಜಾಗಗಳಿಗೆ** ಇ–ಪ್ರೊಕ್ಯೂರ್‌ಮೆಂಟ್ ಹರಾಜು ಪ್ರಕ್ರಿಯೆ ಮೂಲಕ ಪರವಾನಗಿ ನೀಡಲು ನಿರ್ಧರಿಸಿದೆ. ಸರಕು ಸಾಗಾಣಿಕೆ ವಾಹನಗಳು / ಟ್ರಕ್‌ಗಳಿಂದ ನಿಲುಗಡೆ ಶುಲ್ಕವನ್ನು ಸಂಗ್ರಹಿಸಲು ಆಸಕ್ತ ಏಜೆನ್ಸಿಗಳು / ವ್ಯಕ್ತಿಗಳು / ಕಂಪನಿಗಳು / ಇಲಾಖೆಗಳು ಭಾಗವಹಿಸುವಂತೆ ಆಹ್ವಾನಿಸಲಾಗಿದೆ.

ಸದರಿ ಹರಾಜುಗಳಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಏಜೆನ್ಸಿಗಳು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ಮೂಲಕ ತಮ್ಮ ಬಿಡ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ.

ಹಂಚಿಕೆ ಮಾಡುವ ನಿಲುಗಡೆ ಪ್ರದೇಶವು "ಹೇಗಿದೆಯೋ ಹಾಗೆ" ಅನ್ವಯದಂತೆ ಟೆಂಡರ್ ಪ್ರೊಸೆಸಿಂಗ್ ಶುಲ್ಕ ಮತ್ತು ಇ.ಎಂ.ಡಿ ಪಾವತಿಸಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಬಿಡ್‌ದಾರರು ಹೆಚ್ಚಿನ ಪರವಾನಗಿ ಶುಲ್ಕ ನಮೂದಿಸಿ (ಹೆಚ್.1) ಜೊತೆಗೆ ಅನ್ವಯಿಸುವ ಜಿ.ಎಸ್.ಟಿ ಪಾವತಿಸಿದವರಿಗೆ ಡಿಡಿಯುಟಿಟಿಎಲ್ ಆಯ್ಕೆ ಮಾಡುವುದು.

ಡಿಡಿಯುಟಿಟಿಎಲ್ ಯಾವುದೇ ಪ್ರಸ್ತಾವನೆಗಳನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ, ತಿರಸ್ಕರಿಸುವ / ಎಲ್ಲಾ ಪ್ರಕ್ರಿಯೆಗಳನ್ನು ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.

ತಡವಾಗುವುದು, ನಷ್ಟ ಅಥವಾ ತಾಂತ್ರಿಕ ತೊಂದರೆಗಳಿಂದ ಪ್ರಸ್ತಾವನೆ ಸಲ್ಲಿಕೆಯಾಗದಿದ್ದಲ್ಲಿ ಡಿಡಿಯುಟಿಟಿಎಲ್ ಜವಾಬ್ದಾರಿಯಲ್ಲ. ಯಾವುದಾದರು ತಿದ್ದುಪಡಿ / ಮಾರ್ಪಾಡುಗಳು ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://kppp.karnataka.gov.in ನಲ್ಲಿ ಪ್ರಕಟಿಸಲಾಗುವುದು. ಹರಾಜಿನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: **28–08–2023ರಂದು ಅಪರಾಹ್ನ 3.00 ಗಂಟೆಯವರೆಗೆ ಇರುತ್ತದೆ.** ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಆಸ್ತಿ **ವ್ಯವಸ್ಥಾಪಕರು, ಡಿಡಿಯುಟಿಟಿಎಲ್** ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಡಿಡಿಯುಟಿಟಿಎಲ್

ವಾಸಾಸಂಇ/ವಾ.ಪ್ರ/1027/ಅಡ್ವರ್ಟೋರ್/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, (ರಸ್ತೆ ಮೂಲಭೂತ ಸೌಕರ್ಯ – ಟಿಇಸಿ ವಿಭಾಗ)
ನೆಲ ಮಹಡಿ, ಅನೆಕ್ಸ್–3 ಕಟ್ಟಡ, ಎನ್.ಆರ್.ಚೌಕ, ಬೆಂಗಳೂರು – 560 002.

ಸಂಖ್ಯೆ: ಕಾಪಾಅ/ಟಿಇಸಿ/ಟೆಂಡರ್/02/2023–24 ದಿನಾಂಕ : 23.08.2023

ಪ್ರಕಟಣೆ (2ನೇ ಕರೆ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ವಿಪತ್ತು ನಿರ್ವಹಣೆ ಮತ್ತು ವಿಪತ್ತು ನಿರ್ವಹಣೆ ಯೋಜನೆ ಕಾಯ್ದೆ 2005ರಲ್ಲಿ ಸಂಪೂರ್ಣ ಜ್ಞಾನ ಹೊಂದಿರುವ ವೃತ್ತಿಪರ ಸಿಬ್ಬಂದಿಯಿಂದ ವಿಪತ್ತು ನಿರ್ವಹಣಾ ಸಲಹೆಗಾರರ ಹುದ್ದೆಗೆ ಅರ್ಜಿ ಆಹ್ವಾನಿಸಿದೆ.

ಏಕೀಕೃತ ವೇತನದೊಂದಿಗೆ ಹುದ್ದೆಗಳ ವಿವರಗಳು

ಕ್ರ. ಸಂ.	ಹುದ್ದೆಯ ಹೆಸರು	ಶೈಕ್ಷಣಿಕ ವಿದ್ಯಾರ್ಹತೆ	ಹುದ್ದೆಗಳ ಸಂಖ್ಯೆ	ಏಕೀಕೃತ ವೇತನ (ರೂ.ಗಳಲ್ಲಿ)
1	Disaster Management Consultant, Grade-1 for Head Office.	PG Degree in Diploma Management / Science /Social Science/Urban Planning/ Environmental Science/MSW/ Engineering from UGC Recognized University with more than 02 years experience in Disaster Management.	2	70,000/- per month
2	Disaster Management Consultant, Grade-2 for Zonal Office.	PG Degree in Diploma Management / Science /Social Science/Urban Planning/ Environmental Science/MSW/Engineering from UGC Recognized University with at least 01 year and above experience in Disaster Management.	8	60,000/- per month

ಮೇಲ್ಕಂಡ ವಿದ್ಯಾರ್ಹತೆಯೊಂದಿಗೆ 58 ವರ್ಷ ಮೀರಿರದ ಅಭ್ಯರ್ಥಿಗಳು **ಆನ್‌ಲೈನ್ ಮೂಲಕ** ಮಾತ್ರ ಇ–ಮೇಲ್ ವಿಳಾಸ : eeritec2023@gmail.com ಗೆ ಅರ್ಜಿಯನ್ನು ಸಲ್ಲಿಸಬೇಕು. ಯಾವುದೇ ಅರ್ಜಿಯನ್ನು ಮ್ಯಾನ್ಯುಯಲ್ ಅಥವಾ ಪೋಸ್ಟ್ ಮೂಲಕ ಸ್ವೀಕರಿಸಲಾಗುವುದಿಲ್ಲ. ಅರ್ಜಿದಾರರು ಎಲ್ಲ ಅಗತ್ಯ ದಾಖಲೆಗಳನ್ನು ಕ್ರಮಬದ್ಧವಾಗಿ ದೃಢೀಕರಿಸಿ ಆನ್‌ಲೈನ್ ಮೂಲಕ ಸಲ್ಲಿಸಬೇಕು. ಮೂಲ ದಾಖಲೆಗಳನ್ನು ಸಂದರ್ಶನದ (ಅನ್ವಯಿಸುವಂತೆ) ದಿನಾಂಕದಂದು ಪ್ರಸ್ತುತಪಡಿಸಬೇಕು. ಅಭ್ಯರ್ಥಿಗಳ ಆಯ್ಕೆಯು ಸಲ್ಲಿಸಿದ ದಾಖಲೆಗಳು ಮತ್ತು ಸಂದರ್ಶನದ ಅರ್ಹತೆಯನ್ನು ಆಧರಿಸಿರುತ್ತದೆ. ಬೃಬೆಂಮಪಾಲಿಕೆಯ ಮುಖ್ಯ ಆಯುಕ್ತರು ಹುದ್ದೆಗಳ ಸಂಖ್ಯೆಯನ್ನು ಹೆಚ್ಚಿಸುವ ಅಥವಾ ಕಡಿಮೆ ಮಾಡುವ ಹಕ್ಕನ್ನು ಹೊಂದಿರುತ್ತಾರೆ. ಎಲ್ಲಾ ಹುದ್ದೆಗಳು ತಾತ್ಕಾಲಿಕ ಆಧಾರದ ಮೇಲೆ ಹಾಗೂ **11 ತಿಂಗಳ ಅವಧಿಗೆ** + ಹೆಚ್ಚುವರಿಯಾಗಿ ಒಂದು ವರ್ಷ ವಿಸ್ತರಿಸಬಹುದು.

ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ : 08–09–2023ರ ಸಂಜೆ 4:00 ಗಂಟೆಯೊಳಗೆ.

ಸಂದರ್ಶನದ ಸ್ಥಳ ಹಾಗೂ ದಿನಾಂಕ : **ಶಾರ್ಟ್‌ಲಿಸ್ಟ್ ಮಾಡಿದ ಅಭ್ಯರ್ಥಿಗಳಿಗೆ ತಿಳಿಸಲಾಗುವುದು.**

ಸಹಿ/– ಕಾರ್ಯಪಾಲಕ ಅಭಿಯಂತರರು,
ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ವಿಭಾಗ, ರಮೂಸೌ–ಬೃಬೆಂಮಪಾ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur
(ಸರ್ಕಾರದ ಸ್ವಾಯತ್ತ ಸಂಸ್ಥೆ) (ಹೈದ್ರಾಬಾದ್ ರೋಡ್, ರಾಯಚೂರು –584102)
Phone /Fax-08532-238488/89
Web.www.rims-raichur.gov.in Email info@rims-raichur.com

ಸಂ. ರಿಮ್ಸ್ /ಸರಬರಾಜು/ಟೆಂಡರ್/2023–24 ದಿನಾಂಕ: 22.08.2023

ಇ–ಟೆಂಡರ್ ಪ್ರಕಟಣೆ

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಸರ್ಜಿಕಲ್ ಸುಚರ್ಸ್‌ಗಳು ಹಾಗೂ ಲಿಕ್ವಿಡ್ಸ್, ಆ್ಯಯಿಟ್‌ಮೆಂಟ್ಸ್ ಮತ್ತು ಪೌಡರ್ಸ್‌ಗಳನ್ನು ಪೂರೈಸಲು ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್‌ನ ವಿವರ	ಟೆಂಡರ್‌ನ ಸಂಖ್ಯೆ	ಅಂದಾಜು ವೆಚ್ಚ (ಲಕ್ಷಗಳಲ್ಲಿ)
1	ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಸರ್ಜಿಕಲ್ ಸೂಚರ್ಸ್‌ಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ ಸೂಚರ್/108/2023–24	61.33
2	ರಿಮ್ಸ್ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ಲಿಕ್ವಿಡ್ಸ್, ಆ್ಯಯಿಟ್‌ಮೆಂಟ್ಸ್ ಮತ್ತು ಪೌಡರ್ಸ್‌ಗಳನ್ನು ಖರೀದಿಸಿ ಪೂರೈಸುವ ಕುರಿತು	ರಿಮ್ಸ್/ಸರಬರಾಜು/ಟೆಂಡರ್/ ಎಲ್‌ಓಪಿ/109/2023–24	42.17

1) ಟೆಂಡರ್‌ಗಳನ್ನು ದಿನಾಂಕ: 23.08.2023 ರಿಂದ ಕೆಪಿಪಿ ಪೋರ್ಟಲ್ ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು, 2) ಪ್ರಶ್ನೆಗಳಿಗೆ ಕೊನೆಯ ದಿನಾಂಕ 29.08.2023 ರ ಸಾಯಂಕಾಲ 5.00ಗಂಟೆಯವರೆಗೆ, 3)ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 06.09.2023 ರ ಸಾಯಂಕಾಲ 5.00ಗಂಟೆವರೆಗೆ, 4) ತಾಂತ್ರಿಕ ಲಕೋಟೆ (ಮೊದಲನೇಯ ಕವರ್) ತೆರೆಯುವ ದಿನಾಂಕ : 08.09.2023 ಬೆಳಿಗ್ಗೆ 11.30ಗಂಟೆಗೆ.

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ಕೋಶದ ವೆಬ್‌ಸೈಟ್ http://kppp.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ರಾಯಚೂರು

DIP/RCR/99/KSMC&A/Job No.95/2023-24

ಸುಭಾಷಿತ

ನಮ್ಮ ಸಲ್ಲದ ಆಲೋಚನೆಗಳು ನಮಗೆ ಹಾನಿ ಮಾಡಿದಷ್ಟು ಬದ್ಧ ವೈರಿಯೂ ಮಾಡಲಾರ.

-ಗೌತಮ ಬುದ್ಧ

ರದ್ದಾಗಿದ್ದ ಹುದ್ದೆಗೆ ಮುಂಬಡ್ತಿ ತೀರ್ಮಾನದ ಮರುಪರಿಶೀಲನೆ ಆಗಲಿ

ರಾಜ್ಯ ಸರ್ಕಾರದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ನೌಕರರ ಸೇವಾ ವಿಷಯಗಳ ನಿರ್ವಹಣೆಗಾಗಿ ‘ಕರ್ನಾಟಕ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸೇವಾ (ವೃಂದ ಮತ್ತು ನೇಮಕಾತಿ) ನಿಯಮ-2019’ ಜಾರಿಯಲ್ಲಿದೆ. ಇಲಾಖೆಯ ನೌಕರರಿಗೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಈ ನಿಯಮಗಳ ಅನುಸಾರವೇ ಇತ್ಯರ್ಥಪಡಿಸಬೇಕಿದೆ. ಜಾರಿಯಲ್ಲಿರುವ ಈ ನಿಯಮಗಳ ಅನುಸಾರ 2019ರಲ್ಲೇ ರದ್ದುಗೊಂಡಿದ್ದ ನಿಲಯ ಪಾಲಕರ (ಹಾಸ್ಟೆಲ್ ವಾರ್ಡನ್) ಹುದ್ದೆಗಳನ್ನು ಸಚಿವ ಸಂಪುಟ ಸಭೆ ಹಾಗೂ ಆರ್ಥಿಕ ಇಲಾಖೆಯ ಒಪ್ಪಿಗೆ ಇಲ್ಲದೆ ಇಲಾಖಾ ಹಂತದ ನಿರ್ಧಾರದ ಮೂಲಕವೇ ಮರುಸೃಜಿಸಿ, 312 ಮಂದಿ ನಿಲಯ ಮೇಲ್ವಿಚಾರಕರಿಗೆ ಮುಂಬಡ್ತಿ ನೀಡಲಾಗಿದೆ. ಕರ್ನಾಟಕ ರಾಜ್ಯ ನಾಗರಿಕ ಸೇವಾ ಕಾಯ್ದೆ-1978ರ ಅಡಿಯಲ್ಲಿ ರೂಪಿಸಿದ ವೃಂದ ಮತ್ತು ನೇಮಕಾತಿ ನಿಯಮಗಳ ಅನುಸಾರ 2019ರ ಸೆಪ್ಟೆಂಬರ್ 30ರಿಂದಲೇ ನಿಲಯ ಪಾಲಕರ ಹುದ್ದೆಗಳನ್ನು ರದ್ದುಗೊಳಿಸಲಾಗಿತ್ತು. ಆಗ ಸೇವೆಯಲ್ಲಿದ್ದ 118 ಮಂದಿಯ ಹೊರತಾಗಿ ಈ ವೃಂದದ ಯಾವುದೇ ಹುದ್ದೆಯನ್ನು ಮುಂಬಡ್ತಿ ಅಥವಾ ನೇರ ನೇಮಕಾತಿ ಮೂಲಕ ಭರ್ತಿ ಮಾಡುವಂತಿಲ್ಲ ಎಂಬ ಷರತ್ತು ನಿಯಮಗಳಲ್ಲಿದೆ. ಸಾಮಾನ್ಯ ಸಂದರ್ಭಗಳಲ್ಲಿ ಸರ್ಕಾರಿ ನೌಕರರ ಬಡ್ತಿ ಪ್ರಕ್ರಿಯೆಯಲ್ಲಿ ಅನುಸರಿಸುವ ಕ್ರಮಗಳನ್ನು ಪಾಲಿಸದೇ ಈಗ ಜಾರಿಯಲ್ಲಿರುವ ಸೇವಾ ನಿಯಮಗಳಿಗೆ ವಿರುದ್ಧವಾಗಿ ತರಾತುರಿಯಲ್ಲಿ ನಿಲಯ ಪಾಲಕರ ಹುದ್ದೆಗಳನ್ನು ಮರು ಸೃಜಿಸಿ 312 ಮಂದಿಗೆ ಬಡ್ತಿ ನೀಡಿರುವ ಪ್ರಕ್ರಿಯೆಯು ಸಂಶಯಕ್ಕೆ ಎಡೆಮಾಡುವಂತಿದೆ. ಇಲಾಖೆಯ ಕಡತ ನಿರ್ವಹಣೆ ಸಂಪೂರ್ಣವಾಗಿ ಡಿಜಿಟಲೀಕರಣಗೊಂಡಿದ್ದರೂ ನಿಲಯ ಮೇಲ್ವಿಚಾರಕರ ಬಡ್ತಿಗೆ ಸಂಬಂಧಿಸಿದ ಕಡತವನ್ನು ಇ-ಕಚೇರಿಯಲ್ಲಿ ನಿರ್ವಹಿಸದೆ ಭೌತಿಕ ಕಡತಗಳಲ್ಲಿ ಮಂಡಿಸಿ, ಅನುಮೋದನೆ ನೀಡಿರುವುದು ಅನುಮಾನಗಳನ್ನು ಹೆಚ್ಚಿಸುವಂತಿದೆ. ಸಚಿವ ಸಂಪುಟದ ನಿರ್ಣಯದಂತೆ ರಾಜ್ಯಪತ್ರದಲ್ಲಿ ಅಧಿಸೂಚನೆ ಹೊರಡಿಸಿ ರದ್ದು-ಗೊಳಿಸಿದ್ದ ಹುದ್ದೆಗಳನ್ನು ಇಲಾಖಾ ಹಂತದಲ್ಲೇ ಮರುಸೃಜಿಸಿ, ಬಡ್ತಿ ನೀಡಿರುವ ಕ್ರಮವು ಕಾನೂನಾತ್ಮಕವಾಗಿ ಸರಿಯೇ ಎಂಬ ಪ್ರಶ್ನೆಯೂ ಉದ್ಭವಿಸಿದೆ.

ಆಗಿರುವ ಲೋಪಗಳನ್ನು ಸರಿಪಡಿಸಬೇಕು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು

ಸರ್ಕಾರಿ ನೌಕರರಿಗೆ ಬಡ್ತಿ ನೀಡುವ ಮುನ್ನ ಹಲವು ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಇಲಾಖಾ ಮುಂಬಡ್ತಿ ಸಮಿತಿಯು ನಿರ್ದಿಷ್ಟ ವೃಂದದಲ್ಲಿ ಬಡ್ತಿಗೆ ಅರ್ಹರಾದ ನೌಕರರ ಪಟ್ಟಿಯನ್ನು ಸಿದ್ಧಪಡಿಸಿ ಅವರ ಸೇವಾ ಪುಸ್ತಕಗಳು ಮತ್ತು ಕನಿಷ್ಠ ಐದು ವರ್ಷಗಳ ರಹಸ್ಯ ವರದಿಗಳನ್ನು ಪಡೆಯಬೇಕಾಗುತ್ತದೆ. ಅವುಗಳ ಸಂಪೂರ್ಣ ಪರಿಶೀಲನೆಯ ಜತೆಗೆ ಜ್ಯೇಷ್ಠತಾ ಪಟ್ಟಿಯಲ್ಲಿರುವ ಪ್ರತಿ ನೌಕರನ ವಿರುದ್ಧದ ಇಲಾಖಾ ವಿಚಾರಣೆ, ದಂಡನೆಗೊಳಗಾಗಿದ್ದಲ್ಲಿ ಅಂತಹ ಪ್ರಕರಣದ ವಿವರ, ಆಸ್ತಿ ಮತ್ತು ಹೊಣೆಗಾರಿಕೆ ವಿವರಗಳನ್ನು ಸಲ್ಲಿಸಿರುವುದು ಸೇರಿದಂತೆ ಹಲವು ಅಂಶಗಳ ಕುರಿತು ವಿಸ್ತೃತವಾದ ಪರಿಶೀಲನೆ ನಡೆಸಬೇಕಾಗುತ್ತದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯುಕ್ತರ ನೇತೃತ್ವದ ಇಲಾಖಾ ಮುಂಬಡ್ತಿ ಸಮಿತಿಯು 312 ನಿಲಯ ಮೇಲ್ವಿಚಾರಕರಿಗೆ ನಿಲಯ ಪಾಲಕರ ಹುದ್ದೆಗೆ ಬಡ್ತಿ ನೀಡುವಾಗ ಈ ಎಲ್ಲ ಪ್ರಕ್ರಿಯೆಗಳನ್ನೂ ಕಾಟಾಚಾರಕ್ಕೆ ಎಂಬಂತೆ ನಡೆಸಿರುವುದು ಮೇಲ್ನೋಟಕ್ಕೆ ವೇದ್ಯವಾಗುತ್ತದೆ. ಜುಲೈ 23ರಂದು 460 ನಿಲಯ ಮೇಲ್ವಿಚಾರಕರ ಪಟ್ಟಿ ಪಡೆಯಲಾಗಿದೆ. ಮರುದಿನ ಸರ್ಕಾರಿ ರಜಾ ದಿನವಾದರೂ ದೂರವಾಣಿ ಮೂಲಕ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸಂಪರ್ಕಿಸಿ ಮುಂಬಡ್ತಿ ಪಟ್ಟಿಯಲ್ಲಿದ್ದವರ ಸೇವಾ ದಾಖಲೆಗಳನ್ನು ಒದಗಿಸುವಂತೆ ಸೂಚಿಸಲಾಗಿದೆ. ಅದರ ಮರುದಿನವೇ 312 ನಿಲಯ ಮೇಲ್ವಿಚಾರಕರ ಸೇವಾ ಪುಸ್ತಕಗಳು ಮತ್ತು ರಹಸ್ಯ ವರದಿಗಳ ಪರಿಶೀಲನೆ ಪೂರ್ಣಗೊಳಿಸಲಾಗಿದೆ. ಇಲಾಖಾ ವಿಚಾರಣೆ, ದಂಡನೆ, ಆಸ್ತಿ ವಿವರ ಸಲ್ಲಿಕೆಯ ಕುರಿತೂ ಪರಿಶೀಲಿಸಿ ಖಾತರಿಪಡಿಸಿಕೊಳ್ಳಲಾಗಿದೆ. ಅದೇ ದಿನ ಇಲಾಖಾ ಮುಂಬಡ್ತಿ ಸಮಿತಿ ಸಭೆ ನಡೆಸಿ 312 ನೌಕರರಿಗೆ ಬಡ್ತಿ ನೀಡಲಾಗಿದೆ. ಮರುದಿನವೇ ಅವರಿಗೆ ಸ್ಥಳ ನಿಯುಕ್ತಿಯನ್ನೂ ಮಾಡಲಾಗಿದೆ. ಇಡೀ ಪ್ರಕ್ರಿಯೆಯನ್ನು ತರಾತುರಿಯಿಂದ ನಡೆಸಲಾಗಿದೆ. ‘ಹುದ್ದೆಗಳು ರದ್ದಾಗಿರುವ ಕಾರಣದಿಂದ ನಿಲಯ ಮೇಲ್ವಿಚಾರಕರಿಗೆ ಮುಂಬಡ್ತಿ ನೀಡಲು ಸಾಧ್ಯವಿಲ್ಲ’ ಎಂದು ನೌಕರರಿಗೆ ಅಧಿಕೃತವಾಗಿ ಹಲವು ಬಾರಿ ಹಿಂಬರಹ ನೀಡಿದ್ದ ಇಲಾಖೆಯ ಆಯುಕ್ತರೇ ದಿಢೀರ್ ನಿಲುವು ಬದಲಿಸಿ ಈ ಪರಿಯ ತರಾತುರಿಯಲ್ಲಿ ನಿರ್ಣಯ ಕೈಗೊಂಡಿರುವುದರ ಹಿಂದಿನ ಉದ್ದೇಶವೇ ಸಂಶಯಾಸ್ಪದ. ಬಡ್ತಿ ನೀಡಿದ ಬಳಿಕ ಹುದ್ದೆಗಳಿಲ್ಲದ ಕಾರಣದಿಂದ ಈ ಎಲ್ಲ ನೌಕರರನ್ನು ಹಿಂದೆ ಇದ್ದ ಹುದ್ದೆಗಳಲ್ಲೇ ಮುಂದುವರಿಸಿರುವುದು ಕೂಡ ಈ ತೀರ್ಮಾನ ದೋಷಪೂರಿತವಾದುದು ಎಂಬುದನ್ನು ಪುಷ್ಟೀಕರಿಸುವಂತಿದೆ. ನೌಕರರ ಬಡ್ತಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಅನುಮಾನಕ್ಕೆ ಆಸ್ಪದವಿಲ್ಲ-ದಂತೆ ಮುಕ್ತ ಮತ್ತು ಪಾರದರ್ಶಕ ರೀತಿಯಲ್ಲಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ, ನಿರ್ಣಯ ಕೈಗೊಳ್ಳ-ಬೇಕಿರುವುದು ಇಲಾಖಾ ಮುಖ್ಯಸ್ಥರ ಹೊಣೆಗಾರಿಕೆ. ಆದರೆ, ಈ ಪ್ರಕರಣದಲ್ಲಿ ಇಲಾಖಾ ಮುಖ್ಯಸ್ಥರ ನಡವಳಿಕೆಯೇ ತದ್ವಿರುದ್ಧವಾಗಿದೆ. ಈ ಪ್ರಕರಣದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನೌಕರರ ದೂರುಗಳಿಗೆ ಸ್ಪಂದಿಸಬೇಕಾದುದು ಸರ್ಕಾರದ ಕರ್ತವ್ಯ. ಶರವೇಗದಲ್ಲಿ ನಡೆದಿರುವ ಪ್ರಕ್ರಿಯೆ ಕುರಿತು ಎದ್ದಿರುವ ಸಂಶಯಗಳನ್ನು ದೂರಮಾಡಲು 312 ನೌಕರರ ಬಡ್ತಿ ಪ್ರಕ್ರಿಯೆಯನ್ನು ಸಮಗ್ರವಾಗಿ ಮರುಪರಿಶೀಲನೆಗೆ ಒಳಪಡಿಸಬೇಕು. ಆಗಿರುವ ಲೋಪಗಳನ್ನು ಸರಿಪಡಿಸಬೇಕು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು.

ದಿನದ ಟ್ವೀಟ್

ಯುವಜನರಿಗೆ ಸ್ಫೂರ್ತಿ

ಆರು ದಶಕಗಳ ಹಿಂದೆ ನಾನು ಅಮೆರಿಕಕ್ಕೆ ತೆರಳಲು ನಿರ್ಧರಿಸಿದ್ದೆ. ಚಂದ್ರನ ಮೇಲೆ ಮನುಷ್ಯ ಕಾಲೂರುವಂತೆ ಮಾಡುವ ಅಧ್ಯಕ್ಷ ಕೆನಡಿ ಅವರ ಕನಸು ಇದಕ್ಕೆ ಕಾರಣವಾಗಿತ್ತು. ಭೌತಶಾಸ್ತ್ರದ ಯುವ ವಿದ್ಯಾರ್ಥಿಯಾಗಿ, ಕೆನಡಿ ಅವರ ಈ ಕರೆಯು ರೋಮಾಂಚಕ, ಸ್ಫೂರ್ತಿದಾಯಕ ಹಾಗೂ ಸವಾಲಿನದಾಗಿ ನನಗೆ ಕಂಡಿತ್ತು. ಇದೀಗ, ಇಸ್ರೊ ಹಾಗೂ ಭಾರತದ ಯಶಸ್ಸಿನಿಂದ ಭಾರತ ಮತ್ತು ವಿದೇಶಗಳಲ್ಲಿನ ಲಕ್ಷಾಂತರ ಯುವಜನರು ಅದೇ ರೀತಿ ಸ್ಫೂರ್ತಿ ಪಡೆಯಲಿದ್ದಾರೆ ಎಂಬ ನಂಬಿಕೆ ನನಗಿದೆ. ಅವರೆಲ್ಲರಿಗೂ ಶುಭವಾಗಲಿ.

ಸ್ಯಾಮ್ ಪಿತ್ರೋಡ, ಉದ್ಯಮಿ

ಕಿಡಿನುಡಿ

ಸಿ.ಟಿ.ರವಿ ಅವರಿಗೆ ಬಹಳ ಮರ್ಯಾದೆ ಇದೆ ಅಂತ ಹೇಳಿಯೇ ಜನರು ಅವರನ್ನು ಮನೆಗೆ ಕಳಿಸಿದ್ದಾರೆ. ಬಿಜೆಪಿಯದ್ದು 40 ಪರ್ಸೆಂಟ್ ಸರ್ಕಾರ ಅಂತ ಹೇಳಿ ಜನ ಅವರಿಗೆ ಸ್ವಲ್ಪ ಜಾಸ್ತಿಯೇ ಮರ್ಯಾದೆ ಕೊಟ್ಟು ಮನೆಗೆ ಕಳಿಸಿದ್ದಾರೆ. ಕಾಂಗ್ರೆಸ್‌ಗೆ 136 ಸ್ಥಾನ ಕೊಟ್ಟು ಆಯ್ಕೆ ಮಾಡಿದ್ದಾರೆ.

(ಮರ್ಯಾದೆ ಇದ್ದವರು ಯಾರೂ ಕಾಂಗ್ರೆಸ್‌ಗೆ ಹೋಗುವುದಿಲ್ಲ ಎಂಬ ಬಿಜೆಪಿ ಮುಖಂಡ ಸಿ.ಟಿ.ರವಿ ಅವರ ಹೇಳಿಕೆಗೆ ಪ್ರತಿಕ್ರಿಯೆ)

ಎಂ.ಬಿ.ಪಾಟೀಲ, ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವ

25 ವರ್ಷಗಳ ಹಿಂದೆ

ಸೋಮವಾರ, 24-8-1998

• ಜಯಾ ಬೆದರಿಕೆ ನಿರ್ಲಕ್ಷಿಸಲು ಬಿಜೆಪಿ ಕಾರ್ಯಕಾರಿಣಿ ನಿರ್ಧಾರ

ಜೈಪುರ, ಆ. 23 (ಪಿಟಿಐ)– ವಾಜಪೇಯಿ ನೇತೃತ್ವದ ಸರ್ಕಾರಕ್ಕೆ ಬೆಂಬಲ ವಾಪಸು ಪಡೆಯುವ ಎಐಎಡಿಎಂಕೆ ವರಿಷ್ಠ ನಾಯಕಿ ಜಯಲಲಿತಾ ಅವರ ಬೆದರಿಕೆಯನ್ನು ಅಲಕ್ಷಿಸಿ ಸರ್ಕಾರದ ಸಾಧನೆಯನ್ನು ಉತ್ತಮಪಡಿಸಲು ಮಿತ್ರ ಪಕ್ಷಗಳ ನಡುವೆ ಹೆಚ್ಚು ಸಮನ್ವಯ ಹಾಗೂ ಸಹಕಾರ ಏರ್ಪಡಿಸಿಕೊಳ್ಳಲು ಬಿಜೆಪಿ ಇಂದು ನಿರ್ಧರಿಸಿತು.

ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿಯ ಮೂರು ದಿನಗಳ ಅಧಿವೇಶನದ ಅಂತ್ಯದಲ್ಲಿ ರಾಜಕೀಯ ಗೊತ್ತುವಳಿ ಅಂಗೀಕರಿಸಿ, ಜಯಲಲಿತಾ ಅವರ ಹೇಳಿಕೆಗಳಿಗೆ ಹೆಚ್ಚು ಗಮನ ನೀಡದೆ ಪ್ರತಿಪಕ್ಷಗಳು ಅದರಲ್ಲೂ ಮುಖ್ಯವಾಗಿ ಕಾಂಗ್ರೆಸ್ಸಿನ ವಿರುದ್ಧ ಟೀಕೆ ಮಾಡುವುದರ ಮೇಲೆ ಪಕ್ಷ ಗಮನಹರಿಸುವ ಅಗತ್ಯವಿದೆ ಎಂದು ಹೇಳಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 24-8-1973

• ನಗರದ ಬಹಿರಂಗ ಪೇಟೆಗೆ 2000 ಟನ್ ಅಕ್ಕಿ ಬಿಡುಗಡೆ

ಬೆಂಗಳೂರು, ಆ. 23– ನಗರದ ಅಕ್ಕಿ ಸಗಟು ವ್ಯಾಪಾರಿಗಳಲ್ಲಿ ಸಂಗ್ರಹ ಕಡಿಮೆಯಾಗಿರುವು-ದರ ಪರಿಣಾಮವಾಗಿ ಉಂಟಾಗಿರುವ ಕೊರತೆ ನಿವಾರಿಸಲು, ಆಹಾರ ಇಲಾಖೆಯು ನಾಳೆ 2000 ಟನ್‌ಗಳಷ್ಟು ಅಕ್ಕಿಯನ್ನು ಬಹಿರಂಗ ಮಾರುಕಟ್ಟೆಗೆ ಬಿಡುಗಡೆ ಮಾಡಲಿದೆ.

ಈ ಅಕ್ಕಿಯ ವಿಶೇಷ ಮಾರಾಟವು, ಕೆಂಪೇಗೌಡ ರಸ್ತೆ ಮತ್ತು ನರಸಿಂಹರಾಜ ರಸ್ತೆಯಲ್ಲಿರುವ ಜನತಾ ಬಜಾರ್ ಶಾಖೆಗಳಲ್ಲಿ ನಡೆಯುವುದು. ಪ್ರತಿ ರೇಷನ್ ಕಾರ್ಡಿಗೆ ತಲಾ ಐದು ಕೆ.ಜಿ.ಯಂತೆ ಅಕ್ಕಿ ದೊರೆಯುವುದು. ಬೆಲೆ ಈ ರೀತಿ ಇದೆ: ಉತ್ತಮ ಅಕ್ಕಿ ಕೆ.ಜಿ.ಗೆ 1. 45 ರೂ. ಮಧ್ಯಮ ಉತ್ತಮ 1. 35, ಮಧ್ಯಮ 1. 25 ರೂ. ದಪ್ಪಕ್ಕಿ 1. 15 ರೂ.

• ಉದ್ಯೋಗ ಯೋಜನೆಗೆ ಮಿತವ್ಯಯದ ಕತ್ತರಿ ಇಲ್ಲ– ಧಾರಿಯಾ

ನವದೆಹಲಿ, ಆ. 23– ಮಿತವ್ಯಯದ ಕ್ರಮಗಳನ್ನು ಜಾರಿಗೆ ತಂದರೂ ಸರ್ಕಾರ 5 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಯೋಜನೆಗಳಿಗೆ ಕತ್ತರಿ ಹಾಕುವುದಿಲ್ಲವೆಂದು ಯೋಜನಾ ಶಾಖೆ ರಾಜ್ಯ ಸಚಿವ ಮೋಹನ ಧಾರಿಯಾ ರಾಜ್ಯಸಭೆಗೆ ತಿಳಿಸಿದರು.

ಕೃಷ್ಣಕಾಂತ್ ಅವರ ಪ್ರಶ್ನೆಗೆ ಧಾರಿಯಾ ಅವರು ಉತ್ತರ ಕೊಟ್ಟು, ಒಂದು ಲಕ್ಷ ಜನರಿಗೆ ಉದ್ಯೋಗ ಒದಗಿಸುವ ಕಾರ್ಯಕ್ರಮವನ್ನು ಸರ್ಕಾರ ಕಾರ್ಯಗತಗೊಳಿಸುವುದೆಂದರು.

ಬ್ರ್ಯಾಂಡೆಡ್ ಔಷಧಿಗಳನ್ನು ಮಾತ್ರ ಶಿಫಾರಸು ಮಾಡುವುದಕ್ಕೆ ವೈಜ್ಞಾನಿಕ ಸಮರ್ಥನೆಯಿಲ್ಲ

ಜೆನೆರಿಕ್ ಔಷಧಿ ಮತ್ತು ಬ್ರ್ಯಾಂಡ್ ಮಹತ್ವ

ವಿಶ್ಲೇಷಣೆ

ಡಾ. ಗೋಪಾಲ ದಾಬಡೆ

‘ವೈದ್ಯರು ರೋಗಿಗಳಿಗೆ ಬ್ರ್ಯಾಂಡೆಡ್ ಔಷಧಿಗಳ ಬದಲಾಗಿ ಜೆನೆರಿಕ್ ಔಷಧಿಗಳನ್ನೇ ಶಿಫಾರಸು ಮಾಡಬೇಕು’ ಎಂಬ ಸೂಚನೆಯುಳ್ಳ ರಾಷ್ಟ್ರೀಯ ವೈದ್ಯಕೀಯ ಆಯೋಗದ ಇತ್ತೀಚಿನ ಸುತ್ತೋಲೆಯು ಹಲವಾರು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಭಾರತೀಯ ವೈದ್ಯಕೀಯ ಸಂಘವು (ಐಎಂಎ) ಇದನ್ನು ಕಟುವಾಗಿ ವಿರೋಧಿಸಿದೆ ಕೂಡ.

ರಾಷ್ಟ್ರೀಯ ವೈದ್ಯಕೀಯ ಆಯೋಗವನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗ ಕಾಯ್ದೆ– 2019ರ ಆಧಾರದ ಮೇಲೆ ರಚಿಸಲಾಗಿದೆ. ಐಎಂಎ, ದೇಶದ ಆಧುನಿಕ ವೈದ್ಯ ಪದ್ಧತಿಯ ವೈದ್ಯರ ಅತಿದೊಡ್ಡ ಪ್ರಾತಿನಿಧಿಕ ಸಂಸ್ಥೆಯಾಗಿದ್ದು, ವೈದ್ಯರ ಹಿತಾಸಕ್ತಿಗಳು ಮತ್ತು ಸಮುದಾಯದ ಯೋಗಕ್ಷೇಮವನ್ನು ನೋಡಿಕೊಳ್ಳು-ತ್ತದೆ. ಇದು 28 ರಾಜ್ಯ ಶಾಖೆಗಳು, 5 ಕೇಂದ್ರಾಡಳಿತ ಪ್ರಾದೇಶಿಕ ಶಾಖೆಗಳು ಮತ್ತು 1,702 ಸ್ಥಳೀಯ ಶಾಖೆಗಳನ್ನು ಹೊಂದಿದೆ. 3.5 ಲಕ್ಷ ವೈದ್ಯರು ಇದರ ಸದಸ್ಯತ್ವ ಪಡೆದಿದ್ದಾರೆ.

ಮೊದಲು ನಾವು ಜೆನೆರಿಕ್ ಮತ್ತು ಬ್ರ್ಯಾಂಡೆಡ್ ಈ ಎರಡು ಪದಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ. ಜೆನೆರಿಕ್ ಎಂದರೆ ಔಷಧದ ರಾಸಾಯನಿಕ ಹೆಸರು. ಪ್ರಪಂಚದಾದ್ಯಂತ ಫಾರ್ಮಸಿ ಅಧ್ಯಯನಕ್ಕೆ ಸಂಬಂಧಿಸಿದ ಪಠ್ಯಪುಸ್ತಕಗಳಲ್ಲಿ ಈ ಹೆಸರನ್ನು ಬಳಸಲಾಗುತ್ತದೆ. ಒಂದು ಔಷಧಿಯನ್ನು ವಿವಿಧ ಕಂಪನಿಗಳು ತಯಾರಿಸಿದಾಗ, ಅವು ಅದಕ್ಕೆ ತಮ್ಮದೇ ಆದ ವಿಭಿನ್ನ ಹೆಸರುಗಳನ್ನು ನೀಡುತ್ತವೆ. ಉದಾಹರಣೆಗೆ, ಪ್ಯಾರಸಿಟಮಾಲ್ ಎಂಬುದು ಜೆನೆರಿಕ್ ಹೆಸರು. ಇದರ ಬ್ರ್ಯಾಂಡ್ ಹೆಸರು ‘ಕ್ರೋಸಿನ್’, ‘ಡೋಲೊ’ ಅಥವಾ ‘ಕ್ಯಾಲ್ಪೋಲ್’. ನಮ್ಮ ವೈದ್ಯರ ಬಗ್ಗೆ ನಮಗೆ ಅಪಾರ ಗೌರವವಿದೆ. ಏಕೆಂದರೆ ಅವರು ನಮ್ಮ ಜೀವವನ್ನು ಉಳಿಸುತ್ತಾರೆ. ಆ ಗೌರವವನ್ನು ಇಟ್ಟುಕೊಂಡೇ ವೈದ್ಯರಿಗೆ ಗ್ರಾಹಕರು ಈ ಕೆಳಗಿನ ಪ್ರಶ್ನೆಗಳನ್ನು ಕೇಳಬಹುದೇ? ತಮ್ಮ ಕ್ಲಿನಿಕ್‌ನಲ್ಲಿ ರೋಗಿಗಳನ್ನು ಪರೀಕ್ಷಿಸುವ ವೈದ್ಯರಿಗೆ, ಜೆನೆರಿಕ್ ಔಷಧಿಗಳು ಗುಣಮಟ್ಟದವಾಗಿಲ್ಲ ಮತ್ತು ಬ್ರ್ಯಾಂಡೆಡ್ ಔಷಧಿಗಳು ಉತ್ತಮ ಗುಣಮಟ್ಟದ್ದಾಗಿವೆ ಎಂಬುದು ಹೇಗೆ ತಿಳಿಯುತ್ತದೆ? ಯಾವುದೇ ಔಷಧಿಯ ಗುಣಮಟ್ಟ ತಿಳಿಯಬೇಕೆಂದರೆ, ಅದನ್ನು ಔಷಧ ಪರೀಕ್ಷಾ ಪ್ರಯೋಗಾಲಯದಲ್ಲಿ ಪರೀಕ್ಷಿಸಬೇಕು. ವೈದ್ಯರ ಬಳಿ ಈ ಸೌಲಭ್ಯವೇನೂ ಇರುವುದಿಲ್ಲ. ಬಹುಮಟ್ಟಿಗೆ ಯಾವುದೇ ಪ್ರಯೋಗಾಲಯದ ಸಂಪರ್ಕದಲ್ಲೂ ಅವರು ಇರುವುದಿಲ್ಲ.

ನಮ್ಮ ವೈದ್ಯರು ಈ ಪ್ರಶ್ನೆಗೆ, ತಮ್ಮ ಅಪಾರ ಅನುಭವದ ಆಧಾರದ ಮೇಲೆ ಇದನ್ನು ನಿರ್ಧರಿಸುವು-ದಾಗಿ ಉತ್ತರ ನೀಡುತ್ತಾರೆ. ಆದರೆ ಹೀಗೆ ಹೇಳುವುದು ಅವೈಜ್ಞಾನಿಕ. ಕೆಲವು ವೈದ್ಯರು, ತಮ್ಮ ಒಡೆತನದ ಫಾರ್ಮಸಿಯಲ್ಲಿ ಅಥವಾ ತಮ್ಮ ಕ್ಲಿನಿಕ್ ನೆರೆಹೊರೆಯಲ್ಲಿ ಮಾತ್ರ ಲಭ್ಯವಿರುವ ಔಷಧಿಯನ್ನು ಸೂಚಿಸುತ್ತಾರೆ ಎಂಬುದು ರೋಗಿಗಳ ಅನುಭವದ ಮಾತು. ಆ ವೈದ್ಯರು ಸೂಚಿಸಿದ ಔಷಧಿ ಇತರ ಸ್ಥಳಗಳಲ್ಲಿ ಲಭ್ಯವಿರುವುದಿಲ್ಲ. ವೈದ್ಯರು ಇದಕ್ಕೆ ಏನು ವಿವರಣೆ ನೀಡುತ್ತಾರೆ?

ವೈದ್ಯಕೀಯ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಔಷಧಿಗಳಿಗೆ ಸಂಬಂಧಿಸಿದಂತೆ ಜೆನೆರಿಕ್ ಹೆಸರಿನಲ್ಲಿ ಮಾತ್ರ ಅಧ್ಯಯನ ಮಾಡುತ್ತಾರೆ. ವೈದ್ಯಕೀಯದ ಎಲ್ಲಾ ಪ್ರಮಾಣಿತ ಪಠ್ಯಪುಸ್ತಕಗಳು ಮತ್ತು ಪ್ರಪಂಚದಾದ್ಯಂತ ನಿಯತಕಾಲಿಕಗಳು ಜೆನೆರಿಕ್ ಹೆಸರನ್ನೇ ಬಳಸುತ್ತವೆ. ಆದರೆ ವೃತ್ತಿಯಲ್ಲಿ ಮಾತ್ರ ಬ್ರ್ಯಾಂಡೆಡ್ ಔಷಧಿಯನ್ನು ಶಿಫಾರಸು ಮಾಡುವ ಈ ಬಯಕೆ ಏಕೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಬಲು ಕಷ್ಟ. ಭಾರತೀಯ ಔಷಧಿ ಕಂಪನಿಗಳು 200ಕ್ಕೂ ಹೆಚ್ಚು ದೇಶಗಳಿಗೆ ಜೆನೆರಿಕ್ ಔಷಧಿಗಳನ್ನು ರಫ್ತು ಮಾಡುತ್ತವೆ. ಅಮೆರಿಕದ ಶೇಕಡ 40ಕ್ಕಿಂತ ಹೆಚ್ಚು ಜೆನೆರಿಕ್ ಬೇಡಿಕೆಯನ್ನು ಮತ್ತು ಇಂಗ್ಲೆಂಡ್‌ನ ಶೇ 25ರಷ್ಟು ಪ್ರಿಸ್ಕ್ರಿಪ್ಷನ್ ಸಹಿತ ಔಷಧಿಗಳನ್ನು ಪೂರೈಸುತ್ತವೆ. ಜೆನೆರಿಕ್ ಔಷಧಿಗಳನ್ನು ಅಭಿವೃದ್ಧಿಶೀಲ ದೇಶಗಳಿಗೆ ರಫ್ತು ಮಾಡಬಹುದಾದರೆ ಅವುಗಳನ್ನು ಭಾರತದಲ್ಲಿ ಏಕೆ ಬಳಸಬಾರದು?

‘ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಪರಿಯೋಜನ’ (ಪಿಎಂಬಿಜೆಪಿ), ಸಾಮಾನ್ಯ ಜನರಿಗೆ ಕೈಗೆಟಕುವ ದರದಲ್ಲಿ ಜೆನೆರಿಕ್ ಔಷಧಿಗಳನ್ನು ಒದಗಿಸಲು ಕೇಂದ್ರ ಸರ್ಕಾರ ಪ್ರಾರಂಭಿಸಿದ ಅಭಿಯಾನವಾಗಿದೆ. ಮುಕ್ತ ಮಾರುಕಟ್ಟೆಯಲ್ಲಿನ ದುಬಾರಿ ಬ್ರ್ಯಾಂಡೆಡ್ ಔಷಧಿಗಳಿಗೆ ಹೋಲಿಸಿದರೆ ಈ ಔಷಧಿಗಳ ಪರಿಣಾಮ ಒಂದೇ ಆಗಿರುತ್ತದೆ. ಭಾರತ ಸರ್ಕಾರವು ದೇಶದಾದ್ಯಂತ ತನ್ನ 9,400 ಪಿಎಂಬಿಜೆಪಿ ಔಷಧ ಮಳಿಗೆಗಳ ಮೂಲಕ ಜೆನೆರಿಕ್ ಹೆಸರುಗಳನ್ನು ಉತ್ತೇಜಿಸುತ್ತಿದೆ. ವೈದ್ಯರು ಜೆನೆರಿಕ್ ಹೆಸರಿನಲ್ಲಿ ಮಾತ್ರ ಔಷಧಿಗಳನ್ನು ಶಿಫಾರಸು ಮಾಡಬೇಕು ಎಂದು 2017ರಲ್ಲಿ ಪ್ರಧಾನಿ ಸ್ಪಷ್ಟಪಡಿಸಿದ್ದರು. ಆದರೆ ಖಾಸಗಿ ವೈದ್ಯರು ಇದನ್ನು ಒಪ್ಪುವುದಿಲ್ಲ.

ಮಾರುಕಟ್ಟೆಯಲ್ಲಿರುವ ಎಲ್ಲಾ ಬ್ರ್ಯಾಂಡೆಡ್ ಔಷಧಿಗಳನ್ನು ಹಂತ ಹಂತವಾಗಿ ಹಿಂತೆಗೆದುಕೊಳ್ಳಬೇಕು ಮತ್ತು ಅವುಗಳ ಬದಲಿಗೆ ಜೆನೆರಿಕ್ ಔಷಧಿಗಳನ್ನು ಬಳಸಬೇಕು ಎಂದು 1975ರಲ್ಲಿಯೇ ಹಾಥಿ ಸಮಿತಿಯು ಸಲಹೆ ನೀಡಿತ್ತು. ಹಾಥಿ ಸಮಿತಿಯ ನೇತೃತ್ವವನ್ನು ಸಂಸತ್ ಸದಸ್ಯ ಜೈಸುಖ್‌ಲಾಲ್ ಹಾಥಿ ವಹಿಸಿದ್ದರು. ಈಗ ರಾಷ್ಟ್ರೀಯ ವೈದ್ಯಕೀಯ ಆಯೋಗವೂ ಅದನ್ನೇ ಹೇಳುತ್ತಿದೆ. ದೇಶದ ಅತ್ಯುನ್ನತ ಸಂಸ್ಥೆ ಮಾಡಿದ ಈ ಶಿಫಾರಸುಗಳು ತಪ್ಪಾಗಲು ಹೇಗೆ ಸಾಧ್ಯ?

ಖಾಸಗಿ ವಲಯದಲ್ಲಿ ಚಿಕಿತ್ಸೆ ಪಡೆಯುವ ಹೆಚ್ಚಿನ ರೋಗಿಗಳು ಆರ್ಥಿಕವಾಗಿ ಸಂಕಷ್ಟಕ್ಕೆ ಈಡಾಗುತ್ತಾರೆ ಎಂದು ಹಲವಾರು ಅಧ್ಯಯನಗಳು ಹೇಳಿವೆ. ಇದನ್ನು ವೈದ್ಯಕೀಯ ಭಾಷೆಯಲ್ಲಿ ಔಟ್ ಆಫ್ ಪಾಕೆಟ್ ವೆಚ್ಚಗಳು (ಒಒಪಿ) ಎಂದು ಕರೆಯಲಾಗುತ್ತದೆ. ಔಷಧಿಗಳ ಮೇಲಿನ ಒಒಪಿ ವೆಚ್ಚವು ಒಟ್ಟು ಚಿಕಿತ್ಸಾ ವೆಚ್ಚದ ಶೇ 86ರಷ್ಟು ಎಂದು ಅಂದಾಜಿಸಲಾಗಿದೆ ಮತ್ತು ಇದು ಭಾರತೀಯರಲ್ಲಿ ಹೆಚ್ಚಿನ ಹೊರೆಗೆ ಕಾರಣವಾಗಿದೆ. ಹೀಗಾಗಿ, ಆರೋಗ್ಯ ಸೇವೆಯನ್ನು ಕೈಗೆಟಕುವಂತೆ ಮಾಡಬೇಕೆಂದಾದರೆ, ಔಷಧಿಗಳು ಕೈಗೆಟಕುವ ಬೆಲೆಯಲ್ಲಿ ಲಭ್ಯವಾಗುವಂತೆ ಮಾಡುವುದು ಅದಕ್ಕಿರುವ ಏಕೈಕ ಮಾರ್ಗವಾಗಿದೆ.

2017ರ ನವೆಂಬರ್‌ನಲ್ಲಿ ಪ್ರತಿಷ್ಠಿತ ಬ್ರಿಟಿಷ್ ಮೆಡಿಕಲ್ ಜರ್ನಲ್‌ನಲ್ಲಿ ಪ್ರಕಟವಾದ ಲೇಖನವೊಂದರ ಪ್ರಕಾರ, ನಾಲ್ಕು ಔಷಧಿಗಳ ಗುಣಮಟ್ಟದ ಪರೀಕ್ಷೆಯನ್ನು ಮಾಡಲಾಯಿತು- (ಮೆಟ್ಫಾರ್ಮಿನ್, ಗ್ಲಿಬೆಂಕ್ಲಾಮೈಡ್, ಅಟೆನೊಲೋಲ್ ಮತ್ತು ಅಮ್ಲೋಡಿಪೈನ್). ಈ ಎಲ್ಲಾ ಜೆನೆರಿಕ್ ಔಷಧಿಗಳ ಗುಣಮಟ್ಟವು ಬ್ರ್ಯಾಂಡೆಡ್ ಔಷಧಿಗಳ ಗುಣಮಟ್ಟಕ್ಕೆ ಸಮನಾಗಿದೆ ಎಂಬುದು ಈ ಸಂದರ್ಭದಲ್ಲಿ ಸಾಬೀತಾಯಿತು.

ಬ್ರ್ಯಾಂಡೆಡ್ ಔಷಧಿಗಳನ್ನು ಮಾತ್ರ ಶಿಫಾರಸು ಮಾಡಲು ವೈದ್ಯರು ಏಕೆ ಒತ್ತಾಯಿಸುತ್ತಿದ್ದಾರೆ ಎಂದು ಯಾರಾದರೂ ಆಶ್ಚರ್ಯಪಡಬಹುದು. ಅದಕ್ಕೆ ಅವರ ಬಳಿ ಯಾವುದೇ ವೈಜ್ಞಾನಿಕ ಪುರಾವೆಗಳಿಲ್ಲ.

ಮಾರುಕಟ್ಟೆಯಲ್ಲಿ ಗ್ರಾಹಕರು ತಮ್ಮಿಚ್ಛೆಯಂತೆ ಆಯ್ಕೆ ಮಾಡಿಕೊಳ್ಳಲು ಸಾಧ್ಯವಾಗದ ಏಕೈಕ ಸರಕೆಂದರೆ ಔಷಧಿಗಳು. ಆ ಗ್ರಾಹಕನಿಗಾಗಿ ವೈದ್ಯರು ಅದನ್ನು ನಿರ್ಧರಿಸುತ್ತಾರೆ. ವೈದ್ಯರು ಸೂಚಿಸಿದ ಔಷಧಿಗಳನ್ನು ಖರೀದಿಸು-ವುದನ್ನು ಬಿಟ್ಟು ರೋಗಿಗೆ ಬೇರೆ ಆಯ್ಕೆಗಳಿಲ್ಲ. ಇಂತಹ ಪರಿಸ್ಥಿತಿಯಲ್ಲಿ, ಶಿಫಾರಸು ಮಾಡುವ ವೈದ್ಯರು ಔಷಧ ಕಂಪನಿಗಳ ಕೈಗೊಂಬೆಯಾಗಿದ್ದರೆ ಏನಾಗುತ್ತದೆ?

ಗ್ರಾಹಕರಲ್ಲಿ ಮಾಹಿತಿಯ ಕೊರತೆಯೇ ಈ ಸಮಸ್ಯೆಗೆ ಕಾರಣವಾಗಿದೆ. ಅದರ ಹಿಂದಿನ ನಿಜವಾದ ಕಾರಣವೆಂದರೆ, ಔಷಧ ಕಂಪನಿಗಳು ಹಾಗೂ ವೈದ್ಯರ ನಡುವಿನ ಸಂಬಂಧ! ದುರದೃಷ್ಟವಶಾತ್, ಅವರು ಅದನ್ನು ಒಪ್ಪಿಕೊಳ್ಳಲು ಸಿದ್ಧರಿಲ್ಲ. ಔಷಧ ಕಂಪನಿಗಳು ವೈದ್ಯರಿಗೆ ಉಚಿತ ಉಡುಗೊರೆಗಳನ್ನು ನೀಡುತ್ತವೆ ಮತ್ತು ತಮ್ಮ ಕಂಪನಿಗಳ ಉತ್ಪನ್ನಗಳನ್ನು ಶಿಫಾರಸು ಮಾಡಲು ಅವರನ್ನು ಪ್ರಲೋಭನೆಗೆ ಒಳಪಡಿಸುತ್ತವೆ ಎಂಬುದು ಎಲ್ಲರಿಗೂ ತಿಳಿದಿದೆ. ಇದು ಭಾರತದಲ್ಲಿ ಮಾತ್ರವಲ್ಲ, ಜಾಗತಿಕ ಸಮಸ್ಯೆಯಾಗಿದೆ. ವೈದ್ಯರು ಹೇಗೆ ಔಷಧ ಕಂಪನಿಗಳ ಕೈಗೊಂಬೆಗಳಾಗುತ್ತಾರೆ ಎಂಬುದರ ಕುರಿತು ಪ್ರಪಂಚದಾದ್ಯಂತ ಹಲವಾರು ಅಧ್ಯಯನಗಳು ನಡೆದಿವೆ.

ಈ ಬಗ್ಗೆ ವೈದ್ಯರನ್ನು ಪ್ರಶ್ನಿಸಿದಾಗ ಅವರು ‘ನಾನು ಪ್ರಭಾವಿತನಾಗಿಲ್ಲ. ಆದರೆ ನನ್ನ ಇತರ ಸಹೋದ್ಯೋಗಿಗಳು ಪ್ರಭಾವಿತರಾಗಿದ್ದಾರೆ’ ಎಂದು ಉತ್ತರಿಸುತ್ತಾರೆ. ಈ ಹೇಳಿಕೆಯ ದಿಸೆಯಲ್ಲಿಯೂ ವ್ಯಾಪಕವಾಗಿ ಅಧ್ಯಯನ ನಡೆಸಲಾಗಿದೆ. ಬ್ರ್ಯಾಂಡ್ ಹೆಸರಿನಲ್ಲಿ ಯಾವುದೇ ಔಷಧಿಯ ಪ್ರಿಸ್ಕ್ರಿಪ್ಷನ್ ಬರೆಯದೆ, ಜೆನೆರಿಕ್‌ನಲ್ಲಿಯೇ ಎಲ್ಲ ಔಷಧಗಳನ್ನೂ ಬರೆಯುವಂತಾದರೆ, ಬ್ರ್ಯಾಂಡ್‌ಗಳನ್ನು ಉತ್ತೇಜಿಸಲು ವೈದ್ಯರಿಗೆ ಯಾವುದೇ ಕಾರಣ ಇರುವುದಿಲ್ಲ. ಆಗ ಫಾರ್ಮಾ ಕಂಪನಿಗಳಿಗೆ ಆಮಿಷ ಒಡ್ಡಲು ಸಹ ಸಾಧ್ಯವಾಗುವುದಿಲ್ಲ. ರೋಗಿಯು ಮಳಿಗೆಯಿಂದ ಖರೀದಿಸುವ ಔಷಧದ ಮೇಲೆ ಸಲ್ಲದ ಪ್ರಭಾವ ಬೀರಲು ಸಹ ವೈದ್ಯರಿಗೆ ಸಾಧ್ಯವಾಗುವುದಿಲ್ಲ.

ಇವೆಲ್ಲ ಕಾರ್ಯರೂಪಕ್ಕೆ ಬರಬೇಕೆಂದರೆ, ಇರುವುದು ಒಂದೇ ಒಂದು ಮಾರ್ಗ ಎಂದು ತೋರುತ್ತದೆ. ಅದೆಂದರೆ, ಗ್ರಾಹಕರು ತಮ್ಮ ವೈದ್ಯರ ಬಳಿ ಹೋದಾಗ, ಜೆನೆರಿಕ್ ಹೆಸರುಗಳಲ್ಲಿ ಮಾತ್ರ ಔಷಧಗಳನ್ನು ಬರೆಯುವಂತೆ ಒತ್ತಾಯಿಸುವುದು. ವೈದ್ಯರ ಒತ್ತಾಯದ ಮೇರೆಗೆ ಸರ್ಕಾರವು ತನ್ನ ಆದೇಶವನ್ನು ಇಷ್ಟರಲ್ಲಿಯೇ ವಾಪಸ್ ಪಡೆದರೂ ಏನೂ ಆಶ್ಚರ್ಯವಿಲ್ಲ.

ಲೇಖಕ: ಅಧ್ಯಕ್ಷ, ಡ್ರಗ್ ಆ್ಯಕ್ಷನ್ ಫೋರಂ- ಕರ್ನಾಟಕ

ಚುರುಮುರಿ

‘ಹಸ್ತ’ಲಾಘವ!

• ಚಂದ್ರಕಾಂತ ವಡ್ಡು

‘ಕಮಲಮ್ಮನ ಇಬ್ರೂ ಸೊಸೆಯಂದಿರು ಆಗಲೇ ತವರುಮನೆಗೆ ಹೊರಟು ನಿಂತಾರಂತೆ ನೋಡ್ರಿ…’ ಮಡದಿಯ ಮಾತಿಗೆ ಕಿವಿತೆರೆದ ತಿಂಗಳೇಶ.

‘ಕಮಲಮ್ಮನ ಮಕ್ಕಳಿಬ್ಬರೂ ಮುಂಬೈಗೆ ಓಡಿಹೋಗಿ ಲವ್ ಮ್ಯಾರೇಜ್ ಮಾಡಿಕೊಂಡು ಸಂಸಾರ-ವ್ಯವಹಾರದಲ್ಲಿ ಸುಖವಾಗಿದ್ದರಲ್ಲ, ಈಗೇನು ಅತ್ತೆಸೊಸೆ ಕಿತ್ತಾಟ ಶುರುವಾಯ್ತಾ?’

‘ಇಲ್ರೀ… ಅತ್ತೆಸೊಸೆ ತಾಯಿಮಕ್ಕಳಂತೆ ಅನ್ಯೋನ್ಯವಾಗಿದ್ದಾರೆ. ಗಂಡಹೆಂಡತಿ ಕೂಡ ಹೊಂದಿಕೊಂಡಿದ್ದಾರೆ. ಮಾವಸೊಸೆ ನಡುವೆಯೂ ತಕರಾರಿಲ್ಲ’.

‘ಪಕ್ಕದ ಮನೆ ತೆನೆಯಕ್ಕ ಹಚ್ಚಿಕೊಟ್ಟಳೇನು?’

‘ಇರಬಹುದೇನೋ, ಕಮಲಮ್ಮ ಮತ್ತು ತೆನೆಯಕ್ಕ ಗೇಟ್ ಬಳಿ ನಿಂತು ಗಂಟೆಗಟ್ಟಲೆ ಮಾತಾಡ್ತಾರಂತೆ. ಇತ್ತೀಚೆಗೆ ಕಮಲಮ್ಮನ ಕುಟುಂಬದ ದೊಡ್ಡ ಉದ್ದಿಮೆ ಹೀನಾಯ ನಷ್ಟ ಅನುಭವಿಸಿದೆ. ಇದಕ್ಕೆಲ್ಲಾ ಅನ್ಯಜಾತಿ ಸೊಸೆಯಂದಿರ ಕಾಲ್ಗುಣವೇ ಕಾರಣ ಅಂತ ಚುಚ್ಚಿ-ಕೊಟ್ಟರಬಹುದು’.

‘ದೊಡ್ಡ ಸೊಸೆಯ ಅಪ್ಪ ಸಿದ್ದಣ್ಣನಿಗಾಗಲೀ ಸಣ್ಣಸೊಸೆಯ ಅಪ್ಪ ಬಂಡೆಯಣ್ಣನಿಗಾಗಲೀ ಬುದ್ಧಿ ಬೇಡವೇ… ಮಕ್ಕಳಿಗೆ ತಿಳಿ ಹೇಳಬೇಡವೇ?’

‘ಇದರಲ್ಲಿ ತವರುಮನೆಯವರ ಕುಮ್ಮಕ್ಕೇ ಹೆಚ್ಚಿದ್ದಂತಿದೆ. ಮೊನ್ನೆತಾನೇ ಮಗಳು ಸೋಮವ್ವನ ಖಾತೆಗೆ ಸಿದ್ದಣ್ಣ ಅದೆಷ್ಟೋ ಹಣ ದಾನನೋ ಅನುದಾನನೋ ಕೊಟ್ಟು ಹುರಿದುಂಬಿಸಿದ್ದಾನೆ. ಈ ವಿಷಯದಲ್ಲಿ ಬಂಡೆಯಣ್ಣನದೂ ಎತ್ತಿದ ಕೈ!’

‘ಅದರಲ್ಲೇನಿದೆ ವಿಶೇಷ? ಅಪ್ಪಂದಿರು ತಮ್ಮ ಹೆಣ್ಣುಮಕ್ಕಳಿಗೆ ‘ಹಸ್ತ’ಲಾಘವ ನೀಡಿದ್ದಾರೆ ಅಷ್ಟೇ’.

‘ಅಪ್ಪನ ಹಸ್ತದ ಪ್ರೀತಿಗೋ, ಅನುದಾನದ ಆಸೆಗೋ ಕಟ್ಟಿಕೊಂಡ ಗಂಡನನ್ನು ಬಿಟ್ಟರೆ ಹೇಗೆ?’

‘ತೌರೂರ ದಾರಿಯಲಿ ತೆಂಗುಗಳು ತಲೆದೂಗಿ… ಮಲ್ಲಿಗೆಯ ಮೊಗ್ಗುಗಳು ಮುಳ್ಳುಬೇಲಿಯ ವರಿಸಿ, ಬಳುಕುತಿರೆ ಹಸ್ತನಾಪುರ ದಾರಿ ತೋರಿ…’ ತಿಂಗಳೇಶನೊಳಗಿನ ಕವಿ ಜಾಗೃತನಾದ.

‘ಒಂದಿರುಳು ಕನಸಿನಲಿ ನನ್ನವಳ ಕೇಳಿದೆನು, ಚಂದ ನಿನಗಾವುದೆಂದು- ನಮ್ಮೂರು ಕಮಲಾಪುರವೋ, ನಿಮ್ಮೂರು ಹಸ್ತನಾಪುರವೋ… ಹಸ್ತನಾಪುರವೇ ಸುಖವೆಂದು, ನಿಲ್ಲಿಸಿತು ಪ್ರೇಮ ಕೂಗಿ…’ ಮಡದಿ ಮುಂದುವರಿಸಿದಳು!

ಸಂಗತ

ಕಲಿಕೆಯ ಹಾದಿ: ತಾಳ್ಮೆಯೇ ಬುನಾದಿ

ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳಿಗೆ ಶಿಕ್ಷಕರು ಅಥವಾ ಸಹಪಾಠಿಗಳು ಆಡುವ ಮೂದಲಿಕೆಯ ಮಾತುಗಳು ಅವರು ಇನ್ನಷ್ಟು ಹಿಂದುಳಿಯುವಂತೆ ಮಾಡುತ್ತವೆ

• ಎಚ್.ಬಿ.ಚಂದ್ರಶೇಖರ್

ಪ್ರತಿ ಮಗುವೂ ಅನನ್ಯ ಎಂದು ತಿಳಿದಿದ್ದರೂ ಶಾಲಾ ಭೇಟಿಗಳ ಸಂದರ್ಭದಲ್ಲಿ ನಾನು ಗಮನಿಸಿದಂತೆ, ಕೆಲವು ಶಿಕ್ಷಕರು ಕಲಿಕೆಯ ವಿಷಯದಲ್ಲಿ ಒಬ್ಬ ವಿದ್ಯಾರ್ಥಿಯನ್ನು ಇನ್ನೊಬ್ಬ ವಿದ್ಯಾರ್ಥಿಯೊಂದಿಗೆ ಹೋಲಿಸುತ್ತಾರೆ. ಮಕ್ಕಳ ಕಲಿಕೆಯ ಮಾಪನ ಮಾಡುವ ಸಂದರ್ಭದಲ್ಲಿ ವಿದ್ಯಾರ್ಥಿಯೊಬ್ಬನಿಗೆ ಓದಲು, ಬರೆಯಲು ಅಥವಾ ಲೆಕ್ಕ ಮಾಡಲು ಹೇಳಿದಾಗ ಕೆಲವು ಶಿಕ್ಷಕರು ಥಟ್ಟನೆ ‘ಸರ್, ಈ ಹುಡುಗನಿಗೆ ಏನೂ ಬರುವುದಿಲ್ಲ’, ‘ಈ ಹುಡುಗಿ ಶಾಲೆಗೆ ಪದೇಪದೇ ಗೈರುಹಾಜರಾಗುತ್ತಾಳೆ’, ‘ಇವನು ಲೆಕ್ಕದಲ್ಲಿ ಸ್ವಲ್ಪ ವೀಕು’ ಎಂದುಬಿಡುತ್ತಾರೆ. ಕೆಲವೊಮ್ಮೆ ವಿದ್ಯಾರ್ಥಿಯ ಸ್ನೇಹಿತರು, ‘ಸರ್, ಅವನಿಗೆ ಏನೂ ಬರುವುದಿಲ್ಲ’ ಎಂದು ಕುಹಕವಾಡುತ್ತಾರೆ.

ಕಲಿಕೆಯಲ್ಲಿ ಮೊದಲೇ ಒಂದಷ್ಟು ಹಿಂದಿರುವ ವಿದ್ಯಾರ್ಥಿಯ ಮನಸ್ಸಿಗೆ ಇದರಿಂದ ಗಾಸಿಯಾಗುತ್ತದೆ. ಆರಂಭದಲ್ಲಿ ಮಾನಸಿಕ ನೋವು, ಬೇಸರ ಅನುಭವಿಸುವ ವಿದ್ಯಾರ್ಥಿಯ ಮನಸ್ಸು ಕಾಲಕ್ರಮೇಣ ಜಡ್ಡುಗಟ್ಟುತ್ತದೆ. ‘ನಾನು ದಡ್ಡನೇ ಇದ್ದೇನೆ. ಇನ್ನೇಕೆ ಪ್ರಯತ್ನಪಡಲಿ’ ಎಂಬ ಧೋರಣೆ ಹೊಂದುತ್ತಾನೆ. ಇದರಿಂದ ಕಲಿಕೆಯಲ್ಲಿ ಹಿಂದುಳಿಯುವಿಕೆ ಹೆಚ್ಚಾಗಿ ಶಾಲೆಗೆ ಪದೇಪದೇ ಗೈರುಹಾಜರಾಗುತ್ತಾನೆ. ಇಂತಹ ವಿದ್ಯಾರ್ಥಿಗಳಿಗೆ ಶಾಲೆ, ಶಿಕ್ಷಣ ರುಚಿಸದೇ ಹೋಗುತ್ತದೆ. ಮೂದಲಿಕೆಗಳಿಂದಾಗಿ ಗೆಳೆತನವೂ ಬೇಡವಾಗುತ್ತದೆ.

ಶಿಕ್ಷಕರ ದೈನಂದಿನ ತರಗತಿ ಬೋಧನೆಯಲ್ಲಿ ಅಥವಾ ಇನ್ನಿತರ ಅನೇಕ ಸಂದರ್ಭಗಳಲ್ಲಿ ‘ಇವನಿಗೆ ಲೆಕ್ಕ ತಲೆಗೆ ಹತ್ತದು’, ‘ಇವಳಿಗೆ ಓದಲು ಬಾರದು’ ಎಂಬಂತಹ ಮಾತುಗಳು ಮಕ್ಕಳ ಮನಸ್ಸಿನಾಳದಲ್ಲಿ ಕುಳಿತು, ಅವರ ಆತ್ಮವಿಶ್ವಾಸ ಕುಸಿಯುವಂತೆ ಮಾಡುತ್ತವೆ. ಇಂತಹ ನಕಾರಾತ್ಮಕ ಮಾತುಗಳನ್ನು ಕೇಳುತ್ತಾ ಕೇಳುತ್ತಾ ನಕಾರಾತ್ಮಕ ಸ್ವಬಿಂಬವನ್ನು ಅವರು ರಚಿಸಿಕೊಳ್ಳುತ್ತಾರೆ. ತಂದೆ, ತಾಯಿ, ಸಹೋದರ ಸಹೋದರಿಯರು, ಮನೆಯ ಇತರ ಸದಸ್ಯರು, ನೆರೆಯವರು, ಶಾಲಾ ಶಿಕ್ಷಕರು ಹಾಗೂ ಸ್ನೇಹಿತರು ತನ್ನ ಬಗ್ಗೆ ಏನು ಹೇಳುತ್ತಾರೆ, ಯಾವ ಅಭಿಪ್ರಾಯ ಹೊಂದಿದ್ದಾರೆ, ಯಾವ ರೀತಿ ನಡೆಸಿಕೊಳ್ಳುತ್ತಾರೆ ಎಂಬುದರ ಆಧಾರದ ಮೇಲೆ ಪ್ರತಿಯೊಬ್ಬರೂ ತಮ್ಮದೇ ಆದ ಸ್ವಬಿಂಬವನ್ನು ರಚಿಸಿಕೊಂಡು ಅದಕ್ಕೆ ತಕ್ಕಂತೆ ಸ್ಪಂದಿಸುತ್ತಾರೆ. ಒಮ್ಮೆ ರಚನೆಯಾದ ಸ್ವಬಿಂಬವನ್ನು ಬದಲಾಯಿಸುವುದು ಕಠಿಣ. ಈ ಕಾರಣದಿಂದ, ಮಕ್ಕಳೊಂದಿಗೆ ಒಡನಾಡುವಾಗ ನಕಾರಾತ್ಮಕ ಮಾತುಗಳನ್ನು ಆಡುವುದರ ಬದಲಾಗಿ ‘ನೀನು ಲೆಕ್ಕದಲ್ಲಿ ಜಾಣೆ’, ‘ನಿನಗೆ ಓದಲು ಬರುತ್ತದೆ, ಪ್ರಯತ್ನಿಸು’ ಎಂಬಂಥ ಆತ್ಮವಿಶ್ವಾಸದ ಮಾತುಗಳನ್ನು ಆಡಬೇಕು.

ಸಾಮಾನ್ಯವಾಗಿ ನಿಧಾನಗತಿಯಲ್ಲಿ ಕಲಿಯುವ ಮಕ್ಕಳು ಒತ್ತಕ್ಷರಗಳಿಲ್ಲದ ಸರಳ ಪದಗಳನ್ನು ಓದುತ್ತಾರೆ. ಗುಣಿತಾಕ್ಷರ ಮತ್ತು ಒತ್ತಕ್ಷರಗಳು ಇರುವ ಪದಗಳು ಬಂದರೆ ಓದಲು ಕಷ್ಟಪಡುತ್ತಾರೆ. ಈ ಹಂತದಲ್ಲಿ ಅವರಿಗೆ ನೆರವು ಬೇಕಾಗುತ್ತದೆ. ಇನ್ನು ಕೆಲವರು ಗುಣಿತಾಕ್ಷರ ಮತ್ತು ಒತ್ತಕ್ಷರಗಳನ್ನು ಗುರುತಿಸುವುದನ್ನು ಕಲಿತರೂ ಪದಗಳನ್ನು ಜೋಡಿಸಿಕೊಂಡು ವಾಕ್ಯಗಳಾಗಿ ಓದಲು ಕಷ್ಟಪಡುತ್ತಾರೆ. ಈ ಹಂತದಲ್ಲಿ ಸಮಾಧಾನ, ತಾಳ್ಮೆಯಿಂದ ಅವರದೇ ಗತಿಯಲ್ಲಿ ಕಲಿಯಲು ಅವಕಾಶ ಮಾಡಿಕೊಡದೇ ಹೋದರೆ ಅವರು ಕಲಿಕೆಯಲ್ಲಿ ಹಿಂದೆ ಬೀಳುತ್ತಾರೆ.

ಇನ್ನು ಲೆಕ್ಕದ ವಿಷಯಕ್ಕೆ ಬಂದರೆ, ದಶಕ ರಹಿತವಾಗಿ ಕೂಡುವ, ಕಳೆಯುವ ಲೆಕ್ಕಗಳನ್ನು ಮಾಡಿದರೂ ದಶಕ ತೆಗೆದುಕೊಂಡು ಕೂಡುವ ಕಳೆಯುವ ಲೆಕ್ಕಗಳನ್ನು ಮಾಡಲು ಕಷ್ಟಪಡುತ್ತಾರೆ. ಕೂಡುವುದಕ್ಕಿಂತ ಕಳೆಯುವುದು ಕಠಿಣ, ಕಳೆಯುವುದಕ್ಕಿಂತ ಗುಣಾಕಾರ ಹಾಗೂ ಗುಣಾಕಾರಕ್ಕಿಂತ ಭಾಗಾಕಾರ ಮಕ್ಕಳಿಗೆ ಕಠಿಣವೆನಿಸುತ್ತದೆ. ಒಂದು ನಿರ್ದಿಷ್ಟ ಹಂತದ ಕಲಿಕೆಗೆ ಬಂದು ಮುಂದಿನ ಕಲಿಕೆ ಸಾಧ್ಯವಾಗದೇ ನಿಂತ ಮಕ್ಕಳಿಗೆ ‘ಸರಳತೆಯಿಂದ ಕಠಿಣತೆಗೆ’ ಸಾಗುವ ಸೂತ್ರ ಮತ್ತು ಮಕ್ಕಳ ಆತ್ಮವಿಶ್ವಾಸ ಉದ್ದೀಪನಗೊಳಿಸುವ ಕಾರ್ಯ ಪರಿಣಾಮಕಾರಿ.

ಇದಕ್ಕೊಂದು ಒಳ್ಳೆಯ ಉದಾಹರಣೆಯನ್ನು ಸ್ವಾಮಿ ಜಗದಾತ್ಮಾನಂದ ಅವರ ‘ಬದುಕಲು ಕಲಿಯಿರಿ’ ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ. 7ನೇ ತರಗತಿಯಲ್ಲಿ ಓದುತ್ತಿದ್ದ ವಿದ್ಯಾರ್ಥಿಯೊಬ್ಬ ಲೆಕ್ಕದಲ್ಲಿ ಬಲು ಹಿಂದೆ ಹಾಗೂ ನಕಲು ಮಾಡುವುದರಲ್ಲಿ ಮುಂದೆ ಎಂಬ ಕುಖ್ಯಾತಿ ಪಡೆದಿರುತ್ತಾನೆ. ಅವನ ಗಣಿತದ ಜ್ಞಾನ 3ನೇ ತರಗತಿಯಷ್ಟು. ಅವನು ಒಮ್ಮೆ ಸ್ವಾಮೀಜಿಯನ್ನು ಭೇಟಿ ಮಾಡಿ, ‘ನನಗೆ ಖಾಸಗಿಯಾಗಿ ಲೆಕ್ಕ ಹೇಳಿಕೊಡಿ’ ಎನ್ನುತ್ತಾನೆ. ದಿನವೂ ರಾತ್ರಿ ಗಣಿತ ಪಾಠ ನಡೆಯುತ್ತದೆ. ಆರಂಭದಲ್ಲಿ ಅವನಿಗೆ ಸುಲಭವಾಗಿ ಬರುವ ಲೆಕ್ಕಗಳನ್ನು ಮಾಡಿಸುತ್ತಾ, ಅವನು ಸರಿ ಲೆಕ್ಕ ಮಾಡಿದಾಗಲೆಲ್ಲಾ ‘ನೀನು ಲೆಕ್ಕದಲ್ಲಿ ಜಾಣ, ನಿನಗೆ ಗಣಿತ ಬಾರದು ಎಂದವರಾರು’ ಎನ್ನುತ್ತಾ ಸ್ವಾಮೀಜಿ ಅವನಲ್ಲಿ ಆತ್ಮವಿಶ್ವಾಸ ತುಂಬುತ್ತಾರೆ. ಮೂರು ತಿಂಗಳಲ್ಲಿ ಕಠಿಣ ಲೆಕ್ಕಗಳನ್ನು ಮಾಡುವುದನ್ನು ಕಲಿತು, ವಾರ್ಷಿಕ ಪರೀಕ್ಷೆಯಲ್ಲಿ ನಕಲು ಮಾಡದೆ ಶೇ 70ರಷ್ಟು ಅಂಕ ಪಡೆಯುತ್ತಾನೆ.

ನಕಾರಾತ್ಮಕ ಸ್ವಬಿಂಬವನ್ನು ಹೊಂದಿರುವ ನಿಧಾನಗತಿಯ ಕಲಿಕೆಯ ಮಕ್ಕಳಿಗೆ ಒಳ್ಳೆಯ ಮಾತುಗಳನ್ನು ಆಡುತ್ತಾ ಆತ್ಮವಿಶ್ವಾಸ ಮೂಡಿಸಿ, ಕಲಿಯುವ ಹುಮ್ಮಸ್ಸು ಬರುವಂತೆ ಶಿಕ್ಷಕರು ತಾಳ್ಮೆ, ಸಹನೆಯನ್ನು ಹೊಂದಿ ಕಾರ್ಯನಿರ್ವಹಿಸಿದಲ್ಲಿ ಹೆಚ್ಚಿನ ಮಕ್ಕಳು ಕಲಿಕೆಯ ಹಾದಿಗೆ ಮರಳುತ್ತಾರೆ.

ಲೇಖಕ: ಹಿರಿಯ ಉಪನ್ಯಾಸಕ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಬೆಂಗಳೂರು ನಗರ ಜಿಲ್ಲೆ

ವಾಚಕರ ವಾಣಿ

ಶಿಕ್ಷಣ ನೀತಿ: ಪಂಥಾಹ್ವಾನ ಬೇಡ

ರಾಷ್ಟ್ರೀಯ ಶಿಕ್ಷಣ ನೀತಿಯ ಪರ ಮತ್ತು ವಿರುದ್ಧದ ನಿಲುವುಗಳು ರಾಜಕೀಯ ಮೇಲಾಟಕ್ಕೆ ಕಾರಣವಾಗಿರುವುದು ವಿಪರ್ಯಾಸದ ಸಂಗತಿ. ಶಿಕ್ಷಣ ತಜ್ಞರಲ್ಲಿ ಕೆಲವರು ಈ ನೀತಿಯ ಪರವಾಗಿದ್ದರೆ, ಇನ್ನು ಕೆಲವರು ವಿರುದ್ಧವಾಗಿದ್ದಾರೆ. ನಾವು ಯಾರನ್ನು ಅನುಸರಿಸಬೇಕು?

ಮುಖ್ಯಮಂತ್ರಿ ನೇತೃತ್ವದಲ್ಲಿ ಶಿಕ್ಷಣ ನೀತಿ ಕುರಿತು ನಡೆದ ಚರ್ಚೆಯಲ್ಲಿ ಕುಲಪತಿಗಳು ಪರ ಅಥವಾ ವಿರೋಧದ ಯಾವ ಅಭಿಪ್ರಾಯವನ್ನೂ ಖಚಿತವಾಗಿ ವ್ಯಕ್ತಪಡಿಸಿಲ್ಲವೆಂದರೆ ಏನರ್ಥ? ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು 8 ಪ್ರಶ್ನೆಗಳನ್ನು ಕೇಳಿದ್ದು, ಅದಕ್ಕೆ ಅವರು ತಿರುಗೇಟು ನೀಡಿದ್ದು ಏನನ್ನು ಸೂಚಿಸುತ್ತದೆ? ಚರ್ಚೆ ರಾಜಕೀಯ ಮುಕ್ತವಾಗಿರಲಿ. ಪಂಥಾಹ್ವಾನ ನೀಡುವಂಥ ಬೆಳವಣಿಗೆ ಒಳ್ಳೆಯದಲ್ಲ.

ಶಿವಕುಮಾರ ಬಂಡೋಳಿ, ಹುಣಸಗಿ

ಅಮಾನವೀಯ ವ್ಯವಸ್ಥೆಗೆ ಕನ್ನಡಿ

ಹದಿನಾಲ್ಕು ತಿಂಗಳ ಬಾಕಿ ವೇತನಕ್ಕೆ ಆಗ್ರಹಿಸಿ ಕನಕಪುರ ತಾಲ್ಲೂಕಿನಲ್ಲಿ ಇಬ್ಬರು ಪೌರ ಕಾರ್ಮಿಕರು ತಮ್ಮ ಮೈಮೇಲೆ ಮಲ ಸುರಿದುಕೊಂಡು ಪ್ರತಿಭಟನೆ ನಡೆಸಿದ್ದಾರೆ. ಇದು, ನಮ್ಮ ವ್ಯವಸ್ಥೆಯ ಅಮಾನವೀಯ ಮುಖವನ್ನು ತೋರಿಸುತ್ತದೆ. ಇಡೀ ಸಮಾಜವನ್ನು ಶುಚಿಯಾಗಿ ಇಟ್ಟುಕೊಳ್ಳುವಲ್ಲಿ ಪೌರಕಾರ್ಮಿಕರ ಪಾತ್ರ ದೊಡ್ಡದು. ಸಕಾಲಕ್ಕೆ ವೇತನ ನೀಡದಿದ್ದರೆ ಅವರು ಕುಟುಂಬ ನಿರ್ವಹಿಸುವುದು ಹೇಗೆ? ಅವರ ಸೇವೆಯನ್ನು ಪಡೆದ ಮೇಲೆ ಅವರಿಗೆ ಸಲ್ಲಬೇಕಾದ ವೇತನವನ್ನು ಕಾಲಕಾಲಕ್ಕೆ ಪಾವತಿಸಬೇಕು. ಇಂಥವರ ಹೊಟ್ಟೆಯ ಮೇಲೆ ಹೊಡೆಯುವುದು ಯಾವ ನ್ಯಾಯ? ‘ನೊಂದವರ ನೋವ ನೋಯದವರೆತ್ತ ಬಲ್ಲರು?’ ಎಂಬ ಅಕ್ಕಮಹಾದೇವಿಯ ವಚನ ಇಂತಹ ಕಲ್ಲು ಮನಸ್ಸಿನ ಅಮಾನವೀಯ ವ್ಯವಸ್ಥೆಗೆ ಕನ್ನಡಿ ಹಿಡಿಯುತ್ತದೆ.

ನಮ್ಮ ಸಂವಿಧಾನದ ಸಮಾನತೆಯ ಆಶಯವು ಬರೀ ಹೇಳಿಕೊಳ್ಳುವುದಕ್ಕೆ ಸೀಮಿತವೇ? ವಾಸ್ತವದಲ್ಲಿ ಅಳವಡಿಸಿಕೊಳ್ಳಲು ಆಗುವುದಿಲ್ಲವೇ? ಕನಿಷ್ಠಪಕ್ಷ ಸ್ವಲ್ಪ ಮಾನವೀಯತೆಯಾದರೂ ಬೇಡವೇ ನಮ್ಮ ಆಡಳಿತಶಾಹಿಗೆ?

ಬಸೆಟ್ಟೆಪ್ಪ ಡಿ.ಎಂ., ಬೆಂಗಳೂರು

ಲಿಂಗ ಸಮಾನತೆಗೆ ಪೂರಕ ಕ್ರಮ

ತರಗತಿಯ ಬೋಧನಾ ಸಮಯದಲ್ಲಿ ಕೆಲವು ಪದಗಳಿಗೆ ವಾಕ್ಯ ರಚಿಸುವಾಗ ‘ಬೆವರು ಸುರಿಸಿ’ ಎನ್ನುವ ಪದಕ್ಕೆ ನಾನು, ‘ಹೊಲದಲ್ಲಿ ಬೆವರು ಸುರಿಸಿ ದುಡಿದು ಬಂದ ಅಮ್ಮನಿಗೆ ಅಪ್ಪ ಕಾಫಿ ಮಾಡಿಕೊಟ್ಟರು’ ಎಂದು ಬರೆಸಿದೆ. ಮಕ್ಕಳು ಒಂದು ಕ್ಷಣ ಮುಸಿಮುಸಿ ನಕ್ಕರು. ಆಗ ಪ್ರಶ್ನೆಗಳನ್ನು ಕೇಳುತ್ತಾ ಕೇಳುತ್ತಾ, ಕೆಲಸ ಅಥವಾ ಉದ್ಯೋಗ ಎನ್ನುವುದು ಗಂಡು, ಹೆಣ್ಣು ಇಬ್ಬರಲ್ಲೂ ಸಮಾನವಾಗಿ ಹಂಚಿಕೆಯಾಗಿರುತ್ತದೆ ಎಂಬುದನ್ನು ಅವರೇ ಅರಿತುಕೊಂಡರು. ಡಾ. ಕೆ.ಎಸ್.ಪವಿತ್ರ ಅವರು ಹೇಳಿದಂತೆ (ಸಂಗತ, ಆ. 22), ಲಿಂಗ ಸಮಾನತೆಯ ಮನಃಸ್ಥಿತಿಯನ್ನು ಬೆಳೆಸಲು ಇಂತಹ ಸಣ್ಣ ಸಣ್ಣ ಸಂಗತಿಗಳು ಗಮನಾರ್ಹ ಪಾತ್ರವನ್ನು ವಹಿಸುತ್ತವೆ.

ಸುವರ್ಣ ಸಿ.ಡಿ., ತರೀಕೆರೆ

ಶಿಕ್ಷಕರಲ್ಲಿ ವಿಭಜನೆ ತರವಲ್ಲ

ಸುಮಾರು ಏಳೆಂಟು ವರ್ಷಗಳಿಂದ ಸರ್ಕಾರಿ ಶಾಲೆಗಳಿಗೆ ಆಸರೆಯಾಗಿರುವುದು ಅತಿಥಿ ಶಿಕ್ಷಕರು. ಕೆಲವು ಶಾಲೆಗಳಲ್ಲಿ ಇಂದಿಗೂ ಕಾಯಂ ಶಿಕ್ಷಕರೇ ಇಲ್ಲ. ಇಂತಹ ಕಡೆ ಪ್ರಮುಖ ಪಾತ್ರ ವಹಿಸುವವರು ಅತಿಥಿ ಶಿಕ್ಷಕರು. ಆದರೆ ಇಷ್ಟೆಲ್ಲ ಸೇವೆ ಸಲ್ಲಿಸಿದರೂ ಅತಿಥಿ ಶಿಕ್ಷಕರ ಯಾವ ದಾಖಲೆಯನ್ನೂ ಶಿಕ್ಷಣ ಇಲಾಖೆಯು ನಿರ್ವಹಿಸುವುದಿಲ್ಲ. ಇನ್ನು ಅವರ ಹಾಜರಾತಿ ದಾಖಲಾಗುವುದು ಹಳೆಯ ನೋಟ್‌ಪುಸ್ತಕದಲ್ಲಿ. ಸಂಬಳ ಆದ ನಂತರ ಆ ಪುಸ್ತಕ ಲೆಕ್ಕಕ್ಕಿಲ್ಲದಂತೆ ಮಾಯವಾಗುತ್ತದೆ. ಅತಿಥಿ ಶಿಕ್ಷಕರಿಗೆ ತರಬೇತಿ ನೀಡಲು ಸಹ ಹಿಂದೇಟು ಹಾಕಲಾಗುತ್ತದೆ. ಒಟ್ಟಾರೆ, ಕಾಯಂ ಶಿಕ್ಷಕರಂತೆಯೇ ಇವರಿಂದ ಸೇವೆ ಪಡೆದರೂ ಇವರು ಇರುವುದು ಸಂಬಳಕ್ಕಾಗಿ ಮಾತ್ರ ಎಂದು ಶಿಕ್ಷಣ ಇಲಾಖೆಯು ತಿಳಿದಿರುವಂತಿದೆ. ಅತಿಥಿ ಶಿಕ್ಷಕರನ್ನು ಇತರ ಶಿಕ್ಷಕರಿಂದ ಹೀಗೆ ವಿಭಜಿಸಿ ನೋಡುವುದು ಸರಿಯಲ್ಲ.

ಸಣ್ಣಮಾರಪ್ಪ, ಚಂಗಾವರ, ಶಿರಾ

ಆನು ಒಲಿದಂತೆ ಹಾಡುವುದೇ ಅಭಿವ್ಯಕ್ತಿ ಸ್ವಾತಂತ್ರ್ಯ

ಕುವೆಂಪು ವಿರಚಿತ ನಾಡಗೀತೆಯನ್ನು ಮೈಸೂರು ಅನಂತಸ್ವಾಮಿ ಅವರ ಸ್ವರ ಸಂಯೋಜನೆ ಧಾಟಿಯಲ್ಲೇ ಹಾಡಬೇಕೆಂದು ಈ ಹಿಂದಿನ ಸರ್ಕಾರ ಆದೇಶ ಹೊರಡಿಸಿರುವುದನ್ನು ಪ್ರಶ್ನಿಸಿ, ಸಿ.ಅಶ್ವತ್ಥ್ ಅವರ ಅನುಯಾಯಿ ಗಾಯಕ ಕಲಾವಿದರು ಕೋರ್ಟಿನ ಮೆಟ್ಟಿಲೇರಿರುವುದು ಈಗ ಚರ್ಚೆಯ ವಿಷಯವಾಗಿದೆ. ಮೈಸೂರು ಅನಂತಸ್ವಾಮಿ ಹಾಗೂ ಸಿ.ಅಶ್ವತ್ಥ್ ಇಬ್ಬರೂ ಸಂಗೀತ ದಿಗ್ಗಜರು. ಬದುಕಿದ್ದಾಗ ಇಬ್ಬರೂ ಪರಸ್ಪರ ಸ್ನೇಹ, ಗೌರವದಿಂದ ಇದ್ದವರು. ಅವರು ಹೋದ ಮೇಲೆ ಅವರ ಅನುಯಾಯಿ ಗಾಯಕ ಕಲಾವಿದರು ರಾಗದ ಬೆನ್ನು ಹತ್ತಿ ಶತ್ರುತ್ವದ ದಾರಿ ಹಿಡಿಯುವ ವಾತಾವರಣ ಸೃಷ್ಟಿಯಾಗಿರುವುದು ಸರಿಯಲ್ಲ.

‘ತಾಳಮಾನ ಸರಿಸವನರಿಯೆ/ ಓಜೆ ಬಜಾವಣೆಯ ಲೆಕ್ಕವನರಿಯೆ/ ಅಮೃತಗಣ ದೇವಗಣವನರಿಯೆ/ ಕೂಡಲಸಂಗಮ ದೇವಾ/ ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ’ ಎಂದಿರುವ ಬಸವಣ್ಣನವರು, ಹನ್ನೆರಡನೇ ಶತಮಾನದಲ್ಲಿಯೇ ಅಭಿವ್ಯಕ್ತಿ ಸ್ವಾತಂತ್ರ್ಯದ ಮಹತ್ವವನ್ನು ಸಾರಿದ್ದಾರೆ. ಲಯ ವಿನ್ಯಾಸದಲ್ಲಿ ಹಾಡು ಕಟ್ಟುವ, ಸ್ವರ, ವ್ಯಾಕರಣ ಪಾಂಡಿತ್ಯಕ್ಕಿಂತಲೂ ಸಾಹಿತ್ಯ ಮತ್ತು ಸಮಾಜದ ಸಂಬಂಧ ಬೆಸೆಯುವುದೇ ಹಾಡಿನ ಮುಖ್ಯ ಉದ್ದೇಶ-ವಾಗಬೇಕು. ‘ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ’ ಎನ್ನುವ ಪಂಪಕವಿಯ ದೇಶಪ್ರೇಮ, ‘ನರಕಕ್ಕಿಳ್ಸಿ ನಾಲ್ಗೆ ಸೀಳ್ಸಿ, ಬಾಯಿ ಒಲಿಸಾಕಿದ್ರೂನೆ, ಮೂಗ್ನಲ್ ಕನ್ನಡ ಪದವಾಡ್ತೀನಿ’ ಎನ್ನುವ ಜಿ.ಪಿ.ರಾಜರತ್ನಂ ಅವರ ಕನ್ನಡದ ಬದ್ಧತೆ ಅರ್ಥವಾಗಲು ಕನ್ನಡಿಗರು ಯಾವ ರಾಗ ಕಲಿಯಬೇಕು? ಆದ್ದರಿಂದ ಈ ವಿಷಯದಲ್ಲಿ ಸರ್ಕಾರವು ಚರ್ಚೆಗೆ ಅವಕಾಶ ಕಲ್ಪಿಸಿ, ಆನು ಒಲಿದಂತೆ ಹಾಡುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಕಿತ್ತುಕೊಂಡಿರುವ ಆದೇಶ ಹಿಂಪಡೆದು, ಕಲಾವಿದರು ಮತ್ತು ಕನ್ನಡಿಗರ ಸಂಬಂಧವನ್ನು ಬೆಸೆಯುವ ಕೆಲಸ ಮಾಡಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚಂದ್ರನ ಶಾಶ್ವತ ಕತ್ತಲ ಕುಳಿಗಳತ್ತ ಇಸ್ರೊ...

ಬಾಹ್ಯಾಕಾಶ ವಿಜ್ಞಾನಿಗಳನ್ನು ಚಂದ್ರನ ದಕ್ಷಿಣ ಧ್ರುವವು ಸೂಜಿಗಲ್ಲಿನಂತೆ ಸೆಳೆಯುತ್ತಲೇ ಇದೆ. ಶಾಶ್ವತವಾಗಿ ಕತ್ತಲಲ್ಲಿ ಮುಳುಗಿ ಹೋಗಿರುವ ಚಂದ್ರನ ದಕ್ಷಿಣ ಧ್ರುವದ ಕುಳಿಗಳಲ್ಲಿ ಏನೇನು ಅಡಗಿದೆಯೋ ಎಂಬ ಕುತೂಹಲ ಬಾಹ್ಯಾಕಾಶ ವಿಜ್ಞಾನಿಗಳನ್ನು ಕಾಡುತ್ತಲೇ ಇದೆ. ಆ ಕತ್ತಲ ಕುಳಿಗಳಲ್ಲಿ ನೀರಿದೆಯೇ? ಜಲಜನಕವಿದೆಯೇ? ಅಲ್ಲಿ ಈ ಹಿಂದೆ ಜೀವಿಗಳಿದ್ದವೇ? ಮೊದಲಾದ ಪ್ರಶ್ನೆಗಳಿಗೆ ಚಂದ್ರನ ದಕ್ಷಿಣ ಧ್ರುವದಲ್ಲಿ ಉತ್ತರವಿದೆ ಎಂಬುದು ವಿಜ್ಞಾನಿಗಳ ನಂಬಿಕೆ. ಈ ಎಲ್ಲಾ ಪ್ರಶ್ನೆಗಳಿಗೆ ನಕಾರಾತ್ಮಕ ಉತ್ತರ ದೊರೆಯಲೂಬಹುದು. ಆದರೂ, ಅತ್ಯಂತ ಕಡು ಚಳಿಯಲ್ಲಿ ನೌಕೆಯನ್ನು ಇಳಿಸಿದ ಶ್ರೇಯ ಭಾರತದ ವಿಜ್ಞಾನಿಗಳಿಗೆ ಈಗಾಗಲೇ ಸಂದಿದೆ

● ಜಯಸಿಂಹ ಆರ್.

ಮಾನವನು 70ರ ದಶಕದಲ್ಲಿ ಚಂದ್ರನ ಮೇಲೆ ಕಾಲಿರಿಸಿದ ನಂತರ ಆತ ಮೊದಲು ಪರಿಶೀಲಿಸಿದ ವಿಷಯಗಳಲ್ಲಿ 'ಚಂದ್ರನಲ್ಲಿ ನೀರಿದೆಯೇ?' ಎಂಬುದೂ ಒಂದು. ಹಲವು ಬಾರಿ ಚಂದ್ರನ ಮೇಲೆ ಹೋಗಿ ಬಂದು, ಅಲ್ಲಿಂದ ತಂದ ಮಾದರಿಗಳನ್ನು ಪರಿಶೀಲಿಸಿದ ನಂತರ ಚಂದ್ರನ ಮೇಲೆ ನೀರು ಇಲ್ಲ ಎಂದು ಬಾಹ್ಯಾಕಾಶ ವಿಜ್ಞಾನಿಗಳು ಘೋಷಿಸಿದ್ದರು. ಆದರೆ, ಚಂದ್ರನಲ್ಲಿ ಈ ಹಿಂದೆ ನೀರು ಇದ್ದಿರಬಹುದೇ ಎಂಬ ಕುತೂಹಲ ಹಾಗೇಯೇ ಇತ್ತು. ಚಂದ್ರನಲ್ಲಿ ನೀರು ಇರುವ ಬಗ್ಗೆ ಮತ್ತು ನೀರು ಇದ್ದ ಬಗ್ಗೆ ಪರಿಶೀಲನೆ ನಡೆಸಲು ಹಲವು ಯತ್ನಗಳು ನಡೆದಿದ್ದವು. ಚಂದ್ರನ ದಕ್ಷಿಣ ಧ್ರುವದಲ್ಲಿ ನೀರು ಘನೀಕರಿಸಿದ ರೂಪದಲ್ಲಿ ಇದ್ದಿರಬಹುದು ಎಂದು 1994 ಮತ್ತು 1999ರಲ್ಲಿ ಅಮೆರಿಕದ ನಾಸಾ ಕೈಗೊಂಡಿದ್ದ ಕಾರ್ಯಾಚರಣೆಗಳಲ್ಲಿ ಊಹಿಸಲಾಗಿತ್ತು. ಆದರೆ, ಅದನ್ನು ದೃಢಪಡಿಸಿಕೊಳ್ಳಲು ಸಾಧ್ಯವಾಗಿರಲಿಲ್ಲ.

2008ರಲ್ಲಿ ಇಸ್ರೊ ಕೈಗೊಂಡಿದ್ದ ಚಂದ್ರಯಾನ–1 ಕಕ್ಷಗಾಮಿ ನೌಕೆಯು ಚಂದ್ರನ ದಕ್ಷಿಣ ಧ್ರುವದಲ್ಲಿ ನೀರು ಘನೀಕರಿಸಿದ ರೂಪದಲ್ಲಿ ಇದೆ ಎಂಬುದನ್ನು ಪತ್ತೆ ಮಾಡಿತ್ತು. ಚಂದ್ರನ ದಕ್ಷಿಣ ಧ್ರುವದತ್ತ ವಿಜ್ಞಾನಿಗಳ ಕುತೂಹಲ ಹೆಚ್ಚಾಗಿದ್ದು ಅಲ್ಲಿಂದಲೇ. ದಕ್ಷಿಣ ಧ್ರುವದತ್ತ ನಾಸಾ ಹಲವು ಕಕ್ಷಗಾಮಿ ನೌಕೆಗಳನ್ನು ಕಳುಹಿಸಿತ್ತು ಮತ್ತು ಕೆಲವು ಸಂಕೀರ್ಣ ಕಾರ್ಯಾಚರಣೆಗಳ ಮೂಲಕ ಆ ಪ್ರದೇಶದಲ್ಲಿ ಜಲಜನಕ ಇದೆ ಎಂಬುದನ್ನು ದೃಢಪಡಿಸಿಕೊಂಡಿತ್ತು.

ಚಂದ್ರನ ದಕ್ಷಿಣ ಧ್ರುವದ ಸಪಾಟು ನೆಲ ಮತ್ತು ಎತ್ತರದ ಪ್ರದೇಶಗಳ ಮೇಲೆ ಸೂರ್ಯನ ಬೆಳಕು ಬೀಳುತ್ತದೆ. ಆದರೆ, ಅಲ್ಲಿನ ಕುಳಿಗಳ ಒಳಗೆ ಬೆಳಕು ಬೀಳುವುದಿಲ್ಲ. ಅಂತಹ ಕುಳಿಗಳಲ್ಲಿ ಈಗಲೂ ನೀರು ಘನೀಕರಿಸಿದ ರೂಪದಲ್ಲಿ ಇದೆ ಎಂಬುದು ವಿಜ್ಞಾನಿಗಳ ಪ್ರತಿಪಾದನೆ. ಎಂದಿಗೂ ಬೆಳಕು ಬೀಳದ ಈ ಕುಳಿಗಳ ಪ್ರದೇಶವನ್ನು 'ಶಾಶ್ವತ ಕತ್ತಲ ಪ್ರದೇಶ' ಎಂದೇ ಕರೆಯಲಾಗುತ್ತದೆ. ಚಂದ್ರನ ದಕ್ಷಿಣ ಧ್ರುವದ ಸಪಾಟು ನೆಲದ ಮೇಲೆ ಸೂರ್ಯನ ಬೆಳಕು ಬೀಳುವ ಸಂದರ್ಭದಲ್ಲಿ ಸರಾಸರಿ 54 ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣಾಂಶ ಇರುತ್ತದೆ. ಆದೇ ಸಂದರ್ಭದಲ್ಲಿ ಕತ್ತಲ ಕುಳಿಗಳಲ್ಲಿ ಮೈನಸ್ 250 ಡಿಗ್ರಿ ಸೆಲ್ಸಿಯಸ್‌ನಷ್ಟು ಉಷ್ಣಾಂಶ ಇರುತ್ತದೆ ಎಂದು ಅಂದಾಜಿಸಲಾಗಿದೆ.

ಆ ಕುಳಿಗಳ ಸಮೀಪದ ಪ್ರದೇಶಗಳಲ್ಲಿನ ಮೇಲ್ಮೈ ಅನ್ನು ಪರಿಶೀಲಿಸಿದರೆ, ಅಲ್ಲಿ ನೀರು ಇದೆಯೇ ಎಂಬುದು ಪತ್ತೆಯಾಗುತ್ತದೆ. ಅಲ್ಲಿ ನೀರು ಇದ್ದರೆ, ಈ ಹಿಂದೆ ಚಂದ್ರನಲ್ಲಿ ಜೀವಿಗಳು ಇದ್ದವೇ? ಬಾಹ್ಯಾಕಾಶ ಕಾರ್ಯಾಚರಣೆಗಳಲ್ಲಿ ಮನುಷ್ಯನು ಚಂದ್ರನಲ್ಲಿರುವ ನೀರನ್ನು ಬಳಸಿಕೊಳ್ಳಬಹುದೇ? ಜಲಜನಕ ಇದ್ದರೆ, ಅದನ್ನು ಇಂಧನವಾಗಿ ಬಳಸಿಕೊಳ್ಳಬಹುದೇ? ಎಂಬಂತಹ ಹಲವು ಪ್ರಶ್ನೆಗಳಿಗೆ ಉತ್ತರ ದೊರೆಯಲಿದೆ. ಈ ಕಾರಣದಿಂದಲೇ ದಕ್ಷಿಣ ಧ್ರುವದಲ್ಲಿ ನೌಕೆಗಳನ್ನು ಇಳಿಸಿ, ಸಂಶೋಧನೆ ನಡೆಸಲು ಬಹುತೇಕ ದೇಶಗಳು ಮುಂದಾಗಿದ್ದು. ಭಾರತದ ಅಂತಹ ಮೊದಲ ಯತ್ನ (ಚಂದ್ರಯಾನ–2) ವಿಫಲವಾಗಿತ್ತು. ಚಂದ್ರನ ಮೇಲೆ ಲ್ಯಾಂಡರ್ ಇಳಿಸುವ ರಷ್ಯಾದ ಯತ್ನವೂ ವಿಫಲವಾಗಿದೆ. ಆದರೆ, ಅಂತಹ ಎರಡನೇ ಯತ್ನದಲ್ಲಿ ಇಸ್ರೊ ಯಶಸ್ವಿಯಾಗಿದೆ. ಇಸ್ರೊ ನಡೆಸುವ ಸಂಶೋಧನೆಗಳು, ಬಾಹ್ಯಾಕಾಶ ಸಂಶೋಧನೆಯಲ್ಲೇ ಮನುಕುಲಕ್ಕೆ ಅತ್ಯಂತ ಮಹತ್ವದ ಮೈಲುಗಲ್ಲುಗಳಾಗಲಿವೆ.

ಇದರ ಜತೆಯಲ್ಲೇ ಚಂದ್ರನ ದಕ್ಷಿಣ ಧ್ರುವದಲ್ಲಿ ಮಾನವ ಸಹಿತ ನೌಕೆಗಳನ್ನು ಇಳಿಸಲು ಅಮೆರಿಕ ಮತ್ತು ಚೀನಾ ಸಿದ್ಧತೆ ನಡೆಸಿವೆ.

ಚಂದ್ರನ ಮೇಲೆ ಮಾನವನ ಹೆಜ್ಜೆಗಳು



ಚೇಂಜ್–5

43.1 ಡಿಗ್ರಿ ಉತ್ತರ X **51.8** ಪಶ್ಚಿಮ; ಚೇಂಗ್–5 ಲ್ಯಾಂಡರ್ ಇಳಿದಿದ್ದ ಜಾಗ

ಚೀನಾದ ಚೇಂಜ್ ಸರಣಿಯ 'ಚೇಂಜ್–5' ಲ್ಯಾಂಡರ್ 2020ರ ಡಿಸೆಂಬರ್‌ನಲ್ಲಿ ಚಂದ್ರನ ಉತ್ತರ ಧ್ರುವಕ್ಕೆ ಸಮೀಪವಿರುವ ಸ್ಥಳದಲ್ಲಿ ಇಳಿದಿತ್ತು. ಚಂದ್ರನ ಉತ್ತರ ಧ್ರುವದತ್ತ 'ಸಾಫ್ಟ್ ಲ್ಯಾಂಡ್' ಮಾಡಿದ ನೌಕೆ ಇದು. ಈ ಕಾರ್ಯಾಚರಣೆಯ ಮೂಲಕ ಚಂದ್ರನ ಮೇಲ್ಮೈನ ಮಾದರಿಗಳನ್ನು ಸಂಗ್ರಹಿಸಲಾಗಿತ್ತು

ಸರ್ವೇಯರ್–7

40.97 ಡಿಗ್ರಿ ದಕ್ಷಿಣ X **11.44** ಡಿಗ್ರಿ ಪಶ್ಚಿಮ

ಸರ್ವೇಯರ್–7 ಲ್ಯಾಂಡರ್ ಇಳಿದ ಜಾಗ

ಇದು ಈವರೆಗೆ ಚಂದ್ರನ ದಕ್ಷಿಣ ಧ್ರುವದ ಸಮೀಪದಲ್ಲಿ ಇಳಿದ ಏಕೈಕ ನೌಕೆ ಎನಿಸಿತ್ತು. ಚಂದ್ರನಲ್ಲಿಗೆ ಮಾನವರನ್ನು ಕಳುಹಿಸುವ ಸಲುವಾಗಿ ಸರ್ವೇಕ್ಷಣೆ ನಡೆಸಲು ನಾಸಾ ಕಳುಹಿಸಿದ್ದ ಏಳು ಲ್ಯಾಂಡರ್‌ಗಳಲ್ಲಿ ಇದು ಕೊನೆಯದ್ದಾಗಿತ್ತು. ಚಂದ್ರನ ಮೇಲ್ಮೈನಲ್ಲಿ ಮಾನವಸಹಿತ ಲ್ಯಾಂಡರ್ ಅನ್ನು ಸುರಕ್ಷಿತವಾಗಿ ಇಳಿಸಲು ಸಾಧ್ಯವೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಮತ್ತು ಚಂದ್ರ–ಭೂಮಿಯ ನಡುವಣ ಅಂತರವನ್ನು ಖಾತರಿಪಡಿಸಿಕೊಳ್ಳುವುದು ಈ ಕಾರ್ಯಾಚರಣೆಯ ಉದ್ದೇಶವಾಗಿತ್ತು.

ಸರ್ವೇಯರ್ ಸರಣಿಯ ಏಳೂ ನೌಕೆಗಳು ಚಂದ್ರನ ಒಟ್ಟು 50 ಸಾವಿರಕ್ಕೂ ಹೆಚ್ಚು ಚಿತ್ರಗಳನ್ನು ಕಳುಹಿಸಿದ್ದವು. ಅವುಗಳಲ್ಲಿ ಸರ್ವೇಯರ್–7 ನೌಕೆಯೊಂದೇ 21,274 ಚಿತ್ರಗಳನ್ನು ಕಳುಹಿಸಿತ್ತು. ಜತೆಗೆ ಈ ಕಾರ್ಯಾಚರಣೆಯಲ್ಲಿ ಚಂದ್ರನ ಮೇಲ್ಮೈ ರಚನೆ, ಕಲ್ಲಿನ ರಚನೆ ಮತ್ತು ಗುಳಿ ತೋಡಿ ಒಳಗಿನ ಮಾದರಿಗಳನ್ನು ಸಂಗ್ರಹಿಸಲಾಗಿತ್ತು.

ಟೈಕೊ ಕುಳಿ

ಚಂದ್ರನ ದಕ್ಷಿಣ ಧ್ರುವಕ್ಕೆ ಸಮೀಪದಲ್ಲಿ ಇರುವ ಅತ್ಯಂತ ದೊಡ್ಡ ಕುಳಿಗಳಲ್ಲಿ ಟೈಕೊ ಕುಳಿ ಒಂದು. ಭೂಮಿಯಿಂದ ಮತ್ತು ಬಾಹ್ಯಾಕಾಶದಿಂದ ನೋಡಿದಾಗ, ಚಂದ್ರನ ಮೇಲ್ಮೈನಲ್ಲಿ ಹೆಚ್ಚು ಪ್ರಖರವಾಗಿ ಕಾಣುವ ಕುಳಿ ಇದು. ಜತೆಗೆ ಈ ಕುಳಿಯು 10.8 ಕೋಟಿ ವರ್ಷಗಳ ಈಚೆಗೆ ರೂಪುಗೊಂಡಿದೆ. ಇದರೊಂದಿಗೆ 250–300 ಕೋಟಿ ವರ್ಷಗಳಷ್ಟು ಹಳೆಯ ಕುಳಿಗಳೂ ಚಂದ್ರನಲ್ಲಿವೆ. ಸರ್ವೇಯರ್–7 ನೌಕೆಯು ಟೈಕೊ ಕುಳಿಯ ಅಂಚಿನಲ್ಲೇ ಇಳಿದಿತ್ತು

ಚಂದ್ರಯಾನ–2

70.9 ಡಿಗ್ರಿ ದಕ್ಷಿಣ X **22.8** ಡಿಗ್ರಿ ಪೂರ್ವ

ಇದು ಈವರೆಗೆ ಯಾವುದೇ ದೇಶ ಅಥವಾ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ ಆಯ್ಕೆ ಮಾಡಿಕೊಂಡಿರದ, ಚಂದ್ರನ ದಕ್ಷಿಣ ಧ್ರುವಕ್ಕೆ ಅತ್ಯಂತ ಹತ್ತಿರವಿರುವ ಪ್ರದೇಶವಾಗಿತ್ತು

ಚಂದ್ರನ ದಕ್ಷಿಣ ಧ್ರುವದಲ್ಲಿ ವಿಕ್ರಮ್ ಲ್ಯಾಂಡರ್ ನೌಕೆಯನ್ನು 'ಸಾಫ್ಟ್ ಲ್ಯಾಂಡ್' ಮಾಡಬೇಕು ಎಂದು ಇಸ್ರೊ 2019ರ ಸೆಪ್ಟೆಂಬರ್‌ನಲ್ಲಿ ನಡೆಸಿದ ಕಾರ್ಯಾಚರಣೆ ಇದಾಗಿತ್ತು. ತಾಂತ್ರಿಕ ಸಮಸ್ಯೆಗಳ ಕಾರಣದಿಂದ ಕೊನೆಯ ಕ್ಷಣಗಳಲ್ಲಿ ನೌಕೆ ಸಂಪರ್ಕ ಕಡಿದುಕೊಂಡಿತ್ತು. ಆದರೆ, ಚಂದ್ರಯಾನ–2ರ ಭಾಗವಾಗಿದ್ದ ಕಕ್ಷಗಾಮಿ ಯಶಸ್ವಿಯಾಗಿ ಈಗಲೂ ಕಾರ್ಯನಿರ್ವಹಿಸುತ್ತಿದೆ

ಚಂದ್ರಯಾನ–3

69.36 ಡಿಗ್ರಿ ದಕ್ಷಿಣ X **32.34** ಡಿಗ್ರಿ ಪೂರ್ವ

ಚಂದ್ರಯಾನ–3ರ ವಿಕ್ರಮ್ ಲ್ಯಾಂಡರ್ ಅನ್ನು ಇಳಿಸಲು ಆಯ್ಕೆ ಮಾಡಿಕೊಂಡಿದ್ದ ಜಾಗ. ಚಂದ್ರಯಾನ–2ಕ್ಕೆ ಹೋಲಿಸಿದರೆ, ಈ ಜಾಗ ಚಂದ್ರನ ದಕ್ಷಿಣ ಧ್ರುವದಿಂದ ಸ್ವಲ್ಪ ದೂರದಲ್ಲಿದೆ

ಚಂದ್ರನ ದಕ್ಷಿಣ ಧ್ರುವದಲ್ಲಿ ಲ್ಯಾಂಡರ್ ನೌಕೆಯನ್ನು ಇಳಿಸುವ ಮೊದಲ ಪ್ರಯತ್ನದಲ್ಲಿ ಎದುರಾದ ತೊಡಕುಗಳಿಂದ ಹೊರಬಂದು, ಮತ್ತೆ ಅಲ್ಲಿಯೇ ಲ್ಯಾಂಡರ್ ಅನ್ನು ಸುರಕ್ಷಿತವಾಗಿ ಇಳಿಸುವ ಕಾರ್ಯಾಚರಣೆಯಲ್ಲಿ ಇಸ್ರೊ ಯಶಸ್ವಿಯಾಗಿದೆ. ವಿಕ್ರಂ ಲ್ಯಾಂಡರ್ ಒಳಗೆ ಇರುವ ರೋವರ್ ಬಂಡಿಯು ಹೊರ ಬಂದು, ಚಂದ್ರನ ಮೇಲೆ ಸ್ವಲ್ಪ ಸುತ್ತಾಡಲಿದೆ. ಲ್ಯಾಂಡರ್ ಮತ್ತು ರೋವರ್ ನೌಕೆಗಳೆರಡೂ ಹಲವು ಮಾದರಿಗಳನ್ನು ಸಂಗ್ರಹಿಸಲಿವೆ

ಅಪೋಲೊ–11

0.67 ಡಿಗ್ರಿ ಉತ್ತರ X **23.43** ಡಿಗ್ರಿ ಪೂರ್ವ ಅಪೋಲೊ–11 ನೌಕೆ ಇಳಿದಿದ್ದ ಜಾಗ

1969ರಲ್ಲಿ ಚಂದ್ರನಲ್ಲಿಗೆ ಮಾನವನನ್ನು ಮೊದಲ ಬಾರಿಗೆ ಕರೆದೊಯ್ದ ನೌಕೆ ಇದು. ಅಮೆರಿಕದ ಅಪೋಲೊ ನೌಕೆಯಲ್ಲಿದ್ದ 'ಈಗಲ್ ಲ್ಯಾಂಡರ್'ನಲ್ಲಿ ನೀಲ್ ಆರ್ಮ್‌ಸ್ಟ್ರಾಂಗ್ ಮತ್ತು ಬಜ್ ಆಲ್ಡ್ರಿನ್ ಅವರು ಕುಳಿತು ಚಂದ್ರನ ಮೇಲೆ ಇಳಿದಿದ್ದರು. ಈ ಕಾರ್ಯಾಚರಣೆಯ ಮೂಲಕ ಸಂಗ್ರಹಿಸಲಾಗಿದ್ದ ಚಂದ್ರನ ಮೇಲ್ಮೈನ ಮಾದರಿಗಳನ್ನು ಭೂಮಿಗೆ ತರಲಾಗಿತ್ತು



ನೀಲ್ ಆರ್ಮ್‌ಸ್ಟ್ರಾಂಗ್ ಜತೆಗೆ 1969ರಲ್ಲಿ ಚಂದ್ರನ ಮೇಲೆ ಕಾಲಿರಿಸಿದ ಎರಡನೇ ವ್ಯಕ್ತಿ ಎಡ್ವಿನ್ ಬಜ್ ಆಲ್ಡ್ರಿನ್ – ನಾಸಾ ಚಿತ್ರ

ಲೂನಾ–25

69.5 ಡಿಗ್ರಿ ದಕ್ಷಿಣ X **43.5** ಡಿಗ್ರಿ ಪೂರ್ವ

ಲೂನಾ–25 ಲ್ಯಾಂಡರ್ ಇಳಿಸಲು ಗುರುತಿಸಾಗಿದ್ದ ಜಾಗ

ಚಂದ್ರನ ದಕ್ಷಿಣ ಧ್ರುವದಲ್ಲಿ 'ಸಾಫ್ಟ್ ಲ್ಯಾಂಡ್' ಮಾಡಲು ರಷ್ಯಾ ಇದೇ ಆಗಸ್ಟ್‌ನಲ್ಲಿ ಕಳುಹಿಸಿದ್ದ ನೌಕೆಯೇ ಲೂನಾ–25. ರಷ್ಯಾ 47 ವರ್ಷಗಳ ನಂತರ ಚಂದ್ರನತ್ತ ಕಳುಹಿಸಿದ ಮೊದಲ ನೌಕೆ ಇದಾಗಿತ್ತು. ಚಂದ್ರನ ದಕ್ಷಿಣ ಧ್ರುವದಲ್ಲಿ ನೌಕೆಯನ್ನು ಸಾಫ್ಟ್ ಲ್ಯಾಂಡ್ ಮಾಡುವ ಕೆಲವೇ ಗಂಟೆಗಳ ಮೊದಲು ಸಂಪರ್ಕ ಕಡಿತವಾಗಿತ್ತು. ನಂತರ ನೌಕೆಯು ಚಂದ್ರನ ಮೇಲ್ಮೈಗೆ ಅಪ್ಪಳಿಸಿ ಪತನವಾಗಿತ್ತು

ಆಧಾರ: ನಾಸಾ, ಇಸ್ರೊ, ರಾಯಿಟರ್ಸ್ ಗ್ರಾಫಿಕ್ಸ್: ಶಶಿಧರ ಹಳೇಮನಿ

ಸಿನಿ ಬಿಟ್ಸ್

ಮುಕ್ತಾಯದ ಹಂತದಲ್ಲಿ 'ಕರಟಕ...'

ಪ್ರಭುದೇವ, ಶಿವರಾಜ್‌ಕುಮಾರ್

ಶಿವರಾಜ್‌ಕುಮಾರ್ ಹಾಗೂ ಪ್ರಭುದೇವ ಮುಖ್ಯ ಭೂಮಿಕೆಯಲ್ಲಿರುವ 'ಕರಟಕ ದಮನಕ' ಚಿತ್ರೀಕರಣ ಮುಕ್ತಾಯದ ಹಂತ ತಲುಪಿದೆ.

'ಸಿನಿಮಾ ಶುರುವಾಗಿ ವರ್ಷವಾಗಿದೆ. ಚಿತ್ರೀಕರಣ ಶೇ. 90ರಷ್ಟು ಮುಕ್ತಾಯಗೊಂಡಿದ್ದು, ಹಾಡುಗಳ ಚಿತ್ರೀಕರಣವಷ್ಟೇ ಬಾಕಿಯಿದೆ. ಶಿವಣ್ಣ ಅವರಿಂದ ಇಡೀ ತಂಡ ಎನರ್ಜಿ ಕಲಿತಿದೆ. ಅವರ ಎನರ್ಜಿಗೊಂದು ದೊಡ್ಡ ನಮಸ್ಕಾರ. ಪ್ರಭುದೇವ ತುಂಬ ಕಡಿಮೆ ಮಾತಿನಲ್ಲಿ ಎಲ್ಲರಿಗೂ ಸ್ನೇಹಿತರಾಗಬಲ್ಲವರು. ಸಿನಿಮಾ ಮುಗಿಯುತ್ತಿದೆ ಎಂದರೂ ಗೀತಾ ಶಿವರಾಜ್‌ಕುಮಾರ್ ನಂಬುತ್ತಿಲ್ಲ. ಗೀತಕ್ಕನ ಮನೆಯ ಆತಿಥ್ಯ, ರಾಕ್‌ಲೈನ್ ವೆಂಕಟೇಶ್ ಅವರ ಮನೆಯ ರಸಂ ರುಚಿಯನ್ನೊಮ್ಮೆ ನೋಡಿ' ಎನ್ನುತ್ತ ತಮ್ಮದೇ ಧಾಟಿಯಲ್ಲಿ ಎಲ್ಲರನ್ನೂ ನಗಿಸಿದರು ಚಿತ್ರದ ನಿರ್ದೇಶಕ ಯೋಗರಾಜ್ ಭಟ್. ಯೋಗರಾಜ್ ಭಟ್ ಹಾಗೂ ಚಿತ್ರದ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಕೂಡ ಈ ಚಿತ್ರದಲ್ಲಿ ಬಣ್ಣ ಹಚ್ಚಿರುವುದು ವಿಶೇಷ. ಪ್ರಿಯಾ ಆನಂದ್, ನಿಶ್ವಿಕಾ ನಾಯ್ಡು ಚಿತ್ರದ ನಾಯಕಿಯರು.

'ಚಿತ್ರದಲ್ಲಿ ಏಳು ಹಾಡುಗಳಿದ್ದು, ಸಂಗೀತ ನಿರ್ದೇಶಕ ವಿ.ಹರಿಕೃಷ್ಣ ಅದ್ಭುತವಾಗಿ ಎಲ್ಲವನ್ನೂ ಜೋಡಿಸಿದ್ದಾರೆ. ಈ ಸಿನಿಮಾದ ಇನ್ನೊಬ್ಬ ನಾಯಕ ನಟ ಅವರು' ಎಂದರು ಯೋಗರಾಜ್ ಭಟ್.

ರಾಕ್‌ಲೈನ್ ವೆಂಕಟೇಶ್ ನಿರ್ಮಾಣ ಮಾಡುತ್ತಿರುವ ಈ ಚಿತ್ರಕ್ಕೆ ವಿ. ಹರಿಕೃಷ್ಣ ಸಂಗೀತ, ಸಂತೋಷ್ ರೈ ಪಾತಾಜೆ ಛಾಯಾಗ್ರಹಣವಿದೆ.

ಸೃಜನ್ 25ನೇ ಸಿನಿಮಾ 'GST'

ಸೃಜನ್ ಲೋಕೇಶ್ ಹಾಗೂ ರಜನಿ ಭಾರದ್ವಾಜ್

ಕಿರುತೆರೆಯಲ್ಲಿ ಸಕ್ರಿಯರಾಗಿದ್ದ ನಟ ಸೃಜನ್ ಲೋಕೇಶ್ ಸಿನಿಮಾವೊಂದಕ್ಕೆ ಆ್ಯಕ್ಷನ್ ಕಟ್ ಹೇಳಲು ಸಜ್ಜಾಗುತ್ತಿದ್ದಾರೆ. 'GST' ಚಿತ್ರದ ಮೂಲಕ ನಿರ್ದೇಶಕನಾಗಿ ಹೆಜ್ಜೆ ಇಡಲಿರುವ ಸೃಜನ್, ನಾಯಕನಾಗಿಯೂ ಈ ಚಿತ್ರದಲ್ಲಿ ನಟಿಸಲಿದ್ದಾರೆ.

ಈ ಚಿತ್ರವನ್ನು ಸಂದೇಶ್ ಪ್ರೊಡಕ್ಷನ್ಸ್ ಸಂಸ್ಥೆ ಲಾಂಛನದಲ್ಲಿ ಸಂದೇಶ್ ಎನ್. ನಿರ್ಮಾಣ ಮಾಡುತ್ತಿದ್ದು, ಇತ್ತೀಚೆಗೆ ಈ ಚಿತ್ರದ ಮುಹೂರ್ತ ನಡೆಯಿತು. 'ನನ್ನ ಲಕ್ಕಿ ನಂಬರ್ 7. ನಿರ್ದೇಶನ ಆರಂಭಿಸುತ್ತಿರುವುದು 2023ರಲ್ಲಿ. ಇದನ್ನು ಕೂಡಿಸಿದಾಗ ಏಳು ಬರುತ್ತದೆ. ನನ್ನ ನಟನೆಯ 25ನೇ ಚಿತ್ರ ಇದು. ಇಲ್ಲೂ ಏಳು. ಸಂದೇಶ್ ಪ್ರೊಡಕ್ಷನ್ಸ್ ನಿರ್ಮಾಣದ 34ನೇ ಚಿತ್ರವಿದು. ಇದೂ ಏಳಾಗುತ್ತದೆ. ನಮ್ಮ ತಾತನ ಚಿತ್ರದಲ್ಲಿ ನಮ್ಮ ಅಪ್ಪ ಬಾಲ ಕಲಾವಿದನಾಗಿ, ನಮ್ಮಪ್ಪನ ಚಿತ್ರದಲ್ಲಿ ನಾನು ಬಾಲ ಕಲಾವಿದನಾಗಿ ಅಭಿನಯಿಸಿದ್ದೆ. ಈಗ ನನ್ನ ಚಿತ್ರದಲ್ಲಿ ನನ್ನ ಮಗ ಸುಕೃತ್ ಬಾಲ ಕಲಾವಿದನಾಗಿ ನಟಿಸುತ್ತಿದ್ದಾನೆ–ಇದೂ ವಿಶೇಷವೇ. ಚಿತ್ರಕ್ಕೆ 'ಘೋಸ್ಟ್ ಇನ್ ಟ್ರಬಲ್' ಎಂಬ ಅಡಿಬರಹವಿದೆ. ಎಂದರೆ ದೆವ್ವಗಳಿಗೂ ಸಮಸ್ಯೆಯಿದೆ. ಆ ಸಮಸ್ಯೆ ಏನು ಎಂಬುದನ್ನು ಚಿತ್ರದಲ್ಲೇ ನೋಡಬೇಕು. ಈ ಚಿತ್ರದಲ್ಲಿ ಮನರಂಜನೆಯ ಮಹಾಪೂರವೇ ಇದೆ' ಎನ್ನುತ್ತಾರೆ ಸೃಜನ್.

ರಜನಿ ಭಾರದ್ವಾಜ್, ಗಿರಿಜಾ ಲೋಕೇಶ್, ಪ್ರಮೋದ್ ಶೆಟ್ಟಿ, ನಿವೇದಿತಾ, ತಬಲ ನಾಣಿ, ಅರವಿಂದ್ ರಾವ್, ರವಿಶಂಕರ್ ಗೌಡ, ವಿನೋದ್ ಗೊಬ್ಬರಗಾಲ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ ಲ್ಯಾಂಡರ್ 'ವಿಕ್ರಮ್' ಚಂದ್ರನ ಮೇಲೆ ಇಳಿದ ಕೆಲ ಹೊತ್ತಿನಲ್ಲೇ ಚಂದ್ರನ ಮೇಲ್ಮೈನ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. ಚಂದ್ರನ ಈ ಚಿತ್ರವು ಚಂದ್ರಯಾನ 3ರಿಂದ ತೆಗೆದದ್ದು#ಚಂದ್ರಯಾನ#ಇಸ್ರೊ#ಭಾರತ ಎಂದು ಬರೆದುಕೊಂಡು ಚಂದ್ರನ ಮೇಲ್ಮೈ ಚಿತ್ರವನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ತಪ್ಪು ಮಾಹಿತಿ.

✓ ಲ್ಯಾಂಡರ್ 'ವಿಕ್ರಮ್' ಕಳುಹಿಸಿದ್ದ ಚಿತ್ರಗಳನ್ನು ಇಸ್ರೊ ಆಗಸ್ಟ್ 17ರಂದು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿತ್ತು. ಈ ಚಿತ್ರಗಳಿಗೂ ಹಂಚಿಕೆಯಾಗಿರುವ ಚಂದ್ರನ ಚಿತ್ರಗಳಿಗೂ ಹೋಲಿಕೆಯಾಗಲಿಲ್ಲ. ಹಂಚಿಕೆಯಾಗಿರುವ ಚಿತ್ರವನ್ನು ಗಮನಿಸಿದಾಗ ಅದರಲ್ಲಿ 'ಶಟರ್‌ಸ್ಟಾಕ್' ಎಂಬ ವಾಟರ್‌ಮಾರ್ಕ್ ಇರುವುದು ಗೊತ್ತಾಯಿತು. ಅದನ್ನು ಹುಡುಕಿದಾಗ, 'ಶಟರ್‌ಸ್ಟಾಕ್'ನ ಖಾತೆಯಲ್ಲಿ ಹಂಚಿಕೆಯಾಗಿರುವ ಚಂದ್ರನ ಚಿತ್ರದ ಇರುವ ವಿಡಿಯೊ ದೊರೆಯಿತು. 'ನಾಸಾ ಕೊಟ್ಟಿರುವ ಚಿತ್ರಗಳನ್ನು ಬಳಸಿಕೊಂಡು ರೂಪಿಸಿದ 3ಡಿ ಅನಿಮೇಷನ್ ಚಿತ್ರ' ಎಂಬುದಾಗಿ ವಿಡಿಯೊಗೆ ಕ್ಯಾಪ್ಷನ್ ಇತ್ತು. ಆದ್ದರಿಂದ ಇದು ಲ್ಯಾಂಡರ್ 'ವಿಕ್ರಮ್' ಕಳುಹಿಸಿದ ಚಿತ್ರವಲ್ಲ ಎಂದು ಬೂಮ್ ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ತಾಳ್ಮೆಯ ಫಲ ಸಿಹಿ

ನುಡಿ ಬೆಳಗು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಮಹೇಂದ್ರ ಸಿಂಗ್ ಧೋನಿ ಭಾರತದ ಅತ್ಯಂತ ಜನಪ್ರಿಯ ಮತ್ತು ಯಶಸ್ವೀ ಕ್ರೀಡಾಪಟುಗಳಲ್ಲಿ ಮುಂಚೂಣಿಯಲ್ಲಿರುವವರು. ಜಾರ್ಖಂಡ್‌ನಂತಹ ಹಿಂದುಳಿದ ರಾಜ್ಯದಿಂದ ಬಂದ ತರುಣ ಜಗತ್ತೇ ಮೂಗಿನ ಮೇಲೆ ಬೆರಳಿಡುವ ಸಾಧನೆ ಮಾಡಲು ಪ್ರತಿಭೆಯ ಜತೆಗೆ ಅವರ ತಾಳ್ಮೆಯೂ ಪ್ರಮುಖ ಕಾರಣ ಎಂಬುದು ಬಹಳ ಮುಖ್ಯವಾದ ಸಂಗತಿ.

ಒಮ್ಮೆ ದೊಡ್ಡ ಅಪಘಾತವೊಂದರಿಂದ ಕೂದಲೆಳೆಯ ಅಂತರದಲ್ಲಿ ಧೋನಿ ಮತ್ತವರ ಸ್ನೇಹಿತರು ಬಚಾವಾಗಿದ್ದರು. ಒಂದೆರಡು ಸೆಕೆಂಡ್ ವ್ಯತ್ಯಾಸವಾಗಿದ್ದರೆ ಎಲ್ಲರ ಜೀವವೂ ಹೋಗಿರುತ್ತಿತ್ತು. ಸ್ನೇಹಿತರು ಎದುರಿಗಿನ ವಾಹನದವನ ಮೇಲೆ ರೇಗಲು ಹೊರಟರೆ ಧೋನಿ ಶಾಂತಚಿತ್ತರಾಗಿದ್ದರು, ಸ್ನೇಹಿತರಿಗೂ ಜಗಳ ಮಾಡಲು ಬಿಡಲಿಲ್ಲ. ಧೋನಿಯ ಪ್ರಕಾರ ಕೂಗಿ ಅಬ್ಬರಿಸಿ ಗರ್ಜಿಸುವುದು ನಿಜವಾದ ಸಾಮರ್ಥ್ಯವಲ್ಲ, ಅದು ಅತ್ಯಂತ ಸುಲಭವಾದದ್ದು. ಆದರೆ ಕೂಗಾಡುವ ಪರಿಸ್ಥಿತಿಯಲ್ಲೂ ತಾಳ್ಮೆಯಿಂದ ಮೌನವಾಗಿ ಇರುವುದು ಸಾಮರ್ಥ್ಯ. ರಣಜಿ ಆಡುವಾಗಲೊಮ್ಮೆ ಆರೋಗ್ಯ ಹದಗೆಟ್ಟು ಇಂಡಿಯಾ 'ಎ' ತಂಡಕ್ಕೆ ಆಯ್ಕೆಯಾಗುವ ಹೊಸ್ತಿಲಲ್ಲಿದ್ದ ಮಹಿಗೆ ಆ ಅವಕಾಶ ತಪ್ಪಿಹೋಗುವ ಸಾಧ್ಯತೆಯಿತ್ತು. ಕೋಚ್ ಬೇಸರಿಸಿದಾಗ ಇದಲ್ಲದಿದ್ದರೆ ಮತ್ತೊಂದು ಅವಕಾಶ ಬರುತ್ತದೆ ಚಿಂತಿಸಬೇಡಿ ಎಂದು ಕೋಚ್‌ಗೇ ಸಮಾಧಾನ ಹೇಳಿದ ವ್ಯಕ್ತಿ ಈ ಧೋನಿ!! ತಲೆಯಲ್ಲಿ ತಣ್ಣನೆಯ ಹಿಮಾಲಯವನ್ನೇ ಇಟ್ಟುಕೊಳ್ಳುವ ಇದೇ ಸ್ವಭಾವದಿಂದಲೇ ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲೂ ಮಹಿ ಎದೆಗುಂದುತ್ತಿರಲಿಲ್ಲ.

ತಾಳ್ಮೆಯ ಮಹತ್ವವನ್ನು ಅರ್ಥಮಾಡಿಕೊಳ್ಳದಿದ್ದರೆ ಯಶಸ್ಸಾಗಲೀ, ನೆಮ್ಮದಿಯಾಗಲೀ ಕನ್ನಡಿಯೊಳಗಿನ ಗಂಟೇ. ತಣ್ಣೀರನ್ನಾದರೂ ತಣಿಸಿ ಕುಡಿಯಬೇಕು ಎಂಬ ಮಾತು ತಾಳ್ಮೆಯ ಕುರಿತು ಹೇಳುತ್ತದೆ. ತಾಳಿದವನು ಬಾಳಿಯಾನು, ತಾಳ್ಮೆಯ ಫಲ ಸಿಹಿಯಾಗಿರುತ್ತದೆ ಎಂಬ ಗಾದೆಗಳು ಬದುಕಿನಲ್ಲಿ ಸಹನೆಯ ಮಹತ್ವವನ್ನು ಒತ್ತಿ ಹೇಳುತ್ತದೆ. ತಾಳ್ಮೆ ಎಂದರೆ ಕಾಯುವುದಲ್ಲ, ಕಾಯುವಾಗ ಸಮಾಧಾನದಿಂದಿರುವುದು. ಕ್ಲಿಷ್ಟ ಸನ್ನಿವೇಶಗಳಲ್ಲಿ ಶಾಂತರಾಗಿ ಯೋಚಿಸುವಂತಿದ್ದರೆ ಮತ್ತು ಧನಾತ್ಮಕವಾಗಿದ್ದರೆ ಬದುಕಿನಲ್ಲಿ ಅರ್ಧ ಗೆದ್ದಂತೆ! ಒಂದು ಕ್ಷಣದ ತಾಳ್ಮೆ ಹತ್ತು ವರ್ಷದ ನೆಮ್ಮದಿ ತರಬಲ್ಲುದು ಎಂದರೆ ಈ ಜಗತ್ತು ಅದೆಷ್ಟು ಅನಾಹುತಗಳನ್ನುಂಟುಮಾಡಿದೆ ಎಂಬುದು ಸ್ಪಷ್ಟವಾಗುತ್ತದೆ.

ಜೈಲಿನಲ್ಲಿ ಕೊಲೆ ಆಪಾದನೆಗೆ ಒಳಗಾಗಿರುವ ಅರ್ಧಕ್ಕಿಂತ ಹೆಚ್ಚು ಕೈದಿಗಳು ಕೋಪದ ಕೈಗೆ ತಮ್ಮ ಬುದ್ಧಿ ಕೊಟ್ಟವರೆ ಆಗಿದ್ದಾರೆ! ಸಣ್ಣ ಸಣ್ಣ ಸಂಗತಿಗಳಿಗೆ ತಾಳ್ಮೆಗೆಟ್ಟು ಆಡುವ ಕಟು ಮಾತುಗಳು ಅದೆಷ್ಟು ದಾಂಪತ್ಯಗಳನ್ನು, ಸ್ನೇಹ ಸಂಬಂಧಗಳನ್ನು ಹಾಳು ಮಾಡುತ್ತವೆಂದರೆ ಜೀವನಪೂರ್ತಿ ಪಶ್ಚಾತ್ತಾಪದ ಬೇಗೆಯಲ್ಲಿ ಬೇಯುವುದೇ ಉಳಿದಿರುವ ಮಾರ್ಗ! ಮಾತಿನಲ್ಲಾಗಲೀ ಕೃತಿಯಲ್ಲಾಗಲೀ ದುಡುಕುವ ಮುನ್ನ ನಾವೆಲ್ಲ ಅರೆಕ್ಷಣ ತಾಳ್ಮೆಯಿಂದ ಯೋಚಿಸಿದರೆ ಈ ಜಗತ್ತು ಬದುಕಲು ಇನ್ನಷ್ಟು ಯೋಗ್ಯವಾದ ಸ್ಥಳವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ❖

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಆಗಸ್ಟ್ 24, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ಅಷ್ಟಮಿ ಗಂ. 27-11 ನಕ್ಷತ್ರ: ವಿಶಾಖ ಗಂ. 09-04 ಯೋಗ: ಇಂದ್ರ ಗಂ. 20-36 ಕರಣ: ವಿಷ್ಟಿ ಗಂ. 15-27, ಸಿಂಹ ಮಾಸದ 07 ನೇ ದಿನ, ಮಳೆನಕ್ಷತ್ರ: ಮಘಾ 3. ರಾಹುಕಾಲ : ಮಧ್ಯಾಹ್ನ 01-30 – 03-00, ಸೂರ್ಯೋದಯ : 06-22 ಸೂರ್ಯಾಸ್ತ : 06-44 ಮುಸ್ಲಿಂ ದಿನಾಂಕ : 07 ಸಫರ್

ದಿನ ವಿಶೇಷ : ದೂರ್ವಾಷ್ಟಮಿ (ಬಂಗಾಳ ಹೊರತುಪಡಿಸಿ)

ಅದೃಷ್ಟ ಸಂಖ್ಯೆ : 7, 5

ಮೇಷ: ವೈದ್ಯಕೀಯ ವಲಯದ ಉನ್ನತ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುವುದು. ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾದರೂ ಆತಂಕಕ್ಕೆ ಕಾರಣವಾಗಬೇಕಿಲ್ಲ. ವ್ಯವಹಾರಗಳಲ್ಲಿ ಹಿಡಿತವನ್ನು ಸಾಧಿಸುವಿರಿ.

ವೃಷಭ: ಪ್ರತಿ ವರ್ಷ ಮಾಡಿಕೊಂಡು ಬಂದ ಧಾರ್ಮಿಕ ಕೆಲಸವನ್ನು ಮಾಡುವ ಬಗ್ಗೆ ತೀರ್ಮಾನಿಸಿ. ಚಿತ್ರಕಲೆ ಮತ್ತು ಸಾಹಿತ್ಯಕಾರರಿಗೆ ಶುಭವಾರ್ತೆ ಬರಲಿದೆ. ಈ ದಿನದ ಪರಿಶ್ರಮವು ಮುಂದಿನ ದಿನಕ್ಕೆ ಅಡಿಪಾಯವಾಗಲಿದೆ.

ಮಿಥುನ: ಮಸಾಲೆ ಪದಾರ್ಥ ಅಥವಾ ಖಾದ್ಯಗಳ ಮಾರಾಟಗಾರರಿಗೆ ಅಧಿಕ ಮಟ್ಟದ ಬೇಡಿಕೆ ಉಂಟಾಗುವುದು. ತಾಯಿಯ ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆ ಕಾಣುವುದು. ಬೇಸರ ಕಳೆಯಲು ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಿ.

ಕರ್ಕಾಟಕ: ಮಕ್ಕಳ ವಿಷಯದಲ್ಲಿ ಸಂಯಮದೊಂದಿಗೆ ವರ್ತಿಸುವುದು ಉತ್ತಮ. ಈ ದಿನವನ್ನು ಸಂತೋಷವಾಗಿ ಕಳೆಯುವ ಹಾಗೆ ಆಗುವುದು. ಸಮೀಪ ವರ್ತಿಗಳ ಸಹಾಯದಿಂದ ಬಾಕಿ ಇದ್ದ ಕೆಲಸ ಪೂರ್ತಿಗೊಳಿಸುವಿರಿ.

ಸಿಂಹ: ಗೃಹ ನಿರ್ಮಾಣ ಕಾರ್ಯಗಳ ಚಿಂತನೆ ಕಾರ್ಯಗತವಾಗಲಿದೆ. ಕುಟುಂಬದಲ್ಲಿ ಉತ್ತಮ ವಾತಾವರಣವಿದ್ದು ಸಮಾಧಾನ ತರಲಿದೆ. ಆಂಜನೇಯನ ಸೇವೆ ಮಾಡುವುದರಿಂದ ಗೊಂದಲ ನಿವಾರಣೆಯಾಗುತ್ತದೆ.

ಕನ್ಯಾ: ಕೌಟುಂಬಿಕವಾಗಿ ಪ್ರಮುಖ ವಿಷಯವೊಂದು ತಿಳಿದು ಬರಲಿದೆ. ಮನಸ್ಸಿಗೆ ಮುದ ನೀಡುವ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಉತ್ಸಾಹದಿಂದ ಭಾಗವಹಿಸುವಿರಿ. ರಾಜಕೀಯ ಚಟುವಟಿಕೆಗಳು ಹೆಚ್ಚಾಗುವುದು.

ತುಲಾ: ಹಿರಿಯ ಅಧಿಕಾರಿಗಳೊಬ್ಬರ ಭೇಟಿಯಿಂದ ಕಾರ್ಯಗಳು ಸರಾಗವಾಗಿ ನಡೆಯುವುದು. ನೃತ್ಯಾಭ್ಯಾಸ ಮುಂದುವರಿಸುವಂತೆ ಅಧ್ಯಾಪಕರಿಂದ ಒತ್ತಾಯ ಹೆಚ್ಚುವುದು. ಕಾರ್ಖಾನೆ ಕೆಲಸಗಾರರಿಗೆ ಹೆಚ್ಚಿನ ಕೆಲಸ ಇರುವುದು.

ವೃಶ್ಚಿಕ: ವೃತ್ತಿಯಲ್ಲಿ ಅವಸರದ ನಿರ್ಧಾರದಿಂದ ಕೆಲಸಗಳನ್ನು ಒಪ್ಪಿಕೊಳ್ಳಬೇಡಿ. ಉನ್ನತ ವರ್ಗದ ಅಧಿಕಾರಿಯೊಬ್ಬರಿಂದ ನಿಮ್ಮ ವರ್ಗಾವಣೆ ಕೆಲಸ ಸಲೀಸಾಗಿ ನಡೆಯುವುದು. ಸಹವರ್ತಿಗಳೊಡನೆ ಸಂಯಮದಿಂದ ವರ್ತಿಸಿ.

ಧನು: ಸೇವಾ ಮನೋಭಾವಕ್ಕೆ ಕುಟುಂಬ ವರ್ಗದವರು ಉತ್ತಮ ರೀತಿಯಲ್ಲಿ ಸ್ಪಂದಿಸುತ್ತಾರೆ. ಆಫೀಸಿನಲ್ಲಿಂದು ನಿಮ್ಮ ಕೆಲಸದ ವೇಗವನ್ನು ಹೆಚ್ಚಿಸಿಕೊಳ್ಳುವುದು ಉತ್ತಮ. ಕೆಲಸಗಳೆಲ್ಲವೂ ನಿರಾತಂಕವಾಗಿ ಸಾಗಲಿದೆ.

ಮಕರ: ಷೇರು ಪೇಟೆಯಿಂದ ಲಾಭ ಗಳಿಸುವಿರಿ. ಹೆಚ್ಚಿನ ನಿರಾಶೆ ತರದು. ಆಪ್ತರೊಬ್ಬರ ನೆರವು ದೊರೆತು ಮಗನ ವಿದ್ಯಾಭ್ಯಾಸಕ್ಕೆ ಸಹಾಯವಾಗಲಿದೆ. ಅಧಿಕ ಹಣದ ಹರಿವು ನಿಧಾನವಾಗಿ ಅನುಭವಕ್ಕೆ ಬರಲಿದೆ.

ಕುಂಭ: ಉದ್ಯೋಗ ಕ್ಷೇತ್ರದಲ್ಲಿ ಬಂದಿರುವ ಸಮಸ್ಯೆಗಳಿಗೆ ಪರಿಹಾರಗಳು ದೊರೆಯಲಿದೆ. ವಿದ್ಯಾರ್ಥಿಗಳು ಇನ್ನೂ ಹೆಚ್ಚಿನ ವಿದ್ಯಾರ್ಜನೆ ಮಾಡುವುದರ ಬಗ್ಗೆ ಗಮನಹರಿಸಿ. ಕೊಡು-ಕೊಳ್ಳುವಿಕೆಗಳಿಂದ ಅಧಿಕ ಲಾಭವಿರುವುದು.

ಮೀನ: ಈ ಸಮಯ ಬಿಟ್ಟು ಸ್ವಲ್ಪ ಕಾಲದ ನಂತರ ಮಾಡುತ್ತೇನೆ ಎಂದು ನೀವು ಅಂದುಕೊಳ್ಳುವ ವಿಷಯಗಳು ಬಿಟ್ಟ ಹಂತದಲ್ಲೇ ನಿಂತು ಹೋಗುವ ಸಾಧ್ಯತೆ ಇರುವುದರಿಂದ ಅದನ್ನು ಈ ಕೂಡಲೇ ಪೂರೈಸುವ ಯೋಚನೆ ಮಾಡಿ.

ಪದಬಂಧ 5420

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಉಸಿರನ್ನು ಹೊರಗೆ ಬಿಡುವಿಕೆ (3)
3.ದೂರವನ್ನು ಅಳೆಯುವ ಒಂದು ಪ್ರಮಾಣ (3)
5.ಅಭಿಪ್ರಾಯ ಭೇದವಿದು (5)
7.ತೀರಾ ನಿಕೃಷ್ಟವಾದುದು (3)
8.ಉದ್ದವಾಗಿ ಬಾಗಿರುವ ತುತ್ತೂರಿ (3)
9.ಸಮವಯಸ್ಕರನ್ನು ಹೀಗನ್ನಿ (3)
11.ಗರ ಬಡಿದಂತಿರುವ ಪತಿವ್ರತೆ (3)
13.ಕರೆಯುವಿಕೆಯನ್ನು ಹೀಗೆನ್ನಿ (3)
15.ಕಪ್ಪೆ ಚಿಪ್ಪು ಇಲ್ಲಿದೆ (3)
16.ಲೋಹದ ಹಕ್ಕಿಯಲ್ಲಿನ ಪಯಣ (5)
17.ಲಾಂದ್ರವನ್ನು ಹೀಗೂ ಹೇಳುವರು (3)
18.ಕರುವಿನಲ್ಲಿರುವ ಧಾನ್ಯದ ತೆನೆ! (3)

ಮೇಲಿಂದ ಕೆಳಕ್ಕೆ

2.ಸಭೆಯಲ್ಲಿ ಕುಳಿತಿರುವವನು (3)
3.ಈತ ಹಾಡುಗಾರ (3)
6.ಭಿಕ್ಷೆ ಬೇಡುವವ ಇಲ್ಲಿದ್ದಾನೆ (3)
9.ವಾಚಕನನ್ನು ಆಡುಮಾತಿನಲ್ಲಿ ಕರೆಯಿರಿ (3)
10.ಗೆಳೆಯನೊಡನಿರುವ ಸ್ನೇಹಿತೆ (3)
12.ದ್ರವ ಒಸರುತ್ತಿರುವ ಜಿಹ್ವೆ (3)
14.ನಲಿಯುತ್ತಿರುವ ರಾಷ್ಟ್ರ ಪಕ್ಷಿ (3)
15.ನಾಯಿ ಇಲ್ಲಿಗೆ ಬಂದಿದೆಯಲ್ಲಾ? (3)



5419ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಭರತಿ 6.ಬೇಜವಾಬ್ದಾರಿ 7.ಕದ 9.ಮಗ 10.ವಪನ 12.ರಸ 13.ನಗು 17.ಜಲತರಂಗ 18.ಖಚರ

ಮೇಲಿಂದ ಕೆಳಕ್ಕೆ: 1.ಭರವಸೆ 2.ತಿಲೋದಕ 3.ಸೋಂಬೇರಿ 4.ಕವಾಡಿಗ 5.ಕಾರಿರುಳು 8.ದವಸ 9.ಮನನ 11.ಮೃಗಜಲ 12.ರದಾತಮ 14.ಗುಣಮುಖ 15.ಮಾರ್ಗಶಿರ 16.ಮಗಳು

ಸುಡೊಕು 5806

		7	1		2		6	
	1			3		8		9
2		4				1		7
	6	8		5			4	1
						7	9	
9	4			2				
3	7			8		9		5
		6					8	
	8		3		5	6		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5805 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

ಷೇರುಪೇಟೆ ವಹಿವಾಟು

213

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,396
ಇಂದಿನ ಅಂತ್ಯ	19,444
▲	47
ದಿನದ ಕನಿಷ್ಠ	19,472

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹480
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹482

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1840(1840)
ಸೋಯಾ (ರಿಫೈನ್ಡ್)	₹940(950)
ಸೂರ್ಯಕಾಂತಿ (ರಿಫೈನ್ಡ್)	₹940(950)
ಪಾಮೋಲಿನ್	₹848(855)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹140.50
ಆರ್‌ಎಸ್‌ಎಸ್-5	₹133.50
ಗುಡ್ ಲಾಟ್	₹119.50

ಕೊಬ್ಬರಿ ಧಾರಣೆ

ಬೆಂಗಳೂರು	₹11300-14000
ತಿಪಟೂರು	₹7000-9301
ತುರುವೇಕೆರೆ	₹9250-9250

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2,000-2,600
ಮಧ್ಯಮ	₹1,600-2,000
ಸಣ್ಣ	₹1,000-1,600

ಕೋಲಾರ ಎಪಿಎಂಸಿಯಲ್ಲಿ ಟೊಮೆಟೊ ವಹಿವಾಟು

ಕೆ.ಜಿ. ಟೊಮೆಟೊ ಬೆಲೆ ₹23ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಕೋಲಾರ: ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿ ಬುಧವಾರ ನಡೆದ ಹರಾಜಿನಲ್ಲಿ 15 ಕೆ.ಜಿ ನಾಟಿ ಟೊಮೆಟೊ ಬಾಕ್ಸ್ ಸರಾಸರಿ ₹ 350ಕ್ಕೆ ಮಾರಾಟವಾಗಿದೆ. ಇದರೊಂದಿಗೆ ಎರಡು ತಿಂಗಳಿನಲ್ಲೇ ಅತ್ಯಂತ ಕಡಿಮೆ ಬೆಲೆಗೆ ಟೊಮೆಟೊ ಹರಾಜಾಗಿದೆ.

ರೈತನಿಗೆ ಕೆ.ಜಿಗೆ ಸರಾಸರಿ ₹23 ದರ ಲಭಿಸಿದೆ. ಚಿಲ್ಲರೆ ಮಾರುಕಟ್ಟೆಯಲ್ಲೂ ಬಹುತೇಕ ಇದೆ ದರ ಇದೆ. 15 ಕೆ.ಜಿ ತೂಕದ ಕಡಿಮೆ ಗುಣಮಟ್ಟದ ಟೊಮೆಟೊ ಬಾಕ್ಸ್ ₹110 ದರಕ್ಕೆ ಮಾರಾಟವಾಗಿದೆ. ಜುಲೈ 31ರಂದು ಗರಿಷ್ಠ ₹ 2,700ಕ್ಕೆ ಮಾರಾಟವಾಗಿದ್ದ ಟೊಮೆಟೊ ಸಾರ್ವಕಾಲಿಕ ದಾಖಲೆ ನಿರ್ಮಿಸಿತ್ತು.

ಎಪಿಎಂಸಿಯಲ್ಲಿ ಈಗ ಭಾರಿ ಪ್ರಮಾಣದಲ್ಲಿ ಟೊಮೆಟೊ ಆವಕವಾಗುತ್ತಿದೆ. ಬುಧವಾರ 18,094 ಕ್ವಿಂಟಲ್ ಅಂದರೆ 1,20,628 ಬಾಕ್ಸ್ ಟೊಮೆಟೊ ಆವಕವಾಗಿತ್ತು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	750-800
ನಡುಗೋಲು	900-950
ರಾಶಿ	1,000-1,100
ರಾಶಿ ಉತ್ತಮ	1,150-1,200
ಹೆರಕಿದ್ದು	1,600-1,700
ಹಸಿರು ಸಾಧಾರಣ	1,200-1,250
ಹಸಿರು ಉತ್ತಮ	1,600-1,700
ಹಸಿರು ಅತಿ ಉತ್ತಮ	1,900-2,000
ಕಾಳುಮೆಣಸು	- 640

ಅಡಿಕೆ

ಬಂಟ್ವಾಳ

ಕೋಕ	12,500-25,000
ಹೊಸತು	27,500-44,500
ಹಳತು	46,000-48,000

ಕುಮಟಾ

ಚಿಪ್ಪು	32,509-35,019
ಕೋಕ	20,569-33,899
ಫ್ಯಾಕ್ಟರಿ	14,019-23,629
ಹಳೆಚಾಲಿ	40,569-42,500
ಹೊಸಚಾಲಿ	38,599-41,699

ಪುತ್ತೂರು

ಕೋಕ	11,000-25,000
ಹೊಸತು	34,000-45,000

ಶಿವಮೊಗ್ಗ

ಬೆಟ್ಟೆ	47,100-53,100
ಗೊರಬಲು	30,069-39,299
ರಾಶಿ	39,019-51,621
ಸರಕು	56,569-81,100

ಶಿರಸಿ

ಬೆಟ್ಟೆ	40,269-47,208
ಬಿಳಿಗೋಟು	25,289-36,899
ಚಾಲಿ	37,611-43,199
ಕೆಂಪುಗೋಟು	37,699-37,699
ರಾಶಿ	47,000-50,539

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ	
	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13,300	13,375	146.60 ಸೆಂಟ್ಸ್
ಎಸಿ	6,700	6,700	
ಆರ್‌ಪಿ	10,000	10,000	ಲಂಡನ್
ಆರ್‌ಸಿ	230	5,875	2573ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

23–8–2023

ಜಾವಾ 70/80(ಹೊಸ)	12600-12700
ಜಾವಾ 80/90(ಹೊಸ)	12500-12600
ದಪ್ಪ ಮಧ್ಯಪ್ರದೇಶ(ಹೊಸ)	13200-13300
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1850(1850)
ಒಂದು ವಾರದ ಡೆಲಿವರಿ	1845(1845)
ಸೋಯಾ ಕಚ್ಚಾ	890(905)
ಪಾಮ್ ವಾರದ ಡೆಲಿವರಿ	846(853)
ಸೂರ್ಯಕಾಂತಿ ಎಣ್ಣೆ ಕಚ್ಚಾ	870(885)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

58400 (58300)

ಬೆಳ್ಳಿ ಕೆ.ಜಿ 72750(72100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಬೆಲೆ ಏರಿಕೆಯನ್ನು ನಿಯಂತ್ರಣದಲ್ಲಿ ಇರಿಸುವ ಉದ್ದೇಶ

ಸಕ್ಕರೆ ರಫ್ತು ನಿಷೇಧ ಸಾಧ್ಯತೆ

ಮುಂಬೈ/ನವದೆಹಲಿ (ರಾಯಿಟರ್ಸ್): ಕೇಂದ್ರ ಸರ್ಕಾರವು ಅಕ್ಟೋಬರ್‌ನಿಂದ ಸಕ್ಕರೆ ರಫ್ತಿನ ಮೇಲೆ ನಿಷೇಧ ಹೇರುವ ಸಾಧ್ಯತೆ ಇದೆ. ಮಳೆಯ ಕೊರತೆಯ ಕಾರಣದಿಂದಾಗಿ ಕಬ್ಬು ಬೆಳೆ ಕಡಿಮೆ ಆಗಿರುವ ಕಾರಣ ಈ ತೀರ್ಮಾನ ಕೈಗೊಳ್ಳಬಹುದು ಎಂದು ಸರ್ಕಾರದ ಮೂಲಗಳು ಹೇಳಿವೆ.

ಅಕ್ಟೋಬರ್‌ನಿಂದ ಹೊಸ ಸಕ್ಕರೆ ಹಂಗಾಮು ಆರಂಭವಾಗುತ್ತದೆ. ಹೊಸ ಹಂಗಾಮಿಗೆ ಅನ್ವಯವಾಗುವಂತೆ ಸಕ್ಕರೆ ರಫ್ತು ನಿಷೇಧಿಸುವ ಸಾಧ್ಯತೆ ಇದೆ ಎನ್ನಲಾಗಿದೆ. ಭಾರತವು ಸಕ್ಕರೆ ರಫ್ತು ನಿಷೇಧಿಸಿದರೆ, ಜಾಗತಿಕ ಮಾರುಕಟ್ಟೆಯಲ್ಲಿ ಆಹಾರ ವಸ್ತುಗಳ ಹಣದುಬ್ಬರ ಹೆಚ್ಚಾಗುವ ಆತಂಕ ಇದೆ. ಏಳು ವರ್ಷಗಳಿಂದ ಈಚೆಗೆ ಸಕ್ಕರೆ ರಫ್ತು ನಿಷೇಧಿಸಿದ ನಿದರ್ಶನ ಇಲ್ಲ.

'ದೇಶಿ ಸಕ್ಕರೆ ಬೇಡಿಕೆಯನ್ನು ಪೂರೈಸುವುದು ನಮ್ಮ ಪ್ರಾಥಮಿಕ ಆದ್ಯತೆ. ಹೆಚ್ಚುವರಿ ಕಬ್ಬಿನಿಂದ ಎಥೆನಾಲ್ ಉತ್ಪಾದಿಸುವ ಗುರಿಯೂ ಇದೆ' ಎಂದು ಸರ್ಕಾರದ ಮೂಲವೊಂದು ಹೇಳಿದೆ. 'ಮುಂಬರುವ ಹಂಗಾಮಿನಲ್ಲಿ ರಫ್ತು ಮಾಡುವುದಕ್ಕೆ ಹೆಚ್ಚುವರಿ ಸಕ್ಕರೆ ನಮ್ಮಲ್ಲಿ ಅಗತ್ಯ ಪ್ರಮಾಣದಲ್ಲಿ ಇರುವುದಿಲ್ಲ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸೆಪ್ಟೆಂಬರ್ 30ಕ್ಕೆ ಕೊನೆಗೊಳ್ಳುವ ಪ್ರಸಕ್ತ ಹಂಗಾಮಿನಲ್ಲಿ 61 ಲಕ್ಷ ಟನ್ ಸಕ್ಕರೆಯನ್ನು ಮಾತ್ರ ರಫ್ತು ಮಾಡಲು ಕೇಂದ್ರವು ಅವಕಾಶ ಕಲ್ಪಿಸಿದೆ. ಹಿಂದಿನ ಹಂಗಾಮಿನಲ್ಲಿ 1.11 ಕೋಟಿ ಟನ್ ರಫ್ತಿಗೆ ಅವಕಾಶ ನೀಡಲಾಗಿತ್ತು.

ಮಹಾರಾಷ್ಟ್ರ ಮತ್ತು ಕರ್ನಾಟಕ ಕಬ್ಬು ಬೆಳೆಯುವುದರಲ್ಲಿ ದೇಶದಲ್ಲಿ ಮುಂಚೂಣಿಯಲ್ಲಿ ಇವೆ. ಆದರೆ ಈ ರಾಜ್ಯಗಳಲ್ಲಿ ಮಳೆಯ ಪ್ರಮಾಣವು ವಾಡಿಕೆಗಿಂತ ಶೇಕಡ 50ರಷ್ಟು ಕಡಿಮೆ ಇದೆ. ಈ ರಾಜ್ಯಗಳು ದೇಶದ ಒಟ್ಟು ಸಕ್ಕರೆ ಉತ್ಪಾದನೆಯಲ್ಲಿ ಶೇ 50ಕ್ಕಿಂತ ಹೆಚ್ಚಿನ ಪಾಲು ಹೊಂದಿವೆ.

ಮಳೆ ಕಡಿಮೆ ಆಗಿರುವ ಕಾರಣ ಅಕ್ಟೋಬರ್ 1ರಿಂದ ಶುರುವಾಗುವ ಹೊಸ ಹಂಗಾಮಿನಲ್ಲಿ ಸಕ್ಕರೆ ಉತ್ಪಾದನೆ ತಗ್ಗಬಹುದು. ಅಲ್ಲದೆ, 2024–25ರ ಹಂಗಾಮಿನಲ್ಲಿ ಕಬ್ಬು ಬೆಳೆಯುವ ಪ್ರಮಾಣ ಕೂಡ ಕಡಿಮೆ ಆಗಬಹುದು ಎಂದು ಉದ್ಯಮದ ಮೂಲಗಳು ಹೇಳಿವೆ.

ದೇಶದಲ್ಲಿ ಸಕ್ಕರೆ ಬೆಲೆಯು ಈ ವಾರದಲ್ಲಿ ಏರಿಕೆ ಕಂಡಿದೆ. 'ಸಕ್ಕರೆಯ ಬೆಲೆಯಲ್ಲಿ ಈಚೆಗೆ ಆಗಿರುವ ಏರಿಕೆಯು, ರಫ್ತಿಗೆ ಅವಕಾಶ ನೀಡುವ ಸಾಧ್ಯತೆಯನ್ನು ಇಲ್ಲವಾಗಿಸಿದೆ' ಎಂದು ಇನ್ನೊಬ್ಬರು ಅಧಿಕಾರಿ ತಿಳಿಸಿದ್ದಾರೆ. 2023–24ನೆಯ ಹಂಗಾಮಿನಲ್ಲಿ ದೇಶದ ಸಕ್ಕರೆ ಉತ್ಪಾದನೆಯು ಶೇ 3.3ರಷ್ಟು ಕಡಿಮೆ ಆಗುವ ಸಾಧ್ಯತೆ ಇದೆ.

ಬಾಸ್ಮತಿ ಹೊರತುಪಡಿಸಿ ಇತರ ಬಗೆಯ ಅಕ್ಕಿ ರಫ್ತಿಗೆ ಕೇಂದ್ರವು ಈಗಾಗಲೇ ನಿಷೇಧ ಹೇರಿದೆ. ಈರುಳ್ಳಿ ರಫ್ತಿನ ಮೇಲೆ ಶೇ 40ರಷ್ಟು ಸುಂಕ ವಿಧಿಸಲಾಗಿದೆ.

ಮುಖ್ಯಾಂಶಗಳು

- ಅಕ್ಕಿ ನಂತರ ಸಕ್ಕರೆ ರಫ್ತು ನಿಷೇಧ ಸಾಧ್ಯತೆ
- ಮಳೆ ಕೊರತೆಯಿಂದಾಗಿ ಸಕ್ಕರೆ ಉತ್ಪಾದನೆಗೆ ಧಕ್ಕೆ
- ಕರ್ನಾಟಕ, ಮಹಾರಾಷ್ಟ್ರದಲ್ಲಿ ಕಬ್ಬು ಬೆಳೆ ಅಧಿಕ

ರಿಲಯನ್ಸ್ ರಿಟೇಲ್‌ನಲ್ಲಿ ಕ್ಯುಐಎ ಹೂಡಿಕೆ

ನವದೆಹಲಿ (ಪಿಟಿಐ): ಕತಾರ್ ಹೂಡಿಕೆ ಪ್ರಾಧಿಕಾರವು (ಕ್ಯುಐಎ) ತನ್ನ ಅಂಗಸಂಸ್ಥೆಯೊಂದರ ಮೂಲಕ ರಿಲಯನ್ಸ್ ರಿಟೇಲ್ ವೆಂಚರ್ಸ್ ಲಿಮಿಟೆಡ್‌ನಲ್ಲಿ (ಆರ್‌ಆರ್‌ವಿಎಲ್) ₹8,278 ಕೋಟಿ ಹೂಡಿಕೆ ಮಾಡಲಿದೆ ಎಂದು ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಬುಧವಾರ ಹೇಳಿದೆ. 'ಆರ್‌ಆರ್‌ವಿಎಲ್‌ನಲ್ಲಿ ಕ್ಯುಐಎ ಹೂಡಿಕೆ ಮಾಡುತ್ತಿರುವುದು ಭಾರತದ ಅರ್ಥ ವ್ಯವಸ್ಥೆ ಹಾಗೂ ರಿಲಯನ್ಸ್‌ನ ರಿಟೇಲ್ ವಹಿವಾಟಿನ ಬಗ್ಗೆ ಇರುವ ಆಶಾ ಭಾವನೆಗೆ ಬಲ ತುಂಬಿದಂತೆ ಆಗಿದೆ' ಎಂದು ಆರ್‌ಆರ್‌ವಿಎಲ್ ನಿರ್ದೇಶಕಿ ಇಶಾ ಅಂಬಾನಿ ಹೇಳಿದ್ದಾರೆ. ಆರ್‌ಆರ್‌ವಿಎಲ್ ಕಂಪನಿಯು ಭಾರಿ ವೇಗದಲ್ಲಿ ತನ್ನ ವಹಿವಾಟು ವಿಸ್ತರಿಸುತ್ತಿದೆ.

ಎನ್‌ಎಂಡಿಸಿ: ಹೊಸ ಲೋಗೊ ಅನಾವರಣ

ಬೆಂಗಳೂರು: ಕಬ್ಬಿಣದ ಅದಿರು ಉತ್ಪಾದನಾ ಕಂಪನಿ ಎನ್‌ಎಂಡಿಸಿ ಈಚೆಗೆ ಹೊಸ ಲೋಗೊ ಅನಾವರಣ ಮಾಡಿದೆ. ಜವಾಬ್ದಾರಿಯುತ ಗಣಿಗಾರಿಕೆಯ ವಿಚಾರದಲ್ಲಿ ಕಂಪನಿಯು ಹೊಂದಿರುವ ಬದ್ಧತೆಯನ್ನು ಈ ಲೋಗೊ ಪ್ರತಿಬಿಂಬಿಸುತ್ತಿದೆ ಎಂದು ಅದು ಹೇಳಿಕೊಂಡಿದೆ.

ಕೇಂದ್ರ ಉಕ್ಕು ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಅವರು ಎನ್‌ಎಂಡಿಸಿ ಕಂಪನಿಯ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಈ ಲೋಗೊ ಅನಾವರಣ ಮಾಡಿದರು. 'ಎನ್‌ಎಂಡಿಸಿ ಕಂಪನಿಯು ದೇಶದಲ್ಲಿ ಕಬ್ಬಿಣದ ಅದಿರು ಉತ್ಪಾದಿಸುವ ಅತಿದೊಡ್ಡ ಕಂಪನಿ. ಇದು ದೇಶದಲ್ಲಿ ಉತ್ಪಾದನೆ ಆಗುವ ಕಬ್ಬಿಣದ ಅದಿರಿನಲ್ಲಿ ಶೇ 16ರಷ್ಟನ್ನು ಉತ್ಪಾದಿಸುತ್ತಿದೆ' ಎಂದು ಸಿಂಧಿಯಾ ಹೇಳಿರುವುದಾಗಿ ಪ್ರಕಟಣೆ ತಿಳಿಸಿದೆ.

ವಿರೋಧ ಲೆಕ್ಕಿಸದೇ ಕೃಷ್ಣಾ ರೆಡ್ಡಿ ನೇಮಕ

ಬೆಂಗಳೂರು: ನೂತನವಾಗಿ ರಚಿಸಲಾಗಿರುವ ರಾಜ್ಯ ರಸ್ತೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯನ್ನಾಗಿ (ಸಿಇಒ) ಲೋಕೋಪಯೋಗಿ ಇಲಾಖೆಯ ನಿವೃತ್ತ ಕಾರ್ಯದರ್ಶಿ ಕೆ.ಎಸ್. ಕೃಷ್ಣಾರೆಡ್ಡಿ ಅವರನ್ನು ನೇಮಿಸಿ ಬುಧವಾರ ಆದೇಶ ಹೊರಡಿಸಲಾಗಿದೆ.

ಕೃಷ್ಣಾರೆಡ್ಡಿ ಅವರನ್ನು ಪ್ರಾಧಿಕಾರದ ಸಿಇಒ ಹುದ್ದೆಗೆ ನೇಮಿಸಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗೆ ಇರುವ ಎಲ್ಲ ಸೌಲಭ್ಯ ಒದಗಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಟಿಪ್ಪಣಿ ಹೊರಡಿಸಿದ್ದರು. ಇಲಾಖೆಯ ಕಾರ್ಯದರ್ಶಿಯಾಗಿ ನಿವೃತ್ತರಾಗಿರುವ ಅಧಿಕಾರಿಗೆ ಪ್ರಧಾನ ಕಾರ್ಯದರ್ಶಿ ಹುದ್ದೆಯ ದರ್ಜೆ ನೀಡುವುದಕ್ಕೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳಲ್ಲೇ ಅಸಮಾಧಾನ ವ್ಯಕ್ತವಾಗಿತ್ತು. ಕರ್ತವ್ಯ ನಿರತ ಐಎಎಸ್ ಅಧಿಕಾರಿಗಳಿಗೆ ನೀಡುವ ಹುದ್ದೆಗೆ ನಿವೃತ್ತ ಅಧಿಕಾರಿಯೊಬ್ಬರನ್ನು ನೇಮಕ ಮಾಡುವುದಕ್ಕೆ ಹಿರಿಯ ಶ್ರೇಣಿಯ ಐಎಎಸ್ ಅಧಿಕಾರಿಗಳು ವಿರೋಧ ವ್ಯಕ್ತಪಡಿಸಿದ್ದರು. ಅದೆಲ್ಲವನ್ನೂ ಬದಿಗಿಟ್ಟು ನೇಮಕ ಮಾಡಲಾಗಿದೆ.

ಈಗ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಹುದ್ದೆಗೆ ಕಾರ್ಯದರ್ಶಿ ಅಥವಾ ಪ್ರಧಾನ ಎಂಜಿನಿಯರ್ ಹುದ್ದೆಯಲ್ಲಿ ನೀಡಲಾಗುವ ವೇತನ, ಭತ್ಯೆ ಮತ್ತು ಇತರೆ ಸೌಲಭ್ಯಗಳನ್ನು ಒದಗಿಸಲಾಗುವುದು ಎಂದು ಲೋಕೋಪಯೋಗಿ ಇಲಾಖೆ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

ಸದಸ್ಯ ರಾಷ್ಟ್ರಗಳ ಒಮ್ಮತ ಕೋರಿದ ಪ್ರಧಾನಿ ಮೋದಿ

ಬ್ರಿಕ್ಸ್ ವಿಸ್ತರಣೆಗೆ ಭಾರತದ ಬೆಂಬಲ

ಜೋಹಾನಸ್‌ಬರ್ಗ್/ನವದೆಹಲಿ (ಪಿಟಿಐ): 'ಸದಸ್ಯ ರಾಷ್ಟ್ರಗಳ ಒಮ್ಮತದ ಮೇರೆಗೆ ಬ್ರಿಕ್ಸ್ ವಿಸ್ತರಣೆಗೆ ಭಾರತ ಸಂಪೂರ್ಣ ಬೆಂಬಲ ನೀಡಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಇರಾನ್, ಸೌದಿ ಅರೇಬಿಯಾ, ಯುಎಇ ಸೇರಿದಂತೆ 23 ದೇಶಗಳು ಬ್ರಿಕ್ಸ್ ಸದಸ್ಯತ್ವ ಕೋರಿ ಅರ್ಜಿ ಸಲ್ಲಿಸಿರುವ ಬೆನ್ನಲ್ಲೇ ಮೋದಿ ಅವರು ಸದಸ್ಯತ್ವ ಸಂಖ್ಯೆ ವಿಸ್ತರಿಸಲು ಇಂಗಿತ ವ್ಯಕ್ತಪಡಿಸಿ ನೀಡಿರುವ ಹೇಳಿಕೆಯು ಮಹತ್ವ ಪಡೆದಿದೆ.

ಜೋಹಾನಸ್‌ಬರ್ಗ್‌ನಲ್ಲಿ ಬುಧವಾರ ನಡೆದ ಬ್ರಿಕ್ಸ್ ಶೃಂಗಸಭೆಯಲ್ಲಿ ಮಾತನಾಡಿದ ಅವರು, 'ಸದ್ಯ ಭಾರತ ಸೇರಿದಂತೆ ಬ್ರೆಜಿಲ್, ರಷ್ಯಾ, ಚೀನಾ, ದಕ್ಷಿಣ ಆಫ್ರಿಕಾ ಈ ವೇದಿಕೆಯಡಿ ಒಗ್ಗೂಡಿವೆ. ಭವಿಷ್ಯದಲ್ಲಿ ಸದಸ್ಯ ರಾಷ್ಟ್ರಗಳ ಸಂಖ್ಯೆ ಹೆಚ್ಚಿಸಲು ಅಗತ್ಯ ಬೆಂಬಲ ನೀಡಲು ಬದ್ಧ' ಎಂದು ಘೋಷಿಸಿದರು.

ಜೊತೆಗೆ, ಬ್ರಿಕ್ಸ್ ಬೆಂಬಲದೊಂದಿಗೆ 'ಜಿ20' ಆಫ್ರಿಕನ್ ಒಕ್ಕೂಟದ ಸೇರ್ಪಡೆಗೂ ಬೆಂಬಲ ನೀಡಲಾಗುವುದು ಎಂದು ತಿಳಿಸಿದರು.

ನಾಯಕರ ಚರ್ಚೆ: ಜಾಗತಿಕ ಅಭಿವೃದ್ಧಿ ಸೇರಿದಂತೆ ವಿಶ್ವದ ಸವಾಲುಗಳಿಗೆ ಪರಿಹಾರ ಹುಡುಕಲು ಬ್ರಿಕ್ಸ್ ಅನ್ನು ವೇದಿಕೆಯಾಗಿ ಬಳಸಿಕೊಳ್ಳುವ ಬಗ್ಗೆ ಇದಕ್ಕೂ ಮೊದಲು ನಾಯಕರು ಚರ್ಚಿಸಿದರು.

ಕೋವಿಡ್ ಪರಿಣಾಮ ಕಳೆದ ಮೂರು ವರ್ಷಗಳಿಂದ ವರ್ಚುವಲ್ ಆಗಿ ಸಭೆ ನಡೆಸಲಾಗಿತ್ತು. ಈ ಐದು ರಾಷ್ಟ್ರಗಳಲ್ಲಿ ಜಗತ್ತಿನ ಶೇ 41ರಷ್ಟು ಜನಸಂಖ್ಯೆ ಇದೆ. ಶೇ 24ರಷ್ಟು ಜಾಗತಿಕ ಜಿಡಿಪಿ ಹಾಗೂ ಶೇ 16ರಷ್ಟು ಜಾಗತಿಕ ವ್ಯಾಪಾರ ಈ ರಾಷ್ಟ್ರಗಳಲ್ಲಿ ವಿಸ್ತರಿಸಿದೆ.

ದ್ವಿಪಕ್ಷೀಯ ಚರ್ಚೆ: ಪ್ರಧಾನಿ ಮೋದಿ ಹಾಗೂ ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ ಅವರು ಉಭಯ ದೇಶಗಳ ದ್ವಿಪಕ್ಷೀಯ ಒಪ್ಪಂದ ಕುರಿತು ಪರಾಮರ್ಶೆ ನಡೆಸಿದರು.

'ಜಾಗತಿಕ ದಕ್ಷಿಣ' ರಾಷ್ಟ್ರಗಳ ಸಾಮರ್ಥ್ಯ ವೃದ್ಧಿಗೆ ಸಂಬಂಧಿಸಿದಂತೆ ಜಂಟಿಯಾಗಿ ಕೆಲಸ ಮಾಡುವ ಕುರಿತು ಪರಸ್ಪರ ಚರ್ಚಿಸಿದರು.

ರಕ್ಷಣೆ, ಕೃಷಿ, ವ್ಯಾಪಾರ ಮತ್ತು ಹೂಡಿಕೆ, ಆರೋಗ್ಯ, ಪರಿಸರ ಸಂರಕ್ಷಣೆ ಹಾಗೂ ಎರಡೂ ದೇಶಗಳ ಪ್ರಜೆಗಳ ನಡುವಿನ ಬಾಂಧವ್ಯ ವೃದ್ಧಿ ಸೇರಿದಂತೆ ದ್ವಿಪಕ್ಷೀಯ ಒಪ್ಪಂದದ ಬೆಳವಣಿಗೆ ಬಗ್ಗೆ ಇಬ್ಬರೂ ನಾಯಕರು ತೃಪ್ತಿ ವ್ಯಕ್ತಪಡಿಸಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

ಪ್ರಾದೇಶಿಕ ಹಾಗೂ ಬಹುಪಕ್ಷೀಯ ವಿಷಯಗಳಿಗೆ ಸಂಬಂಧಿಸಿದ ಸಹಕಾರ ಹಾಗೂ ನೆರವು ಕಲ್ಪಿಸುವ ಬಗ್ಗೆ ಒಪ್ಪಿಗೆ ಸೂಚಿಸಿದ್ದಾರೆ.

ಮಾತುಕತೆ ವೇಳೆ ಅಧ್ಯಕ್ಷ ರಾಮಫೋಸಾ ಅವರು ಈ ಬಾರಿ ಭಾರತವು ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸಭೆಯ ಯಶಸ್ಸಿಗೆ ಅಗತ್ಯವಿರುವ ಎಲ್ಲಾ ಸಹಾಯ ನೀಡಲು ದಕ್ಷಿಣ ಆಫ್ರಿಕಾ ಒಕ್ಕೂಟವು ಬದ್ಧವಾಗಿರುವ ಬಗ್ಗೆ ಭರವಸೆ ನೀಡಿದ್ದಾರೆ. ನವದೆಹಲಿಯಲ್ಲಿ ಸೆಪ್ಟೆಂಬರ್ 8ರಿಂದ 10ರ ವರೆಗೆ ನಡೆಯಲಿರುವ ಜಿ 20 ಸಭೆಯಲ್ಲಿ ಪಾಲ್ಗೊಳ್ಳಲು ಉತ್ಸುಕನಾಗಿರುವುದಾಗಿ ತಿಳಿಸಿದ್ದಾರೆ.

ಏನಿದು ಜಾಗತಿಕ ದಕ್ಷಿಣ?: ದೇಶಗಳ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವ್ಯತ್ಯಾಸಗಳನ್ನು ಉಲ್ಲೇಖಿಸಿ ಜಾಗತಿಕ ಉತ್ತರ ಮತ್ತು ದಕ್ಷಿಣ ಎಂದು ಕರೆಯಲಾಗುತ್ತದೆ. ಅಭಿವೃದ್ಧಿ ಹೊಂದಿದ ದೇಶಗಳು (ಉತ್ತರ) ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ (ದಕ್ಷಿಣ) ನಡುವಿನ ವ್ಯತ್ಯಾಸದ ಮೇಲೆ ಇದು ಬೆಳಕು ಚೆಲ್ಲುತ್ತದೆ.

ಭೌಗೋಳಿಕತೆ ಮತ್ತು ಜನಸಂಖ್ಯೆ ಆಧರಿಸಿ ಈ ಉತ್ತರ ಮತ್ತು ದಕ್ಷಿಣ ಪದಗಳು ಜನ್ಮ ತಳೆದಿವೆ. ಇದರ ನಿಜವಾದ ಮಾನದಂಡವು ಆರ್ಥಿಕತೆಯನ್ನು ಆಧರಿಸಿದೆ. ಬ್ರೆಜಿಲ್, ಭಾರತ, ಇಂಡೋನೇಷ್ಯಾ, ಚೀನಾ, ನೈಜೀರಿಯಾ ಹಾಗೂ ಮೆಕ್ಸಿಕೊ ಜಾಗತಿಕ ದಕ್ಷಿಣದ ಭಾಗದಲ್ಲಿವೆ.

ಮೋದಿ ನಡೆಗೆ ಮೆಚ್ಚುಗೆ

ಬ್ರಿಕ್ಸ್ ವೇದಿಕೆಯ ಮೇಲೆ ಪ್ರಧಾನಿ ಮೋದಿ ಅವರು ಭಾರತದ ರಾಷ್ಟ್ರಧ್ವಜಕ್ಕೆ ತೋರಿದ ಗೌರವದ ಬಗ್ಗೆ ಭಾರಿ ಮೆಚ್ಚುಗೆ ವ್ಯಕ್ತವಾಗಿದೆ.

ವೇದಿಕೆ ಮೇಲೆ ಬ್ರಿಕ್ಸ್ ನಾಯಕರ ಫೋಟೊ ಸೆಷನ್ ಇತ್ತು. ಈ ವೇಳೆ ಮೊದಲಿಗೆ ವೇದಿಕೆ ಏರಿದ ಮೋದಿ ಅವರಿಗೆ ತ್ರಿವರ್ಣ ಧ್ವಜದ ಫೋಟೊ ಬಿದ್ದಿರುವುದು ಕಂಡುಬಂದಿತು. ತಕ್ಷಣವೇ ಅದನ್ನು ತೆಗೆದುಕೊಂಡ ಅವರು ಜೇಬಿಗೆ ಇಟ್ಟುಕೊಂಡರು.

ಪಕ್ಕದಲ್ಲಿಯೇ ಇದ್ದ ರಾಮಫೋಸಾ ಅವರು, ಕೆಳಗೆ ಬಿದ್ದಿದ್ದ ಧ್ವಜವನ್ನು ಎತ್ತಿಕೊಂಡರು. ಬಳಿಕ ಅಧಿಕಾರಿಗೆ ಅದನ್ನು ನೀಡಿದರು.

ಜೋಹಾನಸ್‌ಬರ್ಗ್‌ನಲ್ಲಿ ಬುಧವಾರ ನಡೆದ ಬ್ರಿಕ್ಸ್ ಶೃಂಗಸಭೆಯಲ್ಲಿ ಬ್ರೆಜಿಲ್ ಅಧ್ಯಕ್ಷ ಲೂಯಿಜ್ ಇನಾಸಿಯೊ ಲುಲಾ ಡಿ ಸಿಲ್ವಾ, ಚೀನಾದ ಅಧ್ಯಕ್ಷ ಕ್ಸಿ ಜಿನ್‌ಪಿಂಗ್, ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಫೋಸಾ ಮತ್ತು ರಷ್ಯಾದ ವಿದೇಶಾಂಗ ಸಚಿವ ಸೆರ್ಗೆಯ್ ಲಾವ್ರೊವ್ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಕಾಣಿಸಿಕೊಂಡಿದ್ದು ಹೀಗೆ – ಪಿಟಿಐ ಚಿತ್ರ

ಮಹತ್ವದ ಸಂದರ್ಭ...

ಮಹಾತ್ಮ ಗಾಂಧಿ ಅವರ ಕೊಡುಗೆ, ಚಂದ್ರಯಾನ–3, ಆಫ್ರಿಕಾ ಚೀತಾಗಳ ಮರು ಪರಿಚಯ– ಹುಲಿಗಳ ಸಂರಕ್ಷಣೆ ಮತ್ತು ಸಾಂಪ್ರದಾಯಿಕ ಔಷಧಗಳ ಕುರಿತು 15ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಅವರು ಮಾಡಿದ ಭಾಷಣಕ್ಕೆ ರಾಮಫೋಸಾ ಅವರು ನೀಡಿರುವ ಪ್ರತಿಕ್ರಿಯೆಗಳು

- ವಿಶೇಷವಾಗಿ ಮಹಾತ್ಮ ಗಾಂಧಿಯವರು ದಕ್ಷಿಣ ಆಫ್ರಿಕಾದಲ್ಲಿ ಪ್ರಾರಂಭಿಸಿದ ವರ್ಣಭೇದ ವಿರುದ್ಧದ ಹೋರಾಟ ಮತ್ತು ಅವರು ಇಲ್ಲಿ ನಮ್ಮ ಪೂರ್ವಜರಿಗೆ ನೀಡಿದ ಅಹಿಂಸಾ ಹೋರಾಟದ ವಿಧಾನಗಳ ಕೊಡುಗೆ ಬಗ್ಗೆ ನಮಗೆ ನೆನಪಿಸಿದ್ದಕ್ಕೆ ನಿಮಗೆ (ಮೋದಿಗೆ) ದೇಶದ ಪರವಾಗಿ ಧನ್ಯವಾದ ಅರ್ಪಿಸುತ್ತೇವೆ. ವರ್ಣಭೇದ ನೀತಿಯ ವಿರುದ್ಧ ನಮ್ಮ ಜನರನ್ನು ಹೋರಾಟಕ್ಕೆ ಸಜ್ಜುಗೊಳಿಸಿತು ಮತ್ತು ಅಂತಿಮವಾಗಿ ವರ್ಣಭೇದ ನೀತಿಯನ್ನು ಆ ಹೋರಾಟ ಮಣಿಸಿತು. ಆದ್ದರಿಂದ ಮಹಾತ್ಮ ಗಾಂಧಿಯವರು ದಕ್ಷಿಣ ಆಫ್ರಿಕಾದ ಇತಿಹಾಸದಲ್ಲಿ ಬಹಳ ಪ್ರಮುಖವಾದ ಪಾತ್ರ ವಹಿಸಿದರು
- ಗಾಂಧೀಜಿಯವರು ಶೋಷಣೆಯ ವಿರುದ್ಧದ ಪ್ರಬಲ ಪ್ರತಿರೋಧ ಶಕ್ತಿಯಾಗಿದ್ದರು. ಅವರು ದಕ್ಷಿಣ ಆಫ್ರಿಕಾದಲ್ಲಿದ್ದಾಗ ನೀಡಿರುವ ಕೊಡುಗೆಗಳು ಶ್ಲಾಘನೀಯ. ಅವರು ನಮಗೆ ಅಹಿಂಸಾ ಹೋರಾಟವನ್ನು ಕಲಿಸಿಕೊಟ್ಟರು. ಅದರಿಂದ ವರ್ಣಭೇದ ನೀತಿಯ ವಿರುದ್ಧ ಬಹಿಷ್ಕಾರ, ಹೋರಾಟ ತೀವ್ರಗೊಳಿಸಲು ಸಾಧ್ಯವಾಯಿತು. ಈ ಹೋರಾಟದಲ್ಲಿ ತೊಡಗಿಸಿಕೊಂಡಿರುವ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಮತ್ತು ಇತರ ಸಂಸ್ಥೆಗಳಲ್ಲಿ ನಾಗರಿಕ ಚಟುವಟಿಕೆ ಉತ್ತೇಜಿಸಲು ನಮಗೆ ಸಾಧ್ಯವಾಯಿತು.
- 'ಭಾರತದಲ್ಲಿ ಚೀತಾಗಳನ್ನು ಮರಪರಿಚಯಿಸಲು ಇಲ್ಲಿನ ಚೀತಾಗಳನ್ನು ಕೊಡುಗೆ ನೀಡಲು ದಕ್ಷಿಣ ಆಫ್ರಿಕಾ ಸಂತೋಷಪಟ್ಟಿದೆ. ನಾವು ಕೊಟ್ಟಿರುವ ಚೀತಾಗಳು ಭಾರತದಲ್ಲಿ ಚೆನ್ನಾಗಿರುವುದನ್ನು ನಮಗೆ ಮೋದಿ ತಿಳಿಸಿದ್ದಾರೆ. ನೀವು (ಮೋದಿ) ಚೀತಾ ನಾಡಿಗೆ ಬಂದಿದ್ದೀರಿ, ನಿಮಗೆ ಹೆಚ್ಚಿನ ಚೀತಾಗಳ ಅಗತ್ಯಬಿದ್ದರೆ ಕೇಳಿ. ಭಾರತ ಹುಲಿಗಳನ್ನು ಸಂರಕ್ಷಿಸುತ್ತಿರುವ ದೇಶವಾಗಿರುವುದರಿಂದ ಅದು ಬಯಸಿದರೆ ನಾವು ಇನ್ನಷ್ಟು ಚೀತಾಗಳನ್ನು ಕೊಡಲು ಸಿದ್ಧ'.
- ಎಲ್ಲ ಕಾಯಿಲೆಗಳನ್ನು ಗುಣಪಡಿಸಲು ಕೇವಲ ಪಾಶ್ಚಿಮಾತ್ಯ ಔಷಧಿಗಳ ಮೇಲೆ ಅವಲಂಬಿತರಾಗಬಾರದು. ಎಲ್ಲ ದೇಶಗಳು ತಮ್ಮದೇ ಆದ ಸಾಂಪ್ರದಾಯಿಕ ಔಷಧಿಗಳ ಮೇಲೆ ಅವಲಂಬಿತವಾಗಬೇಕು. ದಕ್ಷಿಣ ಆಫ್ರಿಕಾವು ಸಾಂಪ್ರದಾಯಿಕ ಔಷಧದಲ್ಲಿ ತೊಡಗಿಸಿಕೊಂಡಿರುವ ಜನರ ದೊಡ್ಡ ಸಮುದಾಯ ಹೊಂದಿದೆ. ಬ್ರಿಕ್ಸ್ ರಾಷ್ಟ್ರಗಳ ಜತೆಗೆ ಸಾಂಪ್ರದಾಯಿಕ ಔಷಧಿಗಳ ಭಂಡಾರ ರಚಿಸಲು ನಮ್ಮ ಅಪೂರ್ವ ಬೆಂಬಲವಿದೆ.

ಚನ್ನೂರ ಗ್ರಾಮಸ್ಥರ ಮಧ್ಯೆ ಬೇರೂರಿದ್ದ ಜಾತಿ ವ್ಯವಸ್ಥೆಗೆ ತೆರೆ

21 ವರ್ಷಗಳ ನಂತರ ಬಿಸಿಯೂಟ!

● ಅಶೋಕ ಸಾಲವಾಡಗಿ

ಸುರಪುರ (ಯಾದಗಿರಿ ಜಿಲ್ಲೆ): ಹುಣಸಗಿ ತಾಲ್ಲೂಕಿನ ಚನ್ನೂರ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ 21 ವರ್ಷಗಳ ಬಳಿಕ ಕೊನೆಗೂ ಬುಧವಾರ ಬಿಸಿಯೂಟ ಆರಂಭವಾಗಿದೆ. ಗ್ರಾಮಸ್ಥರ ನಡುವಿನ ಜಾತಿ ವೈಮನಸ್ಸಿನ ಕಾರಣಕ್ಕೆ ಈ ಶಾಲೆಯಲ್ಲಿ ಮಾತ್ರ ಬಿಸಿಯೂಟ ಯೋಜನೆ ಆರಂಭವಾಗಿರಲಿಲ್ಲ.

ಬುಧವಾರ ಗ್ರಾಮಕ್ಕೆ ಭೇಟಿ ನೀಡಿದ ಶಿಕ್ಷಣ ಇಲಾಖೆಯ ಜಿಲ್ಲಾ ಮತ್ತು ತಾಲ್ಲೂಕು ಅಧಿಕಾರಿಗಳ ತಂಡ ಸಭೆ ನಡೆಸಿ ಗ್ರಾಮಸ್ಥರ ಮನವೊಲಿಸಿ ಬಿಸಿಯೂಟಕ್ಕೆ ಚಾಲನೆ ನೀಡಿದರು.

2002ರಲ್ಲಿ ಬಿಸಿಯೂಟ ಯೋಜನೆ ಜಾರಿಗೊಳಿಸಿದ ಸಂದರ್ಭದಲ್ಲಿ ಅಡುಗೆ ಸಹಾಯಕರ ನೇಮಕಾತಿಗೆ ಸಂಬಂಧಿಸಿದಂತೆ ಗ್ರಾಮಸ್ಥರ ಮಧ್ಯೆ ವೈಮನಸ್ಸು ಇತ್ತು. ನಿಯಮಬದ್ಧವಾಗಿ ಹೆಸರು ಶಿಫಾರಸು ಮಾಡಿಲ್ಲ ಎಂದು ಒಂದು ಗುಂಪು ಪ್ರತಿಭಟನೆ ನಡೆಸಿತ್ತು.

ಅಂದಿನ ತಹಶೀಲ್ದಾರ್ ರೋಸ್ಟರ್ ಪದ್ಧತಿಯಲ್ಲಿ ನೇಮಕ ಮಾಡಿಕೊಳ್ಳಿ ಎಂದು ಸಂಧಾನ ನಡೆಸಿದ್ದರು. ಆದರೆ, ವೈಮನಸ್ಸು ಮುಂದುವರಿದಿದ್ದರಿಂದ ಬಿಸಿಯೂಟ ಆರಂಭವಾಗಿರಲಿಲ್ಲ. ಈ ಬಗ್ಗೆ ಅಧಿಕಾರಿಗಳು ಎರಡು ಮೂರು ಬಾರಿ ಗ್ರಾಮಕ್ಕೆ ಭೇಟಿ ಮಾಡಿ ಚರ್ಚಿಸಿದರೂ ಫಲ ನೀಡಿರಲಿಲ್ಲ. ಹೀಗಾಗಿ ಈ ಶಾಲೆಯಲ್ಲಿ ದಾಖಲಾತಿ ಕುಸಿದಿತ್ತು. 1ರಿಂದ 5ನೇ ತರಗತಿವರೆಗೆ ಒಟ್ಟು 46 ಮಕ್ಕಳು ಮಾತ್ರ ಇದ್ದಾರೆ. ಹಾಜರಾತಿ ಅರ್ಧದಷ್ಟು ಇರುತ್ತಿರಲಿಲ್ಲ. ಶಿಕ್ಷಕರ ಕೊರತೆಯೂ ಇತ್ತು.

ಕಳೆದ ವಾರ ಗ್ರಾಮಕ್ಕೆ ಭೇಟಿ ನೀಡಿದ್ದ ಅಧಿಕಾರಿಗಳು ಗ್ರಾಮಸ್ಥರ ಜತೆ ಸಭೆ ನಡೆಸಿದ್ದರು. ಬಿಸಿಯೂಟ ಯೋಜನೆಯ ಉದ್ದೇಶ ಮತ್ತು ಇದರಿಂದ ಮಕ್ಕಳಿಗೆ ಆಗುವ ಪ್ರಯೋಜನಗಳ ಬಗ್ಗೆ ತಿಳಿವಳಿಕೆ ನೀಡಿದ್ದರು.

ಜಿಲ್ಲಾ ಅಕ್ಷರ ದಾಸೋಹ ಅಧಿಕಾರಿ ಈಶ್ವರ ನೀರಡಗಿ ನೇತೃತ್ವದ ತಂಡ ಬುಧವಾರ ಗ್ರಾಮಕ್ಕೆ ಬಂದು ಪಾಲಕರನ್ನು ಆಹ್ವಾನಿಸಿ ಬಿಸಿಯೂಟಕ್ಕೆ ಚಾಲನೆ ನೀಡಿದರು. ಶಾಲಾ ಮಕ್ಕಳು, ಪಾಲಕರು ಮತ್ತು ಅಧಿಕಾರಿಗಳು ಜೊತೆಗೆ ಕುಳಿತು ಊಟ ಸವಿದರು.

ಹುಣಸಗಿ ತಾಲ್ಲೂಕಿನ ಚನ್ನೂರ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಬುಧವಾರ ಮಕ್ಕಳೊಂದಿಗೆ ಅಧಿಕಾರಿಗಳು, ಪಾಲಕರು ಬಿಸಿಯೂಟ ಸವಿದರು

> ಅಡುಗೆ ಸಹಾಯಕರ ನೇಮಕವಾಗುವವರಿಗೆ ಬಿಸಿಯೂಟ ನೀಡಲು ಎನ್‌ಜಿಒ ಒಂದಕ್ಕೆ ಗುತ್ತಿಗೆ ನೀಡಲಾಗಿದೆ. ಸಿಬ್ಬಂದಿಯ ನೇಮಕ ಪ್ರಕ್ರಿಯೆ ಶೀಘ್ರ ನಡೆಯಲಿದೆ
>
> **ಈಶ್ವರ ನೀರಡಗಿ**
> ಜಿಲ್ಲಾ ಅಕ್ಷರ ದಾಸೋಹ ಅಧಿಕಾರಿ

> ಶಾಲೆಗೆ ಶೀಘ್ರದಲ್ಲೇ ಶಿಕ್ಷಕರನ್ನು ನಿಯೋಜಿಸಿ, ಎಸ್‌ಡಿಎಂಸಿ ರಚಿಸಲಾಗುವುದು. ಮಕ್ಕಳ ದಾಖಲಾತಿ ಹೆಚ್ಚಿಸಲು ಕ್ರಮ ಜರುಗಿಸಲಾಗುವುದು
>
> **ಚಂದ್ರಕಾಂತ ಕೊಣ್ಣೂರ**
> ಬಿಇಒ ಸುರಪುರ

> 21 ವರ್ಷಗಳ ನಂತರ ನಮ್ಮ ಮಕ್ಕಳು ಬಿಸಿಯೂಟ ಸವಿಯುತ್ತಿರುವುದು ಸಂತಸ ತಂದಿದೆ. ಅಡುಗೆ ಸಿಬ್ಬಂದಿ ನೇಮಕ ನಿಯಮಬದ್ಧವಾಗಿ ನಡೆಯಬೇಕು
>
> **ಯಮನಪ್ಪ ಕಟ್ಟಿಮನಿ**
> ಪಾಲಕ

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ

ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ

Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600-65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 6366430266, 6366430366

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT. 18,800-78,000/-. 9964435081, 9964435077

ಭವಿಷ್ಯ

Astrology

ಒಂದೇಕರೆಯಲ್ಲಿ ಶಾಶ್ವತ ಪರಿಹಾರ, ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್100% ಗ್ಯಾರಂಟಿ ಪರಿಹಾರ. ಪಂಡಿತ್. ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ,ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರ ಧರ್ಮಸ್ಥಳ:9880788899

ಪ್ರವಾಸ

Travel

ಅನಿತಾ ಟ್ರಾವೆಲ್ಸ್ ಶೇಷಾದ್ರಿಪುರ ಬೆಂಗಳೂರು-20 9740679845 9448602641 ವಿಮಾನ/ A/C ಬಸ್ಸಿನಲ್ಲಿ ಮಧ್ಯಪ್ರದೇಶ, ಗುಜರಾತ್ ಉಜ್ಜಯಿನಿ ಮಹಾಕಾಳೇಶ್ವರ ಸರ್ದಾರ್ ವಲ್ಲಭ ಬಾಯಿ ಪಟೇಲರ ಪ್ರತಿಮೆ ದ್ವಾರಕಾ,ಸೋಮನಾಥ್ ಇತ್ಯಾದಿ 26.10.2023 22.11.2023 ರಿಂದ 11 ದಿನಗಳು. ಕಾಶಿಯಾತ್ರೆ, ದೆಹಲಿ,ಆಗ್ರಾ,ಮಥುರ ಕಾಶಿ,ಗಯಾ ನೈಮಿಶಾರಣ್ಯ ಇತ್ಯಾದಿ 08.10.2023 24.10.2023 ರಿಂದ 10/8 ದಿನಗಳು. ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ ಪ್ರವಾಸಗಳಿಗಾಗಿ ವಿಚಾರಿಸಿ.

ಶಿವನಂದಿ ಟ್ರಾವೆಲ್ಸ್, ಹನುಮಂತನಗರ, ಬೆಂಗಳೂರು.(ವಿಮಾನದಲ್ಲಿ) ಚಾರ್'ಧಾಮ್'ಯಾತ್ರ 14ದಿನ 21.9.23 ದೆಹಲಿ,ಹರಿದ್ವಾರ ಗಂಗೋತ್ರಿ, ಯಮುನೋತ್ರಿ ಕೇದಾರ್'ನಾಥ್, ಬದರಿನಾಥ್ ಹೃಷಿಕೇಶ. ಕಾಶಿಯಾತ್ರ 10ದಿನ 5.10.23 ದೆಹಲಿ,ಆಗ್ರಾ ಮಥುರಾ,ನೈಮಿಷಾರಣ್ಯ ಅಯೋಧ್ಯ ಕಾಶಿ,ಗಯಾ ತ್ರಿವೇಣಿಸಂಗಮ. 9036056352, 9481027363.

ASTRO YATRA

ಶ್ರೀ ಜ್ಯೋತಿಷ್ಯಾಲಯ

ಉಚಿತ ಭವಿಷ್ಯ ಖಚಿತ ಪರಿಹಾರ

ಫೋನಿನ ಮೂಲಕ ಪರಿಹಾರ

ಸುಖ ಜೀವನಕ್ಕೆ ಶಾಶ್ವತ ಪರಿಹಾರ

ನಿಮ್ಮ ಕೌಟುಂಬಿಕ ಸಮಸ್ಯೆಗಳಾದ

ಸ್ತ್ರೀ ಪುರುಷ ಪ್ರೇಮ ವಿಚಾರ, ಇಷ್ಟಪಟ್ಟವರು ನಿಮ್ಮಂತೆ ಆಗಲು, ಗಂಡ–ಹೆಂಡತಿ ಕಿರಿಕಿರಿ, ಸಂತಾನ ಸಮಸ್ಯೆ, ಅತ್ತೆ–ಸೊಸೆ ಕಿರಿಕಿರಿ, ಡೈವೋರ್ಸ್ ಪ್ರಾಬ್ಲಂ, ಮಾಟ–ಮಂತ್ರ, ಸಿನಿಮಾ ರಂಗ, ರಾಜಕೀಯ, ಉದ್ಯೋಗ, ಹಣಕಾಸಿನ ಸಮಸ್ಯೆ ಹಾಗೂ ಇನ್ನೂ ನಿಮ್ಮ ಯಾವುದೇ ಗುಪ್ತ, ಕಠಿಣ ಸಮಸ್ಯೆಗಳಿದ್ದರೂ ಕೇರಳ ಹಾಗೂ ಕೊಳ್ಳೇಗಾಲದ ರುಂಡಮಾಲಿನಿ ಪೂಜಾ ಶಕ್ತಿಯಿಂದ ಕೆಲವೇ ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡಲಾಗುತ್ತದೆ.

ಪಂಡಿತ್ ಸುರೇಶ್ ಭಟ್ ಫೋನಿನ ಮೂಲಕ ಪರಿಹಾರ ತಿಳಿಸುತ್ತಾರೆ.

ಸಂಪರ್ಕಿಸಿ : 9686330981

10/09/2023/10/10/2023 6ದಿನಗಳು ಕಾಶಿ,ಗಯಾ ಬುದ್ಧಗಯಾ ಅಯೋಧ್ಯ ಅಲಹಾಬಾದ್24000/ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ 5/8ದಿನಗಳು ಹಡಗು/ವಿಮಾನದಲ್ಲಿ ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429

8 ದಿನಗಳ ಕಾಶಿಯಾತ್ರೆ. 12ದಿನಗಳ ಚಾರ್‌ಧಾಮ್‌ಯಾತ್ರೆ. 12 ದಿನಗಳ ನೇಪಾಳ,ಮುಕ್ತಿನಾಥ್. 10 ದಿನಗಳ ಗುಜರಾತ್. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್ 9980270467 9740228186

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 21/9 ನೇಪಾಳ ಮುಕ್ತಿನಾಥ್, ಪಶುಪತಿನಾಥ.7/9 ರಾಮೇಶ್ವರ, ಕನ್ಯಾಕುಮಾರಿ, ಮಧುರೈ. 11/9 ಪುರಿ ಜಗನ್ನಾಥ್, ಭುನೇಶ್ವರ 9591017782

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ಕೆಲಸ ಹುಡುಕಾಟ

JOB

ನಿಮ್ಮ ನೇಮಕಾತಿ ಅಗತ್ಯಗಳಿಗೆ ಪೂರಕ ವೇದಿಕೆ

ನಿಮ್ಮ ಕಂಪನಿಗೆ ಸೂಕ್ತವಾದ ಅಭ್ಯರ್ಥಿಗಳನ್ನು ಪಡೆಯಿರಿ...

ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿರಿ!

www.dhclassifieds.com

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:

+91 9901641752 | +91 9731810277 | +91 9900428036 |
+91 9886213331 | +91 9845114560 | 080-45557163/164

‘ಚಂದ್ರಯಾನ 3’ರ ಪಯಣದ ಹಾದಿ

- **ಜುಲೈ 14:** ಆಂಧ್ರಪ್ರದೇಶದ ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಲ್ಯಾಂಡರ್ ಮತ್ತು ರೋವರ್ ಹೊತ್ತ ‘ಎಲ್‌ವಿಎಂ3 ಎಂ4 ರಾಕೆಟ್’ನ ಯಶಸ್ವಿ ಉಡ್ಡಯನ
- **ಜುಲೈ 15:** ಬೆಂಗಳೂರಿನಲ್ಲಿರುವ ಇಸ್ರೊದ ಟೆಲಿಮೆಟ್ರಿ, ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ) ಕೇಂದ್ರದಿಂದ ಭೂಕಕ್ಷೆಯಲ್ಲಿ ಪರಿಭ್ರಮಿಸುತ್ತಿದ್ದ ಗಗನನೌಕೆಯ ಕಕ್ಷೆ ಬದಲಿಸುವ ಮೊದಲ ಪ್ರಯತ್ನ ಯಶಸ್ವಿ(41,762 ಕಿ.ಮೀ x 173 ಕಿ.ಮೀ)
- **ಜುಲೈ 17:** ಎರಡನೇ ಹಂತದ ಕಕ್ಷೆ ಬದಲಾವಣೆ ಪ್ರಕ್ರಿಯೆ ಪೂರ್ಣ (41,603 ಕಿ.ಮೀx226 ಕಿ.ಮೀ)
- **ಜುಲೈ 22:** ಭೂಕಕ್ಷೆಯಲ್ಲಿ ಪರಿಭ್ರಮಿಸುತ್ತಿದ್ದ ಗಗನನೌಕೆಯ ಕಕ್ಷೆ ಬದಲಿಸುವ ಮೂರನೇ ಹಂತದ ಪ್ರಕ್ರಿಯೆ ಯಶಸ್ವಿ
- **ಜುಲೈ 25:** ಕಕ್ಷೆ ಬದಲಾಯಿಸುವ ನಾಲ್ಕನೇ ಹಂತದ ಪ್ರಕ್ರಿಯೆ ಪೂರ್ಣ (71,351 ಕಿ.ಮೀx233 ಕಿ.ಮೀ)
- **ಆಗಸ್ಟ್ 1:** ಭೂಕಕ್ಷೆಯಿಂದ ಚಂದ್ರನ ಕಕ್ಷೆಯತ್ತ ಬಾಹ್ಯಾಕಾಶ ನೌಕೆಯ ಪಯಣ ಆರಂಭ (288 ಕಿ.ಮೀx36,9328 ಕಿ.ಮೀ)
- **ಆಗಸ್ಟ್ 5:** ಚಂದ್ರನ ಕಕ್ಷೆಗೆ ಗಗನನೌಕೆಯ ಸೇರ್ಪಡೆ ಯಶಸ್ವಿ (164 ಕಿ.ಮೀx18,074 ಕಿ.ಮೀ)
- **ಆಗಸ್ಟ್ 6:** ಚಂದ್ರನ ಕಕ್ಷೆಯಲ್ಲಿನ ನೌಕೆಯ ವೇಗ ಕಡಿಮೆಗೊಳಿಸಿದ ದಿನ. ಚಂದಿರನ ಕಕ್ಷೆ ಪ್ರವೇಶಿಸಿದ ತಕ್ಷಣವೇ ನೌಕೆಯು ಚಂದ್ರನ ಮೇಲ್ಮೈ ಚಿತ್ರವನ್ನು ಭೂಮಿಗೆ ರವಾನಿಸಿತು. ಇಸ್ರೊ ಇದರ ವಿಡಿಯೊ ಹಂಚಿಕೊಂಡಿತು
- **ಆಗಸ್ಟ್ 9:** ನೌಕೆಯ ವೇಗವನ್ನು ನಿಧಾನವಾಗಿ ತಗ್ಗಿಸುವಲ್ಲಿ ಇಸ್ರೊ ಯಶಸ್ವಿ (174 ಕಿ.ಮೀx1,437 ಕಿ.ಮೀ)



- **ಆಗಸ್ಟ್ 14:** ಚಂದಿರನ ಕಕ್ಷೆಯಲ್ಲಿನ ನೌಕೆಯ ವೇಗವನ್ನು ತಗ್ಗಿಸುವ ಮತ್ತೊಂದು ಹಂತದ ಪ್ರಕ್ರಿಯೆ ಪೂರ್ಣ (151 ಕಿ.ಮೀx179 ಕಿ.ಮೀ)
- **ಆಗಸ್ಟ್ 16:** ನೌಕೆಯ ವೇಗ ನಿಧಾನಗೊಳಿಸುವ ಪ್ರಕ್ರಿಯೆ ಯಶಸ್ವಿ (153 ಕಿ.ಮೀx 163 ಕಿ.ಮೀ)
- **ಆಗಸ್ಟ್ 17:** ಪ್ರೊಪಲ್ಷನ್ ಮಾಡ್ಯೂಲ್‌ನಿಂದ (ನೋದನ ಘಟಕ) ಯಶಸ್ವಿಯಾಗಿ ಬೇರ್ಪಟ್ಟ ಲ್ಯಾಂಡರ್ ವಿಕ್ರಮ್
- **ಆಗಸ್ಟ್ 19:** ಇಸ್ರೊದಿಂದ ಲ್ಯಾಂಡರ್‌ನ ಡಿಬೂಸ್ಟ್(ವೇಗ ತಗ್ಗಿಸುವಿಕೆ) ಪ್ರಕ್ರಿಯೆ ಯಶಸ್ವಿ (113 ಕಿ.ಮೀx157 ಕಿ.ಮೀ)
- **ಆಗಸ್ಟ್ 20:** ಮತ್ತೊಂದು ಹಂತದಲ್ಲಿ ಲ್ಯಾಂಡರ್ ವೇಗ ತಗ್ಗಿಸಿದ ಇಸ್ರೊ (25 ಕಿ.ಮೀx 134 ಕಿ.ಮೀ)
- **ಆಗಸ್ಟ್ 21:** ‘ಸ್ವಾಗತ ಗೆಳೆಯ!’ ಎಂದು ಚಂದ್ರಮಂಡಲದಲ್ಲಿ ಚಂದ್ರಯಾನ-3ರ ‘ಲ್ಯಾಂಡರ್’ಗೆ ಆತ್ಮೀಯವಾಗಿ ಸ್ವಾಗತ ಕೋರಿದ ಚಂದ್ರಯಾನ-2ರ ಕಕ್ಷೆಗಾಮಿ (ಆರ್ಬಿಟರ್). ಎರಡೂ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡ ಖುಷಿ ಹಂಚಿಕೊಂಡ ಇಸ್ರೊ
- **ಆಗಸ್ಟ್ 22:** ಚಂದ್ರನಲ್ಲಿ ಸಾಫ್ಟ್ ಲ್ಯಾಂಡಿಂಗ್‌ಗೆ ಸ್ಥಳ ಹುಡುಕಾಟ ನಡೆಸುತ್ತಿದ್ದ ಲ್ಯಾಂಡರ್‌ಗೆ ಅಳವಡಿಸಿದ್ದ ಕ್ಯಾಮೆರಾದಿಂದ ತೆಗೆದ ಚಿತ್ರಗಳನ್ನು ಬಿಡುಗಡೆಗೊಳಿಸಿದ ಇಸ್ರೊ, ಅದೇ ದಿನದಂದು ಚಂದ್ರನಿಂದ 70 ಕಿ.ಮೀ ಅಂತರಕ್ಕೆ ಲ್ಯಾಂಡರ್‌ಅನ್ನು ಇಳಿಸಿತು
- **ಆಗಸ್ಟ್ 23:** ಚಂದಿರನ ದಕ್ಷಿಣ ಧ್ರುವದಲ್ಲಿ ಸುರಕ್ಷಿತವಾಗಿ ಇಳಿದ ಲ್ಯಾಂಡರ್ ‘ವಿಕ್ರಮ್’

ಕೋಟ್ಯಂತರ ಹೃದಯಗಳಿಂದ ಇಸ್ರೊಗೆ ಧನ್ಯವಾದ

ಶ್ರೇಷ್ಠತೆ ಮೆರೆದಿದ್ದೇವೆ, ಇನ್ನೂ ಸಾಧಿಸುತ್ತೇವೆ: ವಿಜ್ಞಾನಿಗಳ ಹರ್ಷದ ನುಡಿ • ದೇಶದಾದ್ಯಂತ ಮುಗಿಲು ಮುಟ್ಟಿದ ಸಂಭ್ರಮ

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ‘ನಾವು ಶ್ರೇಷ್ಠತೆ ಮೆರೆದಿದ್ದೇವೆ...’

ಚಂದ್ರನ ಅಂಗಳದಲ್ಲಿ ‘ವಿಕ್ರಮ್ ಲ್ಯಾಂಡರ್’ ಸ್ಪರ್ಶಿಸುತ್ತಿದ್ದಂತೆಯೇ ವಿಜ್ಞಾನಿಗಳು ಉದ್ಗರಿಸಿದ್ದು ಹೀಗೆ...

ಇಡೀ ವಿಶ್ವವೇ ಕಾತರದಿಂದ ಕಾಯುತ್ತಿದ್ದ ಆ ಕ್ಷಣಗಣನೆ ಯಶಸ್ಸು ಸಾಧಿಸುತ್ತಿದ್ದಂತೆ ಎಲ್ಲೆಡೆ ಸಂತಸದ ಹೊನಲು ಹರಿಯಿತು.

ಭಾರತೀಯರ ಶುಭ ಹಾರೈಕೆ ಹಾಗೂ ಪ್ರಾರ್ಥನೆಯೊಂದಿಗೆ ಚಂದ್ರನ ದಕ್ಷಿಣ ಧ್ರುವದಲ್ಲಿ ಬುಧವಾರ ಸಂಜೆ 6 ಗಂಟೆ 4 ನಿಮಿಷಕ್ಕೆ ವಿಕ್ರಮನ ಪಾದಸ್ಪರ್ಶವಾಗುತ್ತಿದ್ದಂತೆ ಹರ್ಷೋದ್ಗಾರ ಮುಗಿಲು ಮುಟ್ಟಿತ್ತು. ಚಂದ್ರನ ದಕ್ಷಿಣ ಧ್ರುವ ಪ್ರವೇಶಿಸಿದ ಮೊದಲ ದೇಶವಾಗಿ ಭಾರತ ಗುರುತಿಸಿಕೊಂಡಿದ್ದಕ್ಕೆ ವಿಜ್ಞಾನಿಗಳು ಹೆಮ್ಮೆಯಿಂದ ಬೀಗಿದರು.

ನಿಗದಿತ ಕಕ್ಷೆಗೆ ಸೇರಿಸುವ ಕಾರ್ಯವನ್ನು ಪೀಣ್ಯದಲ್ಲಿರುವ ಇಸ್ರೊ ಟೆಲಿಮೆಟ್ರಿ ಟ್ರ್ಯಾಕಿಂಗ್ ಅಂಡ್ ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ) ಕೇಂದ್ರದಿಂದ ಯಶಸ್ವಿಯಾಗಿ ನಿರ್ವಹಿಸಲಾಯಿತು.

ಲ್ಯಾಂಡರ್ ವೇಗವನ್ನು ಕಡಿಮೆಗೊಳಿಸಿ ದಕ್ಷಿಣ ಧ್ರುವದಲ್ಲಿ ಒಂದೊಂದೇ ಹೆಜ್ಜೆ ಹಾಕಿ ಮುಂದಡಿ ಇರಿಸುತ್ತಿದ್ದಂತೆ ಕೇಂದ್ರದಲ್ಲಿ ಸೇರಿದ್ದ ವಿಜ್ಞಾನಿಗಳ ಮೊಗದಲ್ಲೂ ಮಂದಹಾಸ ಮೂಡತೊಡಗಿತ್ತು. ಅಲ್ಲಿಯವರೆಗೂ ಕಾತರ, ಕುತೂಹಲದಿಂದ ಕಾಯುತ್ತಿದ್ದ ಕಣ್ಣುಗಳಲ್ಲಿ ನಿಧಾನವಾಗಿ ನಿರಾಳಭಾವ ಕಾಣಿಸತೊಡಗಿತ್ತು. ಪ್ರತಿ ಹಂತದಲ್ಲೂ ಚಪ್ಪಾಳೆ ತಟ್ಟಿ ವಿಜ್ಞಾನಿಗಳು ಸಂಭ್ರಮಿಸಿದರು. ಲ್ಯಾಂಡರ್ ದಕ್ಷಿಣ ಧ್ರುವದಲ್ಲಿ ತನ್ನ ಪುಟ್ಟ ಹೆಜ್ಜೆ ಇರಿಸುತ್ತಿದ್ದಂತೆ ಐಎಸ್‌ಟಿಆರ್‌ಸಿ ಕೇಂದ್ರದಲ್ಲಿ ವಿಜ್ಞಾನಿಗಳು ಮತ್ತು ಸಿಬ್ಬಂದಿ ಹರ್ಷ ವ್ಯಕ್ತಪಡಿಸಿ ಜಯ ಘೋಷಗಳನ್ನು ಮೊಳಗಿಸಿದರು.

ಚಂದ್ರಯಾನ-4ಕ್ಕೆ ಸಿದ್ಧತೆ!

ಬೆಂಗಳೂರು: ಚಂದ್ರಯಾನ-3ರ ಯಶಸ್ಸಿನ ನಂತರ ಇಸ್ರೊ, ಭವಿಷ್ಯದಲ್ಲಿಯೂ ಹಲವು ಮಹತ್ವದ ಯೋಜನೆಗಳನ್ನು ಜಾರಿಗೊಳಿಸಲು ಮುಂದಾಗಿದೆ.

ಈ ಯೋಜನೆಗಳಲ್ಲಿ ಚಂದ್ರಯಾನ-4 ಸಹ ಒಂದಾಗಿದೆ. ಜಪಾನ್ ಸಹಯೋಗದಲ್ಲಿ ಈ ಯೋಜನೆ ಕೈಗೊಳ್ಳುವ ಸಾಧ್ಯತೆ ಇದೆ. 2026 ಅಥವಾ 2028ರಲ್ಲಿ ಈ ಯೋಜನೆ ಕಾರ್ಯಗತಗೊಳ್ಳಬಹುದು ಎಂದು ಇಸ್ರೊ ಮೂಲಗಳು ಹೇಳಿವೆ.

ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್, ‘ನಾವು ಚಂದ್ರನ ಅಂಗಳದಲ್ಲಿ ಸಾಫ್ಟ್ ಲ್ಯಾಂಡಿಂಗ್ ಮಾಡಿದ್ದೇವೆ’ ಎಂದು ಘೋಷಿಸಿ ಸಂತಸ ವ್ಯಕ್ತಪಡಿಸಿದರು.

ವಿಜ್ಞಾನಿಗಳು ‘ಭಾರತ ಮಾತಾ ಕೀ ಜೈ, ವಂದೇ ಮಾತರಂ’ ಎಂದು ಘೋಷಣೆಗಳನ್ನು ಹಾಕಿ ಸಂಭ್ರಮಿಸಿದರು. ಸತತ ನಾಲ್ಕು ವರ್ಷಗಳಿಗೂ ಹೆಚ್ಚು ಕಾಲದ ಪರಿಶ್ರಮ ಮತ್ತು ಛಲದಿಂದ ಮುನ್ನುಗ್ಗಿ ಯಶಸ್ಸು ಸಾಧಿಸಿದ ಸಾರ್ಥಕ ಭಾವ ವಿಜ್ಞಾನಿಗಳ ಮೊಗದಲ್ಲಿ ಕಾಣಿಸುತ್ತಿತ್ತು.

ಯೋಜನೆಯ ಪ್ರಮುಖ ರೂವಾರಿಗಳಾದ ಚಂದ್ರಯಾನ ಯೋಜನಾ ನಿರ್ದೇಶಕ ಪಿ. ವೀರಮುತ್ತುವೇಲ್, ಸಹಾಯಕ ಯೋಜನಾ ನಿರ್ದೇಶಕಿ ಕಲ್ಪನಾ ಹಾಗೂ ಯು.ಆರ್. ರಾವ್ ಉಪಗ್ರಹ ಕೇಂದ್ರದ ಎಂ. ಶಂಕರನ್ ಅವರು, ಚಂದ್ರಯಾನ-3 ಯೋಜನೆಯಲ್ಲಿ ಯಶಸ್ಸಿಗೆ ಅಹೋರಾತ್ರಿ ಶ್ರಮಿಸಿದ ಪ್ರತಿಯೊಬ್ಬರಿಗೂ ಧನ್ಯವಾದ ಸಲ್ಲಿಸಿದರು.

ಲ್ಯಾಂಡರ್ ವಿಕ್ರಮ್ ಚಂದ್ರನ ಮೇಲೆ ಇಳಿಯುವುದನ್ನು ಬೆಂಗಳೂರಿನ ಜವಾಹರಲಾಲ್ ನೆಹರೂ ತಾರಾಲಯದಲ್ಲಿ ವೀಕ್ಷಿಸುತ್ತಿದ್ದ ಜನರ ಸಂಭ್ರಮ ಮುಗಿಲು ಮುಟ್ಟಿತು
–ಪ್ರಜಾವಾಣಿ ಚಿತ್ರ: ಪುಷ್ಕರ್ ವಿ

‘ಇದು ಸುವರ್ಣ ಯುಗದ ಆರಂಭ’

ಬೆಂಗಳೂರು: ‘ಇದು ಸುವರ್ಣ ಯುಗದ ಆರಂಭ. ನಮ್ಮ ಉತ್ಸಾಹ ಮತ್ತಷ್ಟು ಹೆಚ್ಚಿದೆ’ ಎಂದು ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್ ಪ್ರತಿಕ್ರಿಯಿಸಿದ್ದಾರೆ.

ಚಂದ್ರನ ದಕ್ಷಿಣ ಧ್ರುವದಲ್ಲಿ ಲ್ಯಾಂಡರ್ ಇಳಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಚಂದ್ರಯಾನ-3 ಸುಲಭದ ಕಾರ್ಯವಾಗಿರಲಿಲ್ಲ. ನಾವು ನೋವು, ಸಂಕಟಗಳನ್ನು ಅನುಭವಿಸಿದ್ದೇವೆ. ಇವುಗಳೆಲ್ಲವನ್ನೂ ಮೀರಿ ಯಶಸ್ಸಿನ ಪಥದಲ್ಲಿ ಸಾಗಿದ್ದೇವೆ. ಚಂದ್ರಯಾನದ ಹಿಂದಿನ ಯೋಜನೆಗಳು ಸಹ ನಮಗೆ ನೆರವಾದವು. ಭಾರತೀಯರ ಪ್ರಾರ್ಥನೆ, ಪೂಜೆ ಫಲಿಸಿದೆ’ ಎಂದು ಸಂತಸ ವ್ಯಕ್ತಪಡಿಸಿದರು.

‘ಚಂದ್ರಯಾನ-3ರ ಯೋಜನೆಯಲ್ಲಿ ಆರಂಭದಿಂದ ಪ್ರತಿ ಹಂತದಲ್ಲೂ ಹಲವು ಕಠಿಣ ಸವಾಲುಗಳನ್ನು ಎದುರಿಸಿದ್ದೇವೆ. ಉಡಾವಣೆ, ಲ್ಯಾಂಡರ್ ಅನ್ನು ಪ್ರತ್ಯೇಕಗೊಳಿಸುವುದು ಮತ್ತು ಸಾಫ್ಟ್ ಲ್ಯಾಂಡಿಂಗ್ ಸವಾಲುಗಳಿಂದ ಕೂಡಿದ್ದವು. ನಾವು ಪ್ರಯೋಗಗಳನ್ನು ಮುಂದುವರಿಸುತ್ತೇವೆ. ಆದಿತ್ಯ ಎಲ್-1 ಸೇರಿದಂತೆ ಹಲವು ಯೋಜನೆಗಳನ್ನು ಇಸ್ರೊ ಕೈಗೊಂಡಿದೆ’ ಎಂದು ವಿವರಿಸಿದರು.

‘ನಮಗೆ ಇಡೀ ದೇಶವೇ ಬೆಂಬಲ ಸೂಚಿಸಿದೆ. ಪ್ರಧಾನಿ ಮೋದಿ ಅವರು ನನಗೆ ದೂರವಾಣಿ ಕರೆ ಮಾಡಿ ಅಭಿನಂದನೆ ಸಲ್ಲಿಸಿದರು’ ಎಂದು ಹರ್ಷ ವ್ಯಕ್ತಪಡಿಸಿದರು.

ಮುಂದಿನ ಯಾನ ಸೂರ್ಯ, ಶುಕ್ರನತ್ತ?

ಚಂದ್ರಯಾನ-3ರ ಯಶಸ್ಸಿನ ಬೆನ್ನಲ್ಲೇ ಶುಕ್ರ ಗ್ರಹಕ್ಕೆ ಬಾಹ್ಯಾಕಾಶ ನೌಕೆ ಮತ್ತು ಮಂಗಳ ಗ್ರಹಕ್ಕೆ ಲ್ಯಾಂಡರ್ ಕಳುಹಿಸುವ ಆಸೆ ಮೊಳೆತಿದೆ.

ಸೂರ್ಯನ ಅಧ್ಯಯನಕ್ಕೆ ಈಗಾಗಲೇ ನಿಗದಿಯಾಗಿರುವ ಆದಿತ್ಯ- ಎಲ್ 1 ಉಪಗ್ರಹ ರವಾನೆಗೆ ಇಸ್ರೊ ಸಿದ್ಧತೆ ನಡೆಸಲಿದೆ. ಈ ಯಾನಗಳಿಗೆ ಪ್ರಧಾನಿ ಮೋದಿಯವರು ಉತ್ಸಾಹ ತೋರಿಸಿರುವುದರಿಂದ ಇಸ್ರೊ ತಂಡದ ಉಮೇದು ಹೆಚ್ಚಿದೆ.

‘ಸೋಲಿನ ಪಾಠದಿಂದ ಗೆಲುವಿನ ದಡ’

‘ನಾವು ವೈಫಲ್ಯಗಳಿಂದ ಯಶಸ್ಸು ಸಾಧಿಸಿದ್ದೇವೆ. ಚಂದ್ರಯಾನ-1 ಮತ್ತು ಚಂದ್ರಯಾನ-2ರಲ್ಲಿನ ಕಲಿತ ಪಾಠಗಳು ನಮಗೆ ಮಾರ್ಗದರ್ಶನ ನೀಡಿದವು. ಊಟ ಮಾಡುವಾಗ, ನಿದ್ರೆ ಮಾಡುವಾಗಲೂ ಸದಾ ಈ ಯೋಜನೆಯದ್ದೇ ಚಿಂತೆ ನಮ್ಮನ್ನು ಕಾಡಿತ್ತು. ಈ ಯಶಸ್ಸಿನ ಮಾರ್ಗ ಸರಳವಾಗಿರಲಿಲ್ಲ. ಹಲವು ಬಾರಿ ಟೀಕೆಗಳನ್ನು ಸಹ ಎದುರಿಸಿದ್ದೇವೆ. ಕಷ್ಟಗಳನ್ನು ಅನುಭವಿಸಿದ್ದೇವೆ. ಪದೇ ಪದೇ ವಿಮರ್ಶೆಗೆ ಒಳಪಟ್ಟಿದ್ದರಿಂದ ನಮ್ಮ ಯಶಸ್ಸಿನ ಮಾರ್ಗ ಗೋಚರಿಸಿತೊಡಗಿತು’ ಎಂದು ಯು.ಆರ್. ರಾವ್ ಉಪಗ್ರಹ ಕೇಂದ್ರದ ಎಂ. ಶಂಕರನ್ ತಮ್ಮ ಅನುಭವಗಳನ್ನು ಬಿಚ್ಚಿಟ್ಟರು.

‘ಈ ಯಶಸ್ಸು ನಮಗೆ ಹೆಚ್ಚಿನ ಜವಾಬ್ದಾರಿ ವಹಿಸಿದೆ. ಭವಿಷ್ಯದಲ್ಲಿ ನಾವು ಕೈಗೊಳ್ಳುವ ಯೋಜನೆಗಳು ಮತ್ತಷ್ಟು ಉತ್ಕೃಷ್ಟವಾಗಿರಬೇಕು. ಭಾರತೀಯರು ಸದಾ ನಮ್ಮನ್ನು ಯಶಸ್ಸಿನ ಪಥದಲ್ಲಿ ಇರಬೇಕು ಎಂದೇ ಬಯಸುತ್ತಾರೆ. ಹೀಗಾಗಿ, ಇಸ್ರೊ ನಿರಂತರವಾಗಿ ಯಶಸ್ಸು ಸಾಧಿಸಲೇಬೇಕು. ಮುಂದಿನ ದಿನಗಳಲ್ಲೂ ಜನರ ಬಯಕೆಯಂತೆ ನಾವು ಅತ್ಯುತ್ತಮ ಕೊಡುಗೆಯನ್ನೇ ದೇಶಕ್ಕೆ ನೀಡುತ್ತೇವೆ’ ಎಂದು ಹೇಳುತ್ತಾ ಭಾವುಕರಾದರು.

‘ಚಂದ್ರಯಾನ-3’ ಯಶಸ್ಸಿಗಾಗಿ ಶ್ರಮಿಸಿದ ಇಸ್ರೊದ ಪ್ರತಿಯೊಬ್ಬರನ್ನೂ ಅಭಿನಂದಿಸುವೆ. ಭವಿಷ್ಯದಲ್ಲಿ ಮತ್ತಷ್ಟು ಸಾಧನೆ ನಿಮ್ಮದಾಗಲಿ ಎಂದು ಆಶಿಸುವೆ
ದ್ರೌಪದಿ ಮುರ್ಮು, ರಾಷ್ಟ್ರಪತಿ

ಈ ಸಾಧನೆ ಹೊಸತನಕ್ಕೆ ನಾಂದಿ ಹಾಡುತ್ತದೆ. ಚಂದ್ರಯಾನ-3ರ ಲ್ಯಾಂಡಿಂಗ್ ಅನ್ನು ವೀಕ್ಷಿಸಲು ನಾಗರಿಕನಾಗಿ ಅಪಾರ ಹೆಮ್ಮೆ ಎನಿಸಿತು
ಡಿ.ವೈ. ಚಂದ್ರಚೂಡ್
ಭಾರತದ ಮುಖ್ಯ ನ್ಯಾಯಮೂರ್ತಿ



ಸಾಫ್ಟ್ ಲ್ಯಾಂಡಿಂಗ್ ಮಾಡಿದ ನಾಲ್ಕನೇ ದೇಶವೆಂಬ ಹೆಗ್ಗಳಿಕೆ ಪಾತ್ರವಾದ ಭಾರತಕ್ಕೆ ಅಭಿನಂದನೆಗಳು. ಈ ಬಾಹ್ಯಾಕಾಶ ಕಾರ್ಯಕ್ರಮದಲ್ಲಿ ನಾಸಾ ಕೈಜೋಡಿಸಿದ್ದು ಖುಷಿಯಾಗುತ್ತದೆ
ಬಿಲ್ ನೆಲ್ಸನ್, ನಾಸಾ ಆಡಳಿತಾಧಿಕಾರಿ

ನಾವು ನಿಮ್ಮನ್ನು (ಭಾರತ) ಅಭಿನಂದಿಸುತ್ತೇವೆ. ಈ ಮಹಾನ್ ಸಾಧನೆಯ ಸಂತೋಷದಲ್ಲಿ ನಿಮ್ಮ ಜತೆ ನಾವೂ ಸಂತೋಷಪಡುತ್ತೇವೆ
ಸಿರಿಲ್ ರಾಮಫೋಸಾ
ದಕ್ಷಿಣ ಆಫ್ರಿಕಾದ ಅಧ್ಯಕ್ಷ

ಚಂದಿರನಲ್ಲಿ ನಡೆದಾಡುವ ಸಮಯ ಬಂದಿದೆ: ಮೋದಿ

ನವದೆಹಲಿ (ಪಿಟಿಐ): ‘ಭಾರತ ಈಗ ಚಂದಿರನ ಮೇಲಿದೆ. ಚಂದಮಾಮಾನ ಪಥದಲ್ಲಿ ಮಾನವಸಹಿತ ನಡೆದಾಡುವ ಸಮಯವೂ ಕೂಡಿಬಂದಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ದಕ್ಷಿಣ ಆಫ್ರಿಕಾದ ಜೋಹಾನಸ್‌ಬರ್ಗ್‌ನಲ್ಲಿ ನಡೆಯುತ್ತಿರುವ ಬ್ರಿಕ್ಸ್ ಶೃಂಗಸಭೆಯಲ್ಲಿ ಪಾಲ್ಗೊಂಡಿರುವ ಅವರು, ಲ್ಯಾಂಡರ್ ವಿಕ್ರಮ್ ಚಂದ್ರನನ್ನು ಸ್ಪರ್ಶಿಸಿದ ತಕ್ಷಣವೇ ಭಾರತದ ಬಾವುಟವನ್ನು ಎತ್ತಿಹಿಡಿದು ಯಶಸ್ಸನ್ನು ಸೂಚಿಸಿದರು. ಇಸ್ರೊ ಕುಟುಂಬದ ಸಾಧನೆಗೆ ಚಪ್ಪಾಳೆಯ ಸುರಿಮಳೆಗರೆದರು. ವರ್ಚುವಲ್ ಆಗಿ ಮಾತನಾಡಿ ವಿಜ್ಞಾನಿಗಳ ಸಾಧನೆಯನ್ನು ಮುಕ್ತಕಂಠದಿಂದ ಹೊಗಳಿದರು.

‘ವಿಕ್ರಮ್ ಚಂದಿರನ ಮೇಲೆ ಹೆಜ್ಜೆ ಇಟ್ಟ ಕ್ಷಣ ಐತಿಹಾಸಿಕವಾದುದು. ಅದರ ಹೆಜ್ಜೆಯ ಸಪ್ಪಳವು ಭಾರತದ ಅಭಿವೃದ್ಧಿಗೆ ಕಹಳೆ ಮೊಳಗಿಸಿದೆ’ ಎಂದು ಅಭಿಪ್ರಾಯಪಟ್ಟರು.

‘ಇಂದಿನ ಚಾರಿತ್ರಿಕ ದಿನವನ್ನು ಎಂದಿಗೂ ಮರೆಯಲಾಗದು. ಭಾರತವು ಚಂದಿರನ ದಕ್ಷಿಣ ಧ್ರುವಕ್ಕೆ ಬಾಹ್ಯಾಕಾಶ ನೌಕೆ ಕಳುಹಿಸಿದ ವಿಶ್ವದ ಮೊದಲ ರಾಷ್ಟ್ರವಾಗಿದೆ. ಬೇರೆ ಯಾವುದೇ ರಾಷ್ಟ್ರಕ್ಕೂ ಇದುವರೆಗೆ ಈ ಸಾಧನೆ ಮಾಡಲಾಗಿಲ್ಲ’ ಎಂದು ಹೇಳಿದರು.

‘ಭಾರತವು ಏಕಾಂಗಿಯಾಗಿ ಈ ಚಂದ್ರಯಾನದ ಯಶಸ್ಸು ಸಾಧಿಸಿಲ್ಲ. ಇಡೀ ವಿಶ್ವಕ್ಕೆ ಒಂದೇ ಭೂಮಿ; ಒಂದೇ ಕುಟುಂಬ; ಒಂದೇ ಭವಿಷ್ಯ ಎಂಬುದು ಭಾರತದ ತತ್ವ. ಇದು ಮಾನವ ಕೇಂದ್ರಿತ ಯೋಜನೆ. ಹಾಗಾಗಿ, ಇದರ ಸಂಪೂರ್ಣ ಯಶಸ್ಸು ಇಡೀ ಮನುಕುಲಕ್ಕೆ ಸಲ್ಲುತ್ತದೆ’ ಎಂದು ವ್ಯಾಖ್ಯಾನಿಸಿದರು.

ಭಾರತ ಈಗ ಜಿ20 ಶೃಂಗಸಭೆಯ ಆತಿಥ್ಯ ಹೊತ್ತಿದೆ. ಇದರ ಹೊಸ್ತಿನಲ್ಲಿಯೇ ಈ ಸಾಧನೆ ಮಾಡಿದೆ. ನವ ಭಾರತಕ್ಕೆ ನಾವು ಸಾಕ್ಷಿಯಾಗಿದ್ದೇವೆ. ಹೊಸ ಇತಿಹಾಸ ಸೃಷ್ಟಿಸಿದ್ದೇವೆ ಎಂದು ಅವರು, ‘ನಾನು ದೈಹಿಕವಾಗಿಯಷ್ಟೇ ಬ್ರಿಕ್ಸ್ ಸಭೆಯಲ್ಲಿ ಪಾಲ್ಗೊಂಡಿದ್ದೇನೆ. ನನ್ನ ಹೃದಯ ಮತ್ತು ಆತ್ಮ ಅಲ್ಲಿದೆ (ಭಾರತ)’ ಎಂದು ಹೇಳಿದರು.

‘ಚಂದಾಮಾಮಾನ ಪದ್ಯ ಬದಲಾಗಲಿದೆ’

‘ನಾವು ದೇಶವನ್ನು ಭಾರತ ಮಾತೆಯೆಂದೂ, ಚಂದ್ರನನ್ನು ಚಂದಾಮಾಮಾ ಎಂದೂ ಕರೆಯುತ್ತಿದ್ದೆವು. ಇನ್ನುಮೇಲೆ ಮಕ್ಕಳು ಕಲಿಯಬೇಕಾಗಿರುವ ಪದ್ಯಗಳು ಬದಲಾಗಲಿವೆ. ನಾವೆಲ್ಲ ಚಂದ್ರ ಬಹುದೂರ ಇದ್ದಾನೆ (ಚಂದಾಮಾಮಾ ಬಡೇ ದೂರ್ ಕೆ ಹೈ) ಅಂತಿದ್ವಿ. ಈಗಿನ ಮಕ್ಕಳು ಚಂದ್ರಮಾಮಾನತ್ತ ಪ್ರವಾಸಕ್ಕೆ ಹೋಗುತ್ತೇವೆ (ಚಂದಾಮಾಮಾ ಏಕ್ ಟೂರ್ ಕೆ ಹೈ) ಎಂದು ಕಲಿಯುತ್ತಾರೆ’ ಎಂದು ಹೇಳಿದರು.

ಸೌರ ಮಂಡಲದ ಸೀಮೆಗಳನ್ನು ಮೀರಿ ಅಧ್ಯಯನ ನಡೆಸಲಾಗುವುದು. ಬ್ರಹ್ಮಾಂಡದ ಎಲ್ಲ ರಹಸ್ಯಗಳನ್ನು ಭೇದಿಸಲಾಗುವುದು. ಶೀಘ್ರವೇ ಸೂರ್ಯನ ವಿಸ್ತೃತ ಅಧ್ಯಯನಕ್ಕಾಗಿ ಆದಿತ್ಯ ಎಲ್1 ಯೋಜನೆ ಹಾಗೂ ಶುಕ್ರನ ಅಧ್ಯಯನಕ್ಕೂ ಯೋಜನೆ ರೂಪಿಸಲಾಗುವುದು ಎಂದು ತಿಳಿಸಿದರು.

‘ದೇಶದ ಅಭ್ಯುದಯಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನವೇ ಬುನಾದಿ. ಇನ್ನುಮುಂದೆ ದೇಶದ ಕಥನಗಳೇ ಬದಲಾಗುತ್ತವೆ. ಮೊದಲೆಲ್ಲ ಸಂಕಲ್ಪಗಳ ಸಿದ್ಧಿಯ ಮಾರ್ಗ ತೋರುತ್ತಿದ್ದವು. ಸೋಲಿನಿಂದ ಪಾಠ ಕಲಿತು, ಗೆಲುವನ್ನು ಸಾಧಿಸಿರುವುದಕ್ಕೆ ಇದು ಉದಾಹರಣೆಯಾಗಿದೆ. ಇಸ್ರೊದ ಭವಿಷ್ಯದ ಯೋಜನೆಗಳಿಗೆ ಶುಭವಾಗಲಿದೆ’ ಎಂದರು.

ಅಧ್ಯಾತ್ಮ–ವಿಜ್ಞಾನ ಮೇಳೈಸಿದ ಪುಳಕ

ವಿಜ್ಞಾನಿಗಳ ಪರಿಶ್ರಮ– ದೇಶವಾಸಿಗಳ ಪ್ರಾರ್ಥನೆ ಫಲಿಸಿದ ಅಪೂರ್ವ ಕ್ಷಣ

ನವದೆಹಲಿ(ಪಿಟಿಐ): ದೇಶದ ವಿವಿಧೆಡೆ ಇರುವ ಸಂಸ್ಥೆಯ ಕೇಂದ್ರಗಳಲ್ಲಿ ‘ಯಂತ್ರ’ಗಳ ಮುಂದೆ ಕುಳಿತಿದ್ದ ಇಸ್ರೊ ವಿಜ್ಞಾನಿಗಳ ಕೈಬೆರಳುಗಳು ಲ್ಯಾಂಡರ್ ‘ವಿಕ್ರಮ’ನ ನಿಯಂತ್ರಣದಲ್ಲಿ ನಿರತವಾಗಿದ್ದವು... ಮತ್ತೊಂದೆಡೆ, ದೇಶದಾದ್ಯಂತ ದೇವಸ್ಥಾನಗಳು, ದರ್ಗಾಗಳು, ಗುರುದ್ವಾರಗಳಲ್ಲಿ ಭಕ್ತಿಯಿಂದ ಕೈಜೋಡಿಸಿ ನಿಂತಿದ್ದ ಜನರು ಅಂತರಿಕ್ಷ ಕಾರ್ಯಕ್ರಮ ‘ಚಂದ್ರಯಾನ-3’ರ ಯಶಸ್ಸಿಗೆ ಪ್ರಾರ್ಥಿಸುತ್ತಿದ್ದರು...

ಧಾರ್ಮಿಕ ನಂಬಿಕೆ ಮತ್ತು ವಿಜ್ಞಾನದ ಈ ಅಪೂರ್ವ ಸಮನ್ವಯ ಭಾರತದ ಶಕ್ತಿ-ಸಾಮರ್ಥ್ಯವನ್ನು ಜಗತ್ತಿಗೆ ತೋರಿಸಿದಂತಾಗಿದೆ.

ದೇಶದ ಉತ್ತರದಿಂದ ದಕ್ಷಿಣದ ವರೆಗೆ, ಪಶ್ಚಿಮದ ಗುಜರಾತ್‌ನಿಂದ ಪೂರ್ವದ ಗುವಾಹಟಿ ವರೆಗೆ ಸಂಭ್ರಮ, ಸಂತಸ ಮನೆ ಮಾಡಿತ್ತು.

‘ವಿಕ್ರಮ್’ ಲ್ಯಾಂಡರ್ ಚಂದಿನರ ದಕ್ಷಿಣ ಧ್ರುವದಲ್ಲಿ ಇಳಿದ ತಕ್ಷಣವೇ ದೇಶದೆಲ್ಲೆಡೆ ಸಂಭ್ರಮ ಮನೆ ಮಾಡಿತ್ತು. ಸಂಜೆಯಿಂದಲೇ ಟಿ.ವಿ, ಕಂಪ್ಯೂಟರ್ ಪರದೆ ಹಾಗೂ ಕೈಯಲ್ಲಿನ ಪುಟ ಮೊಬೈಲ್‌ನಲ್ಲಿ ‘ಇಸ್ರೊ’ ಸಾಧನೆಯನ್ನು ಕಣ್ತುಂಬಿಕೊಳ್ಳುತ್ತಿದ್ದ ಜನರ ಸಂತಸ ಕೂಡ ಮುಗಿಲು ಮುಟ್ಟಿತ್ತು.

ಮಕ್ಕಳಿಂದ ಹಿಡಿದು ಎಲ್ಲ ಯೋಮಾನದವರು ಭಾರತದ ಸಾಧನೆ, ಇಸ್ರೊ ವಿಜ್ಞಾನಿಗಳ ಶ್ರಮವನ್ನು ಮನಸಾರೆ ಹೊಗಳಿದರು. ತಾವು ಮಾಡಿದ ಹೋಮ-ಹವನಗಳು, ಆರತಿಗಳು, ಸಲ್ಲಿಸಿದ ನಮಾಜುಗಳು ಕೊನೆಗೂ ಫಲ ನೀಡಿದವು ಎಂಬ ಧನ್ಯತಾಭಾವವೂ ಜನರಲ್ಲಿ ಮನೆ ಮಾಡಿತ್ತು.

ಮಥುರಾದ ಗೋವರ್ಧನ ದೇಗುಲದಲ್ಲಿ ವಿಶೇಷ ಪೂಜೆ, ಮುಂಬೈನ ಮಾಹಿಮ್ ದರ್ಗಾದಲ್ಲಿ ಪ್ರಾರ್ಥಿಸಿದ ಭಕ್ತರು ಚಾದರು ಸಮರ್ಪಿಸಿದರು.

ಬಾಹ್ಯಾಕಾಶ ಕಾರ್ಯಕ್ರಮ ಯಶಸ್ವಿಯಾದ ಸಂಭ್ರಮದಲ್ಲಿದ್ದರಾಜಸ್ಥಾನದ ಸಚಿವರೊಬ್ಬರು, ‘ಚಂದ್ರಯಾನ-3ರ ಪ್ರಯಾಣಿಕರಿಗೆ ಅಭಿನಂದನೆಗಳು’ ಎಂದು ಹೇಳಿದ ಪ್ರಸಂಗವೂ ನಡೆಯಿತು.

ಸುದ್ದಿಗಾರರೊಂದಿಗೆ ಮಾತನಾಡಿದ ಕ್ರೀಡಾ ಸಚಿವ ಅಶೋಕ ಚಂದನ ಅವರು ‘ಸಾಫ್ಟ್ ಲ್ಯಾಂಡಿಂಗ್ ಮಾಡುವಲ್ಲಿ ನಾವು ಯಶಸ್ಸು ಕಂಡಿದ್ದೇವೆ. ಇದಕ್ಕಾಗಿ ನಾನು ಪ್ರಯಾಣಿಕರಿಗೆ ಅಭಿನಂದಿಸುವೆ’ ಎಂದು ಬಾಯ್ತಪ್ಪಿ ಹೇಳಿದರು.

ಎಲ್ಲ ದಿಕ್ಕುಗಳಲ್ಲಿಯೂ ಪ್ರಾರ್ಥನೆ- ಪೂಜೆ

- ದೆಹಲಿಯ ಅಲ್ ಜಮಿಯಾತ್ ಉಲ್ ಇಸ್ಲಾಮಿಯಾ ಇಸ್ಲಾಹುಲ್ ಬಾನತ್ ಮದರಸಾದಲ್ಲಿ 150 ವಿದ್ಯಾರ್ಥಿನಿಯರಿಂದ ವಿಶೇಷ ಪ್ರಾರ್ಥನೆ
- ದೆಹಲಿಯ ಸಂತನಗರದದಲ್ಲಿ ವಿಶ್ವ ಹಿಂದೂ ಪರಿಷತ್‌ನಿಂದ ಯಜ್ಞ ಆಯೋಜನೆ
- ದೆಹಲಿಯ ಬಂಗ್ಲಾ ಸಾಹಿಬ್ ಗುರುದ್ವಾರದಲ್ಲಿ ನಡೆದ ವಿಶೇಷ ಪ್ರಾರ್ಥನೆಯಲ್ಲಿ ಕೇಂದ್ರ ಸಚಿವ ಹರ್ದೀಪ್ ಸಿಂಗ್ ಪುರಿ ಪಾಲ್ಗೊಂಡಿದ್ದರು
- ವಾರಾಣಸಿಯ ನದಿ ತೀರದಲ್ಲಿ ಗಂಗಾರತಿ, ಭೈರವ ದೇವಸ್ಥಾನದಲ್ಲಿ ನವಗ್ರಹ ಪೂಜೆ ನೆರವೇರಿಸಲಾಯಿತು
- ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ಸರ್ ಸೈಯದ್ ಹೌಸ್ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸಿದರು
- ಪ್ರಯಾಗರಾಜ್‌ನ ಮಠಗಳಲ್ಲಿ, ದೇವಸ್ಥಾನಗಳಲ್ಲಿ ಹೋಮ-ಹವನ ಹಮ್ಮಿಕೊಳ್ಳಲಾಗಿತ್ತು
- ಲಖನೌದ ದಾರುಲ್ ಉಲೂಮ್ ಫರಂಗಿ ಮಹಲ್ ಈದ್ಗಾದಲ್ಲಿ ಸಾಮೂಹಿಕ ಪ್ರಾರ್ಥನೆ ನಡೆಯಿತು
- ಒಡಿಶಾದ ಪುರಿಯ ಜಗನ್ನಾಥ ದೇವಾಲಯದಲ್ಲಿ ಪೂಜೆ ನೆರವೇರಿಸಲಾಯಿತು
- ಅಮೆರಿಕದಲ್ಲಿರುವ ಭಾರತೀಯರು ಕೂಡ ‘ಚಂದ್ರಯಾನ-3’ರ ಯಶಸ್ಸಿಗೆ ಪ್ರಾರ್ಥನೆ-ಪೂಜೆ ಸಲ್ಲಿಸಿದ್ದಾರೆ.
- ಭಾರತೀಯ ಸಂಘಗಳ ಒಕ್ಕೂಟದ (ಎಫ್‌ಐಎ) ಅಧ್ಯಕ್ಷ ಅಲೋಕ್ ಕುಮಾರ್ ಅವರು ನ್ಯೂಜೆರ್ಸಿಯಲ್ಲಿರುವ ಓಂ ಶ್ರೀ ಸಾಯಿ ಬಾಲಾಜಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ್ದರು.

ಆ 18 ನಿಮಿಷಗಳು...

ಒಂದನೇ ಪುಟದಿಂದ...

- **ಸಂಜೆ 5.55:** ಲ್ಯಾಂಡರ್‌ನ ನಾಲ್ಕೂ ಎಂಜಿನ್‌ಗಳು ಉರಿಯಲಾರಂಭಿಸಿದವು. ಆ ವೇಳೆಗಾಗಲೇ ತನ್ನ ನಿಗದಿತ ಗುರಿಯ ಶೇ 60 ರಷ್ಟು ಪ್ರಯಾಣ ಮುಗಿಸಿತ್ತು. ಇನ್ನು 10 ಕಿ.ಮೀ ಮಾತ್ರ ಬಾಕಿ ಉಳಿದಿತ್ತು. ಫೈನ್ ಬ್ರೇಕಿಂಗ್ ಹಂತವನ್ನು ತಲುಪಿತು. ಈಗ ಲ್ಯಾಂಡರ್ ಒಳಗಿನ ಸೆನ್ಸರ್‌ಗಳು ಕಾರ್ಯ ಆರಂಭಿಸಿದವು. ಎತ್ತರವನ್ನು 5.2 ಕಿ.ಮೀಗೆ ಇಳಿಸಲಾಯಿತು.
- **ಸಂಜೆ 5.58:** **ಫೈನ್ ಬ್ರೇಕಿಂಗ್ ಹಂತ** ಈ ಹಂತದಲ್ಲಿ ಲ್ಯಾಂಡರ್‌ನ ಪಾರ್ಶ್ವವನ್ನು ಇಳಿಕೆಗೆ ಅನುಗುಣವಾಗಿ ಬದಲಿಸಲಾಯಿತು.
- **ಸಂಜೆ 6.00:** ಲಂಬವಾಗಿ ಇಳಿಯಲು ಸಿದ್ಧತೆ. ಈ ವೇಳೆಗೆ ಚಂದ್ರನ ನೆಲದಿಂದ 800 ಮೀಟರ್‌ಗಳು ಮಾತ್ರ ಉಳಿದಿತ್ತು.
- **ಸಂಜೆ 6.01:** ನೆಲದಿಂದ ಸುಮಾರು 200 ಮೀಟರ್ ಬಾಕಿ ಇತ್ತು. ಹೆಲಿ ಕಾಪ್ಟರ್ ಮಾದರಿಯಲ್ಲಿ ಹಾರಲಾರಂಬಿಸಿ, ಇಳಿಯಲು ಸಿದ್ಧತೆ ನಡೆಸಿಕೊಂಡಿತು. ಬಳಿಕ 150 ಮೀಟರ್‌ಗೆ ಇಳಿಯಿತು. ಈ ಹಂತದಲ್ಲಿ ಲ್ಯಾಂಡಿಂಗ್ ಪ್ರದೇಶದ ಸ್ಥಿತಿಗತಿಯನ್ನು ಸೆನ್ಸರ್ ಮೂಲಕ ತಾಜಾ ಮಾಹಿತಿ ಪಡೆದುಕೊಂಡಿತು. ಚಿತ್ರಗಳನ್ನೂ ಕ್ಲಿಕ್ಕಿಸಿಕೊಳ್ಳುತ್ತಿತ್ತು. ಎರಡು ಎಂಜಿನ್‌ಗಳನ್ನು ಉರಿಸಲಾರಂಭಿಸಿತು.
- **ಸಂಜೆ 6.03:** ಹೆಲಿಕಾಪ್ಟರ್‌ನಂತೆ ಹಾರುತ್ತಲೇ 50 ಮೀಟರ್‌ಗೆ ತಲುಪಿತು
- **ಸಂಜೆ 6.04 :** ನಿಗದಿಯಾದ ಸಮಯಕ್ಕೆ ನೆಲವನ್ನು ಸ್ಪರ್ಶ ಮಾಡಿತು.

ಇಸ್ರೊ ವಿಜ್ಞಾನಿಗಳ ದಶಕಗಳ ಕಾಲದ ಪರಿಶ್ರಮದ ಫಲವಾಗಿ ಸಾಫ್ಟ್‌ಲ್ಯಾಂಡಿಂಗ್ ಸಾಧ್ಯವಾಗಿದೆ. ಇಸ್ರೊ ತಂಡಕ್ಕೆ ಅಭಿನಂದನೆಗಳು
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಈ ಸಾಧನೆಗಾಗಿ ಇಸ್ರೊ ವಿಜ್ಞಾನಿಗಳು, ಬೆಂಬಲವಾಗಿ ನಿಂತ ಸರ್ಕಾರ ಹಾಗೂ ಪ್ರೋತ್ಸಾಹಿಸಿದ ಎಲ್ಲರಿಗೂ ಅಭಿನಂದನೆ ಸಲ್ಲಿಸುವೆ
ಮೋಹನ್ ಭಾಗವತ್, ಆರ್‌ಎಸ್‌ಎಸ್ ಮುಖ್ಯಸ್ಥ

ಭಾರತ: ಚಂದಿರನ ದಕ್ಷಿಣಾಪಥೇಶ್ವರ

ಒಂದನೇ ಪುಟದಿಂದ...

2019 ರಲ್ಲಿ ಚಂದ್ರಯಾನ -2 ಭಾಗಶಃ ಯಶಸ್ವಿಯಾಗಿತ್ತು. ಕೊನೆಯ ಚರಣದಲ್ಲಿ ಲ್ಯಾಂಡರ್ ನೆಲಕ್ಕೆ ಅಪ್ಪಳಿಸಿತ್ತು. ಇದರಿಂದ ಇಡೀ ದೇಶವೇ ದುಃಖತಪ್ತವಾಗಿತ್ತು. ಸಾಕಷ್ಟು ಟೀಕೆಗಳೂ ಬಂದಿದ್ದವು. ಆದರೆ, ಅದರಿಂದ ಧೃತಿಗಡೆದ ಇಸ್ರೊ ವಿಜ್ಞಾನಿಗಳು ಮತ್ತು ತಂತ್ರಜ್ಞರು ಎಡೆಬಿಡದೇ ನಾಲ್ಕು ವರ್ಷಗಳಿಂದ ಬೆವರು ಹರಿಸಿ, ಚಂದ್ರಯಾನ- 3ಕ್ಕೆ ಸಿದ್ಧತೆ ಮಾಡಿಕೊಂಡರು. ಅಂದು ಸಂಭವಿಸಿದ ಸೋಲನ್ನೇ ಮೆಟ್ಟಿಲುಗಳನ್ನಾಗಿ ಮಾಡಿಕೊಂಡು, ವೈಫಲ್ಯದ ಅಂಶಗಳನ್ನು ವಿಶ್ಲೇಷಿಸಿ ಅದಕ್ಕೆ ತಕ್ಕಂತೆ ಯೋಜನೆಯನ್ನು ರೂಪಿಸಿ ಯಶಸ್ಸಿನ ಶಿಖರವನ್ನೇರಿದರು.

ಈ ಬಾರಿ ಸುರಕ್ಷಿತ ಲ್ಯಾಂಡಿಂಗ್‌ಗೆ ಅಗತ್ಯ ಕ್ರಮಗಳನ್ನು ಎಚ್ಚರಿಕೆಯಿಂದಲೇ ರೂಪಿಸಲಾಗಿತ್ತು. ಆಧುನಿಕ ತಂತ್ರಜ್ಞಾನವುಳ್ಳ ರೊಬಾಟ್ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಬಳಕೆ ಮಾಡಿದ್ದರಿಂದ, ಲೆಕ್ಕ ತಪ್ಪುವ ಸಾಧ್ಯತೆ ತೀರಾ ಕಡಿಮೆ ಇತ್ತು. ಇಡೀ ವ್ಯವಸ್ಥೆಯೇ ತನ್ನ ತಪ್ಪುಗಳನ್ನು ಪದೇ ಪದೇ ಪರೀಕ್ಷಿಸಿಕೊಂಡು ಸರಿಪಡಿಸಿಕೊಳ್ಳುವ ಮೂಲಕ ಮುಂದಿನ ನಡೆಯನ್ನು ತೀರ್ಮಾನಿಸುವಂತೆ ರೂಪಿಸಲಾಗಿತ್ತು.

ಲ್ಯಾಂಡಿಂಗ್ ಪ್ರಕ್ರಿಯೆಯನ್ನೂ ಕಳೆದ ಬಾರಿಗಿಂತ ಭಿನ್ನವಾಗಿತ್ತು. ಚಂದ್ರಯಾನ-2ಕ್ಕೆ ಅಳವಡಿಸಿದ್ದ ಸೌರಫಲಕಗಳಿಗಿಂತ ದೊಡ್ಡದಾದ ಮತ್ತು ಹೆಚ್ಚು ಸಂಖ್ಯೆಯಲ್ಲಿ ಅಳವಡಿಸಲಾಗಿತ್ತು. ಇವುಗಳ ಸಾಮರ್ಥ್ಯವೂ ಅಧಿಕ. ಇದರಿಂದ ಲ್ಯಾಂಡರ್ ಇಳಿಯುವುದಕ್ಕೆ ಹೆಚ್ಚು ವಿದ್ಯುತ್ ಪೂರೈಕೆ ಆಗಿತ್ತು. ಲ್ಯಾಂಡರ್‌ನ ಕಾಲುಗಳೂ ಎಂಥದ್ದೇ ಸಂದರ್ಭದಲ್ಲಿ ದೃಢವಾಗಿ ಊರುವಂತೆ ಬಲಶಾಲಿಯಾಗಿ ರೂಪಿಸಲಾಗಿತ್ತು. ಈ ನಾಲ್ಕೂ ಕಾಲುಗಳಿಗೆ ಎಂಜಿನ್ ಅಳವಡಿಸಲಾಗಿತ್ತು. ಲ್ಯಾಂಡರ್ ಇಳಿಕೆಗೆ ಎರಡು ಪ್ರತ್ಯೇಕ ಎಂಜಿನ್ ಅಳವಡಿಸಲಾಗಿತ್ತು. ಹಿಂದಿನ ಬಾರಿ ಒಂದೇ ಎಂಜಿನ್ ಇತ್ತು. ಅಲ್ಲದೇ, ಈ ಬಾರಿ ರೋವರ್‌ಗೂ ಅಧಿಕ ಸಾಮರ್ಥ್ಯದ ಸೌರಫಲಕಗಳನ್ನು ಅಳವಡಿಸಲಾಗಿತ್ತು.

ಚಂದ್ರನ ಅಸಹಜ ಗುರುತ್ವ ಬಲವನ್ನು ಲೆಕ್ಕ ಹಾಕಿ ವೇಗವನ್ನು ಸಮನ್ವಯಗೊಳಿಸಿಕೊಂಡು ಸಮತೋಲನ ತಪ್ಪದಂತೆ ಇಳಿಸಲು ಅನುಕೂಲವಾಗಲು ನಾಲ್ಕು (ರಾಕೆಟ್) ಎಂಜಿನ್‌ಗಳನ್ನು ಲ್ಯಾಂಡರ್‌ನ ಕಾಲುಗಳಿಗೆ ಅಳವಡಿಸಲಾಗಿತ್ತು. ಅಲ್ಲದೇ, ಈ ಬಾರಿ ಲ್ಯಾಂಡಿಂಗ್ ಪ್ರದೇಶದ ವಿಸ್ತೀರ್ಣವೂ (4x 2.4 ಕಿ.ಮೀ) ವಿಶಾಲಗೊಳಿಸಲಾಗಿತ್ತು. ಇಳಿಯುವ ಪ್ರದೇಶದಲ್ಲಿ ಬಂಡೆ, ಕುಳಿಗಳು ಇದ್ದರೂ, ಆದಷ್ಟು ಸಮತಟ್ಟು ಪ್ರದೇಶದಲ್ಲೇ ಇಳಿಯುವಂತೆ ರೂಪಿಸಲಾಗಿತ್ತು.

ಅಂದ ಹಾಗೆ ಚಂದ್ರನಲ್ಲಿ ಚಂದ್ರನಲ್ಲಿ ಭೂಮಿಯ ರೀತಿ ವಾತಾವರಣವೇ ಇಲ್ಲ ಎನ್ನಬಹುದು. ಇಲ್ಲಿ ಹಗಲು ಮತ್ತು ರಾತ್ರಿ ನಡುವಿನ ಉಷ್ಣತೆಯಲ್ಲಿ ಭಾರೀ ವ್ಯತ್ಯಾಸವಿದೆ. ಹಗಲಿನಲ್ಲಿ ಸೂರ್ಯ ಕಿರಣಗಳು ನೇರವಾಗಿ ಚಂದ್ರನ ಮೇಲ್ಮೈ ಮೇಲೆ ಬೀಳುವುದರಿಂದ ಉಷ್ಣತೆ 107 ಡಿಗ್ರಿ ಸೆಲ್ಸಿಯಸ್‌ಗೆ ಏರುತ್ತದೆ. ಸುಡು ಬಿಸಿಲು ಇರುತ್ತದೆ. ರಾತ್ರಿ ವೇಳೆ ಉಷ್ಣತೆ ಸುಮಾರು ಮೈನಸ್ 153 ಡಿಗ್ರಿ ಸೆಲ್ಸಿಯಸ್‌ಗೆ ಇಳಿಯುತ್ತದೆ. ಇದಕ್ಕೆ ಪೂರಕವಾಗಿ ವೈಜ್ಞಾನಿಕ ಸಾಧನವನ್ನು ಅಭಿವೃದ್ಧಿಪಡಿಸಿ, ಅಂಗಳಕ್ಕೆ ಇಳಿಸುವಲ್ಲಿ ಯಶಸ್ವಿಯಾಗಿರುವುದು, ಭಾರತದ ಬಾಹ್ಯಾಕಾಶ ವಿಜ್ಞಾನ-ತಂತ್ರಜ್ಞಾನದ ಕ್ಷೇತ್ರದ ವಿಕ್ರಮ ಎಂದೇ ಇಡೀ ಜಗತ್ತು ಬಣ್ಣಿಸಿದೆ.

ವಿಕ್ರಮ್ ಲ್ಯಾಂಡರ್ ಅನ್ನು ಚಂದ್ರನ ಮೇಲೆ ಯಶಸ್ವಿಯಾಗಿ ಇಳಿಸುವ ಮೂಲಕ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ವಿಜ್ಞಾನಿಗಳು ಭಾರತೀಯರ ಕನಸನ್ನು ನನಸು ಮಾಡಿದ್ದಾರೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

‘ಚಂದ್ರಯಾನ-3’ ಕಾರ್ಯಕ್ರಮದ ಲ್ಯಾಂಡರ್‌ಅನ್ನು ಯಶಸ್ವಿಯಾಗಿ ಚಂದ್ರನ ಅಂಗಳದಲ್ಲಿ ಇಳಿಸಿರುವುದು ಐತಿಹಾಸಿಕ ಕ್ಷಣ. ಇಸ್ರೊ ವಿಜ್ಞಾನಿಗಳಿಗೆ ಹೃತ್ಪೂರ್ವಕ ಅಭಿನಂದನೆಗಳು
ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ

ವಿಶ್ವಕಪ್ ಚೆಸ್ ಫೈನಲ್: 2ನೇ ಪಂದ್ಯ ಬೇಗನೇ ಡ್ರಾ ಮಾಡಿಕೊಂಡ ಪ್ರಜ್ಞಾನಂದ– ಕಾರ್ಲ್‌ಸನ್

ಚಾಂಪಿಯನ್ ನಿರ್ಧಾರಕ್ಕೆ ಟೈಬ್ರೇಕ್

• ಮನಿಷಾ ಮೋಹಿತೆ

ಕ್ಲಾಸಿಕಲ್ ಮಾದರಿಯ ಚೆಸ್‌ನಲ್ಲಿ ಬಿಳಿ ಕಾಯಿಗಳಲ್ಲಿ ಆಡುವಾಗ ಮ್ಯಾಗ್ನಸ್ ಕಾರ್ಲ್‌ಸನ್ ಅತ್ಯಂತ ಬಲಶಾಲಿ ಆಟಗಾರ. ಅಜರ್‌ಬೈಜಾನ್‌ನ ಬಾಕು ನಗರದಲ್ಲಿ ಬುಧವಾರ ಫಿಡೆ ವಿಶ್ವಕಪ್ ಚೆಸ್ ಟೂರ್ನಿ ಫೈನಲ್‌ನ ಎರಡನೇ ಪಂದ್ಯದಲ್ಲಿ ನಾರ್ವೆಯ ಈ ಆಟಗಾರನ ಎದುರು 'ಡ್ರಾ' ಸಾಧಿಸಿದಾಗ ಪ್ರಜ್ಞಾನಂದ ಸಂತೃಪ್ತರಾದಂತೆ ಕಂಡುಬಂದರು. ಎರಡು ಪಂದ್ಯಗಳ ನಂತರ ಸ್ಕೋರ್ 1-1 ಆಗಿದ್ದು, ವಿಜೇತ ಆಟಗಾರನನ್ನು ನಿರ್ಧರಿಸಲು ಗುರುವಾರ ಟೈಬ್ರೇಕ್ (ಅಲ್ಪಾವಧಿಯ) ಪಂದ್ಯಗಳು ನಡೆಯಲಿವೆ.

ಬುಧವಾರದ ಎರಡನೇ ಪಂದ್ಯ ಬರೇ 30 ನಡೆಗಳ ನಂತರ ಮುಗಿಯಿತು. ಹಾಲಿ ಟೂರ್ನಿಯಲ್ಲಿ ಕಾರ್ಲ್‌ಸನ್ ಆಗಲಿ, 'ಪ್ರಗ್ಗು' ಆಗಲಿ ಇಷ್ಟು ಬೇಗನೇ 'ಡ್ರಾ'ಕ್ಕೆ ಸಹಿಹಾಕಿರಲಿಲ್ಲ.

ಎರಡು ದಿನ ಹಿಂದೆ ತಮಗೆ ಹೊಟ್ಟೆ ಕೆಟ್ಟಿದ್ದು ಎಂದು ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲ್‌ಸನ್ ಮಂಗಳವಾರ ನಡೆದ ಪಂದ್ಯದ ನಂತರ ಹೇಳಿದ್ದರು. ಸುಸ್ತಿನಿಂದ ಚೇತರಿಸಿಕೊಳ್ಳಲು ಸ್ವಲ್ಪ ಹೆಚ್ಚು ಸಮಯ ಸಿಗುವ ಕಾರಣ ಬೇಗನೇ 'ಡ್ರಾ'ಕ್ಕೆ ಒಪ್ಪಿಕೊಂಡಿದ್ದಾಗಿ ತಿಳಿಸಿದ್ದರು. 32 ವರ್ಷದ ಕಾರ್ಲ್‌ಸನ್ ಮತ್ತು 18 ವರ್ಷದ ಗ್ರ್ಯಾಂಡ್‌ಮಾಸ್ಟ-ರ್ ಪ್ರಜ್ಞಾನಂದ ಇದುವರೆಗೆ ಮೂರು ದೀರ್ಘ ಅವಧಿಯ ಪಂದ್ಯಗಳನ್ನು ಆಡಿದ್ದು ಮೂರೂ 'ಡ್ರಾ' ಆಗಿವೆ.

ಪ್ರಗ್ಗು ಕೂಡ ಒಂದಿಷ್ಟು ಬಳಲಿದಂತೆ ಕಂಡುಬಂದರು. ಪಂದ್ಯದ ನಂತರ ಮಾತನಾಡಿದ ಅವರು 'ಹೊಸ ಉಲ್ಲಾಸದಿಂದ ಗುರುವಾರ ಬರುತ್ತೇನೆ. ಇವತ್ತು ವಿಶ್ರಾಂತಿ ಪಡೆಯುತ್ತೇನೆ. ಇಲ್ಲಿ ಸಾಕಷ್ಟು ಟೈಬ್ರೇಕ್ ಪಂದ್ಯಗಳನ್ನಾಡಿದ್ದೇನೆ' ಎಂದು ತಿಳಿಸಿದರು.

'ಆಟವು ನಾಲ್ಕು 'ನೈಟ್' (ಕುದುರೆ)ಗಳ ಓಪನಿಂಗ್ ಕಂಡಿದ್ದು, 10ನೇ ನಡೆಯಲ್ಲಿ ಇಬ್ಬರೂ 'ಕ್ವೀನ್' ಕಳೆದುಕೊಂಡಾಗಲೇ ಮುಂದಿನ ದಾರಿ ಸ್ಪಷ್ಟವಾಗಿತ್ತು. (ಈ ಓಪನಿಂಗ್‌ನಲ್ಲಿ ಬಿಳಿ ಕಾಯಿಗಳಲ್ಲಿ ಆಡುವ ಆಟಗಾರ ಸಾಮಾನ್ಯವಾಗಿ ರಿಸ್ಕ್ ತೆಗೆದುಕೊಳ್ಳಲು ಹೋಗುವುದಿಲ್ಲ. ಎದುರಾಳಿ ಆಟಗಾರನಿಗೂ ರಕ್ಷಣೆಗೆ ಸಾಕಷ್ಟು ಅವಕಾಶವಿರುತ್ತದೆ). ನೋಡುಗರಿಗೂ ಎರಡನೇ ಪಂದ್ಯ ಬೋರು ಹೊಡೆಸುವ ರೀತಿಯಲ್ಲಿತ್ತು. ಮತ್ತೆ ಕೆಲವು ಎಕ್ಸ್‌ಚೇಂಜ್‌ಗಳ ನಂತರ (ಇಬ್ಬರೂ ಸಮಾನ ಪಡೆಗಳನ್ನು ಕಳೆದುಕೊಳ್ಳುವುದು) ಅಂತಿಮವಾಗಿ ಇಬ್ಬರ ಬಳಿಯೂ ಒಂದು ಬಿಷಪ್ ಮತ್ತು ಆರು ಪಾನ್ಸ್ (ಕಾಲಾಳುಗಳು) ಇದ್ದವು.

ಬಾಕು: ಕಾರ್ಲ್‌ಸನ್ ಮತ್ತು ಪ್ರಜ್ಞಾನಂದ ನಡುವಿನ ವಿಶ್ವಕಪ್ ಫೈನಲ್‌ನ ಎರಡನೇ ಪಂದ್ಯಕ್ಕೆ ಅಜರ್‌ಬೈಜಾನ್‌ನ ಮೊದಲ ಮಹಿಳಾ ಗ್ರ್ಯಾಂಡ್‌ಮಾಸ್ಟರ್ ಅಯ್ಗ್ಯುನ್ ಸೊಫಿಯೆವಾ ಅವರು ಬುಧವಾರ 'ಸಾಂಪ್ರದಾಯಿಕ ರೀತಿ'ಯಲ್ಲಿ ಚಾಲನೆ ನೀಡಿದರು –ಪಿಟಿಐ ಚಿತ್ರ

ಮೂರೂ ಮಾದರಿಯ ಆಟಗಳಲ್ಲಿ (ಕ್ಲಾಸಿಕಲ್, ರ್‍ಯಾಪಿಡ್, ಬ್ಲಿಟ್ಸ್) ಕಾರ್ಲ್‌ಸನ್ ವಿಶ್ವ ಚಾಂಪಿಯನ್ ಆಗಿರುವ ಆಟಗಾರನೇ. ಆದರೆ ಕಳೆದ ಒಂದೂವರೆ ವರ್ಷಗಳ ಅವಧಿಯಲ್ಲಿ ಅವರ ಆಟದಲ್ಲೂ ಲೋಪಗಳನ್ನು ಪ್ರಜ್ಞಾನಂದ ಕಂಡುಕೊಂಡಿದ್ದಾರೆ. ನಾರ್ವೆಯ ಆಟಗಾರನ ವಿರುದ್ಧ ಅಲ್ಪಾವಧಿಯ ಆಟಗಳಲ್ಲಿ ಐದು ಬಾರಿ ಚೆನ್ನೈನ ಚತುರ ಜಯಗಳಿದ್ದಾರೆ.

ಕಳೆದ ಐದು ದಿನಗಳಿಂದ ಸತತವಾಗಿ ಆಡುತ್ತಿರುವ ಪ್ರಜ್ಞಾನಂದ ಅವರಿಗೂ ವಿಶ್ರಾಂತಿ ಬೇಕಿದ್ದು, ಅವರೂ ಬುಧವಾರ ಕ್ಷಿಪ್ರ 'ಡ್ರಾ'ಕ್ಕೆ ತಲೆಯಾಡಿಸಿದ್ದು ಇದನ್ನು ಸೂಚಿಸುವಂತಿತ್ತು.

ಫೈನಲ್ ತಲುಪುವ ಹಾದಿಯಲ್ಲಿ ಅವರು ಜಗತ್ತಿನ ಎರಡನೇ ಕ್ರಮಾಂಕದ ಹಿಕಾರು ನಕಾಮುರಾ ಮತ್ತು ಮೂರನೇ ಕ್ರಮಾಂಕದ ಫ್ಯಾಬಿಯಾನೊ ಕರುವಾನ ಅವರನ್ನು ಸೋಲಿಸಿದ್ದಾರೆ. ಕ್ಯಾಂಡಿಡೇಟ್ಸ್ ಟೂರ್ನಿಗೂ ಅರ್ಹತೆ ಗಿಟ್ಟಿಸಿದ್ದಾರೆ. ವಿಶ್ವನಾಥನ್ ಆನಂದ್ ನಂತರ ಈ ಸಾಧನೆ ಮಾಡಿದ ಭಾರತದ ಎರಡನೇ ಆಟಗಾರನೀತ.

ವಿಶ್ವನಾಥನ್ ಆನಂದ್ ಚೀನಾದಲ್ಲಿ 2000ನೇ ವರ್ಷದಲ್ಲಿ ನಡೆದ ಮೊಟ್ಟಮೊದಲ ವಿಶ್ವಕಪ್‌ನ-ಲ್ಲಿ ಜಯಗಳಿಸಿದ್ದರು. 2002ರಲ್ಲಿ ಈ ಟೂರ್ನಿ ತವರಿನಲ್ಲಿ ನಡೆದಾಗಲೂ ಆನಂದ್ ಪ್ರಶಸ್ತಿ ಜಯಿಸಿದ್ದರು. 2005ರಲ್ಲಿ ವಿಶ್ವಕಪ್‌ಗೆ ಫಿಡೆ ಹೊಸ ಸ್ವರೂಪದಲ್ಲಿ ಮರುಚಾಲನೆ ನೀಡಿತು. ಗುರುವಾರ ಎಲ್ಲರ ಕಣ್ಣು ಯುವ ಆಟಗಾರ ಪ್ರಜ್ಞಾನಂದ ಮೇಲೆ ಇರಲಿದೆ. ಅವರು ಇತಿಹಾಸ ನಿರ್ಮಿಸುವ ಹಾದಿಯಲ್ಲಿದ್ದಾರೆ.

ಮೈಸೂರು ವಾರಿಯರ್ಸ್‌ಗೆ ಜಯ

ಮಹಾರಾಜ ಟ್ರೋಫಿ: ಮೋನಿಷ್, ಲಂಕೇಶ್ ಅಮೋಘ ಆಟ

ಪ್ರಜಾವಾಣಿ ವಾರ್ತೆ

ಅರ್ಧಶತಕದ ಸಂಭ್ರಮದಲ್ಲಿ ಲೋಕೇಶ್

ಬೆಂಗಳೂರು: ಮೊನೀಷ್ ರೆಡ್ಡಿ ಅವರ ಉತ್ತಮ ಬೌಲಿಂಗ್ ಮತ್ತು ಕೆ.ಎಸ್. ಲಂಕೇಶ್ ಅಜೇಯ ಅರ್ಧಶತಕದ ಬಲದಿಂದ ಮೈಸೂರು ವಾರಿಯರ್ಸ್ ತಂಡವು ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಮೈಸೂರು ತಂಡವು 7 ವಿಕೆಟ್‌ಗಳಿಂದ ಮಂಗಳೂರು ಡ್ರ್ಯಾಗನ್ಸ್ ವಿರುದ್ಧ ಜಯಿಸಿತು.

ಟಾಸ್ ಗೆದ್ದ ಮೈಸೂರು ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ರೋಹನ್ ಪಾಟೀಲ (52; 42ಎ, 4X2, 6X3) ಅರ್ಧಶತಕದ ನೆರವಿನಿಂದ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 140 ರನ್ ಗಳಿಸಿತು. ಮೈಸೂರು ತಂಡದ ಮೋನಿಷ್ ರೆಡ್ಡಿ ಮೂರು ವಿಕೆಟ್ ಗಳಿಸಿ ಮಂಗಳೂರು ತಂಡವು ದೊಡ್ಡ ಮೊತ್ತ ಗಳಿಸದಂತೆ ತಡೆದರು.

ಸಾಧಾರಣ ಗುರಿ ಬೆನ್ನಟ್ಟಿದ ಮೈಸೂರು ತಂಡವು ಆರಂಭದಲ್ಲಿ ಎಡವಿತು. ಆರಂಭಿಕ ಜೋಡಿ ಆರ್. ಸಮರ್ಥ್ (6 ರನ್) ಮತ್ತು ಭರತ್ ದೂರಿ (10 ರನ್) ಬೇಗನೇ ಔಟಾದರು. ಈ ಹಂತದಲ್ಲಿ ನಾಯಕ ಕರುಣ್ ನಾಯರ್ (43; 25ಎ) ಮತ್ತು ಲೋಕೇಶ್ (ಅಜೇಯ 68; 45ಎ) ತಂಡದ ಗೆಲುವಿಗೆ ಬಲ ತುಂಬಿದರು. ಲೋಕೇಶ್ ಆರು ಸಿಕ್ಸರ್ ಮತ್ತು ನಾಲ್ಕು ಬೌಂಡರಿ ಬಾರಿಸಿದರು.

ತಂಡವು 16.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 141 ರನ್ ಗಳಿಸಿ ಜಯಿಸಿತು.

ಪಾಯಿಂಟ್ ಪಟ್ಟಿಯಲ್ಲಿ ಮೈಸೂರು ತಂಡವು ಹತ್ತು ಅಂಕಗಳೊಂದಿಗೆ ಎರಡನೇ ಸ್ಥಾನಕ್ಕೇರಿತು. ಹುಬ್ಬಳ್ಳಿ ಟೈಗರ್ಸ್ 12 ಅಂಕಗಳೊಂದಿಗೆ ಮೊದಲ ಸ್ಥಾನದಲ್ಲಿದೆ.

ಸಂಕ್ಷಿಪ್ತ ಸ್ಕೋರು: ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 164 (ಕೃಷ್ಣನ್ ಶ್ರೀಜಿತ್ 65, ಮನೀಷ್ ಪಾಂಡೆ ಔಟಾಗದೆ 48, ನರೋನಾ 15ಕ್ಕೆ2) **ಗುಲ್ಬರ್ಗ ಮಿಸ್ಟಿಕ್ಸ್:** 18.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 166 (ಮೆಕ್‌ನಿಲ್ ಹ್ಯಾಡ್ಲಿ ನರೋನಾ ಔಟಾಗದೆ 65, ಆರ್. ಸ್ಮರಣ್ 56, ವಿದ್ವತ್ ಕಾವೇರಪ್ಪ 32ಕ್ಕೆ1) **ಫಲಿತಾಂಶ:** ಗುಲ್ಬರ್ಗ ಮಿಸ್ಟಿಕ್ಸ್‌ಗೆ 7 ವಿಕೆಟ್‌ಗಳ ಜಯ.

ಮಂಗಳೂರು ಡ್ರ್ಯಾಗನ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 140 (ರೋಹನ್ ಪಾಟೀಲ 52, ಕೆ. ಗೌತಮ್ 15, ಮೊನಿಷ್ ರೆಡ್ಡಿ 42ಕ್ಕೆ3, ಜೆ. ಸುಚಿತ್ 24ಕ್ಕೆ2) **ಮೈಸೂರು ವಾರಿಯರ್ಸ್:** 16.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 141 (ಕರುಣ್ ನಾಯರ್ 43, ಕೆ.ಎಸ್. ಲಂಕೇಶ್ ಔಟಾಗದೆ 68, ಪಾರಸ್ ಗುರುಬಕ್ಷ್ ಆರ್ಯ 35ಕ್ಕೆ1) **ಫಲಿತಾಂಶ:** ಮೈಸೂರು ವಾರಿಯರ್ಸ್ ತಂಡಕ್ಕೆ 7 ವಿಕೆಟ್‌ಗಳ ಜಯ.

ಇಂದಿನ ಪಂದ್ಯಗಳು

ಶಿವಮೊಗ್ಗ ಲಯನ್ಸ್–ಮಂಗಳೂರು ಡ್ರ್ಯಾಗನ್ಸ್ (ಮಧ್ಯಾಹ್ನ 1)
ಬೆಂಗಳೂರು ಬ್ಲಾಸ್ಟರ್ಸ್–ಗುಲ್ಬರ್ಗ ಮಿಸ್ಟಿಕ್ಸ್ (ಸಂಜೆ 5.30)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಕನ್ನಡ, ಫ್ಯಾನ್‌ಕೋಡ್

ನರೋನಾ, ಸ್ಮರಣ್ ಜೊತೆಯಾಟಕ್ಕೆ ಜಯ

ಮೆಕ್‌ನಿಲ್ ಹ್ಯಾಡ್ಲಿ ನರೋನಾ (ಔಟಾಗದೆ 65; 50ಎ) ಮತ್ತು ಆರ್. ಸ್ಮರಣ್ (56; 38ಎ) ಅವರ ಶತಕದ ಜೊತೆಯಾಟದಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡವು 7 ವಿಕೆಟ್‌ಗಳಿಂದ ಹುಬ್ಬಳ್ಳಿ ಟೈಗರ್ಸ್ ಎದುರು ಜಯಿಸಿತು.

ಟಾಸ್ ಗೆದ್ದ ಗುಲ್ಬರ್ಗ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಹುಬ್ಬಳ್ಳಿ ತಂಡವು ಕೃಷ್ಣನ್ ಶ್ರೀಜಿತ್ (65; 38ಎ) ಮತ್ತು ನಾಯಕ ಮನೀಷ್ ಪಾಂಡೆ (ಔಟಾಗದೆ 48; 32ಎ) ಅವರಿಬ್ಬರ ಚೆಂದದ ಬ್ಯಾಟಿಂಗ್ ನೆರವಿನಿಂದ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 164 ರನ್ ಗಳಿಸಿತು.

ಇದಕ್ಕುತ್ತರವಾಗಿ ಗುಲ್ಬರ್ಗ ತಂಡವು 18.4 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 165 ರನ್ ಗಳಿಸಿತು. ಮೆಕ್‌ನಿಲ್ ಮತ್ತು ಸ್ಮರಣ್ ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 110 ರನ್ ಸೇರಿಸಿದರು.

ಭಾರತ–ಐರ್ಲೆಂಡ್ ಟಿ20 ಪಂದ್ಯಕ್ಕೆ ಮಳೆ ಅಡ್ಡಿ

ಚಂದ್ರಯಾನ ಕಣ್ತುಂಬಿಕೊಂಡ ಕ್ರಿಕೆಟಿಗರು

ನವದೆಹಲಿ (ಪಿಟಿಐ): ಡಬ್ಲಿನ್ ಅಂಗಳದಲ್ಲಿ ಐರ್ಲೆಂಡ್ ಎದುರಿನ ಟಿ20 ಕ್ರಿಕೆಟ್ ಸರಣಿಯಲ್ಲಿ ಕ್ಲೀನ್‌ಸ್ವೀಪ್ ಗೆಲುವು ದಾಖಲಿಸುವ ಭಾರತದ ಆಸೆಗೆ ಮಳೆ ಅಡ್ಡಿಯಾಯಿತು.

ಆದರೆ ಭಾರತದ ಚಂದ್ರಯಾನದ ಐತಿಹಾಸಿಕ ಸಾಧನೆಯನ್ನು ಕಣ್ತುಂಬಿಕೊಂಡ ಜಸ್‌ಪ್ರೀತ್ ಬೂಮ್ರಾ ಬಳಗ ಸಂಭ್ರಮಿಸಿತು.

'ಚಾರಿತ್ರಿಕ ಕ್ಷಣಕ್ಕೆ ಡಬ್ಲಿನ್‌ನಿಂದ ಸಾಕ್ಷಿಯಾಗುತ್ತಿದ್ದೇವೆ. ಚಂದ್ರನ ದಕ್ಷಿಣ ಧ್ರುವಕ್ಕೆ ಭಾರತದ ವಿಕ್ರಂ ಲ್ಯಾಂಡರ್ ಯಶಸ್ವಿಯಾಗಿ ಇಳಿಯಿತು' ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು 'ಎಕ್ಸ್' ಖಾತೆಯಲ್ಲಿ ಸಂದೇಶ ಹಾಕಿತು.

ಬೂಮ್ರಾ ಬಳಗವು ಟೆಲಿವಿಷನ್ ಮುಂದೆ ನಿಂತು ಚಂದ್ರಯಾನದ ನೇರ-ಪ್ರಸಾರವನ್ನು ವೀಕ್ಷಿಸಿತು. ಐತಿಹಾಸಿಕ ಸಾಧನೆ ದಾಖಲಾದ ಕೂಡಲೇ ಪರಸ್ಪರ ಆಲಂಗಿಸಿಕೊಂಡ ಆಟಗಾರರು ಸಂಭ್ರಮಿಸಿದರು.

ಕ್ರಿಕೆಟಿಗರ ಶುಭಾಶಯ: ಚಂದ್ರಯಾನದ ಯಶಸ್ಸನ್ನು ಕ್ರಿಕೆಟ್ ದಿಗ್ಗಜರು ಗುಣಗಾನ ಮಾಡಿದ್ದಾರೆ.

'ಇಸ್ರೊ ಭವ್ಯ ಭಾರತದ ರಾಯಭಾರಿ. ಪರಿಶ್ರಮಿಗಳು, ವಿನಯವಂತ ಮಹಿಳಾ ಮತ್ತು ಪುರುಷರ ತಂಡವು ಕಠಿಣ ಸವಾಲುಗಳನ್ನು ಮೀರಿ ನಿಂತರು. ಭಾರತದ ತ್ರಿವರ್ಣ ಧ್ವಜವು ಹೆಮ್ಮೆಯಿಂದ ನಲಿಯುವಂತೆ ಮಾಡಿದರು. ಚಂದ್ರಯಾನ –2ರ ವಿಜ್ಞಾನಿಗಳ ತಂಡದ ಮುಖ್ಯಸ್ಥರಾಗಿದ್ದ ಕೆ. ಶಿವನ್ ಮತ್ತು ಈಗಿನ ಚಂದ್ರಯಾನ–3ರ ಮುಖ್ಯಸ್ಥ ಎಸ್. ಸೋಮನಾಥ್ ಅವರ ತಂಡಗಳನ್ನು ಈ ಸಂದರ್ಭದಲ್ಲಿ ಅಭಿನಂದಿಸಬೇಕು. ಅವರ ಯಶಸ್ಸನ್ನು ಎಲ್ಲರೂ ಸಂಭ್ರಮಿಸುವ ಸಮಯ ಇದು' ಎಂದು ದಿಗ್ಗಜ ಸಚಿನ್ ತೆಂಡೂಲ್ಕರ್ ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದಾರೆ.

'ಚಂದ್ರಯಾನ ಮೂರರ ತಂಡಕ್ಕೆ ಶುಭಾಶಯಗಳು. ಇಡೀ ದೇಶವೇ ಹೆಮ್ಮೆ ಪಡುವಂತಹ ಕಾರ್ಯ ಮಾಡಿದ್ದಾರೆ. ಜೈ ಹಿಂದ್' ಎಂದು ಭಾರತ ತಂಡದ ಆಟಗಾರ ವಿರಾಟ್ ಕೊಹ್ಲಿ ಸಂದೇಶ ಹಾಕಿದ್ದಾರೆ.

'ನಾವು ಈಗ ಇತಿಹಾಸ ರಚಿಸಿದ್ದೇವೆ. ಇಸ್ರೋಗೆ ಶುಭಾಶಯಗಳು. ಇದೊಂದು ಅಮೂಲ್ಯವಾದ ಕ್ಷಣ. ಭಾರತ ಮಾತಾ ಕೀ ಜೈ' ಎಂದು ಕನ್ನಡಿಗ, ಮಾಜಿ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್ ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದಾರೆ.

'ಸೂರ್ಯಾಸ್ತದತ್ತ ಸಾಗಿದ ಹೊತ್ತಿನಲ್ಲಿ ಚಂದ್ರದ ದಕ್ಷಿಣ ಧ್ರುವದಲ್ಲಿ ನಾವು ಅಸ್ತು. ಇದೊಂದು ಸುಂದರ ಕ್ಷಣ. ಪ್ರತಿಯೊಂದು ಹಿನ್ನಡೆಯ ನಂತರದಲ್ಲಿ ಯಶೋಗಾಥೆ ಇರುತ್ತದೆ ಎಂಬುದ ಮತ್ತೊಮ್ಮೆ ಸಾಬೀತಾಯಿತು' ಎಂದು ಮಾಜಿ ಆಟಗಾರ ವೀರೇಂದ್ರ ಸೆಹ್ವಾಗ್ ಟ್ವೀಟ್ ಮಾಡಿದ್ದಾರೆ. ಮಾಜಿ ಆಟಗಾರ ಅನಿಲ್ ಕುಂಬ್ಳೆ, ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಶುಭಾಶಯ ಕೋರಿದ್ದಾರೆ.

ಡಬ್ಲಿನ್‌ನಲ್ಲಿರುವ ಭಾರತ ಕ್ರಿಕೆಟ್ ತಂಡದ ಆಟಗಾರರು ಚಂದ್ರಯಾನ –3ರ ನೇರಪ್ರಸಾರವನ್ನು ಟಿ.ವಿಯಲ್ಲಿ ವೀಕ್ಷಿಸಿದರು –ಪಿಟಿಐ ಚಿತ್ರ

27ರಿಂದ ಜೆಪಿಬಿಎಲ್ ಟೂರ್ನಿ

ಬೆಂಗಳೂರು (ಪಿಟಿಐ): ಆತಿಥೇಯ ಬೆಂಗಳೂರು ಟೈಗರ್ಸ್ ತಂಡವು ಭಾನುವಾರ (ಆ.27) ಆರಂಭವಾಗಲಿರುವ ಗ್ರ್ಯಾನ್‌ಪ್ರೀ ಬ್ಯಾಡ್ಮಿಂಟನ್ ಲೀಗ್ (ಜಿಪಿಬಿಎಲ್) ಟೂರ್ನಿಯ ಎರಡನೇ ಆವೃತ್ತಿಯ ಆರಂಭಿಕ ಪಂದ್ಯದಲ್ಲಿ ಮುಂಬೈ ವೂಲ್ವ್ಸ್ ತಂಡವನ್ನು ಎದುರಿಸಲಿದೆ.

ಮೊದಲ ದಿನ ಮತ್ತೊಂದು ಪಂದ್ಯದಲ್ಲಿ ಚೆನ್ನೈ ಸೂಪರ್‌ಸ್ಟಾರ್ಜ್ ತಂಡವು ನಾರ್ತ್‌ಈಸ್ಟ್ ರೈನೋಸ್ ತಂಡದ ವಿರುದ್ಧ ಸೆಣಸಾಡಲಿದೆ.

ಹೈದರಾಬಾದ್ ಹೌಂಡ್ಸ್, ಪುಣೆ ಪ್ಯಾಂಥರ್ಸ್, ಗುಜರಾತ್ ಲಯನ್ಸ್, ಕೇರಳ ಟಸ್ಕರ್ಸ್ ಕಣದಲ್ಲಿರುವ ಇತರ ತಂಡಗಳು. 13 ದಿನಗಳ ಕಾಲ ನಡೆಯುವ ಲೀಗ್‌ನಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಆಟಗಾರರು ಸ್ಪರ್ಧೆಯಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಲೀಗ್ ಹಂತದಲ್ಲಿ ಎಂಟು ತಂಡಗಳು ಒಂದೇ ಗುಂಪಿನಲ್ಲಿ ಇರಲಿದ್ದು, ಪ್ರತಿ ತಂಡಗಳು 5 ಪಂದ್ಯಗಳನ್ನು ಆಡಲಿವೆ.

ಬೆಂಗಳೂರಿನ ಪಂದ್ಯಗಳ ಟಿಕೆಟ್ ಸೆ.2ರಿಂದ ಲಭ್ಯ

ವಿಶ್ವಕಪ್: ಇಂದಿನಿಂದ ಟಿಕೆಟ್ ಮಾರಾಟ

ಬೆಂಗಳೂರು: ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪಂದ್ಯಗಳ ಟಿಕೆಟ್‌ಗಳನ್ನು 'ಬುಕ್‌ಮೈಶೋ'ನಲ್ಲಿ ಹಂತ ಹಂತವಾಗಿ ಗುರುವಾರದಿಂದ (ಆ.24) ಮಾರಾಟ ಮಾಡಲಾಗುವುದು ಎಂದು ಬಿಸಿಸಿಐ ತಿಳಿಸಿದೆ.

ಐಸಿಸಿಯ ವಾಣಿಜ್ಯ ಪಾಲುದಾರರಿಗೆ ಮತ್ತು ಮಾಸ್ಟರ್ ಕಾರ್ಡ್ ಬಳಕೆದಾರರಿಗೆ ಮೊದಲ ಹಂತದಲ್ಲಿ ಟಿಕೆಟ್ ಲಭ್ಯವಾಗಲಿದೆ. ಬೆಂಗಳೂರಿನಲ್ಲಿ ನಡೆಯುವ ಪಂದ್ಯಗಳ ಟಿಕೆಟ್‌ಗಳು ಸೆ.2ರಿಂದ ಲಭ್ಯವಾಗಲಿದೆ. ಆಸ್ಟ್ರೇಲಿಯಾ–ಪಾಕಿಸ್ತಾನ, ನ್ಯೂಜಿಲೆಂಡ್–ಪಾಕಿಸ್ತಾನ, ಭಾರತ– ನೆದರ್ಲೆಂಡ್ಸ್ ನಡುವಿನ ಪಂದ್ಯಗಳ ಟಿಕೆಟ್ ಬೆಲೆ 'ಸಿ' ಸ್ಟ್ಯಾಂಡ್‌ನಲ್ಲಿ ₹4,720 (ಜಿಎಸ್‌ಟಿ ಸೇರಿ), 'ಎಚ್' ಸ್ಟ್ಯಾಂಡ್‌ನಲ್ಲಿ ₹885 (ಜಿಎಸ್‌ಟಿ ಸೇರಿ) ನಿಗದಿ ಮಾಡಲಾಗಿದೆ.

ಇಂಗ್ಲೆಂಡ್– ಶ್ರೀಲಂಕಾ, ನ್ಯೂಜಿ ಲೆಂಡ್– ಶ್ರೀಲಂಕಾ ನಡುವಿನ ಪಂದ್ಯಗಳ ಟಿಕೆಟ್ ಬೆಲೆ 'ಸಿ' ಸ್ಟ್ಯಾಂಡ್‌ನಲ್ಲಿ ₹3,540 (ಜಿಎಸ್‌ಟಿ ಸೇರಿದಂತೆ), 'ಎಚ್' ಸ್ಟ್ಯಾಂಡ್‌ನಲ್ಲಿ ₹590 (ಜಿಎಸ್‌ಟಿ ಸೇರಿದಂತೆ) ನಿಗದಿ ಮಾಡಲಾಗಿದೆ. ಸಿ ಸ್ಟ್ಯಾಂಡ್‌ನಲ್ಲಿ 287, ಎಚ್ ಸ್ಟ್ಯಾಂಡ್‌ನಲ್ಲಿ 192 ಸೀಟುಗಳು ಲಭ್ಯ ಇವೆ.

ಮಾಸ್ಟರ್‌ಕಾರ್ಡ್ ಬಳಕೆದಾರರಿಗೆ (ಸಂಜೆ 6ರಿಂದ): ಆ.24ರಿಂದ ಭಾರತ ತಂಡ ಹೊರತುಪಡಿಸಿ ಇತರ ಎಲ್ಲ ಪಂದ್ಯಗಳು; ಆ.29ರಿಂದ ಭಾರತದ ಎಲ್ಲ ಪಂದ್ಯಗಳು; ಸೆ.14ರಿಂದ ಸೆಮಿಫೈನಲ್ ಮತ್ತು ಫೈನಲ್.

ಇತರ ಬಳಕೆದಾರರಿಗೆ (ರಾತ್ರಿ 8 ರಿಂದ): ಆ.25ರಿಂದ ಭಾರತ ತಂಡ ಹೊರತು ಪಡಿಸಿ ಇತರ ಎಲ್ಲ ಪಂದ್ಯಗಳು ಮತ್ತು ಅಭ್ಯಾಸ ಪಂದ್ಯಗಳು; ಆ.30ರಿಂದ ಗುವಾಹಟಿ ಮತ್ತು ತಿರುವನಂತಪುರಂದಲ್ಲಿ ನಡೆಯುವ ಭಾರತದ ಅಭ್ಯಾಸ ಪಂದ್ಯಗಳು; ಆ.31ರಿಂದ ಚೆನ್ನೈ, ದೆಹಲಿ ಮತ್ತು ಪುಣೆಯಲ್ಲಿ ನಡೆಯಲಿರುವ ಭಾರತದ ಪಂದ್ಯಗಳು; ಸೆ.1ರಿಂದ ಧರ್ಮಶಾಲಾ, ಲಖನೌ ಮತ್ತು ಮುಂಬೈನಲ್ಲಿ ನಡೆಯುವ ಭಾರತದ ಪಂದ್ಯಗಳು; ಸೆ.2ರಿಂದ ಬೆಂಗಳೂರು ಮತ್ತು ಕೋಲ್ಕತ್ತದಲ್ಲಿ ನಡೆಯುವ ಭಾರತದ ಪಂದ್ಯಗಳು; ಸೆ.3ರಿಂದ ಅಹಮದಾಬಾದ್‌ನಲ್ಲಿ ನಡೆಯುವ ಭಾರತದ ಪಂದ್ಯ: ಸೆ.15ರಿಂದ ಸೆಮಿಫೈನಲ್ ಮತ್ತು ಫೈನಲ್ ಪಂದ್ಯ.

ಹಾಕಿ: ಮಹಿಳಾ ತಂಡಕ್ಕೆ ಸುಲಭ ಜಯ

ಡಸೆಲ್‌ಡಾರ್ಫ್ (ಜರ್ಮನಿ), (ಪಿಟಿಐ): ಭಾರತ ಜೂನಿಯರ್ ಮಹಿಳಾ ತಂಡ, ನಾಲ್ಕು ರಾಷ್ಟ್ರಗಳ ಹಾಕಿ ಟೂರ್ನಿಯಲ್ಲಿ ಬುಧವಾರ 6–2 ಗೋಲುಗಳಿಂದ ಇಂಗ್ಲೆಂಡ್ ತಂಡವನ್ನು ಸೋಲಿಸಿದರು.

ಭಾರತ ತಂಡದ ಪರ ನೀಲಮ್ (25ನೇ ನಿಮಿಷ), ಅನ್ನು (26 ಮತ್ತು 43ನೇ ನಿಮಿಷ) ಸುನೆಲಿಟಾ ಟೊಪ್ಪೊ (35ನೇ ನಿಮಿಷ), ಹೀನಾ ಬಾನೊ (38ನೇ ನಿಮಿಷ) ಮತ್ತು ಮುಮ್ತಾಜ್ ಖಾನ್ (40ನೇ ನಿಮಿಷ) ಗೋಲುಗಳನ್ನು ಹೊಡೆದರು. ಇಂಗ್ಲೆಂಡ್ ತಂಡದ ಎರಡು ಗೋಲುಗಳು ಕ್ಲಾಡಿಯಾ ಸ್ವೇನ್ (16ನೇ ನಿಮಿಷ) ಮತ್ತು ಚಾರ್ಲೊಟೆ ಬಿಂಘಮ್ (54ನೇ ನಿಮಿಷ) ಮೂಲಕ ಬಂದವು.

ಮೊದಲ ಕ್ವಾರ್ಟರ್‌ನಲ್ಲಿ ಬಿರುಸಿನ ಆರಂಭ ಮಾಡಿದವು. ಆದರೆ ಭಾರತವೇ ಹೆಚ್ಚು ದಾಳಿಗಳನ್ನು ನಡೆಸಿತು. ಆದರೆ ಈ ಅವಧಿ ಗೋಲಿಲ್ಲದೇ ಕಳೆಯಿತು. ವಿರಾಮದ ವೇಳೆ ಸ್ಕೋರ್ 2–1 ಆಗಿತ್ತು. ಉತ್ತರಾರ್ಧದಲ್ಲಿ ಭಾರತ ಮೇಲುಗೈ ಸಾಧಿಸಿತು.

ಅಮನ್‌ಪ್ರೀತ್‌ಗೆ ಚಿನ್ನದ ಪದಕ

ಬಾಕು (ಪಿಟಿಐ): ಅಮನ್‌ಪ್ರೀತ್ ಸಿಂಗ್, ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವ ಚಾಂಪಿಯನ್‌ಷಿಪ್‌ನ ಪುರುಷರ 25 ಮೀ. ಸ್ಟ್ಯಾಂಡರ್ಡ್ ಪಿಸ್ತೂಲ್ ಸ್ಪರ್ಧೆಯಲ್ಲಿ ಬುಧವಾರ ಚಿನ್ನ ಗೆದ್ದುಕೊಂಡರು. ಇದು ಭಾರತಕ್ಕೆ ಈ ಕೂಟದಲ್ಲಿ ಐದನೇ ಚಿನ್ನ. ಇದೇ ಸ್ಪರ್ಧೆಯ ತಂಡ ವಿಭಾಗದಲ್ಲಿ ಭಾರತದ ವನಿತೆಯರು ಕಂಚಿನ ಪದಕ ಗೆದ್ದರು.

ಅಮನ್‌ಪ್ರೀತ್

ಭಾರತ ಐದು ಚಿನ್ನದ ಪದಕಗಳ ಜೊತೆ ನಾಲ್ಕು ಕಂಚಿನ ಪದಕಗಳನ್ನೂ ಗೆದ್ದುಕೊಂಡಿದೆ. ಪದಕಪಟ್ಟಿಯಲ್ಲಿ ಚೀನಾ ನಂತರ ಎರಡನೇ ಸ್ಥಾನದಲ್ಲಿದೆ. ಚೀನಾ ಗೆದ್ದಿರುವ 24 ಪದಕಗಳಲ್ಲಿ 13 ಸ್ವರ್ಣ ಪದಕಗಳಿವೆ. ಸ್ಟ್ಯಾಂಡರ್ಡ್ ಪಿಸ್ತೂಲ್ ಸ್ಪರ್ಧೆಯಲ್ಲಿ ಅಮನ್‌ದೀಪ್ 577 ಸ್ಕೋರ್ ಕಲೆಹಾಕಿದರು. ಇದು ಬೆಳ್ಳಿ ಗೆದ್ದ ಕೊರಿಯಾದ ಲೀ ಗುನ್‌ಹ್ಯೆಕ್ (574) ಅವರಿಗಿಂತ 3 ಸ್ಕೋರ್ ಅಧಿಕ.

ವಿಶ್ವ ಬ್ಯಾಡ್ಮಿಂಟನ್: ಗಾಯತ್ರಿ– ಟ್ರೆಸಾ ಮುನ್ನಡೆ

3ನೇ ಸುತ್ತಿಗೆ ರಣಕಿರೆಡ್ಡಿ–ಚಿರಾಗ್

ಕೋಪೆನ್‌ಹೇಗನ್ (ಪಿಟಿಐ): ಭಾರತದ ಅಗ್ರಮಾನ್ಯ ಡಬಲ್ಸ್ ಆಟಗಾರರಾದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಬುಧವಾರ ಆಸ್ಟ್ರೇಲಿಯಾದ ಎದುರಾಳಿ ಆಟಗಾರರನ್ನು ನೇರ ಗೇಮ್‌ಗಳಿಂದ ಸೋಲಿಸಿ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಮೂರನೇ ಸುತ್ತನ್ನು ಪ್ರವೇಶಿಸಿದರು.

ಮಹಿಳೆಯರ ಡಬಲ್ಸ್ ಎರಡನೇ ಸುತ್ತಿನಲ್ಲಿ ಟ್ರೆಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಕೂಡ ಉತ್ತಮ ಆಟ ಪ್ರದರ್ಶಿಸಿ ಚೀನಾ ತೈಪೆಯ ಎದುರಾಳಿಗಳನ್ನು ಸೋಲಿಸಿತು

ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ಸಾತ್ವಿಕ್–ಚಿರಾಗ್ ಜೋಡಿ ಅಚ್ಚುಕಟ್ಟಾದ ಆಟ ಪ್ರದರ್ಶಿಸಿ 21–16, 21–9 ರಿಂದ ಕೆನೆತ್ ಝುಹೂಯಿ ಚೂ ಮತ್ತು ಮಿಂಗ್ ಚುಯೆನ್ ಲಿಮ್ ವಿರುದ್ಧ ಗೆಲ್ಲಲು ಕೇವಲ ಅರ್ಧಗಂಟೆ ತೆಗೆದುಕೊಂಡಿತು.

ಹಾಲಿ ಕಾಮನ್‌ವೆಲ್ತ್ ಚಾಂಪಿಯನ್ ಆಗಿರುವ ಭಾರತದ ಜೋಡಿ ಈ ಋತುವಿನಲ್ಲಿ ನಾಲ್ಕು ಪ್ರಶಸ್ತಿಗಳನ್ನು ಗೆದ್ದು ಉತ್ತಮ ಲಯದಲ್ಲಿದೆ. ಮುಂದಿನ ಸುತ್ತಿನಲ್ಲಿ ಭಾರತ ಆಟಗಾರರು, ಹತ್ತನೇ ಶ್ರೇಯಾಂಕದ ಲಿಯೊ ರೋಲಿ ಕರ್ನಾಂಡೊ ಮತ್ತು ಡೇನಿಯರ್ ಮಾರ್ಟಿನ್ (ಇಂಡೊನೇಷ್ಯಾ) ಅವರನ್ನು ಎದು-ರಿಸಲಿದ್ದಾರೆ.

ವಿಶ್ವ ಕ್ರಮಾಂಕದಲ್ಲಿರುವ 19ನೇ ಸ್ಥಾನದಲ್ಲಿರುವ ಗಾಯತ್ರಿ–ತ್ರಿಸಾ ಜೋಡಿ 21–18, 21–10 ರಿಂದ ಚೀನಾ ತೈಪೆಯ ಚಾಂಗ್ ಚಿಂಗ್ ಹುಯಿ– ಯಾಂಗ್ ಚಿಂಗ್ ಟುನ್ ಅವರನ್ನು ಸೋಲಿಸಿತು. ಪಂದ್ಯ ಗೆಲ್ಲಲು ಭಾರತದ ಆಟಗಾರ್ತಿಯರಿಗೆ 38 ನಿಮಿಷ ಹಿಡಿಯಿತು.

ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ

ರ್‍ಯಾಂಕಿಂಗ್: ಅಶ್ವಿನ್, ಜಡೇಜಗೆ ಅಗ್ರಸ್ಥಾನ

ದುಬೈ (ಪಿಟಿಐ): ಭಾರತದ ಆರ್. ಅಶ್ವಿನ್ ಮತ್ತು ರವೀಂದ್ರ ಜಡೇಜ ಅವರು ಅಂತ-ರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಟೆಸ್ಟ್ ರ್‍ಯಾಂಕಿಂಗ್ ನಲ್ಲಿ ಅಗ್ರಸ್ಥಾನ ಗಳಿಸಿದ್ದಾರೆ.

ಅಶ್ವಿನ್ ಬೌಲರ್‌ಗಳ ವಿಭಾಗದಲ್ಲಿ ಹಾಗೂ ಜಡೇಜ ಆಲ್‌ರೌಂಡರ್ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿದ್ದಾರೆ. ಏಕದಿನ ಮತ್ತು ಟಿ20 ಮಾದರಿಗಳಲ್ಲಿ ಬಾಂಗ್ಲಾದ ಶಕೀಬ್ ಅಲ್ ಹಸನ್ ಅಗ್ರಸ್ಥಾನದಲ್ಲಿದ್ದಾರೆ. ಚುಟುಕು ಕ್ರಿಕೆಟ್‌ನಲ್ಲಿ ಹಾರ್ದಿಕ್ ಪಾಂಡ್ಯ ಎರಡನೇ ಸ್ಥಾನದಲ್ಲಿದ್ದಾರೆ.

ಏಕದಿನ ಕ್ರಿಕೆಟ್‌ನಲ್ಲಿ ಯುವ ಆಟಗಾರ ಶುಭಮನ್ ಗಿಲ್ ನಾಲ್ಕನೇ ಸ್ಥಾನಕ್ಕೇ-ರಿದ್ದಾರೆ. ಬುಧವಾರ ಪ್ರಕಟ ವಾದ ಪಟ್ಟಿಯಲ್ಲಿ ವೇಗಿ ಜಸ್‌ಪ್ರೀತ್ ಬೂಮ್ರಾ ಹಾಗೂ ಸ್ಪಿನ್ನರ್ ರವಿ ಬಿಷ್ಣೋಯಿ ಟಿ20 ಕ್ರಿಕೆಟ್ ಬೌಲರ್‌ಗಳ ವಿಭಾಗದಲ್ಲಿ ಬಡ್ತಿ ಪಡೆದಿದ್ದಾರೆ.

ಏಕದಿನ ಕ್ರಿಕೆಟ್‌ನಲ್ಲಿ ಗಿಲ್ ಖಾತೆಯಲ್ಲಿ ಈಗ 743 ಅಂಕಗಳು ಇವೆ. ಐರ್ಲೆಂಡ್ ಎದುರಿನ ಟಿ20 ಕ್ರಿಕೆಟ್ ಸರಣಿಯಲ್ಲಿ ಆಡುತ್ತಿರುವ ಬೂಮ್ರಾ 84ನೇ ಸ್ಥಾನಕ್ಕೇರಿದ್ದಾ-ರೆ. 7 ಸ್ಥಾನಗಳ ಬಡ್ತಿ ಗಳಿಸಿದ್ದಾರೆ. ಐರ್ಲೆಂಡ್ ಎದುರಿನ 2ನೇ ಟಿ20 ಪಂದ್ಯದಲ್ಲಿ 58 ರನ್ ಗಳಿಸಿದ್ದ ಋತುರಾಜ್ ಗಾಯಕವಾಡ್ 143 ರಿಂದ 87ನೇ ಸ್ಥಾನಕ್ಕೆ ಸಾಗಿದ್ದಾರೆ.

ಫುಟ್‌ಬಾಲ್: ಡೆಕ್ಕನ್ ತಂಡಕ್ಕೆ ಜಯ

ಬೆಂಗಳೂರು: ಎಫ್‌ಸಿ ಡೆಕ್ಕನ್ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್‌ನ ಎರಡನೇ ಸುತ್ತಿನ ಪಂದ್ಯದಲ್ಲಿ 2–1ರಿಂದ ಎಚ್‌ಎಎಲ್ ಎಫ್‌ಸಿ ತಂಡವನ್ನು ಮಣಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಡೆಕ್ಕನ್ ತಂಡದ ಮಿಥುನ್ (16ನೇ ನಿ.), ನಿಖಿಲ್ (47ನೇ) ಗೋಲು ದಾಖಲಿಸಿದರೆ, ಎಚ್‌ಎಎಲ್ ತಂಡದ ಎಸ್. ಜಾನಿಕೋಮ್ (49) ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಮತ್ತೊಂದು ಪಂದ್ಯದಲ್ಲಿ ಶೇಕ್ ಮುಜೀಬ್ ಅವರ ಹ್ಯಾಟ್ರಿಕ್ ಗೋಲುಗಳ ಬಲದಿಂದ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವು 3–1ರಿಂದ ಸೌತ್ ಯುನೈಟೆಡ್ ಎಫ್‌ಸಿ ತಂಡವನ್ನು ಮಣಿಸಿತು.

ಮುಜೀಬ್ ಅವರು (19, 25 ಮತ್ತು 89ನೇ) ಮೂರು ಬಾರಿ ಚೆಂಡನ್ನು ಗುರಿ ಸೇರಿಸಿದರೆ, ಎದುರಾಳಿ ತಂಡದ ವಿ.ಎಸ್. ತೋಟ್ಕಧಾರ್ ಜಿಮಿಕ್ (80) ಒಂದು ಗೋಲು ತಂದಿತ್ತರು.

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್: 1500 ಮೀ. ಓಟ

ಮುಂದುವರಿದ ಫೇತ್ ಕಿಪ್ಯೆಗಾನ್ ಯಶಸ್ಸು

ಬುಡಾಪೆಸ್ಟ್ (ಎಎಫ್‌ಪಿ): ಕೆನ್ಯಾದ ಫೇತ್ ಕಿಪ್ಯೆಗಾನ್ ಅವರು ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಮಹಿಳೆಯರ 1,500 ಮೀ. ಓಟದಲ್ಲಿ ಮೂರನೇ ಬಾರಿ ಚಿನ್ನ ಗೆದ್ದ ಹಿರಿಮೆಗೆ ಪಾತ್ರರಾದರು. ಕತಾರ್‌ನ ಹೈಜಂಪ್ ಸ್ಪರ್ಧಿ ಮುತಾಝ್ ಎಸ್ಸಾ ಬಾರ್ಷಿಮ್ ಅವರಿಗೆ ಮಂಗಳವಾರ ನಾಲ್ಕನೇ ಚಿನ್ನದ ಪದಕ ಕೈತಪ್ಪಿತು. ಆದರೆ ಅವರು ಈ ಸ್ಪರ್ಧೆಯಲ್ಲಿ ಐದು ಪದಕಗಳನ್ನು ಗೆದ್ದ ಮೊದಲ ಅಥ್ಲೀಟ್ ಎನಿಸಿದರು.

29 ವರ್ಷದ ಕಿಪ್ಯೆಗಾನ್ ಆರಂಭದಲ್ಲಿ ಹಿಂದೆಯಿದ್ದರೂ ಕೊನೆಯ 800 ಮೀ. ಓಟವನ್ನು ಮಿಂಚಿನಂತೆ ಓಡಿದರು. ಎರಡು ಬಾರಿಯ ಒಲಿಂಪಿಕ್ ಚಾಂಪಿಯನ್ ಪಟ್ಟದ ಜೊತೆಗೆ 2017ರಲ್ಲಿ ಮತ್ತು ಕಳೆದ ವರ್ಷ ಯುಜೀನ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದ ಕಿಪ್ಯೆಗಾನ್ 3ನಿ.54.87 ಸೆಕೆಂಡುಗಳಲ್ಲಿ ಗುರಿತಲುಪಿದರು. ಈ ಋತುವಿನಲ್ಲಿ ಅವರು ಮೂರು ಬಾರಿ ವಿಶ್ವ ದಾಖಲೆ ಸ್ಥಾಪಿಸಿದ್ದು, ಅಮೋಘ ಲಯದಲ್ಲಿದ್ದಾರೆ.

ಅವರಿಗೆ ತೀವ್ರ ಪೈಪೋಟಿ ಒಡ್ಡಬಹುದೆಂದು ನಿರೀಕ್ಷಿಸಲಾಗಿದ್ದ ಇಥಿಯೋಪಿಯಾ ಸಂಜಾತ ಡಚ್ ಓಟಗಾರ್ತಿ ಸಿಫಾನ್ ಹಸ್ಸನ್ ಕಂಚಿನ ಪದಕ ಪಡೆದರು. ಇಥಿಯೋಪಿಯಾದ ಡಿರಿಬೆ ವೆಲ್ಟೆಜಿ 3ನಿ.55.69 ಸೆ.ಗಳಲ್ಲಿ ಗುರಿತಲುಪಿ ಬೆಳ್ಳಿಯ ಪದಕ ಪಡೆದರು.

ಚಿನ್ನದ ಓಟ... ಮಹಿಳೆಯರ 1,500 ಮೀ. ಓಟದಲ್ಲಿ ಚಿನ್ನ ಗೆದ್ದ ಸಂಭ್ರಮದಲ್ಲಿ ಕೆನ್ಯಾದ ಫೇತ್ ಕಿಪ್ಯೆಗಾನ್ –ಎಎಫ್‌ಪಿ ಚಿತ್ರ

ಬುಡಾಪೆಸ್ಟ್‌ನ ನ್ಯಾಷನಲ್ ಅಥ್ಲೆಟಿಕ್ಸ್ ಸೆಂಟರ್‌ನ ಪ್ರೇಕ್ಷಕರೆದುರು ಕತಾರ್‌ನ ಬಾರ್ಷಿಮ್ ತಮ್ಮ ಮೂರನೇ ಹಾಗೂ ಅಂತಿಮ ಯತ್ನದಲ್ಲಿ ಚಿನ್ನಕ್ಕಾಗಿ 2.36 ಮೀ. ಎತ್ತರ ಜಿಗಿಯಲು ಪ್ರಯತ್ನಿ-ಸಿದರು. ಆದರೆ ಸಫಲರಾಗಲಿಲ್ಲ. 2.33 ಮೀ. ಸಾಧನೆ ಅವರ ಪಾಲಿನ ಅತ್ಯುತ್ತಮ ಎನಿಸಿದ್ದು, ಕಂಚಿನ ಪದಕ ದೊರೆಯಿತು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬಾರ್ಷಿಮ್ ಜೊತೆ ಚಿನ್ನ ಹಂಚಿಕೊಂಡಿದ್ದ ಇಟಲಿಯ ಗಿಯಾನ್ಮಾರ್ಕೊ ತಂಬೇರಿ ಇಲ್ಲಿ 2.36 ಮೀ. ಜಿಗಿದು ಚಿನ್ನ ಗೆದ್ದರು.

ಪುರುಷರ 3,000 ಮೀ. ಸ್ಟೀಪಲ್‌ಚೇ-ಸ್‌ನಲ್ಲಿ, ಒಲಿಂಪಿಕ್ ಚಾಂಪಿಯನ್ ಆಗಿರುವ ಮೊರಾಕ್ಕೊದ ಸೌಫಿಯಾನ್ ಎಲ್ ಬಕ್ಕಲಿ ಅವರು ವಿಶ್ವದಾಖಲೆ ವೀರ ಲಮೇಚ ಗಿರ್ಮಾ ಅವರನ್ನು ಹಿಂದೆ ತಳ್ಳಿ ಚಿನ್ನದ ಪದಕ ಜಯಿಸಿದರು. 27 ವರ್ಷದ ಸೌಫಿಯಾನ್ 8ನಿ.3.53 ಸೆ.ಗಳಲ್ಲಿ ಅಂತಿಮ ಗೆರೆ ದಾಟಿದರು.

ಲಾಂಗ್‌ಜಂಪ್: ಜೆಸ್ವಿನ್ ಫೈನಲ್‌ಗೆ ಅರ್ಹತೆ

ಬುಡಾಪೆಸ್ಟ್ (ಪಿಟಿಐ): ಲಾಂಗ್‌ಜಂಪ್‌ನಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಜೆಸ್ವಿನ್ ಆಲ್ಡ್ರಿನ್ ಅವರು ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್‌ಗೆ ಅರ್ಹತೆ ಪಡೆದರು. ಆದರೆ ಮುರಳಿ ಶ್ರೀಶಂಕರ್ ಅವರು ಬುಧವಾರ ಕಳಪೆ ಪ್ರದರ್ಶನದೊಡನೆ ಅರ್ಹತಾ ಸುತ್ತಿನಲ್ಲೇ ಮುಗ್ಗರಿಸಿದ್ದು ಆಘಾತ ಮೂಡಿಸಿತು.

ಆಲ್ಡ್ರಿನ್ ಮೊದಲ ಯತ್ನದಲ್ಲೇ ಎಂಟು ಮೀಟರ್ ಜಿಗಿದು ಫೈನಲ್‌ಗೆ ಅರ್ಹತೆ ಪಡೆದರು. ಅವರ ಮುಂದಿನ ಎರಡು ಯತ್ನಗಳು ಫೌಲ್‌ನಲ್ಲಿ ಕೊನೆಗೊಂಡವು.

ಅವರು ಮಾರ್ಚ್‌ನಲ್ಲಿ 8.42 ಮೀ. ಜಿಗಿದು ರಾಷ್ಟ್ರೀಯ ದಾಖಲೆ ಸ್ಥಾಪಿಸಿದ್ದರು. ಅರ್ಹತಾ ಸುತ್ತಿನ 'ಬಿ' ಗುಂಪಿನಲ್ಲಿ ಅವರು ಆರನೇ ಸ್ಥಾನ ಪಡೆದು ಒಟ್ಟಾರೆ 12ನೇ ಹಾಗೂ ಅಂತಿಮ ಸ್ಪರ್ಧಿಯಾಗಿ ಫೈನಲ್‌ಗೆ ಅವಕಾಶ ಪಡೆದರು.

ಶ್ರೀಶಂಕರ್ ಕ್ರಮವಾಗಿ 7.74 ಮೀ, 7.66 ಮೀ, 6.70 ಮೀ. ದೂರ ಜಿಗಿದು ಗ್ರೂಪ್ 'ಎ' ಅರ್ಹತಾ ಸುತ್ತಿನಲ್ಲಿ 12ನೇ ಸ್ಥಾನ ಹಾಗೂ ಒಟ್ಟಾರೆ 22ನೇ ಸ್ಥಾನ ಪಡೆದರು. ಪ್ಯಾರಿಸ್ ಡೈಮಂಡ್ ಲೀಗ್‌ನಲ್ಲಿ ಮೂರನೇ ಸ್ಥಾನ ಪಡೆದಿದ್ದರು.

3,000 ಮೀ. ಸ್ಟೀಪಲ್‌ಚೇಸ್‌ನಲ್ಲಿ ಅವಿನಾಶ ಸಾಬ್ಳೆ ಕೂಡ ನಿರಾಸೆ ಮೂಡಿಸಿದ್ದರು. ಮಂಗಳವಾರ ರಾತ್ರಿ 100 ಮೀ. ಹರ್ಡಲ್ಸ್‌ನಲ್ಲಿ ಜ್ಯೋತಿ ಯರ್ರಾಜಿ ಅವರೂ ಸೆಮಿಫೈನಲ್ ಪ್ರವೇಶಿಸಲು ಸಾಧ್ಯವಾಗಿರಲಿಲ್ಲ.

ಫಿಬಾ ಕೇಂದ್ರ ಮಂಡಳಿಗೆ ಗೋವಿಂದರಾಜ್ ಸೇರ್ಪಡೆ

ಗೋವಿಂದರಾಜ್

ಬೆಂಗಳೂರು: ಅಂತರರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಫೆಡರೇಷನ್‌ನ (ಫಿಬಾ) ಕೇಂದ್ರ ಮಂಡಳಿಗೆ ಕೆ. ಗೋವಿಂದರಾಜ್ ಅವರನ್ನು ಸದಸ್ಯರನ್ನಾಗಿ ಸೇರ್ಪಡೆ ಮಾಡಲಾಗಿದೆ.

2023–27ರ ಅವಧಿಗೆ ಅವರು ಈ ಸ್ಥಾನ ಪಡೆದಿದ್ದಾರೆ. ಈ ಹುದ್ದೆಗೆ ನೇಮಕಗೊಂಡ ಮೊದಲ ಭಾರತೀಯ ಎಂಬ ಹಿರಿಮೆಗೆ ಅವರು ಪಾತ್ರವಾಗಿದ್ದಾರೆ. ಅವರು ಈಚೆಗೆ ಫಿಬಾ ಏಷ್ಯಾ ಅಧ್ಯಕ್ಷರಾಗಿ ಈಚೆಗೆ ಚುನಾಯಿತರಾಗಿದ್ದರು.

'ಫಿಬಾ ಕೇಂದ್ರ ಮಂಡಳಿಯ ಭಾಗವಾಗಿರುವುದು ನನಗೆ ಸಿಕ್ಕ ದೊಡ್ಡ ಗೌರವವಾಗಿದೆ. ಏಷ್ಯಾದಲ್ಲಿ ಬ್ಯಾಸ್ಕೆಟ್‌ಬಾಲ್ ಬೆಳೆಸುವ ಜವಾಬ್ದಾರಿ ನನ್ನ ಮೇಲಿದೆ' ಎಂದು ಗೋವಿಂದರಾಜ್ ಪ್ರತಿಕ್ರಿಯಿಸಿದ್ದಾರೆ.

ಗೋವಿಂದರಾಜ್ ಅವರು ಫಿಬಾ ನೂತನ ಅಧ್ಯಕ್ಷ ಶೇಖ್ ಸೌದ್ ಬಿನ್ ಅಲಿ ಅಲ್ತಾನಿ, ಪ್ರಧಾನ ಕಾರ್ಯದರ್ಶಿ ಆ್ಯಂಡ್ರಿಯಾಸ್ ಜಾಗ್ಲಿಸ್, ಏಷ್ಯಾದ ಕಾರ್ಯನಿರ್ವಾ-ಹಕ ನಿರ್ದೇಶಕ ಹಾಗೋಪ್ ಖಾಜಿರಿಯನ್ ಮತ್ತು ಇತರ ಅಧಿಕಾರಿಗಳು ಭಾಗವಹಿಸಿದ್ದ ಸಭೆಯಲ್ಲಿ ಭಾಗವಹಿಸಿದರು. ವಿಶ್ವದಲ್ಲಿ ಬ್ಯಾಸ್ಕೆಟ್ ಬಾಲ್ ಕ್ರೀಡೆಯ ಬೆಳವಣಿಗೆಯ ಕುರಿತು ಈ ಸಭೆಯಲ್ಲಿ ಚರ್ಚಿಸಲಾಯಿತು.

ಗೋವಿಂದರಾಜ್ ಅವರು ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆ ಕಾರ್ಯದರ್ಶಿಯಾಗಿದ್ದಾರೆ. ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿಯಾಗಿಯೂ ಆಗಿದ್ದಾರೆ.